ಪಂಚಾಯಿತ್‌ರಾಜ್ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು

(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

(ರಾಜ್ಯಶಾಸ್ತ್ರದಲ್ಲಿ ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಕೆ.ಮಲ್ಲಿಕಾರ್ಜುನ

ಮಾರ್ಗದರ್ಶಕರು

ಡಾ. ಸಿದ್ಧಗಂಗಮ್ಮ

ಸಹ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೧

ಪಂಚಾಯತ್‌ರಾಜ್ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು

(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

(ರಾಜ್ಯಶಾಸ್ತ್ರದಲ್ಲಿ ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಕೆ.ಮಲ್ಲಿಕಾರ್ಜುನ

ಮಾರ್ಗದರ್ಶಕರು

ಡಾ. ಸಿದ್ಧಗಂಗಮ್ಮ

ಸಹ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩೨೭೬

೨೦೧೧

ದೃಢೀಕರಣ ಪತ್ರ

"ಪಂಚಾಯತ್ ರಾಜ್ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)" ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ರಾಜ್ಯಶಾಸ್ತ್ರದಲ್ಲಿ ಪಿಎಚ್.ಡಿ ಪದವಿಗಾಗಿ **ಕೆ.ಮಲ್ಲಿಕಾರ್ಜುನ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ.ಸಿದ್ದಗಂಗಮ್ಮ)
ಮಾರ್ಗದರ್ಶಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ: ೦೪.೧೦.೨೦೧೧
ಸ್ಥಳ : ವಿದ್ಯಾರಣ್ಯ

ಪ್ರಮಾಣ ಪತ್ರ

"ಪಂಚಾಯತ್ ರಾಜ್ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)" ಎಂಬ ವಿಷಯ ಕುರಿತು **ಡಾ. ಸಿದ್ದಗಂಗಮ್ಮ** ಅವರ ಮಾರ್ಗದರ್ಶನದಲ್ಲಿ ಈ ಮಹಾಪ್ರಬಂಧವನ್ನು ರಾಜ್ಯಶಾಸ್ತ್ರದಲ್ಲಿ ಪಿಎಚ್.ಡಿ ಪದವಿಗಾಗಿ ಸಿದ್ಧಪಡಿಸಲಾಗಿದೆ.

ಈ ಮಹಾಪ್ರಬಂಧವನ್ನು ಇದುವರೆಗೆ ಯಾವುದೇ ವಿಶ್ವವಿದ್ಯಾಲಯಕ್ಕೆ ಯಾವುದೇ ಪದವಿ ಅಥವಾ ಡಿಪ್ಲೋಮಾಗಳಿಗೆ ಪ್ರಸ್ತುತಪಡಿಸಿಲ್ಲ ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ಇಲ್ಲಿಯವರೆಗೆ ಎಲ್ಲಿಯೂ ಇಡಿಯಾಗಿ ಅಥವಾ ಬಿಡಿಯಾಗಿ ಲೇಖನಗಳನ್ನು ಪ್ರಕಟಣೆ ಮಾಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

K. Mallikarjuna

(ಕೆ.ಮಲ್ಲಿಕಾರ್ಜುನ)
ಸಂಶೋಧಕ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ: ೦೪.೧೦.೨೦೧೧
ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಅಧ್ಯಯನ ನಡೆಸಲು ಅವಕಾಶ ಮಾಡಿಕೊಟ್ಟ ಈ ಹಿಂದಿನ ಕುಲಪತಿಗಳಾದ ಡಾ.ಬಿ.ಎ.ವಿವೇಕ ರೈ ಅವರಿಗೆ ಹಾಗೂ ಅಧ್ಯಯನ ಪೂರ್ತಿಗೊಳಿಸಲು ಪ್ರೋತ್ಸಾಹ ನೀಡಿದ ಈಗಿನ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಅವರಿಗೂ ಹಾಗೂ ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿಯವರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಸಂಶೋಧನ ಅಧ್ಯಯನಕ್ಕೆ ಪ್ರಾರಂಭದಿಂದಲೂ ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಅಗತ್ಯ ಮಾರ್ಗದರ್ಶನ ನೀಡಿ ಅಧ್ಯಯನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಎಲ್ಲಾ ರೀತಿಯಿಂದ ಸಹಕರಿಸಿದ ನನ್ನ ಮಾರ್ಗದರ್ಶಕರು ಹಾಗೂ ವಿಭಾಗದ ಮುಖ್ಯಸ್ಥರಾದ ಡಾ. ಸಿದ್ದಗಂಗಮ್ಮ ಅವರಿಗೆ ಚಿರಋಣಿ.

ಅದೇ ರೀತಿಯಾಗಿ ನನ್ನ ಅಧ್ಯಯನಕ್ಕೆ ಪೂರಕ ಸಲಹೆ ಸೂಚನೆಗಳನ್ನು ನೀಡಿದ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ.ಟಿ.ಆರ್.ಚಂದ್ರಶೇಖರ್ ಹಾಗೂ ಡಾ. ಚಂದ್ರಪೂಜಾರಿ, ಡಾ.ಜನಾರ್ದನ, ಡಾ.ಹೆಚ್.ಡಿ.ಪ್ರಶಾಂತ್, ಡಾ.ಎ. ಶ್ರೀಧರ್ ಅವರುಗಳಿಗೂ ಧನ್ಯವಾದಗಳು.

ಬಳ್ಳಾರಿ ಜಿಲ್ಲೆಯ ಪಂಚಾಯತ್ ವ್ಯವಸ್ಥೆಯ ಪರಿಶಿಷ್ಟ ಪಂಗಡದ ಎಲ್ಲಾ ಮಹಿಳಾ ಸದಸ್ಯರುಗಳ ಸಹಕಾರಕ್ಕೆ ನಾನು ಚಿರಋಣಿಯಾಗಿದ್ದೇನೆ. ಅಧ್ಯಯನ ಸಂದರ್ಭದಲ್ಲಿ ನನಗೆ ಅಗತ್ಯವಾಗಿರುವ ಗ್ರಂಥಗಳನ್ನು ಹಾಗೂ ಮಾಹಿತಿಗಳನ್ನು ನೀಡಿ ಸಹಕರಿಸಿದ ಕನ್ನಡ ವಿಶ್ವವಿದ್ಯಾಲಯದ ಅಕ್ಷರ ಹಾಗೂ ಸಿರಿಗನ್ನಡ ಗ್ರಂಥಾಲಯಗಳ ಎಲ್ಲಾ ಸಿಬ್ಬಂದಿಗಳಿಗೂ ನಾನು ಋಣಿಯಾಗಿದ್ದೇನೆ. ಹಾಗೇ ಕರ್ನಾಟಕದ ಇತರ ವಿಶ್ವವಿದ್ಯಾಲಯಗಳು ಹಾಗೂ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆ, ಬೆಂಗಳೂರು ನನ್ನ ಅಧ್ಯಯನಕ್ಕೆ ಪೂರಕ ಮಾಹಿತಿಗಳನ್ನು ಒದಗಿಸಿವೆ. ಅವರಿಗೂ ನನ್ನ ಕೃತಜ್ಞತೆಗಳು. ಅದೇ ರೀತಿ ನನ್ನ ಅಧ್ಯಯನದ ಕುರಿತು ಆಗಾಗ್ಗೆ ವಿಚಾರಿಸಿ ಪ್ರೋತ್ಸಾಹಿಸುತ್ತಿದ್ದ ಸಹಾಯಕ ಕುಲಸಚಿವರಾದ ಶ್ರೀ ಬಿ. ಗುರುಬಸಪ್ಪನವರಿಗೂ ನನ್ನ ಕೃತಜ್ಞತೆಗಳು. ನನ್ನ ಸಂಶೋಧನ ಬರಹವನ್ನು ಸದಾ ವಿಚಾರಿಸಿ ಅಧ್ಯಯನ

ಪೂರ್ಣಗೊಳ್ಳಲು ಸಲಹೆ ಸೂಚನೆಗಳನ್ನು ನೀಡಿದ ಡಾ.ಜೆ.ಕೃಷ್ಣ ಅವರಿಗೂ ಧನ್ಯವಾದಗಳು. ಅಧ್ಯಯನಕ್ಕೆ ಅಗತ್ಯ ಮಾಹಿತಿಯನ್ನು ಸಂಗ್ರಹಿಸಲು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹಾಗೂ ಅಧ್ಯಯನದ ಅವಧಿಯುದ್ದಕ್ಕೂ ನೆರವು ನೀಡಿದ ಡಾ.ಆರ್.ಬಿ.ಕುಮಾರ, ಡಾ.ವೈ. ಯರ್ರಿಸ್ವಾಮಿ, ಇಂದ್ರಿಪಿ ಮಲ್ಲಿಕಾರ್ಜುನ, ಡಾ.ಡಿ.ಎನ್.ಪಾಟೀಲ್, ಅಶೋಕ ಹುಲಿಬಂಡಿ, ಡಾ.ಎ.ಚನ್ನಪ್ಪ, ಡಾ.ಗಣಪತಿ ಕೆ.ಲಮಾಣಿ ಅವರುಗಳಿಗೆ ಹಾಗೂ ನನ್ನ ಆತ್ಮೀಯ ಸ್ನೇಹಿತರಾದ ಕೆ.ಲಕ್ಷ್ಮಿರೆಡ್ಡಿ, ಶರಣಬಸವರಾಜ ಚಕೋಟಿ, ನಾಗರಾಜ ಬೊಮ್ಮಘಟ್ಟ, ಟಿ.ವೀರಭದ್ರಪ್ಪ, ಜಿ.ರಹಮತ್ ಅವರುಗಳಿಗೆ ಕೃತಜ್ಞತೆಗಳು.

ಸದಾ ನನ್ನ ಶ್ರೇಯಸ್ಸನ್ನು ಬಯಸುತ್ತಾ ಅಧ್ಯಯನ ಪೂರ್ಣಗೊಳಿಸಲು ಪ್ರೋತ್ಸಾಹಿಸುತ್ತಿದ್ದ ಪೂಜ್ಯ ತಾಯಿಯವರಿಗೆ, ಸಹೋದರ ಕೆ.ಗಂಗಾಧರ ಹಾಗೂ ಅಧ್ಯಯನದ ಅವಧಿಯಲ್ಲಿ ಕೌಟುಂಬಿಕ ಜವಾಬ್ದಾರಿಯನ್ನು ಹೊತ್ತು ನನ್ನ ಅಧ್ಯಯನಕ್ಕೆ ಕಾಲಾವಕಾಶ ಮಾಡಿಕೊಟ್ಟು ಸಹಕರಿಸಿದ ಪತ್ನಿ ಶ್ರೀಮತಿ ರಾಧ ಅವರಿಗೆ ಮತ್ತು ಅಳಿಯನಾದ ಬಳ್ಳಾರಿ ವೀರೇಶ ಅವರಿಗೆ ಕೃತಜ್ಞತೆಗಳು.

ಸುಂದರವಾಗಿ ಒಪ್ಪುವಂತೆ ಅಕ್ಷರ ಜೋಡಣೆ ಮಾಡಿದ ರವಿ ಕಮಲಾಪುರ, ಅಧ್ಯಯನದುದ್ದಕ್ಕೂ ಸಲಹೆ ಸೂಚನೆ ನೀಡಿದ ಎಲ್ಲಾ ಬಂಧು-ಮಿತ್ರರಿಗೆ ಅನಂತ ಧನ್ಯವಾದಗಳು.

ಕೆ.ಮಲ್ಲಿಕಾರ್ಜುನ

□□□

ಪರಿವಿಡಿ

□□□

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರವೇಶ

ಭಾರತೀಯ ಸಂದರ್ಭದಲ್ಲಿ ಮಹಿಳೆಯನ್ನು ಕೇವಲ ಒಂದು ಭೋಗದ ವಸ್ತುವಾಗಿ ಪರಿಗಣಿಸುವುದೇ ಹೆಚ್ಚು. ಮಹಿಳೆಯನ್ನು ಕೇವಲ ತನ್ನ ಅಡಿಯಾಳಾಗಿ ನೋಡುವ ಪರಿಪಾಠವನ್ನು ಪುರುಷ ವರ್ಗ ಅನುಸರಿಸುತ್ತ ಬಂದಿರುವುದನ್ನು ಚರಿತ್ರೆಯ ಕಾಲದಿಂದ ಪ್ರಸ್ತುತ ಕಾಲದವರೆಗಿನ ಸಮಾಜದ ಮೂಲಕ ತಿಳಿದುಬರುತ್ತದೆ. ಹೆಣ್ಣು ಕೇವಲ ಪುರುಷನ ಉಪಭೋಗಕ್ಕೆ ಸೀಮಿತವಾದವಳು, ಆಕೆಗೆ ಯಾವುದೇ ಪವಿತ್ರ ಕಾರ್ಯಗಳಲ್ಲಿ ಸ್ಥಾನವಿಲ್ಲ ಎಂದು ಮನು ಸ್ಮೃತಿ ಮೂಲಕ ತಿಳಿದುಬರುತ್ತದೆ. ತತ್ವಜ್ಞಾನಿ ಪ್ಲೇಟೋನು ತನ್ನ ಕೃತಿಗಳಲ್ಲಿ (ರೂಲ್ ಆಫ್ ಫಿಲಾಸಫರ್ ಕಿಂಗ್) ಪುರುಷನಿಗಿರುವಷ್ಟೇ ಸ್ವಾತಂತ್ರ್ಯ ಹಾಗೂ ಶಿಕ್ಷಣದ ಅವಕಾಶಗಳು ಮಹಿಳೆಯರಿಗೂ ಸಮಾನವಾಗಿವೆ ಎಂದು ತಿಳಿಸುತ್ತಾನೆ. (ಮೀನಾಕ್ಷಿ ಬಿ; ೨೦೦೯; ಪು.೨) ಅರಿಸ್ಟಾಟಲನು ಪೊಲಿಟಿಕ್ಸ್ ಕೃತಿಯಲ್ಲಿ ನಾಗರೀಕತ್ವದ ಸಿದ್ಧಾಂತಗಳನ್ನು ತಿಳಿಸುತ್ತ ಮಹಿಳೆಯರಿಗೆ ಆಲೋಚಿಸುವ ಶಕ್ತಿ ಇರದೇ ಇರುವುದರಿಂದ ಅವರಿಗೆ ನಾಗರೀಕತ್ವದ ಅವಕಾಶ ನೀಡಬಾರದು ಎಂದು ತಿಳಿಸುತ್ತಾನೆ (ಅದೇ-೨, ೩) ಹೆಣ್ಣು ಕೇವಲ ರಾಜಕೀಯ ದಾಳವಾಗಿ ಉಪಯೋಗಕ್ಕೆ ಬರುತ್ತಾಳೆ ಎಂದು ಕೌಟಿಲ್ಯ ತಿಳಿಸುತ್ತಾನೆ. ಗಾಂಧಿಯವರು ಹೆಣ್ಣು ತನ್ನ ಕೌಟಂಬಿಕ ವ್ಯವಸ್ಥೆಗೆ ದಕ್ಕೆ ಬಾರದಂಥ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು ಎನ್ನುತ್ತಾರೆ. (ಗಾಂಧಿ ಚಿಂತನೆಗಳು, ೧೯೯೮; ಪು.೧೫೬)

ಚರಿತ್ರೆ ಕಾಲದಿಂದ ಪ್ರಸ್ತುತ ಸಂದರ್ಭದಲ್ಲಿ ನಿಂತು ನೋಡಿದರೂ ಸಹ ಲಿಂಗ ತಾರತಮ್ಯವೆಂಬುದು ಸಮಾಜದಲ್ಲಿ ಅಗಾಧವಾದ ಬಿರುಕನ್ನು ಸೃಷ್ಟಿ ಮಾಡಿರುವುದನ್ನು ಕಾಣಬಹುದಾಗಿದೆ.

ಹಿಂದೆ ಕಿತ್ತೂರಿನ ರಾಣಿ, ಬೆಳವಡಿ ಮಲ್ಲಮ್ಮ, ಅಬ್ಬಕ್ಕದೇವಿ, ಝಾನ್ಸಿರಾಣಿಯವರಂಥ ಮಹಿಳೆಯರು ನೇರವಾಗಿ ರಾಜ್ಯಾಡಳಿತವನ್ನು ಮಾಡಿರುವ ಉದಾಹರಣೆಗಳು ಇವೆಯಾದರೂ ಅವು ಕೆಲವೇ ಕೆಲವು ಅಪವಾದಗಳೆಂದು ಪರಿಗಣಿಸಬೇಕಾಗುತ್ತದೆ. ಹಿಂದೆ ರಾಜಕೀಯ ಕ್ಷೇತ್ರದಲ್ಲಿ ಮಹಿಳೆ ನೇರವಾಗಿ ಭಾಗವಹಿಸುತ್ತಿದ್ದುದು ಕೆಲವು ಅನಿವಾರ್ಯತೆಗಳಿದ್ದಾಗ ಮಾತ್ರ ಸಾಧ್ಯವಾಗುತ್ತಿತ್ತು. ಪತಿ ಮರಣಿಸಿ ವಾರಸುದಾರನಿಲ್ಲದಾಗ, ರಾಜ ತುಂಬಾ ಚಿಕ್ಕ ವಯಸ್ಸಿನವನಿದ್ದಾಗ ಮುಂತಾದ ಸಂದರ್ಭಗಳಲ್ಲಿ ಮಹಿಳೆ ರಾಜಕೀಯ ಪ್ರವೇಶ ಮಾಡುತ್ತಿದ್ದಳು. ಮಹಿಳೆ ರಾಜಕೀಯವಾಗಿ ಬಹುತೇಕ ನಿಷೇಧಗೊಳ್ಳಲು ಆ ಕಾಲದ ಸಾಮಾಜಿಕ ಸಂದರ್ಭ ಹಾಗೂ ಮೌಲ್ಯಗಳೇ ಕಾರಣವಾಗಿರಬಹುದು.

ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆಯು ಬಂಡವಾಳಶಾಹಿಗಳ ಹಿಡಿತದಲ್ಲಿರುವುದರಿಂದ ರಾಜಕೀಯ ವ್ಯವಸ್ಥೆಯಲ್ಲಿ ಕೇವಲ ಹಣವೇ ಮುಖ್ಯ ಪಾತ್ರವಹಿಸುತ್ತದೆಂಬ ವಾದವಿದ್ದರೂ ಸಹ ಅದರಾಚೆಗೆ ಪುರುಷಶಾಹಿ ವ್ಯವಸ್ಥೆ ತನ್ನ ಕಬಂಧಬಾಹುವಿನಲ್ಲಿ ರಾಜಕೀಯ ವ್ಯವಸ್ಥೆಯನ್ನು ಹಿಡಿದಿಟ್ಟುಕೊಂಡಿದೆ ಎಂಬುದನ್ನು ಗಮನಿಸಬೇಕಾಗಿದೆ. ಅದರಲ್ಲೂ ಮೇಲ್ವರ್ಗದ ಪುರುಷರು, ಬಂಡವಾಳಶಾಹಿಗಳು ರಾಜಕೀಯ ವ್ಯವಸ್ಥೆಯ ಹಕ್ಕುದಾರರಂತೆ ಮೆರೆದಾಡುತ್ತಿರುವುದನ್ನು ಗಮನಿಸಬಹುದು. ರಾಜಕೀಯ ಕನಿಷ್ಠ ಘಟಕವಾದ ಗ್ರಾಮಪಂಚಾಯ್ತಿಯಿಂದ ಹಿಡಿದು ಲೋಕಸಭೆವರೆಗೂ ಪುರುಷ ವರ್ಗವೇ ಬಹುಸಂಖ್ಯಾತವಾಗಿರುವುದನ್ನು ಕಾಣುತ್ತೇವೆ, ಅದರಲ್ಲೂ ಕೇವಲ ಮೀಸಲಾತಿ ಕಾರಣಕ್ಕೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಹಾಗೂ ಮಹಿಳಾ ಸದಸ್ಯರು ರಾಜಕೀಯ ಪ್ರವೇಶ ಮಾಡುವವರಾದರೂ ಅವರು ಮೇಲ್ವರ್ಗದವರ ಕೈಯೊಳಗಿನ ಸೂತ್ರದ ಗೊಂಬೆಗಳಂತೆ ಗೋಚರಿಸುತ್ತಾರೆ.

ಸಂವಿಧಾನದ ಬಹುಮುಖ್ಯ ಆಶಯವು ಮೂಲಭೂತ ಹಕ್ಕುಗಳು ಪ್ರತಿಯೊಬ್ಬ ಭಾರತೀಯನಿಗೆ ತಲುಪಬೇಕೇಂಬುದೇ ಆಗಿದೆ. ಆದರೆ ಈ ಆಶಯವು ಈಡೇರುವಲ್ಲಿ ಸೋತಿದೆಯಂದೇ ಹೇಳಬಹುದು. ಆದರೆ ಸಮಾಧಾನಕರ ವಿಚಾರವೆಂದರೆ ಸಂವಿಧಾನದ ಶಾಸನಗಳನ್ನು ಕಡ್ಡಾಯವಾಗಿ ಅನುಸರಿಸಲೇಬೇಕಾದ ಅನಿವಾರ್ಯತೆಯಿರುವುದರಿಂದ ಭಾರತೀಯ ಅಲ್ಪಮಟ್ಟಿಗಾದರೂ ಬದಲಾವಣೆಗೊಂಡಿರುವುದಂತೂ ಸತ್ಯ. ಅದರಲ್ಲೂ ತಳ ಸಮುದಾಯಗಳು, ಮಹಿಳೆಯರಿಗೆ ಈ ಸಂವಿಧಾನವು ವರದಾನವಾಗಿ ಪರಿಣಮಿಸಿದೆ ಎಂದೇ ಹೇಳಬಹುದು. ಅವರಿಗಾಗಿಯೇ ಹಲವಾರು ವಿಧಿ, ಅನುಚ್ಛೇಧಗಳು ಸಂವಿಧಾನದಲ್ಲಿ ಬರೆಯಲ್ಪಟ್ಟಿವೆ.

ಸಂವಿಧಾನದಲ್ಲಿ ೩-೬, ೧೦, ೨೦-೨೫, ೨೯ (೧)(೨), ೩೮(೨) ೩೯(ಎ), ೪೨, ೪೪, ೪೫, ೫೧ ಮುಂತಾದ ಅನುಚ್ಛೇಧಗಳು ಬಹುಮುಖ್ಯವಾಗಿ ಸಂವಿಧಾನದಲ್ಲಿ ಮೊದಲ ಹಂತದಲ್ಲಿ ಲಭ್ಯವಿರದಿದ್ದ ಮಹಿಳೆಯರ ಅನೇಕ ನಾಗರೀಕ ಹಕ್ಕುಗಳನ್ನು ಅವರಿಗೆ ದಕ್ಕಿಸಿಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದೆ.

ಪುರುಷ ಹಾಗೂ ಮಹಿಳೆಯರ ಮಧ್ಯದ ಸಾಮಾಜಿಕ ಸಮಾನತೆಯ ನೆಲೆಗಳನ್ನು ಅಂತರ್ಗತಗೊಳಿಸುವ ಮೂಲಕ ಮಹಿಳೆಯರಿಗೆ ಒಂದು ಹೊಸ ದಿಗಂತವನ್ನು ತೆರೆದಿಡಲಾಯಿತು. ಜೊತೆಗೆ ಸಂವಿಧಾನವು ಮೂರು ಮುಖ್ಯ ತೀರ್ಮಾನಗಳನ್ನು ತೆಗೆದುಕೊಂಡಿತು. ಮೊದಲನೇದಾಗಿ ಲಿಂಗಾಧಾರಿತವಾದ ತಾರತಮ್ಯಗಳ ನಿಷೇಧ, ಎರಡನೇದಾಗಿ ಮಹಿಳೆಯರ ಜೈವಿಕ, ಮಾನಸಿಕ, ಸಾಮಾಜಿಕ ಪರಿಸ್ಥಿತಿಗಳನ್ನು ಅನುಲಕ್ಷಿಸಿ ಅವರಿಗೆ ರಾಜ್ಯವು ವಿಶೇಷ ಕಾಳಜಿ ವಹಿಸುವಂತಹ ಉಪಬಂಧಗಳನ್ನು ನೀಡುವ ನಿರ್ದೇಶಕ ತತ್ವಗಳನ್ನು ಸಂರಚಿಸುದು. ಹೀಗೆ ಮಹಿಳೆ ಮತ್ತು ಪುರುಷರನ್ನು ಸಮಾನವಾಗಿ ಪರಿಗಣಿಸುವುದು ಸಂವಿಧಾನದ ಮುಖ್ಯ ಉದ್ದೇಶಗಳಲ್ಲೊಂದು.

ಮುಖ್ಯವಾಗಿ ಮಹಿಳೆಯರಿಗೆ ಸಂಬಂಧಿಸಿದಂತೆ ೧೪ ರಿಂದ ೧೮ರವರೆಗಿನ ವಿಧಿಗಳ ಪ್ರಕಾರ ನೀಡಿದ ಸಮಾನತೆಯ ಹಕ್ಕು, ೨೩, ೨೪ರ ವಿಧಿಗಳ ಪ್ರಕಾರ ನೀಡಿದ ಶೋಷಣೆಯ ವಿರುದ್ಧದ ಹಕ್ಕು, ಅನುಚ್ಛೇಧ ೩೯ (ಎ) (ಡಿ) (ಇ), ೪೨ರ ವಿಧಿಯ ಪ್ರಕಾರ ನಿರ್ದೇಶನ ತತ್ವಗಳು, ಅನುಚ್ಛೇಧ ೫೧ (ಎ) (ಇ) ಯ ಪ್ರಕಾರ ಮೂಲಭೂತ ಕರ್ತವ್ಯಗಳು, ಅನುಚ್ಛೇಧ ೩೨೫, ೩೨೬ ರ ವಿಧಿಯನ್ವಯ ನೀಡಿದ ಮತದಾನದ ಹಕ್ಕು ಮುಂತಾದವುಗಳನ್ನು ಗಮನಿಸಿದರೆ ಮಹಿಳಾ ಪ್ರಗತಿಗೆ ಸಂಬಂಧಿಸಿದಂತೆ ಬಹುಮುಖ್ಯ ನಿಲುವುಗಳನ್ನು ಸಂವಿಧಾನವು ತಳೆದಿರುವುದು ಸೂಚಿಸುತ್ತದೆ. ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ಮಹಿಳಾ ಹಕ್ಕುಗಳೊಂದಿಗೆ ಅವುಗಳು ದುರುಪಯೋಗವಾಗದಂತೆ ರಕ್ಷಣೆಗಳನ್ನೂ ನೀಡಲಾಗಿದೆ. ಮಹಿಳೆಗೆ ಮಾನಸಿಕ ಹಾಗೂ ದೈಹಿಕವಾಗಿ ಹಿಂಸಿಸುವುದು, ದುರುಪಯೋಗಪಡಿಸಿಕೊಳ್ಳುವುದು, ಕೀಳಾಗಿ ಕಾಣುವುದು ಮಾಡಿದಲ್ಲಿ ಆ ರೀತಿ ಮಾಡಿದವರಿಗೆ ಶಿಕ್ಷೆ ವಿಧಿಸುವ ಕುರಿತು ಸಂವಿಧಾನದಲ್ಲಿ ತಿಳಿಸಲಾಗಿದೆ. ಅದೇ ರೀತಿ ಜಾತಿ, ವಂಶ, ಲಿಂಗ, ಜನ್ಮಸ್ಥಳ ಮುಂತಾದವುಗಳ ಆಧಾರದ ಮೇಲೆ ನಡೆಯುವ ಅಸಮಾನತೆಯನ್ನು ನಿಷೇಧಿಸಲಾಗಿದೆ. ಮಹಿಳೆ ಮತ್ತು ಮಕ್ಕಳ ಕುರಿತು ನಿರ್ಧಿಷ್ಟವಾದ ಉಪಬಂಧಗಳನ್ನು ಜಾರಿ ಮಾಡಲು ರಾಜ್ಯಗಳಿಗೆ ಅಧಿಕಾರ ನೀಡಲಾಗಿದೆ. ಇದರಲ್ಲಿ ಮಹಿಳೆ ಮತ್ತು ಪುರುಷರಿಗೆ ಸಮಾನ

ಜೀವನಾವಶ್ಯಕ ಅನುಕೂಲಗಳು, ಸಮಾನ ವೇತನ, ಶೇ ೩೦ ರಷ್ಟು ಉದ್ಯೋಗವಕಾಶದ ಮೀಸಲಾತಿ, ರಾಜಕೀಯ ಸ್ಥಾನಗಳಲ್ಲಿಯೂ ಮೀಸಲಾತಿಯನ್ವಯ ಸ್ಥಾನಗಳನ್ನು ಕಲ್ಪಿಸುವುದು, ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು ನೀಡುವುದು ಮುಂತಾದವುಗಳು ಸೇರಿವೆ.

ಮಹಿಳಾ ಪರವಾಗಿ ಸಂವಿಧಾನದಲ್ಲಿ ೧೫ (೩) ರ ಅನುಚ್ಛೇಧದ ಪ್ರಕಾರ ಅನೇಕ ಉಪಯುಕ್ತ ಶಾಸನಬದ್ಧ ಅಧಿಕಾರಗಳನ್ನು ಕಲ್ಪಿಸಲಾಗಿದೆ. ಸರ್ಕಾರಿ ನೇಮಕಾತಿ, ಶಾಸನ ಸಭೆ ಮತ್ತು ಸಂಸತ್ತುಗಳಲ್ಲಿ ಮಹಿಳಾ ಮೀಸಲಾತಿ ಈ ಅನುಚ್ಛೇಧದ ಅಡಿಯಲ್ಲಿ ನೀಡಲಾದ ವಿಶೇಷ ಸವಲತ್ತಾಗಿದೆ. ಯಾವ ಸಂದರ್ಭದಲ್ಲಿ ಪುರುಷನನ್ನು ಜಾಮೀನಿನ ಮೇಲೆ ಕಾರಗೃಹದಿಂದ ಬಿಡುಗಡೆಗೊಳಿಸುದಿಲ್ಲವೋ ಅದೇ ಸಂದರ್ಭದಲ್ಲಿ ಮಹಿಳೆಯರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸುವುದನ್ನು ಕಾನೂನಿನಲ್ಲಿ ಕಲ್ಪಿಸಲಾಗಿದೆ.

ಸಮಾನತೆಯ ನಿಟ್ಟಿನಲ್ಲಿ ಇತ್ತೀಚೆಗೆ ಹೆಚ್ಚು ವ್ಯಾಪಕವಾಗಿ ಬಳಕೆಯಲ್ಲಿರುವ ಪರಿಕಲ್ಪನೆಯೆಂದರೆ ಅಭಿವೃದ್ಧಿ. ಅಭಿವೃದ್ಧಿ ಎಂಬುದು ರಾಜಕೀಯ ಶಕ್ತಿಯ ಪರ್ಯಾಯ ಪದವಾಗಿ ಮಾರ್ಪಟ್ಟಿದೆ. ಶಕ್ತಿ ಹೀನರಿಗೆ ಶಕ್ತಿಯನ್ನು ನೀಡುವುದೇ ಅಭಿವೃದ್ಧಿ ಎಂದು ಹೇಳಬಹುದು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅಭಿವೃದ್ಧಿಯ ಫಲ ದೊರಕಿಸಿಕೊಡುವುದೇ ಪಂಚಾಯತ್‌ರಾಜ್ ವ್ಯವಸ್ಥೆಯ ಗುರಿಯಾಗಿದೆ. ಭಾರತ ಶ್ರೇಣೀಕೃತ ವರ್ಗ ವ್ಯವಸ್ಥೆಯಿಂದ ಕೂಡಿದೆ. ಇಲ್ಲಿ ಮೇಲು ಕೀಳೆಂಬ ಶ್ರೇಣೀಕೃತ ಜಾತಿ ಸ್ಥರಗಳಿವೆ. ಸ್ತ್ರೀ ಪುರುಷರೆಂಬ ತಾರತಮ್ಯಗಳಿವೆ. ಶ್ರೀಮಂತರು, ಮಧ್ಯಮ ವರ್ಗದವರು, ಬಡವರು ಮತ್ತು ಕಡುಬಡವರೆಂಬ ವರ್ಗಗಳಿವೆ. ಅಧಿಕಾರವು ಕೆಲವೇ ಕೆಲವು ಬಂಡವಾಳಶಾಹಿಗಳ ನಿಯಂತ್ರಣದಲ್ಲಿದೆ. ಶ್ರೀಮಂತರು ಮಧ್ಯಮ ವರ್ಗದವರ ಮೂಲಕ ಬಡವರನ್ನು ಶೋಷಿಸುತ್ತಾ ವ್ಯವಸ್ಥೆಯನ್ನು ನಿಯಂತ್ರಿಸುತ್ತಿದ್ದಾರೆ. ಮಧ್ಯಮ ವರ್ಗದವರು ಸಹ ಶ್ರೀಮಂತರಂತೆ ಸೋಗನ್ನು ಹಾಕುವುದರೊಂದಿಗೆ ಬಡವರನ್ನು ಶೋಷಿಸುತ್ತಾ ತಾವೂ ಶ್ರೀಮಂತರಾಗಲು ಹವಣಿಸುತ್ತಿದ್ದಾರೆ. ಬಡವರು ತಮ್ಮ ಅಗತ್ಯಗಳಿಗಾಗಿ ಆಗಾಗ ಪ್ರತಿಭಟನೆ ಪ್ರತಿರೋಧ ವ್ಯಕ್ತಪಡಿಸಿದಾಗ ಅಭಿವೃದ್ಧಿಯ ಹೆಸರಿನಲ್ಲಿ ಅವರನ್ನು ಹತ್ತಿಡಲಾಗುತ್ತದೆ. ಉಳಿದಂತೆ ಕಡುಬಡವರು ಯಾವುದರ ತಂಟೆಗೆ ಹೋಗದೆ, ಸರ್ಕಾರದಿಂದ ಯಾವುದೇ ನಿರೀಕ್ಷೆಯನ್ನು ಬಯಸದೆ ತಮ್ಮಷ್ಟಕ್ಕೆ ತಾವು ಇರುತ್ತಾರೆ. ವ್ಯವಸ್ಥೆಯಲ್ಲಿ ನಿಜವಾದ ವಂಚಿತರೆಂದರೆ ಕಡುಬಡವರು ಮತ್ತು ಮಹಿಳೆಯರಾಗಿದ್ದಾರೆ.

ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವು ಏಕಪ್ರಕಾರವಾಗಿಲ್ಲ. ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಮಹಿಳೆಯರು ಆಯಾ ಜಾತಿಯ ಸ್ಥರಗಳಿಗನುಸಾರವಾಗಿ ಸ್ಥಾನಮಾನ ಹೊಂದಿದ್ದಾರೆ. ಮೇಲ್ಜಾತಿ/ ಮೇಲ್ವರ್ಗದ ಮಹಿಳೆಯರಿಗೆ ಕೆಳಜಾತಿ ಮಹಿಳೆಯರಿಂದ ಶೋಷಣೆ ಇಲ್ಲ. ಆದರೆ ಕೆಳಜಾತಿ ಮಹಿಳೆಯರಿಗೆ ಮೇಲ್ಜಾತಿ ಮಹಿಳೆಯರಿಂದ ಹಾಗೂ ಸ್ವಜಾತಿ, ವಿಜಾತಿ ಪುರುಷರಿಂದ ಶೋಷಣೆ ಉಂಟು. ಅಭಿವೃದ್ಧಿಯ ಫಲವನ್ನು ಮೇಲ್ಜಾತಿ ಮೇಲ್ವರ್ಗದ ಮಹಿಳೆಯರು ಮೊದಲು ಕಬಳಿಸಿಬಿಡುತ್ತಾರೆ. ಏನಾದರೂ ಉಳಿದರೆ ಬಡವರಲ್ಲಿ ಕೆಲವರಿಗೆ ಮಾತ್ರ ತಲುಪಬಹುದೇನೊ. ಬಹುಪಾಲು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನ, ಅದರಲ್ಲೂ ಮಹಿಳೆಯರು ಅಭಿವೃದ್ಧಿ ಫಲವನ್ನು ಪಡೆಯುವಲ್ಲಿ ವಂಚಿತರಾಗುತ್ತಾರೆ.

ಬುಡಕಟ್ಟುಗಳು

ಬೆಟ್ಟ ಗುಡ್ಡ, ಕಣಿವೆ, ಅರಣ್ಯ ಪ್ರದೇಶಗಳಲ್ಲಿ ಚಿಕ್ಕ ಚಿಕ್ಕ ಗುಂಪುಗಳಾಗಿ ನೆಲೆಸಿರುವ ತಮ್ಮದೇ ವಿಶಿಷ್ಟ ಭಾಷೆಯನ್ನು ಹೊಂದಿರುವ ಅರಣ್ಯ ಮೂಲದ ಉತ್ಪನ್ನಗಳನ್ನೇ ಜೀವನಾಧಾರಕ್ಕೆ ಬಳಕೆ ಮಾಡಿಕೊಳ್ಳುವ, ಪ್ರತ್ಯೇಕ ನೆಲೆಗಳಲ್ಲಿ ಒಟ್ಟಾಗಿ ವಾಸಿಸುವ ಸಮುದಾಯಗಳೇ ಬುಡಕಟ್ಟುಗಳು. ಇವರನ್ನು ವನವಾಸಿ, ಗಿರಿಜನ, ಅರಣ್ಯವಾಸಿ ಮುಂತಾದ ಹಲವಾರು ಹೆಸರುಗಳಿಂದ ಕರೆಯುತ್ತಾರೆ. ಇವರ ಸಾಮಾಜಿಕ ಬದುಕು ರಕ್ತ ಸಂಬಂಧದ ಮೇಲೆ ನಿಂತಿದೆ. ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದ ಎಲ್ಲರನ್ನೂ ತಿಳಿದಿರುತ್ತಾನೆ. ಸಚೇತನವಾದಿಗಳಾದ ಇವರು ತಮ್ಮ ರೂಢಿ ಸಂಪ್ರದಾಯಗಳನ್ನು ಚಾಚೂ ತಪ್ಪದೆ ಪಾಲಿಸುತ್ತಾರೆ. ಸಂವಿಧಾನದಲ್ಲಿ ೩೪೨ನೇ ಅನುಚ್ಛೇದದಲ್ಲಿ ಪರಿಶಿಷ್ಟ ಪಂಗಡಗಳ ಕುರಿತು ವಿವರಣೆ ನೀಡಲಾಗಿದೆ. ಇದರ ಪ್ರಕಾರ ಬುಡಕಟ್ಟು ಸಮುದಾಯಗಳು ಅಥವಾ ಗುಂಪುಗಳನ್ನು ರಾಷ್ಟ್ರಪತಿಗಳು ಪರಿಶಿಷ್ಟ ಪಂಗಡಗಳ ಅನುಚ್ಛೇದದಲ್ಲಿ ಸೇರಿಸಲು ಅವಕಾಶವಿದೆ. ಜಗತ್ತಿನಾದ್ಯಂತ ಇಂತಹ ಸಹಸ್ರಾರು ಬುಡಕಟ್ಟುಗಳನ್ನು ಕಾಣಬಹುದಾಗಿದೆ. ಪೆಸಿಫಿಕ್ ಸಾಗರದ ಮಲೇಷಿಯಾ, ಮೈಕ್ರೋನೇಷಿಯ, ಪಾಲಿನೇಷಿಯ ಮುಂತಾದ ಬುಡಕಟ್ಟುಗಳನ್ನು ನಿದರ್ಶನವಾಗಿ ಕೊಡಬಹುದಾಗಿದೆ.

ಭಾರತವು ಬುಡಕಟ್ಟುಗಳ ತವರು ಮನೆಯಾಗಿದೆ. ಆಫ್ರಿಕಾ ಖಂಡ ಬಿಟ್ಟರೆ ಭಾರತದಲ್ಲಿ ಹೆಚ್ಚು ಬುಡಕಟ್ಟು ಜನರಿದ್ದಾರೆ. ನಾಗ, ಭಿಲ್, ಬೇಡ ಮುಂತಾದ ಸುಮಾರು ೭.೫ ಕೋಟಿ ಬುಡಕಟ್ಟು

ಜನರಿದ್ದಾರೆ. ಕರ್ನಾಟಕದಲ್ಲಿ ಸುಮಾರು ೫೦ ಅಧಿಕೃತ ಬುಡಕಟ್ಟು ಸಮುದಾಯಗಳನ್ನು ಕಾಣಬಹುದಾಗಿದೆ. ಇವುಗಳಲ್ಲಿ ಆದಿವಾಸಿ ಕುಟುಂಬಗಳಿಗೆ ಸೇರಿದ ಎರಡು ಲಕ್ಷಕ್ಕೂ ಅಧಿಕ ಸಂಖ್ಯೆಯ ಆದಿವಾಸಿ ಜನರಿದ್ದಾರೆ. ಒಂದು ಸಾವಿರಕ್ಕೂ ಹೆಚ್ಚು ಆದಿವಾಸಿ ಹಳ್ಳಿಗಳಿವೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.೬.೫ ರಷ್ಟು ಬುಡಕಟ್ಟು ಸಮುದಾಯದ ಜನರಿದ್ದಾರೆ. ಅವುಗಳಲ್ಲಿ ಬೇಡ ಅಥವಾ ನಾಯಕ ಸಮುದಾಯ ಒಂದಾಗಿದೆ. ಕರ್ನಾಟಕದಲ್ಲಿ ಇವರನ್ನು ಬೇಡ, ಬೇಡರ್, ವಾಲ್ಮೀಕಿ, ನಾಯಕ, ನಾಯಕರ್, ಪರಿವಾರ ಮುಂತಾದ ಹಲವಾರು ಹೆಸರುಗಳಿಂದ ಕರೆಯಲಾಗುತ್ತಿದೆ.

ಇವರಲ್ಲದೆ ಹಕ್ಕಿ ಪಿಕ್ಕಿ, ಡುಂಗ್ರಿ ಗರಾಸಿಯ, ಮೇಧ ಮುಂತಾದ ಹಲವಾರು ಬುಡಕಟ್ಟು ಸಮುದಾಯಗಳನ್ನು ಕರ್ನಾಟಕದಲ್ಲಿ ಕಾಣಬಹುದಾಗಿದೆ.

ಪರಿಶಿಷ್ಟ ವರ್ಗದ ಮಹಿಳೆಯರು ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಾನಮಾನವಿಲ್ಲದೆ ಪುರುಷ ಅವಲಂಬಿಯಾದ ಅನಕ್ಷರಸ್ಥರಾಗಿದ್ದಾರೆ. ಇಂತಹ ಅತಂತ್ರ ಸ್ಥಿತಿಯ ಮಹಿಳೆಯರನ್ನು ಸಶಕ್ತೀಕರಿಸಿ ಅವರನ್ನು ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದಾಗಿ ಮಹಿಳಾ ಮೀಸಲಾತಿ, ಜಾತಿಯಾಧಾರಿತ ಮೀಸಲಾತಿಯನ್ನು ಸಂವಿಧಾನಬದ್ಧವಾಗಿ ಜಾರಿಗೆ ತರಲಾಯಿತು..

ಮಹಿಳೆಯರನ್ನು ಸಶಕ್ತೀಕರಣಗೊಳಿಸುವುದರ ನಿಜವಾದ ಅರ್ಥ ರಾಜಕೀಯ ಅಧಿಕಾರ ನೀಡುವುದು. ಮಹಿಳೆಯರನ್ನು ಸಬಲೀಕರಿಸುವಲ್ಲಿ ರಾಜಕೀಯ ಅಧಿಕಾರ ಪ್ರಮುಖ ಪಾತ್ರ ವಹಿಸುತ್ತದೆ.

ಸಂವಿಧಾನದ ನಿರ್ದೇಶಕತ್ವದಲ್ಲಿ ರಾಜ್ಯವು ಮಹಿಳೆ ಮತ್ತು ಪುರುಷರ ನಡುವೆ ಲಿಂಗ, ಜಾತಿ, ಧರ್ಮ. ಜನ್ಮಸ್ಥಳ ಇವುಗಳ ಆಧಾರದ ಮೇಲೆ ಯಾವುದೇ ರೀತಿಯ ತಾರತಮ್ಯ ತೋರಬಾರದೆಂದು ಅನುಚ್ಛೇದ ೧೫ರಲ್ಲಿ ನಿರೂಪಿಸಲಾಗಿದೆ. ಸಂವಿಧಾನದ ಮೂಲಭೂತ ಹಕ್ಕುಗಳು ಮತ್ತು ರಾಜ್ಯದ ನೀತಿ ನಿರ್ದೇಶನಗಳ ತತ್ವಗಳು ಎಂಬ ವಿಭಾಗದಲ್ಲಿ ಸಮಾನತೆಗಾಗಿ ಅನುಸರಿಸಬೇಕಾದ ತತ್ವಗಳನ್ನು ಅಳವಡಿಸಲಾಗಿದೆ. ಸಂವಿಧಾನ ಶಿಲ್ಪಿಗಳು ರಾಜಕೀಯ ಕ್ಷೇತ್ರ ಒಳಗೊಂಡಂತೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸ್ತ್ರೀ ಪುರುಷರಿಗೆ ಸಮಾನ ಅವಕಾಶ ಕಲ್ಪಿಸಿಕೊಟ್ಟಿದೆ.

೧೯೮೫ರಲ್ಲಿ ನೈರೋಬಿಯಾದಲ್ಲಿ ನಡೆದ ಅಲಿಪ್ತ ಸಮ್ಮೇಳನಕ್ಕಾಗಿ ತಯಾರಿಸಿದ ರಾಷ್ಟ್ರೀಯ ದಾಖಲೆಯಲ್ಲಿ ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯದ ಅವಶ್ಯಕತೆ ಮತ್ತು ಅದಕ್ಕೆ ಸೂಕ್ತವಾದ

ನೀತಿಯನ್ನು ಉಲ್ಲೇಖಿಸಲಾಗಿತ್ತು. ಅನಂತರ ಇದರ ಆಧಾರದ ಮೇಲೆ ಅನೇಕ ರಾಷ್ಟ್ರೀಯ ವೇದಿಕೆಗಳಲ್ಲಿ ರಾಜಕೀಯದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಬಗ್ಗೆ ಪದೇ ಪದೇ ಪ್ರತಿ ಬಿಂಬಿಸಲಾಗುತ್ತಿತ್ತು. ಇವುಗಳ ಪರಿಣಾಮವಾಗಿ ಕರ್ನಾಟಕವು ಸೇರಿದಂತೆ ಅನೇಕ ರಾಜ್ಯಗಳಲ್ಲಿ ರಾಜಕೀಯ ಕ್ಷೇತ್ರಗಳಲ್ಲಿ ಮಹಿಳಾ ಪ್ರಾತಿನಿಧ್ಯದ ಬಗ್ಗೆ ಸಕ್ರಿಯವಾಗಿ ಚರ್ಚೆಗಳಾಗುತ್ತಲೇ ಇವೆ.

ಸಂವಿಧಾನವು ರಾಷ್ಟ್ರದ ಅಧಿಕಾರಗಳನ್ನು ಹಂಚಿತು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಅಧಿಕಾರ ನಡೆಸಲು ಪ್ರತ್ಯೇಕ ವಿಷಯಗಳನ್ನು ನಿಗದಿ ಮಾಡಿತು. ಮತ್ತೆ ಕೆಲವು ವಿಷಯಗಳು ಜಂಟಿಪಟ್ಟಿಯಲ್ಲಿದ್ದವು. ಪಂಚಾಯತ್‌ರಾಜ್ ಸಂಸ್ಥೆಯನ್ನು ರಚಿಸುವ ಅಧಿಕಾರವನ್ನು ರಾಜ್ಯಗಳಿಗೆ ಬಿಟ್ಟುಕೊಡಲಾಯಿತು. ರಾಜ್ಯಗಳ ಪಂಚಾಯ್ತಿ ಕಾಯ್ದೆಗಳಲ್ಲಿ ಮಹಿಳೆಯರನ್ನು ಪಂಚಾಯ್ತಿಗಳಿಗೆ ನಾಮಕರಣ ಮಾಡಲು ಅವಕಾಶವಿತ್ತು. ಈ ಕಾಯ್ದೆಗಳು ಎರಡು ಅಥವಾ ಮೂರು ಮಹಿಳೆಯರನ್ನೂ ಪಂಚಾಯ್ತಿಗಳಿಗೆ ನಾಮಕರಣ ಮಾಡಲು ದಾರಿ ಮಾಡಿದೆ.

ಬಲವಂತ್‌ರಾಯ್ ಮೆಹ್ತಾ ಸಮಿತಿ ಶಿಫಾರಸ್ಸಿನ ಮೇರೆಗೆ ಮೂರು ಹಂತದ ಪಂಚಾಯತ್‌ರಾಜ್ ಪದ್ಧತಿಯನ್ನು ರಚಿಸಿತು.

ಗ್ರಾಮೀಣ ಪರಿಸರದಲ್ಲಿ ಮಹಿಳೆಯ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಭಾರತದ ಬಹುತೇಕ ಮಹಿಳೆಯರು ಗ್ರಾಮೀಣ ಪ್ರದೇಶಗಳಲ್ಲಿಯೇ ವಾಸಿಸುತ್ತಿದ್ದಾರೆ. ಇದರಲ್ಲಿ ಬಹುಪಾಲು ಮಹಿಳೆಯರು ಕೃಷಿ ಕೂಲಿ, ಅಸಂಘಟಿತ ವಲಯದ ಕೂಲಿಯನ್ನೇ ಅವಲಂಬಿಸಿದ್ದಾರೆ. ಅರ್ಧಕ್ಕಿಂತ ಹೆಚ್ಚು ಮಹಿಳೆಯರು ಗೃಹಕೃತ್ಯಗಳಲ್ಲಿಯೇ ತೊಡಗುವ ಮತ್ತು ಅವರ ಕಾರ್ಯವನ್ನು ಯಾವುದೇ ವೃತ್ತಿಯೆಂದು ಪರಿಗಣಿಸದ ಸ್ಥಿತಿಯಲ್ಲಿದ್ದಾರೆ ಹಾಗೂ ಇಂತಹ ಮಹಿಳೆಯರು ಪ್ರಾಥಮಿಕ ಸೌಲಭ್ಯಗಳಿಂದಲೂ ವಂಚಿತರಾಗಿದ್ದಾರೆ. ಕೃಷಿ ಮತ್ತು ಇತರ ಕಷ್ಟಕರ ಕೆಲಸಗಳಲ್ಲಿ ಮಹಿಳೆಯರ ಪಾಲು ಶೇ. ೫೦ ಕ್ಕಿಂತ ಹೆಚ್ಚಿದ್ದರೂ ಸಹಿತ ಆರ್ಥಿಕ ಸ್ವಾವಲಂಬನೆಯಿಂದ ಅವಳು ವಂಚಿತಳಾಗಿದ್ದಾಳೆ. ಅಷ್ಟೇ ಅಲ್ಲ ಮಹಿಳೆ ಸಾಮಾಜಿಕ ಹಾಗೂ ರಾಜಕೀಯ ಸಮಾನತೆಗಳಿಂದಲೂ ದೂರವುಳಿಯಬೇಕಾದ ಅನಿವಾರ್ಯ ಸ್ಥಿತಿಗೆ ನೂಕಲ್ಪಟ್ಟಿದ್ದಾಳೆ.

ಭಾರತದ ಅನಿಷ್ಟವೆಂದೇ ಪರಿಗಣಿಸಿರುವ ಜಾತಿ ವ್ಯವಸ್ಥೆಯಲ್ಲಿ ಹಂಚಿ ಹೋಗಿರುವ ಮಹಿಳೆ ವರ್ಗ, ಜಾತಿ ಸಮೂಹಗಳ ಹಿನ್ನೆಲೆಯಲ್ಲಿ ಎದುರಿಸಬೇಕಾಗಿರುವ ಸಮಸ್ಯೆಗಳು ಭಿನ್ನವಾಗಿರು

ವಂಥವುಗಳಾಗಿವೆ. ಇಡೀ ಪುರುಷ ವರ್ಗದ ದೃಷ್ಟಿಯಲ್ಲಿ ಮಹಿಳೆಯರ ಶೋಷಣೆ ಒಂದು ರೀತಿಯಾಗಿದ್ದರೆ ಅವರವರ ಜಾತಿ ಪಂಗಡದ ಹಂತದಲ್ಲಿ ಶೋಷಣೆ ಹೊಸ ರೂಪವನ್ನೇ ತಾಳುತ್ತದೆ. ಹೀಗಾಗಿ ನಿರ್ಧಿಷ್ಟ ಮಾನದಂಡಗಳಿಂದ ರೂಪಿಸಿದ ಸುಧಾರಣಾ ಕ್ರಮಗಳು, ಕಾನೂನುಗಳು ಒಟ್ಟು ಮಹಿಳಾ ವರ್ಗದ ಸಮಸ್ಯೆಗಳಿಗೆ ಪರಿಹಾರವಾಗಲಾರದೆನಿಸುತ್ತದೆ.

ದೇವರು, ಧರ್ಮ, ಜಾತಿಗಳ ಹೆಸರಿನಲ್ಲಿ ಇಂದಿಗೂ ತಳಸಮುದಾಯದ ಮಹಿಳೆಯರು ಪುರುಷ ವ್ಯವಸ್ಥೆಯಿಂದ ನಿರಂತರವಾಗಿ ಶೋಷಣೆಗೆ ಒಳಗಾಗುತ್ತಲೇ ಇದ್ದಾರೆ. ರಾಜಕೀಯವಾಗಿ ದಲಿತ ಮಹಿಳಾ ಮೀಸಲಾತಿಯು ಈ ರೀತಿಯ ಶೋಷಣೆಗೆ ದಾರಿ ಮಾಡಿಕೊಟ್ಟಿದೆಯೇನೋ ಎನಿಸುತ್ತದೆ.

ರಾಜಕೀಯ ವಿಕೇಂದ್ರೀಕರಣದಿಂದ ತಳಮಟ್ಟದ ಆಡಳಿತ ವ್ಯವಸ್ಥೆಯನ್ನು ಗಟ್ಟಿಗೊಳಿಸಬಹುದು ಎಂಬ ದೃಷ್ಟಿಯಿಂದ ಪಂಚಾಯತ್‌ರಾಜ್ ವ್ಯವಸ್ಥೆ ರೂಪುಗೊಂಡಿದೆ. ಬಲವಂತರಾವ್ ವರದಿಯಾಧರಿಸಿ ರೂಪುಗೊಂಡ ಈ ಪಂಚಾಯತ್ ರಾಜ್ ವ್ಯವಸ್ಥೆ ಜಿಲ್ಲಾ, ತಾಲೂಕು, ಗ್ರಾಮ ಮಟ್ಟ ಹೀಗೆ ಮೂರು ಹಂತಗಳಲ್ಲಿ ಕಾರ್ಯ ನಿರ್ವಹಿಸುತ್ತದೆ. ಮಹಿಳಾ ಮೀಸಲಾತಿ, ಹಾಗೂ ಜಾತಿಯಾಧರಿತ ಮೀಸಲಾತಿಯನ್ನು ಸಂವಿಧಾನಬದ್ಧವಾಗಿ ಈ ವ್ಯವಸ್ಥೆ ಪಾಲಿಸುತ್ತಿದೆ. ಆ ಪ್ರಕಾರ ಪರಿಶಿಷ್ಟ ವರ್ಗದ ಮಹಿಳೆಯರಿಗಾಗಿಯೂ ಈ ವ್ಯವಸ್ಥೆಯಲ್ಲಿ ಮೀಸಲಾತಿ ಕಲ್ಪಿಸಲಾಗಿದೆ. ಹೀಗೆ ಸಂವಿಧಾನಬದ್ದವಾಗಿರುವ ಮೀಸಲಾತಿಯ ಅವಕಾಶಗಳನ್ನು ಉಪಯೋಗಿಸಿಕೊಂಡು ಚುನಾಯಿತರಾದ ಪರಿಶಿಷ್ಟ ವರ್ಗದ ಮಹಿಳೆಯರು ವಿಕೇಂದ್ರೀಕರಣ ವ್ಯವಸ್ಥೆ ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಎಷ್ಟು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಮೀಸಲಾತಿ ಸೌಲಭ್ಯ ಎಷ್ಟರಮಟ್ಟಿಗೆ ಸದುಪಯೋಗವಾಗಿದೆ, ಮೇಲ್ವರ್ಗ ಹಾಗೂ ಪುರುಷಶಾಹಿ ವ್ಯವಸ್ಥೆ ಇವರನ್ನು ಯಾವ ರೀತಿಯಾಗಿ ತನ್ನ ಹಿಡಿತದಲ್ಲಿರಿಸಿಕೊಂಡಿದೆ. ಪರಿಶಿಷ್ಟ ವರ್ಗದ ಮಹಿಳೆಯರು ಇತರರಿಗಿಂತ ಹೇಗೆ ಭಿನ್ನವಾಗಿದ್ದಾರೆ. ಮುಖ್ಯವಾಗಿ ಚುನಾವಣೆಯ ಮೂಲಕ ಆಯ್ಕೆಗೊಂಡ ಈ ಮಹಿಳೆಯರ ಸದಸ್ಯತ್ವ ಯಾವ ರೀತಿಯ ಸಾಫಲ್ಯತೆಯನ್ನು ಹೊಂದಿದೆ ಮುಂತಾದವುಗಳನ್ನು ಗಮನಿಸುವ ಪ್ರಯತ್ನ ಮಾಡಲಾಗಿದೆ.

ಮುಖ್ಯವಾಗಿ ಪಂಚಾಯತ್ ರಾಜ್ ವ್ಯವಸ್ಥೆಯಂದರೇನು, ಸಮಗ್ರ ಗ್ರಾಮೀಣಾಭಿವೃದ್ಧಿ ಹಾಗೂ ತಳವರ್ಗದವರಾದ ಪರಿಶಿಷ್ಟ ಪಂಗಡದ ಮಹಿಳೆಯರ ಸಶಕ್ತೀಕರಣಕ್ಕೆ ಈ ವಿಕೇಂದ್ರೀಕರಣ ವ್ಯವಸ್ಥೆ ಹೇಗೆ ಪೂರಕವಾಗಿದೆ, ಅದರ ಸಾಧಕ ಬಾಧಕಗಳೇನು ಎಂಬುದನ್ನು ಪಂಚಾಯತ್

ರಾಜ್ ವ್ಯವಸ್ಥೆಯಲ್ಲಿ ಚುನಾಯಿತರಾದ ಗ್ರಾಮ ಪಂಚಾಯತ್, ತಾಲೂಕ್ ಪಂಚಾಯತ್, ಜಿಲ್ಲಾ ಪಂಚಾಯತ್ ಮೂರು ಹಂತದಲ್ಲಿ ಚುನಾಯಿತಗೊಂಡ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಕುರಿತು ಈ ಅಧ್ಯಯನದ ಹಿನ್ನೆಲೆಯಲ್ಲಿ ಅರಿಯುವ ಪ್ರಯತ್ನ ಮಾಡಲಾಗಿದೆ.

ಅಧ್ಯಯನದ ಉದ್ದೇಶಗಳು

ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ ೧೯೯೩ರಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಕಾಯ್ದೆ ಮಹಿಳಾ ಮೀಸಲಾತಿ ವಿಷಯದಲ್ಲಿ ಹೆಚ್ಚು ಪ್ರಗತಿ ಪರವಾಗಿದೆ. ಕಾಯ್ದೆ ಅಡಿಯಲ್ಲಿ ಮಹಿಳೆಯರಿಗೆ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿಗಳ ಸದಸ್ಯರ ಸ್ಥಾನ ಮತ್ತು ಅಧ್ಯಕ್ಷರ ಸ್ಥಾನದಲ್ಲಿ ಶೇ.೩೩ರಷ್ಟು ಮೀಸಲಾತಿ ನೀಡಲಾಗಿದೆ. ಪರಿಶಿಷ್ಟ ಜಾತಿ/ ಪಂಗಡ, ಹಿಂದುಳಿದ ವರ್ಗಗಳು ಸಾಮಾನ್ಯವರ್ಗದ ಮಹಿಳೆಯರಿಗೂ ಶೇ.೩೩ರಷ್ಟು ಮೀಸಲಾತಿ ನೀಡಲಾಗಿದೆ. ಈ ಮೀಸಲಾತಿ ನೀತಿಯಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಾವಿರಾರು ಮಹಿಳೆಯರು ರಾಜಕೀಯ ವಲಯದಲ್ಲಿ ಸಕ್ರಿಯವಾಗಿ ಭಾಗವಹಿಸುವಂತಾಗಿದೆ. ಆದರೂ ಹಲವಾರು ಅಪವಾದಗಳು ಕೇಳಿಬರುತ್ತಿವೆ. ಮಹಿಳಾ ಸದಸ್ಯರು ಅನಕ್ಷರಸ್ಥರ ಸಭೆಗಳಿಗೆ ಸರಿಯಾಗಿ ಹಾಜರಾಗುವುದಿಲ್ಲ. ಸಾಮಾಜಿಕ ವಿಷಯಗಳಲ್ಲಿ ಕೌಶಲ್ಯ ಕಡಿಮೆ. ಇವರಿಗೆ ಸಾಕಷ್ಟು ಅನುಭವವಿಲ್ಲ. ಅಧಿಕಾರಿಗಳು, ರಾಜಕಾರಣಿಗಳು ಮೊದಲಾದವರ ಜೊತೆ ಸಂಧಾನ ನಡೆಸುವ ನೈಪುಣ್ಯತೆ ಇವರಲಿಲ್ಲ, ಮಹಿಳೆಯರು ನೆಪಮಾತ್ರಕ್ಕೆ ಸದಸ್ಯರಾಗಿದ್ದಾರೆ. ಅವರ ಗಂಡಂದಿರು ಅಥವಾ ಸಂಬಂಧಿಕರು ಅಧಿಕಾರ ನಡೆಸುತ್ತಿದ್ದಾರೆ. ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಮಹಿಳಾ ಸದಸ್ಯರು ಹೆಚ್ಚು ನಿಂದನೆ ಹಾಗೂ ಕಿರುಕುಳಕ್ಕೆ ಒಳಗಾಗುತ್ತಿದ್ದಾರೆ. (ಮಹಿಳಾ ಅಭಿವೃದ್ಧಿ ಕ್ರಿಯಾ ಸಮಿತಿ ೨೦೦೨)

ಮಹಿಳಾ ಸದಸ್ಯರುಗಳು ಕಾರ್ಯನಿರ್ವಹಿಸುವಲ್ಲಿ ಅಧಿಕಾರ ಚಲಾಯಿಸುವಲ್ಲಿ ಏಕೆ ಸಕ್ರಿಯವಾಗಿ ಪಾಲ್ಗೊಳ್ಳುತ್ತಿಲ್ಲ. ಅವರು ಭಾಗವಹಿಸುವಿಕೆಯಲ್ಲಿ ಇರುವ ಸಮಸ್ಯೆಗಳೇನು. ಪರಿಶಿಷ್ಟ ಜಾತಿ ಮತ್ತು ವರ್ಗದ ಮಹಿಳಾ ಸದಸ್ಯರೇಕೆ ಹೆಚ್ಚು ಕಿರುಕುಳಗಳಿಗೆ ಒಳಗಾಗುತ್ತಿದ್ದಾರೆ ಮುಂತಾದವುಗಳನ್ನು ತಿಳಿಯುವ ಹಿನ್ನೆಲೆಯಲ್ಲಿ ಕೆಳಗಿನ ಉದ್ದೇಶಗಳನ್ನು ಇಟ್ಟುಕೊಂಡು ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ವರ್ಗದ ಮಹಿಳಾ ಸದಸ್ಯರ ರಾಜಕೀಯ ಕಾರ್ಯವೈಖರಿ ನೋಡುವ ಒಂದು ಪ್ರಯತ್ನವನ್ನು ಅಧ್ಯಯನದಲ್ಲಿ ಮಾಡಲಾಗಿದೆ.

ಉದ್ದೇಶಗಳು

೧. ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡ ಮಹಿಳೆಯರ ರಾಜಕೀಯ ಆಡಳಿತ ಹಿನ್ನೆಲೆ ತಿಳಿಯುವುದು.

೨. ಪರಿಶಿಷ್ಟ ವರ್ಗದ ಮಹಿಳಾ ಸದಸ್ಯರ ಆರ್ಥಿಕ, ಸಾಮಾಜಿಕ ಶೈಕ್ಷಣಿಕ ಸ್ಥಾನಮಾನ ತಿಳಿಯುವುದು.

೩. ಪರಿಶಿಷ್ಟ ಪಂಗಡ ಮಹಿಳೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅವಲೋಕಿಸುವುದು ಮುಂತಾದ ಉದ್ದೇಶಗಳನ್ನಿರಿಸಿಕೊಂಡು ಈ ಅಧ್ಯಯನ ನಡೆಸಲಾಗಿದೆ.

ವ್ಯಾಪ್ತಿ

ಪಂಚಾಯತ್ ರಾಜ್ ವ್ಯವಸ್ಥೆ ಎಂಬುದು ಒಂದು ಬೃಹದಾಕಾರದ ಆಲದ ಮರವಿದ್ದಂತೆ. ಇಂದು ಭಾರತದ ಪ್ರತಿಯೊಂದು ರಾಜ್ಯವೂ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಳವಡಿಸಿಕೊಂಡಿವೆ. ಈ ವ್ಯವಸ್ಥೆಯು ಸ್ಥಳೀಯ ಮಟ್ಟದ ಸಮಸ್ಯೆಗಳನ್ನು ಅರಿಯುವ ಹಾಗೂ ಪರಿಹರಿಸುವ ಕಾರ್ಯವನ್ನು ಮಾಡುತ್ತಾ ಬಂದಿದೆ. ಮುಖ್ಯವಾಗಿ ಮೂರು ಹಂತಗಳಲ್ಲಿ ಹರಡಿಕೊಂಡಿರುವ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಪ್ರಮುಖವಾದುದು ಗ್ರಾಮ ಪಂಚಾಯತ್ ವ್ಯವಸ್ಥೆ. ಅದಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸುವುದು ತಾಲೂಕ್ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳು. ಹೀಗಾಗಿ ಈ ಮೂರು ಹಂತಗಳಲ್ಲಿ ಕಾರ್ಯ ನಿರ್ವಹಿಸುವ ಪರಿಶಿಷ್ಟ ಪಂಗಡದ ಮಹಿಳೆಯರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

ಇಡೀ ರಾಜ್ಯ ಅಥವಾ ರಾಷ್ಟ್ರವೊಂದನ್ನು ಅಧ್ಯಯನಕ್ಕೆ ಅಳವಡಿಸುವುದು ಅಧ್ಯಯನದ ಕಾಲಮಿತಿಯ ದೃಷ್ಟಿಯಿಂದ ಕಷ್ಟಕರವಾದ ಕೆಲಸವೆಂದು ಭಾವಿಸಿ ಕೇವಲ ಬಳ್ಳಾರಿ ಜಿಲ್ಲೆಯನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಪ್ರಸ್ತುತ ಏಳು ತಾಲೂಕುಗಳಿವೆ. ಈ ಏಳು ತಾಲೂಕುಗಳಲ್ಲಿ ಒಟ್ಟು ನಾಲ್ಕು ತಾಲೂಕುಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಈ ನಾಲ್ಕು ತಾಲೂಕುಗಳಲ್ಲಿ ಎರಡು ನೀರಾವರಿಯನ್ನು ಒಳಗೊಂಡ ತಾಲೂಕುಗಳಾದರೆ (ಹೊಸಪೇಟೆ, ಸಿರಗುಪ್ಪ) ಎರಡು ಒಣ ಬೇಸಾಯ ಕ್ರಮವನ್ನು ಹೆಚ್ಚಾಗಿ ಅವಲಂಬಿಸಿದ ತಾಲೂಕುಗಳಾಗಿವೆ(ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ). ಈ ತಾಲೂಕುಗಳಲ್ಲಿ

ಪ್ರತಿ ತಾಲೂಕಿಗೆ ನಾಲ್ಕು ಗ್ರಾಮ ಪಂಚಾಯತಿಗಳಂತೆ ಒಟ್ಟು ೧೬ ಗ್ರಾಮ ಪಂಚಾಯತಿಗಳು, ತಾಲೂಕು ಪಂಚಾಯತಿಗಳು ಹಾಗೂ ಜಿಲ್ಲಾ ಪಂಚಾಯತಿಗೆ ಹೀಗೆ ಮೂರು ಹಂತದಲ್ಲಿ ಆಯ್ಕೆಗೊಂಡ ಒಟ್ಟು ೨೫೭ ಪರಿಶಿಷ್ಟ ಪಂಗಡದ ಮಹಿಳೆಯರನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ.

ಅಧ್ಯಯನದ ಮಹತ್ವ

ವಿಕೇಂದ್ರೀಕರಣ ಹಾಗೂ ಪಂಚಾಯತ್‌ರಾಜ್ ವ್ಯವಸ್ಥೆಯ ಕುರಿತು ಹಲವಾರು ಅಧ್ಯಯನಗಳು ನಡೆದಿವೆಯಾದರೂ ಇಲ್ಲಿಯವರೆಗೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಚುನಾಯಿತರಾಗಿ ಕಾರ್ಯ ನಿರ್ವಹಿಸಿದ ಪರಿಶಿಷ್ಟ ಪಂಗಡದ ಮಹಿಳೆಯರ ಕುರಿತು ಕನ್ನಡದಲ್ಲಿ ಯಾವುದೇ ತರಹದ ಅಧ್ಯಯನಗಳು ನಡೆದಿರುವುದಿಲ್ಲ. ಹೀಗಾಗಿ ಪಂಚಾಯತ್ ವ್ಯವಸ್ಥೆಯಲ್ಲಿನ ಪರಿಶಿಷ್ಟ ಪಂಗಡದ ಮಹಿಳೆಯರ ಕುರಿತು ನಡೆದಿರುವ ಅಧ್ಯಯನಗಳಲ್ಲಿ ಈ ಅಧ್ಯಯನವು ಮೊದಲ ಪ್ರಯತ್ನವಾಗಿದೆ. ಹೀಗಾಗಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿನ ಪರಿಶಿಷ್ಟ ಪಂಗಡದ ಮಹಿಳೆಯರ ಸ್ಥಿತಿ ಗತಿಗಳನ್ನು ಈ ಅಧ್ಯಯನದಲ್ಲಿ ಅರಿಯಲು ಪ್ರಯತ್ನಿಸಲಾಗಿದೆ. ಈ ಎಲ್ಲಾ ದೃಷ್ಟಿಯಿಂದ ಈ ಅಧ್ಯಯನವು ಒಂದು ಮಹತ್ವದ ಹೆಜ್ಜೆ ಎಂದು ತಿಳಿಯಲಾಗಿದೆ.

ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನವನ್ನು ರ್‍ಯಾಂಡಮ್ ಆಗಿ ಅಧ್ಯಯನ ಮಾಡಲಾಗಿದೆ. ಮುಖ್ಯವಾಗಿ ಈ ಅಧ್ಯಯನ ನಡೆಸಲು ಚಾರಿತ್ರಿಕ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ, ಸಂದರ್ಶನ ವಿಧಾನ, ಸಮೀಕ್ಷೆ ಹಾಗೂ ಸಹಭಾಗಿತ್ವ ವಿಧಾನಗಳನ್ನು ಹಾಗೂ ಪ್ರಶ್ನಾವಳಿಯ ವಿಧಾನಗಳನ್ನು ಅನುಸರಿಸಲಾಗಿದೆ. ಹಾಗೆ ನಕ್ಷೆಗಳು, ಕೋಷ್ಟಕಗಳು ಮುಂತಾದವುಗಳನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯ ಕುರಿತು ಇಲ್ಲಿಯವರೆಗೆ ಬಂದಿರುವ ಕೃತಿಗಳು, ಗೆಜೆಟೆಯರ್‌ಗಳು, ಪತ್ರಿಕೆಗಳು, ಬಿಡಿ ಲೇಖನಗಳು, ಜನಗಣತಿ ವರದಿಗಳು, ಮಾನವಾಭಿವೃದ್ಧಿ ವರದಿ, ಪಂಚಾಯತ್ ರಾಜ್ ವ್ಯವಸ್ಥೆಯ ಸಾಮಾನ್ಯ ಮಾಹಿತಿಗಳು, ಹಾಗೂ ಪರಿಶಿಷ್ಟ ಪಂಗಡಗಳ ಕುರಿತಾಗಿ ಬಂದಿರುವ ವರದಿಗಳು, ಆಯೋಗಗಳ ವರದಿಗಳು ಹಾಗೂ ಇತರ ಮೂಲಗಳಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಹಾಗೆ ನಾಲ್ಕು ತಾಲೂಕಿನಲ್ಲಿ ನಾಲ್ಕು ಗ್ರಾಮ ಪಂಚಾಯತಿಗಳ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರನ್ನು ನೇರವಾಗಿ ಸಮೀಕ್ಷಿಸಿ ಸಂದರ್ಶನ ನಡೆಸಲಾಯಿತು. ಅವರೊಂದಿಗೆ ಆಯಾ ತಾಲೂಕಿನಲ್ಲಿಯ ತಾಲೂಕು ಪಂಚಾಯತ್‌ನ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರನ್ನು ಸಹ ಸಮೀಕ್ಷಿಸಿ ಸಂದರ್ಶನ ನಡೆಸಲಾಯಿತು. ಹಾಗೂ ಜಿಲ್ಲಾ ಪಂಚಾಯತಿಯ

ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರನ್ನು ಸಹ ಸಮೀಕ್ಷಿಸಿ ಸಂದರ್ಶನ ನಡೆಸಲಾಯಿತು. ಮಾಹಿತಿಯನ್ನು ಪಡೆಯಲು ಮುಖ್ಯವಾಗಿ ಎರಡು ವಿಧಗಳನ್ನು ಅನುಸರಿಸಲಾಗಿದೆ. ಮೊದಲನೇದಾಗಿ ಆಯಾ ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತಿಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರನ್ನು ಸಂದರ್ಶನ ನಡೆಸಿ ಮಾಹಿತಿ ಪಡೆಯಲಾಯಿತು. ಎರಡನೇದಾಗಿ ಆಯಾ ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳು, ತಾಲೂಕು ಮಟ್ಟದಲ್ಲಿ ತಾಲೂಕು ಪಂಚಾಯತಿಯ ಕಾರ್ಯನಿರ್ವಹಣಾಧಿಕಾರಿ ಮತ್ತು ಇತರ ಅಧಿಕಾರ ವರ್ಗ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಅಧಿಕಾರಿಗಳನ್ನು ಸಂದರ್ಶಿಸಿ ಸಹ ಅಧ್ಯಯನಕ್ಕೆ ಪೂರಕವಾದ ಮಾಹಿತಿ ಪಡೆಯಲಾಯಿತು. ಈ ರೀತಿ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯ ಚಾರಿತ್ರಿಕ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ, ಸಹಭಾಗಿತ್ವ ವಿಧಾನಗಳಿಂದ ಕ್ರೋಢೀಕರಿಸಿದ ಅಂಶಗಳನ್ನು ತುಲನಾತ್ಮಕವಾಗಿ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಯನದ ವಿನ್ಯಾಸ

ಈ ಅಧ್ಯಯನವು ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳ ವಿವರ ಈ ಕೆಳಗಿನಂತಿದೆ.

ಅಧ್ಯಾಯ ಒಂದು ಪ್ರಸ್ತಾವನೆಯಾಗಿದ್ದು ಇದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಅದರ ಮಹತ್ವ, ಅಧ್ಯಯನ ಕೈಗೊಂಡ ವಿಧಾನಗಳು ಮತ್ತು ಅಧ್ಯಯನದ ರೂಪುರೇಷೆಗಳ ಕುರಿತು ತಿಳಿಸಲಾಗಿದೆ.

ಅಧ್ಯಾಯ ಎರಡು ಇಲ್ಲಿಯವರಗೂ ನಡೆದ ಅಧ್ಯಯನಗಳ ಸಮೀಕ್ಷೆ ಎಂದಿದ್ದು ಇದರಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ಕನ್ನಡ ಹಾಗೂ ಇಂಗ್ಲೀಷಿನಲ್ಲಿ ಪ್ರಕಟಣೆಗೊಂಡ ಕೃತಿಗಳು, ವಿವಿಧ ಪತ್ರಿಕೆಗಳಲ್ಲಿ ಬಂದ ಲೇಖನಗಳು, ವಿವಿಧ ವರದಿಗಳು ಮುಂತಾದವುಗಳ ಕುರಿತು ಅವಲೋಕಿಸಲಾಗಿದೆ.

ಅಧ್ಯಾಯ ಮೂರು ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ ಮತ್ತು ಭೌಗೋಳಿಕತೆ ಎಂದಿದ್ದು ಇದರಲ್ಲಿ ಮುಖ್ಯವಾಗಿ ಬಳ್ಳಾರಿ ಜಿಲ್ಲೆಯು ಹಿಂದೆ ಚಾರಿತ್ರಿಕವಾಗಿ ಎಷ್ಟು ಮಹತ್ವದ್ದಾಗಿತ್ತು, ಅದರ ಹಿನ್ನೆಲೆಯೇನು ಎಂಬುದನ್ನು ನೋಡುವುದರೊಂದಿಗೆ ಈ ಜಿಲ್ಲೆಯ ಭೌಗೋಳಿಕ ಸ್ವರೂಪ ಹೇಗಿದೆ, ಆ ಜಿಲ್ಲೆಯಲ್ಲಿ ಹರಿಯುತ್ತಿರುವ ಪ್ರಮುಖ ನದಿಗಳು, ಕೃಷಿ ವಿಧಾನ, ನೀರಾವರಿಯ ಸ್ವರೂಪ, ಜನಸಂಖ್ಯೆ, ಗುಡ್ಡಗಾಡು ಪ್ರದೇಶ, ಗಣಿಗಾರಿಕೆ ಮತ್ತು ಔದ್ಯೋಗಿಕತೆ, ನೈಸರ್ಗಿಕ ಪರಿಸರ ಮುಂತಾದವುಗಳ ಕುರಿತು ನೋಡಲಾಗಿದೆ.

ಅಧ್ಯಾಯ ನಾಲ್ಕು ಪಂಚಾಯತ್ ರಾಜ್ ವ್ಯವಸ್ಥೆ ನಡೆದು ಬಂದ ದಾರಿ ಎಂದಿದೆ. ಇದರಲ್ಲಿ ಭಾರತ ಸ್ವಾತಂತ್ರ್ಯವಾದ ತರುವಾಯ ಜಾರಿಗೆ ಬಂದ ಪಂಚಾಯತ್ ರಾಜ್ ವ್ಯವಸ್ಥೆಯ ಸ್ವರೂಪ, ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ಬಲವಂತರಾವ್ ಸಮಿತಿಯನ್ನೊಳಗೊಂಡು ಇತರ ಸಮಿತಿಗಳು ಸಲ್ಲಿಸಿದ ವರದಿಗಳು, ಆ ವರದಿಗಳ ಅನುಷ್ಟಾನದ ಕುರಿತು ಸರ್ಕಾರ ತಳೆದ ನಿಲುವುಗಳು ಮುಂತಾದ ವಿಚಾರಗಳ ಕುರಿತು ಗಮನಿಸಲಾಗಿದೆ.

ಅಧ್ಯಾಯ ಐದು ಪರಿಶಿಷ್ಟ ವರ್ಗದ ಮಹಿಳಾ ಸದಸ್ಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿ ಎಂದಿದ್ದು ಅದರಲ್ಲಿ ಈ ಎಲ್ಲಾ ವಿಷಯಗಳಲ್ಲಿ ಪರಿಶಿಷ್ಟ ವರ್ಗದ ಮಹಿಳಾ ಸದಸ್ಯರು ಯಾವ ಸ್ಥಿತಿಯಲ್ಲಿದ್ದಾರೆ ಎಂಬುದನ್ನು ವಿಶ್ಲೇಷಿಸಲಾಗಿದೆ

ಅಧ್ಯಾಯ ಆರು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಪರಿಶಿಷ್ಟ ವರ್ಗದ ಮಹಿಳಾ ಸದಸ್ಯರ ಪಾಲ್ಗೊಳ್ಳುವಿಕೆ – ನೇರ ಹಾಗೂ ಪರೋಕ್ಷ ಪರಿಣಾಮಗಳು ಎಂದಿದೆ. ಇದರಲ್ಲಿ ಮುಖ್ಯವಾಗಿ ಪರಿಶಿಷ್ಟ ವರ್ಗದ ಮಹಿಳಾ ಸದಸ್ಯರು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಎಷ್ಟರ ಮಟ್ಟಿಗೆ ಸಕ್ರೀಯವಾಗಿ ಪಾಲ್ಗೊಳ್ಳುತ್ತಾರೆ ಮತ್ತು ಅದರ ಪರಿಣಾಮಗಳ ಕುರಿತು ನೋಡಲಾಗಿದೆ

ಅಧ್ಯಾಯ ಏಳು ಪರಿಶಿಷ್ಟ ವರ್ಗದ ಮಹಿಳಾ ಸದಸ್ಯರ ಮೇಲಿನ ಒತ್ತಡಗಳು ಎಂದಿದ್ದು ಇದರಲ್ಲಿ ಮುಖ್ಯವಾಗಿ ಪರಿಶಿಷ್ಟ ವರ್ಗದ ಮಹಿಳಾ ಸದಸ್ಯರ ಮೇಲೆ ಪುರುಷಶಾಹಿ, ಬಂಡವಾಳಶಾಹಿ ಹಾಗೂ ಮೇಲ್ಜಾತಿಗಳು ಯಾವ ರೀತಿಯ ಒತ್ತಡಗಳನ್ನು ಹಾಕುತ್ತಾರೆ. ಈ ವಿಚಾರದಲ್ಲಿ ಪರಿಶಿಷ್ಟ ವರ್ಗದ ಮಹಿಳಾ ಸದಸ್ಯರು ಇಂತಹ ಒತ್ತಡಗಳಿಂದ ಎಂತಹ ಯಾತನೆ ಅನುಭವಿಸುತ್ತಾರೆ ಮತ್ತು ಎಷ್ಟು ಪ್ರತಿರೋಧಿಸಬಲ್ಲರು ಎಂಬುದನ್ನು ವಿಶ್ಲೇಷಿಸಲಾಗಿದೆ

ಕೊನೆಯಲ್ಲಿ ಸಮಾರೋಪ ಇದ್ದು ಇದರಲ್ಲಿ ಒಟ್ಟಾರೆ ಅಧ್ಯಯನದಿಂದ ದೊರೆತ ಫಲಿತಗಳ ಕುರಿತು ವಿಶ್ಲೇಷಿಸುವುದರೊಂದಿಗೆ ಕೆಲವು ಸಲಹೆ ಸೂಚನೆಗಳನ್ನು ನೀಡಲಾಗಿದೆ. ಅಧ್ಯಾಯದ ಕೊನೆಯಲ್ಲಿ ಅನುಬಂಧಗಳಿದ್ದು ಅನುಬಂಧ ಒಂದರಲ್ಲಿ ಅಧ್ಯಯನಕ್ಕೆ ಪೂರಕವಾದ ಕೆಲವು ಕೋಷ್ಟಕಗಳನ್ನು ನೀಡಲಾಗಿದೆ. ಅನುಬಂಧ ಎರಡರಲ್ಲಿ ಅಧ್ಯಯನಕ್ಕೆ ಪೂರಕ ಮಾಹಿತಿಯೊದಗಿಸಿದ ಪರಾಮರ್ಶನ ಗ್ರಂಥಗಳಿವೆ. ಅನುಬಂಧ ಮೂರರಲ್ಲಿ ನಕ್ಷೆಗಳನ್ನು ನೀಡಲಾಗಿದೆ.

□□□

ಅಧ್ಯಾಯ ಎರಡು

ಪಂಚಾಯತ್‌ರಾಜ್ ವ್ಯವಸ್ಥೆ ಕುರಿತು ಇಲ್ಲಿಯವರೆಗೂ ನಡೆದ ಅಧ್ಯಯನಗಳು

ಅಧ್ಯಾಯ ೨

ಪಂಚಾಯತ್‌ರಾಜ್ ವ್ಯವಸ್ಥೆ ಕುರಿತು ಇಲ್ಲಿಯವರೆಗೂ ನಡೆದ ಅಧ್ಯಯನ

ರಾಜಕೀಯ ಮತ್ತು ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಹೊಸ ಅಲೆಯನ್ನು ಸೃಷ್ಟಿಸಿದ್ದು ಪಂಚಾಯತ್ ರಾಜ್ ವ್ಯವಸ್ಥೆ. ಪಂಚಾಯತ್ ರಾಜ್ ವ್ಯವಸ್ಥೆಯು ಗಾಂಧಿಯವರ "ಗ್ರಾಮ ಸ್ವರಾಜ್" ಯೋಚನೆಗೆ ಹತ್ತಿರವಾಗಿದೆ. ಗಾಂಧಿಯವರು 'ಗ್ರಾಮಗಳು ತಮ್ಮ ಉತ್ಪನ್ನಗಳನ್ನು ತಾವೇ ಸೃಷ್ಟಿಸಿಕೊಳ್ಳಬೇಕು ಮತ್ತು ತಮ್ಮ ಆಡಳಿತವನ್ನು ತಾವೇ ನಡೆಸುವಂತಾಗಬೇಕು' ಎಂಬ ಮನೋಭಾವನೆ ಉಳ್ಳವರಾಗಿದ್ದರು. ಒಟ್ಟಾರೆಯಾಗಿ ಗ್ರಾಮಗಳು ತಮ್ಮ ಅಗತ್ಯಗಳನ್ನು ತಾವೇ ಪೂರೈಸಿಕೊಳ್ಳುವಂತಿರಬೇಕು ಎಂಬುದು ಗಾಂಧಿಯವರ ಅಭಿಮತವಾಗಿತ್ತು. ೨೧ನೇ ಶತಮಾನದಲ್ಲಿ ಕಾಲಿರಿಸಿದವರು ಹಾಗೂ ಜಾಗತಿಕ ಬಿರುಗಾಳಿಗೆ ಸಿಲುಕಿದವರು ಗಾಂಧಿಯವರಂತೆ ಆಲೋಚಿಸುವುದು ಸ್ವಲ್ಪ ಕಷ್ಟ ಸಾಧ್ಯದ ಕೆಲಸ.

ಗ್ರಾಮಗಳ ಸಮಸ್ಯೆಗಳು ಕೇವಲ ಗ್ರಾಮದಲ್ಲಿ ಜೀವಿಸುವರಿಗೆ ಮಾತ್ರ ಗೊತ್ತು. ಕೇಂದ್ರೀಕೃತಗೊಂಡ ಆಡಳಿತ ಮತ್ತು ರಾಜಕೀಯಗಳಿಂದ ಗ್ರಾಮಗಳ ಉದ್ದಾರ ಅಸಾಧ್ಯವೆಂಬುದನ್ನರಿತ ತರುವಾಯ ಗ್ರಾಮಗಳನ್ನು ಆಡಳತಾತ್ಮಕವಾಗಿ ವಿಕೇಂದ್ರೀಕರಣ ಗೊಳಿಸಲಾಯಿತು. ಅದರ ಫಲವೇ ಪಂಚಾಯತ್ ರಾಜ್ ವ್ಯವಸ್ಥೆ.

ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು, ಲೇಖನಗಳು, ಪ್ರಕಟಿತಗೊಂಡ ಕೃತಿಗಳ ಕುರಿತು ಇಲ್ಲಿ ಸಂಕ್ಷಿಪ್ತವಾಗಿ ಅವಲೋಕನ ಮಾಡಲಾಗಿದೆ.

ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ಕನ್ನಡದಲ್ಲಿ ಅಂತಹ ಮಹತ್ವದ ಅಧ್ಯಯನಗಳು ಅಷ್ಟಾಗಿ ಆಗಿಲ್ಲ. ಕನ್ನಡದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಹಾಗೂ ಅದಕ್ಕೆ ಪೂರಕವಾದ ಕೆಲವೇ ಕೆಲವು ಕೃತಿಗಳು ಪ್ರಕಟಗೊಂಡಿವೆ. ಅವುಗಳ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ.

ಚಂದ್ರಪೂಜಾರಿ ಎಂ. ರವರು **ದೇಶಿಯತೆ ನೆರಳಲ್ಲಿ ವಿಕೇಂದ್ರೀಕರಣ (೨೦೦೧)** ಅನ್ನುವ ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಪಾಪಿನಾಯಕನ ಹಳ್ಳಿಯೊಂದನ್ನು ಅಧ್ಯಯನಕ್ಕೆ ಆಯ್ದುಕೊಂಡು ಆ ಗ್ರಾಮದ ಮೇಲೆ ವಿಕೇಂದ್ರಿಕರಣ ಪ್ರಕ್ರಿಯೆ ಹೇಗಾಗಿದೆ, ಅದರ ಪರಿಣಾಮಗಳೇನು, ಅದನ್ನು ಗ್ರಾಮದ ಸಾಮಾನ್ಯ ಜನತೆ ಯಾವ ರೀತಿ ಅರ್ಥಮಾಡಿಕೊಂಡಿದೆ. ಆ ಗ್ರಾಮದ ಕೂಲಿ ಕಾರ್ಮಿಕರು, ಒಣ ಬೇಸಾಯ, ದಲಿತರು ಹಾಗೂ ಇತರರ ಮೇಲೆ ವಿಕೇಂದ್ರೀಕರಣ ಯಾವ ರೀತಿ ಕೆಲಸ ಮಾಡಿದೆ. ವಿಶೇಷವಾಗಿ ಸ್ಥಳಿಯ ಸರ್ಕಾರಗಳು ತಮ್ಮ ಊರಿಗೆ ಯಾವ ರೀತಿಯ ಸೌಲತ್ತುಗಳನ್ನು ಒದಗಿಸಲು ಯಶಸ್ವಿಯಾಗಿವೆ, ಮತ್ತು ಸ್ಥಳಿಯ ಸರ್ಕಾರದೊಂದಿಗೆ ಜನತೆಯ ಪಾಲ್ಗೊಳ್ಳುವಿಕೆ ಹೇಗಿದೆ ಎಂಬುದನ್ನು ಗಮನಿಸಿದ್ದಾರೆ.

ಚಂದ್ರಶೇಖರ್. ಕೆ.ಯವರು **ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮ ಸಭೆ ಮತ್ತು ಗ್ರಾಮ ಪಂಚಾಯತಿಗಳ ಪಾತ್ರ** ಎನ್ನುವ ಕೃತಿಯಲ್ಲಿ ಸಂವಿಧಾನಾತ್ಮಕವಾಗಿ ಗ್ರಾಮ ಸಭೆಗಳ ಪಾತ್ರವೇನು ಗ್ರಾಮಸಭೆಗಳು ಅನುಷ್ಠಾನದ ಹಂತದಲ್ಲಿ ಯಾವ ರೀತಿ ಸೋಲುತ್ತಿದೆ ಅದಕ್ಕೆ ಕಾರಣಗಳೇನು ಗ್ರಾಮ ಪಂಚಾಯತಿಗಳ ವಿಕೇಂದ್ರೀಕರಣ ರೀತಿ ಮತ್ತು ಅವುಗಳ ಕಾರ್ಯವಿಧಾನ ಅಡೆತಡೆಗಳು ಹೇಗೆ ಗ್ರಾಮೀಣಾಭಿವೃದ್ಧಿಗೆ ಪೂರಕ ಮಾರಕಗಳಾಗಿದೆ ಎಂಬುದನ್ನು ವಿಶ್ಲೇಷಿಸಿದ್ದಾರೆ.

ಬಡ್ಡಿ ಎಂ.ಎಂ.ರವರ **" ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ– ೧೯೯೩"** (೧೯೯೪) ಎನ್ನುವ ಕೃತಿಯಲ್ಲಿ ೧೯೯೩ರಲ್ಲಿ ಸಂವಿಧಾನಾತ್ಮಕವಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮಗಳು ಏನೇನಿದೆ ಎಂಬುದರ ಪರಿಚಯ ಇದೆ. ಪಂಚಾಯತ್ ರಾಜ್ ಆಡಳಿತ ವ್ಯವಸ್ಥೆಯನ್ನು ನಿರ್ವಹಿಸುವವರಿಗೆ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವವರಿಗೆ ೧೯೯೩ ರ ಅಧಿನಿಯಮಗಳನ್ನು ತಿಳಿಸುವ ಪರಿಚಯಾತ್ಮಕ ಗ್ರಂಥ ಇದಾಗಿದೆ.

ಬಡ್ಡಿ ಎಂಎಂ. ರವರ **ಕರ್ನಾಟಕ ಜಿಲ್ಲಾ ಪರಿಷತ್‌ಗಳು, ಮಂಡಲ ಪಂಚಾಯತಿಗಳು, ತಾಲೂಕು ಪಂಚಾಯತಿ ಸಮಿತಿಗಳು ಮತ್ತು ನ್ಯಾಯ ಮಂಡಳಿಗಳ ಅಧಿನಿಯಮ ೧೯೮೩** (೧೯೮೫) ಎನ್ನುವ ಕೃತಿಯೂ ಸಹ ದಶಕಗಳ ಹಿಂದೆ ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜಿಲ್ಲಾಪರಿಷತ್, ಮಂಡಲ ಪಂಚಾಯತಿ, ತಾಲೂಕು ಪಂಚಾಯಿತಿ ಸಮಿತಿಗಳ ಅಧಿನಿಯಮಗಳು ಏನೇನಿವೆ ಎಂಬುದನ್ನು ತಿಳಿಸುವ ಪರಿಚಯಾತ್ಮಕ ಕೃತಿಯನ್ನು ಪ್ರಕಟಿಸಿದ್ದಾರೆ. ಈ ಕೃತಿ ಆ ದಶಕದಲ್ಲಿ ಪ್ರಚಲಿತವಿದ್ದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ತಿಳಿಸುವ ಕೈಪಿಡಿಯಾಗಿದೆ.

ಡಿ. ಮೀನಾಕ್ಷಿಯವರು ಗ್ರಾಮ ಪಂಚಾಯತಿಗಳಲ್ಲಿ ಮಹಿಳಾ ಸದಸ್ಯರ ಪಾತ್ರ (೨೦೦೨) (ಅಪ್ರಕಟಿತ) ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇದರಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹಾಗೂ ಸಂಡೂರು ತಾಲೂಕಿನ ಕೆಲವು ಗ್ರಾಮ ಪಂಚಾಯತಿಗಳ ಮಹಿಳಾ ಸದಸ್ಯರನ್ನು ಆಯ್ಕೆ ಮಾಡಿಕೊಂಡಿದ್ದು ಮಹಿಳಾ ಸದಸ್ಯರು ಹೊಸ ರಾಜಕೀಯ ವ್ಯವಸ್ಥೆಗೆ ಹೇಗೆ ಸ್ಪಂದಿಸಿದ್ದಾರೆ ಎಂಬುದನ್ನು ತೌಲನಿಕವಾಗಿ ಅಧ್ಯಯನ ಮಾಡಿದ್ದಾರೆ

ವೈ ಎರ್ರಿಸ್ವಾಮಿಯವರು (೨೦೦೨) ಸಹ **ಗ್ರಾಮ ಪಂಚಾಯತ್‌ಗಳು ಹಾಗೂ ಸಬಲೀಕರಣ** (೨೦೦೧) (ಅಪ್ರಕಟಿತ) ಎನ್ನುವ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಈ ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹಾಗೂ ಕೂಡ್ಲಿಗಿ ತಾಲೂಕಿನೊಳಗಿನ ಎರಡೆರಡು ಗ್ರಾಮ ಪಂಚಾಯತಿಗಳನ್ನು ಆಯ್ದುಕೊಂಡು ಅಧ್ಯಯನ ನಡೆಸಿದ್ದಾರೆ. ಇದರಲ್ಲಿ ವಿಕೇಂದ್ರೀಕರಣದ ಸಾಫಲ್ಯತೆ, ಗ್ರಾಮ ಪಂಚಾಯತಿ ಮಟ್ಟದಲ್ಲಿ ಅಭಿವೃದ್ಧಿಯ ಸಬಲೀಕರಣ ಹೇಗಾಗಿದೆ ಮುಂತಾದ ವಿಚಾರಗಳನ್ನು ಗ್ರಾಮೀಣಾಭಿವೃದ್ಧಿಯ ಹಿನ್ನೆಲೆಯಲ್ಲಿ ನೋಡಿದ್ದಾರೆ.

ಎ. ವೆಂಕಟೇಶರವರು ನಗರ ಹಾಗೂ ಗ್ರಾಮೀಣ ರಾಜಕೀಯದಲ್ಲಿ ಮಹಿಳೆ (೨೦೦೩) (ಅಪ್ರಕಟಿತ) ಎನಪಂಚಾಯತ್ ರಾಜ್ ಗಳಲ್ಲಿ ಸದಸ್ಯರ ಪಾತ್ರ ಏನಿದೆ, ಅವರ ಪಾಲ್ಗೊಳ್ಳುವಿಕೆಯಿಂದಾದ ಎನ್ನುವ ಮಹಾಪ್ರಬಂಧವನ್ನು ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇದರಲ್ಲಿ ಭಾರತದಲ್ಲಿ ಮಹಿಳಾ ರಾಜಕಾರಣದ ಸಾಧ್ಯತೆಗಳನ್ನು ಕುರಿತು ಚರ್ಚಿಸುವುದರೊಂದಿಗೆ ನಗರ ಸಭೆಗಳು ಹಾಗೂ ಗ್ರಾಮಪಂಚಾಯತಿಗಳ ಆಡಳಿತ ವೈಖರಿ ಹೇಗಿದೆ, ಗ್ರಾಮಗಳ ಅಭಿವೃದ್ಧಿಯಲ್ಲಿ ಗ್ರಾಮ ಪಂಚಾಯತಿಯ ಸದಸ್ಯರ ತಿಳುವಳಿಕೆಯ ಮಟ್ಟ ಎಷ್ಟಿದೆ ಎಂಬುದನ್ನು ನೋಡುವುದರೊಂದಿಗೆ

ನಗರ ಸಭೆಗಳ ಆಡಳಿತ ವೈಖರಿ, ಸದಸ್ಯರ ಪಾಲ್ಗೊಳ್ಳುವಿಕೆ ಮುಂತಾದ ವಿಚಾರಗಳನ್ನು ಅವಲೋಕಿಸಿದ್ದಾರೆ.

ರಾಮ್ ಸುಂದರಪ್ಪ ಕಲಾಲ್ ರವರು **ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ದಲಿತ ಮಹಿಳಾ ಪ್ರತಿನಿಧೀಕರಣ** (೨೦೦೯) (ಅಪ್ರಕಟಿತ) ಎನ್ನುವ ಪಿಎಚ್ ಡಿ ಮಹಾಪ್ರಬಂಧದಲ್ಲಿ ಕೊಪ್ಪಳ ಜಿಲ್ಲೆಯ ಪರಿಶಿಷ್ಟ ಜಾತಿಯ (ದಲಿತ) ಗ್ರಾಮ ಪಂಚಾಯತಿಯ ಮಹಿಳಾ ಸದಸ್ಯರನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಂಡಿದ್ದಾರೆ. ಇಲ್ಲಿ ಮುಖ್ಯದಾಗಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ದಲಿತ ಮಹಿಳೆಯರ ಮೀಸಲಾತಿ, ಅವರ ಪಾಲ್ಗೊಳ್ಳುವಿಕೆ, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ದಲಿತ ಮಹಿಳೆಯರನ್ನು ಬಳಕೆ ಮಾಡಿಕೊಂಡು ಪುರುಷಶಾಹಿ ಹಾಗೂ ಬಂಡವಾಳಶಾಹಿ ವ್ಯವಸ್ಥೆಗಳು ತಮ್ಮ ಬೇಳೆ ಹೇಗೆ ಬೇಹಿಸಿಕೊಳ್ಳುತ್ತಾರೆ. ದಲಿತ ಮಹಿಳೆಯರು ಗ್ರಾಮ ಪಂಚಾಯತಿ ಸದಸ್ಯರಾದರೂ ಅವರು ಸೋಲುವುದೆಲ್ಲಿ ಅವರಿಗೆ ಶಿಕ್ಷಣದ ಮತ್ತು ತರಬೇತಿಯ ಅಗತ್ಯಗಳೆಷ್ಟಿವೆ ಮುಂತಾಗಿ ತಿಳಿಸಲು ಪ್ರಯತ್ನಿಸಿದ್ದಾರೆ.

ರಜನಿ ರಾಜನ್ ರವರ ತಮ್ಮ **ಪಂಚಾಯತ್ ರಾಜ್ ಸಿಸ್ಟಮ್ ಅಂಡ್ ಪಬ್ಲಿಕ್ಸ್** (೨೦೦೦) ಎನ್ನುವ ಕೃತಿಯಲ್ಲಿ ವಿಶ್ಲೇಷಿಸುವಂತೆ ಭಾರತದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಸರಿಯಾದ ರೀತಿಯಲ್ಲಿ ಕಾರ್ಯಮಾಡಲು ಗ್ರಾಮೀಣಾಭಿವೃದ್ಧಿಯಲ್ಲಿ ಹಲವಾರು ಕ್ಲಿಷ್ಟಕರವಾದ ಸಮಸ್ಯೆಗಳಿವೆ, ಆ ಸಮಸ್ಯೆಗಳನ್ನು ಪರಿಹರಿಸಿಕೊಳ್ಳದೆ ಗ್ರಾಮೀಣಾಭಿವೃದ್ಧಿ ಎಂಬುದು ಕನಸಿನ ಮಾತೇ ಸರಿ ಎಂದು ತಿಳಿಸುತ್ತಾರೆ. ಹಾಗೇ ಇಂದು ಭಾರತ ಎದುರಿಸುತ್ತಿರುವ ಹಲವು ಸಮಸ್ಯೆಗಳನ್ನು ಪರಿಹರಿಸುವಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಅಲ್ಪಮಟ್ಟಿಗಾದರೂ ಸಹಕಾರಿಯಾಗಿದೆಯೇನೊ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಉದಾಹರಣೆಗೆ ಗ್ರಾಮೀಣರ ಅನಾರೋಗ್ಯ, ಬಡತನ, ವಸತಿ ಮುಂತಾದ ಸಮಸ್ಯೆಗಳನ್ನು ವಿಕೇಂದ್ರಿಕೃತ ಪಂಚಾಯತ್‌ರಾಜ್ ವ್ಯವಸ್ಥೆಯಿಂದ ಪರಿಹರಿಸಲು ಸಾಧ್ಯವೆಂಬುದನ್ನು ತಿಳಿಸುತ್ತಾರೆ.

ಕನ್ನಾ (೧೯೬೬) ರವರು **ಪಂಚಾಯತ್ ರಾಜ್ ಸಿಸ್ಟಮ್ ಇನ್ ಪಂಜಾಬ್ ಅಂಡ್ ಹರ್ಯಾಣ್ ಸ್ಟೇಟ್ಸ್** ಎನ್ನುವ ಕೃತಿಯಲ್ಲಿ ಪಂಜಾಬ್ ಮತ್ತು ಹರ್ಯಾಣ ರಾಜ್ಯಗಳ ಪಂಚಾಯತ್ ರಾಜ್ ವ್ಯವಸ್ಥೆಯ ಸ್ವರೂಪ, ಹಣಕಾಸು ವ್ಯವಹಾರ, ಕಾರ್ಯವಿಧಾನ ಮುಂತಾದವುಗಳ ಕುರಿತು ಅಧ್ಯಯನ

ಮಾಡಿದ್ದಾರೆ. ಇವರು ಪ್ರಜಾಪ್ರಭುತ್ವದ ಸಿದ್ಧಾಂತದಡಿಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಕಾರ್ಯನಿರ್ವಹಿಸುವುದಾದರೆ ತುಂಬಾ ಪರಿಣಾಮಕಾರಿಯಾಗಿ ಈ ವ್ಯವಸ್ಥೆ ಕಾರ್ಯ ನಿರ್ವಹಿಸಬಹುದು ಎಂದು ಅಭಿಪ್ರಾಯ ಪಡುತ್ತಾರೆ.

ಮಾಥುರ್ ಮತ್ತು ನಾರಾಯಣ್ (೧೯೬೯) ರವರು **ಡಿ ಸೆಂಟ್ರಲೈಜೇಶನ್ ಅಂಡ್ ಡೆಮೋಕ್ರಸಿ** ಎನ್ನುವ ತಮ್ಮ ಕೃತಿಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಪ್ರಜಾ ಪ್ರಭುತ್ವ ಕುರಿತು ನೋಡುವುದರೊಂದಿಗೆ ಪಂಚಾಯತ್ ರಾಜ್ ವ್ಯವಸ್ಥೆಯ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ರಾಜಕೀಯ ನಾಯಕರ ಪಾತ್ರವೇನು ಎನ್ನುವ ಕುರಿತು ಚರ್ಚಿಸಿದ್ದಾರೆ. ಇದರೊಂದಿಗೆ ಸಂವಿಧಾನಾತ್ಮಕವಾದ ಪ್ರಜಾಪ್ರಭುತ್ವದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವಲ್ಲಿರುವ ತೊಡಕುಗಳ ಕುರಿತು ವಿವರಿಸಲು ಪ್ರಯತ್ನಿಸಿದ್ದಾರೆ. ರಾಜ್ಯ ಅಥವಾ ರಾಷ್ಟ್ರ ಮಟ್ಟದ ರಾಜಕೀಯ ಪಕ್ಷಗಳು ಗ್ರಾಮೀಣ ರಾಜಕೀಯ ಪ್ರವೇಶಿಸುವುದರಿಂದ ಉಂಟಾಗುವ ಲಾಭ ನಷ್ಟಗಳ ಕುರಿತು ವಿವರಿಸುತ್ತಾರೆ. ಪಂಚಾಯತ್‌ರಾಜ್ ವ್ಯವಸ್ಥೆಯು ಸಾಮುದಾಯಿಕವಾದ ಸಾಮೂಹಿಕ ಅಭಿವೃದ್ಧಿಗೆ ಪೂರಕವಾಗಿರುವುದು ಅವಶ್ಯಕವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅವರು ಆಡಳಿತ ವ್ಯವಸ್ಥೆ ಹಾಗೂ ಚುನಾಯಿತ ಪ್ರತಿನಿಧಿಗಳ ಮಧ್ಯ ಇರುವ ಅಂತರಗಳಿಂದಾಗಿ ಆಗುವ ಅನಾಹುತಗಳ ಕುರಿತು ತಿಳಿಸುತ್ತಾರೆ. ಮುಖ್ಯವಾಗಿ ಚುನಾಯಿತ ಪ್ರತಿನಿಧಿಗಳಿಗೆ ಸಮರ್ಪಕವಾದ ತರಬೇತಿ ಮತ್ತು ಶಿಕ್ಷಣದ ಅವಶ್ಯಕತೆ ಅತಿಮುಖ್ಯವೆಂಬುದನ್ನು ತಮ್ಮ ಕೃತಿಯಲ್ಲಿ ಒತ್ತಿ ಹೇಳುತ್ತಾರೆ.

ದೇಸಾಯ್ ರವರು **ದ ಕಾಸ್ಟ್ ಅಂಡ್ ಟ್ರೈಬ್ಸ್ ಅಂಡ್ ಪಂಚಾಯತ್ ರಾಜ್ ಸಿಸ್ಟಮ್** (೧೯೬೯) ಎನ್ನುವ ಕೃತಿಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಜಾತಿ ಮತ್ತು ವರ್ಗಗಳ ಮಧ್ಯದ ಸಂಘರ್ಷದ ಕುರಿತು ತಿಳಿಸುತ್ತಾರೆ. ಇವರು ಜಾತಿ ರಾಜಕೀಯ ಮತ್ತು ಜಮಿನ್ದಾರಿ ಮನೋಭಾವದ ಅಹಮಿಕೆ ಪ್ರದರ್ಶಿಸುವ ರಾಜಕಾರಣಗಳನ್ನು ಪಂಚಾಯತ್ ರಾಜ್ ವ್ಯವಸ್ಥೆಯಿಂದ ದೂರವಿರುಸುದು ಮೊದಲು ಅಗತ್ಯವಾಗಿ ಆಗಬೇಕಿದೆ ಎಂಬುದನ್ನು ತಿಳಿಸುತ್ತಾರೆ.. ಮುಖ್ಯವಾಗಿ ತಮ್ಮ ವಿರೋಧಿಗಳೆಂದು ಭಾವಿಸಿರುವ ಕೆಳಜಾತಿ ಮತ್ತು ವರ್ಗದ ಜನರನ್ನು ತುಳಿಯುವ ಕೆಲಸವನ್ನು ಜಾತಿ ರಾಜಕೀಯ ಮತ್ತು ಜಮಿನ್ದಾರಿ ವ್ಯವಸ್ಥೆ ಮಾಡುತ್ತಿದೆ. ಜಾತಿ ರಾಜಕೀಯ ಮತ್ತು ಬಂಡವಾಳಶಾಹಿ ಮನೋಭಾವದವರಿಂದ ಎದುರಾಗುವ ಅಪಾಯಗಳನ್ನು ತಪ್ಪಿಸಲು

ರಾಜಕೀಯವಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ಹೇಗಿದೆ ಹಾಗೂ ಅದರ ಆರ್ಥಿಕ ಅಭಿವೃದ್ಧಿ ಯಾವ ಮಟ್ಟದಲ್ಲಿದೆ ಎಂಬುದನ್ನು ವಿವರಿಸಿದ್ದಾರೆ.

ತಾರಕ್ ಬಿ.ಎಲ್ ರವರ **ಸೋಷಿಯಲಾಜಿಕಲ್ ಡೈಮನ್ಸನ್ ಆಫ್ ಗ್ರಾಮರಾಜ್ (೧೯೭೨)** ಎನ್ನುವ ಸಂಶೋಧನಾ ಕೃತಿಯಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಮಟ್ಟದಲ್ಲಿ, ತಾಲೂಕು ಮಟ್ಟದಲ್ಲಿಮ ಜಿಲ್ಲಾ ಮಟ್ಟದಲ್ಲಿ ಮೂರು ಹಂತದ ಆಡಳಿತ ವ್ಯವಸ್ಥೆ ಇದ್ದರೂ ಅವುಗಳ ಅನುಷ್ಠಾನ ಹಂತದಲ್ಲಿ ಪ್ರಜಾಪ್ರಭುತ್ವದ ನಿಯಮಗಳನ್ನು ಅನುಸರಿಸುವ ಸಂದರ್ಭದಲ್ಲಿ ಹೊಸ ಹೊಸ ಸಮಸ್ಯೆಗಳನ್ನು ತೀವ್ರವಾಗಿ ಅನುಭವಿಸುತ್ತವೆ ಎನ್ನುತ್ತಾರೆ. ಗ್ರಾಮರಾಜ್‌ಗಳು ಗ್ರಾಮದಲ್ಲಿರುವ ವಾಸ್ತವತೆಯನ್ನು ಅರಿತುಕೊಂಡು ಆ ಸಮಸ್ಯೆಗಳನ್ನು ಪಾರದರ್ಶಕವಾಗಿ ಪರಿಹರಿಸುವ ಅಗತ್ಯವಿದೆ. ಹಾಗೇ ಗ್ರಾಮಗಳ ಉದ್ಧಾರಕ್ಕೆ ನಿಜವಾದ ಶಕ್ತಿ, ಸಂಪನ್ಮೂಲಗಳು ಅಗತ್ಯವಾಗಿದ್ದು ಅವುಗಳನ್ನು ಅರಿಯಲು ಗ್ರಾಮ ಸಭೆಗಳನ್ನು ಕ್ರಮಬದ್ಧವಾಗಿ ಅನುಷ್ಠಾನಗೊಳಿಸಬೇಕಾದ ಅಗತ್ಯವಿದೆ ಎಂದು ತಿಳಿಸುತ್ತಾರೆ.

ಭಟ್ ಕೆ. ಎಸ್. ರವರ **ಪಂಚಾಯತ್ ರಾಜ್ ಅಡ್ಮಿನಿಸ್ಟ್ರೇಷನ್ ಇನ್ ಮಹಾರಾಷ್ಟ್ರ (೧೯೭೪)** ಎನ್ನುವ ಕೃತಿಯಲ್ಲಿ ಮಹಾರಾಷ್ಟ್ರಕ್ಕೆ ಪಂಚಾಯತ್‌ರಾಜ್ ವ್ಯವಸ್ಥೆ ಪಾದಾರ್ಪಣೆಯಾದ ತರುವಾಯ ಗ್ರಾಮಗಳ ಸ್ವರೂಪ ಹೇಗೆ ರೂಪಾಂತರಗೊಂಡವು ಎಂಬುದನ್ನು ತಿಳಿಸುತ್ತಾರೆ. ಪಂಚಾಯತ್ ರಾಜ್ ವ್ಯವಸ್ಥೆ ಗ್ರಾಮಗಳಿಗೆ ಬಂದ ತರುವಾಯ ಮಹರಾಷ್ಟ್ರದ ಗ್ರಾಮಗಳು ರಾಜಕೀಯವಾಗಿ ತಂಬಾ ಚಟುವಟಿಕೆಯನ್ನು ಹೊಂದಿದವು. ಗ್ರಾಮೀಣರು ರಾಜಕೀಯವಾಗಿ ನೇರವಾಗಿ ತೊಡಗಿಸಿಕೊಂಡ ಬಳಿಕ ಗ್ರಾಮಗಳ ಮುಖ್ಯ ಉಸಿರಾಗಿದ್ದ ಕೃಷಿ ಚಟುವಟಿಕೆ ಕಡಿಮೆಯಾಗಿ ಗ್ರಾಮೀಣ ಭಾಗದ ಜನ ಇತರ ಕೆಲಸಗಳಲ್ಲಿ ತೊಡಗಿಕೊಳ್ಳವಂತಾಗಿದೆ. ಜೊತೆಗೆ ಗ್ರಾಮಮಟ್ಟದಲ್ಲಿ ರಾಜಕೀಯ ಗುಂಪುಗಾರಿಕೆಗಳು ಉಂಟಾಗಿ ಹಳ್ಳಿಯ ನೆಮ್ಮದಿ ಹಾಳಾಗುವಂತಾಯಿತು ಎಂಬುದನ್ನು ನಿದರ್ಶನಗಳ ಮೂಲಕ ಕೃತಿಯಲ್ಲಿ ವಿವರಿಸಿದ್ದಾರೆ.

ಕುಮಾರ್ ಮತ್ತು ವೆಂಕಟರಮಣನ್ ರವರ **ಪೊಲಿಟಿಕಲ್ ಸಿಸ್ಟಮ್ ಇನ್ ತಮಿಳ್ನಾಡು (೧೯೭೪)** ಎನ್ನುವ ಕೃತಿಯಲ್ಲಿ ತಮಿಳ್ನಾಡಿನ ಗ್ರಾಮಗಳ ಆಡಳಿತ ವ್ಯವಸ್ಥೆ, ಆರ್ಥಿಕತೆ, ತಾಂತ್ರಿಕ ಸ್ವರೂಪಗಳನ್ನು ರಾಜ್ಯ ಸರ್ಕಾರ ಹೇಗೆ ನಿಯಂತ್ರಿಸುತ್ತದೆ ಎಂಬುದನ್ನು ಅವಲೋಕಿಸಿದ್ದಾರೆ. ಹಾಗೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು

ಒಬ್ಬರಿಗೊಬ್ಬರು ಹೇಗೆ ಪೂರಕವಾಗಿ ವ್ಯವಸ್ಥೆಯನ್ನು ರೂಪಿಸಿಕೊಂಡಿರುತ್ತಾರೆ ಎಂಬುದನ್ನು ತಿಳಿಸಲು ಪ್ರಯತ್ನಿಸಿದ್ದಾರೆ.

ದುಬೆ ಎಸ್. ಎನ್. ಮತ್ತು ರತ್ನ ಮುರ್ಡಿಯಾ ರವರು (೧೯೭೬) **ಸ್ಟ್ರಕ್ಚರ್ ಅಂಡ್ ಪ್ರೋಸೆಸ್ ಆಫ್ ಡಿಸಿಶ್ಷನ್, ಮೇಕಿಂಗ್ ಇನ್ ಪಂಚಾಯತಿ ಇನ್ಸಿಟಟ್ಯೂಷನ್ಸ್** ಎನ್ನುವ ಕೃತಿಯಲ್ಲಿ ನಿರ್ದಿಷ್ಟವಾಗಿ ಪ್ರಬಲ ಜಾತಿಗಳು, ರಕ್ತಸಂಬಂಧ ಮತ್ತು ಪ್ರಬಲ ರಾಜಕಾರಣಿಯನ್ನು ಆಶ್ರಯಿಸಿದವರ ಸಂಬಂಧಗಳು ಹೇಗೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಪ್ರಭಾವಕಾರಿಯಾಗಿ ಕಾರ್ಯವೆಸಗುತ್ತವೆಂಬುದನ್ನು ತೋರಿಸಲು ಮಹಾರಾಷ್ಟ್ರದ ಮಾಣ ಮತ್ತು ಶ್ರೀಪುರ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ನಡೆಸಿದ್ದಾರೆ. ಲೇಖಕರು ತಿಳಿಸುವಂತೆ ಗ್ರಾಮ ಪಂಚಾಯತ್ ವ್ಯವಸ್ಥೆಯನ್ನು ರಾಜಕೀಯವಾಗಿ ನಿಯಂತ್ರಣದಲ್ಲಿರಿಸಿಕೊಳ್ಳುವುದು ಮುಖ್ಯವಾಗಿ ಪ್ರಬಲ ಜಾತಿಗಳದಾಗಿದೆ. ಮೀಸಲಾತಿ ಯಾವುದೇ ಕೆಳಜಾತಿಯದಾಗಿರಲಿ, ಅದನ್ನು ನಿಯಂತ್ರಿಸುವುದು ಮಾತ್ರ ಪ್ರಬಲ ಜಾತಿಗಳು ಎಂಬುದನ್ನು ತಿಳಿಸುತ್ತಾರೆ. ಹಾಗೇ ರಕ್ತ ಸಂಬಂಧಗಳು ರಾಜಕೀಯ ವ್ಯವಸ್ಥೆಯಲ್ಲಿ ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಅವಲೋಕಿಸಿದ್ದಾರೆ. ಹಿಂದೆ ರಾಜಕೀಯವಾಗಿ ಆಡಳಿತ ನಡಿಸಿದವರು ಮರಳಿ ಚುನಾವಣೆ ಬಂದಾಗ ತಾವೇ ನೇರವಾಗಿ ಚುನಾವಣೆಗೆ ನಿಲ್ಲದೇ ಹೋದರೂ ತಮ್ಮ ರಕ್ತ ಸಂಬಂಧಿಗಳನ್ನು ಚುನಾವಣೆಗೆ ನಿಲ್ಲಿಸಿ ಅವರನ್ನು ಗೆಲ್ಲಸಲು ಪ್ರಯತ್ನಿಸುತ್ತಾರೆ. ಹೀಗೆ ತಮ್ಮ ರಕ್ತಸಂಬಂದಿಗಳನ್ನು ಗೆಲ್ಲಿಸಿ ಆಡಳಿತ ವ್ಯವಸ್ಥೆ ಮರಳಿ ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಆಪೇಕ್ಷಿಸುತ್ರಾರೆ. ಹಾಗೇ ಮೀಸಲಾತಿಗೆ ಸಂಬಂಧಿಸಿದಂತೆಯೂ ಕೂಡ ಮೇಲ್ವರ್ಗದ ಬಂಡವಾಳಶಾಹಿಗಳು ತಮ್ಮ ಮನೆಯ ಕೆಲಸದಾಳುಗಳನ್ನು ಅಥವಾ ಅವರ ಹೆಂಡಿರು ಅಥವಾ ಅಥವಾ ಅವರ ಸಂಬಂಧಿಗಳನ್ನು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸುವ ಮೂಲಕ ಆಡಳಿತ ವ್ಯವಸ್ಥೆಯನ್ನು ತಮ್ಮ ಕೈಯೊಳಗೆ ಇರಿಸಿಕೊಳ್ಳುತ್ತಾರೆ. ಹೀಗಾಗುವುದರಿಂದ ನಿಜವಾದ ರೀತಿಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಬಾರದೆ ಅದು ಸೋಲನ್ನು ಅನುಭವಿಸುವಂತಾಗುತ್ತದೆ ಎಂಬುದನ್ನು ತಿಳಿಸುತ್ತಾರೆ.

ಸುದೇಶ್ ಕುಮಾರ್ ಶರ್ಮ ರವರ **ಪಂಚಾಯತ್ ರಾಜ್ ಇನ್ ಇಂಡಿಯಾ** (೧೯೭೬) ಕೃತಿಯಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರೆತ ದಿನದಿಂದ ೧೯೭೬ ರವರೆಗೂ ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಹೇಗೆ ರೂಪ ತಳೆಯುತ್ತಾ ಬಂದಿತು ಎಂಬುದನ್ನು ಗುರಿತಿಸಿದ್ದಾರೆ. ಇವರು ಮುಖ್ಯವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿಕೇಂದ್ರೀಕರಣ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳು

ಯಾವ ರೀತಿ ಕಾರ್ಯ ನಿರ್ವಹಿಸುತ್ತಿವೆ ಎಂಬುದನ್ನು ನೋಡುವುದರೊಂದಿಗೆ ಪ್ರಸ್ತುತ ಇರುವ ರಾಜಕೀಯ ತಂತ್ರಗಳು ವಿಕೇಂದ್ರೀಕರಣದ ಆಡಳಿತದಲ್ಲಿ ಮೂಗು ತೂರಿಸುತ್ತವೆ, ವಿಕೇಂದ್ರೀಕರಣ ಆಡಳಿತವನ್ನು ಅನುಷ್ಠಾನಗೊಳಿಸಿದರೂ ಸಹ ವ್ಯವಸ್ಥೆಯಲ್ಲಿ ಆಡಳಿತಾತ್ಮಕವಾಗಿ ಸೋಲು ಕಂಡುಬರಲು ಕಾರಣಗಳೇನು ಎಂಬುದನ್ನು ಗುರುತಿಸಲು ಪ್ರಯತ್ನಿಸಿದ್ದಾರೆ.

ಎಸ್. ಭಟ್ನಾಗರ್ ರವರ **ರೂರಲ್ ಲೋಕಲ್ ಗೌರ್ನಮೆಂಟ್ ಇನ್ ಇಂಡಿಯಾ** (೧೯೭೮) ಕೃತಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಯ ಆಡಳಿತವನ್ನು ಅನುಷ್ಠಾನಗೊಳಿಸಲು ಇರುವ ಅಡೆ-ತಡೆಗಳು ಯಾವುವು ಎಂಬುದರ ಕುರಿತು ತಿಳಿಸುತ್ತಾರೆ. ಸ್ಥಳೀಯ ಸರ್ಕಾರಗಳ ಸಮಸ್ಯೆಯ ಬೇರುಗಳು ಪ್ರಾರಂಭಗೊಳ್ಳುವುದೇ 'ಗ್ರಾಮ ಸಭೆಯ' ಮೂಲಕ. ಗ್ರಾಮ ಸಭೆಯಲ್ಲಿ ಸೇರಿದ ಜನ ತಮ್ಮ ಗ್ರಾಮದ ಕುಂದು ಕೊರತೆಗಳ ಕುರಿತು ತಿಳಿಸಿ ಅದನ್ನು ಗ್ರಾಮ ಪಂಚಾಯ್ತಿ ಮೂಲಕ ಪರಿಹರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇದು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಿಜವಾಗಿಯೂ ಕ್ರಾಂತಿಕಾರಕ ಬೆಳವಣಿಗೆಯನ್ನಬಹುದು. ಅದು ತನ್ನ ಬೇರುಗಳ ಮೂಲಕ ವಿಕೇಂದ್ರೀಕರಣದ ಸಾಮರ್ಥ್ಯವನ್ನು ಹರಡಲು ಪ್ರಯತ್ನಿಸುತ್ತದೆ. ಈ ವ್ಯವಸ್ಥೆಯನ್ನು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸಂವಿಧಾನಾತ್ಮಕವಾಗಿ ಒಪ್ಪಿಕೊಳ್ಳಲಾಗಿದೆಯೇನೋ ನಿಜ. ಆದರೆ ಗ್ರಾಮಮಟ್ಟದಲ್ಲಿ ಅದು ಅಂದುಕೊಂಡಷ್ಟು ಸುಲಭವಲ್ಲ ಎಂಬುದನ್ನು ಲೇಖಕರು ಮನವರಿಕೆ ಮಾಡಿ ಕೊಡುತ್ತಾರೆ.

ನಿರಂಜನ್ ಪಂಥ್ರವರು **ದ ಪಾಲಿಟಿಕ್ಸ್ ಆಫ್ ಪಂಚಾಯತ್ ರಾಜ್ ಇನ್ಸಟಟ್ಯೂಷನ್ ಎ ಸ್ಟಡಿ ಆಫ್ ಆಫಿಸಿಯಲ್ ಅಂಡ್ ನಾನ್- ಆಫಿಷಿಯಲ್ ರಿಲೇಷನ್‌ಷಿಪ್** (೧೯೭೯) ಕೃತಿಯಲ್ಲಿ ಆಡಳಿತ ವ್ಯವಸ್ಥೆ ಮತ್ತು ಆಡಳಿತೇತರ ವ್ಯವಸ್ಥೆಗಳ ಮಧ್ಯ ಇರುವ ಸಂಬಂಧ ಹಾಗೂ ಸಹಕಾರಗಳು ಯಾವ ರೀತಿಯಾಗಿವೆಯುಂಬುದನ್ನು ಬಿಹಾರ ರಾಜ್ಯದ ಭಟ್ನಾಗರ್ ಜಿಲ್ಲೆಯುನ್ನು ನಿದರ್ಶನವಾಗಿರಿಸಿಕೊಂಡು ಅಧ್ಯಯನ ನಡೆಸಿರುವುದಾಗಿ ತಿಳಿಸುತ್ತಾರೆ. ಅವರು ಮುಖ್ಯವಾಗಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಡೆಯುವ ಅಪರಾಧಗಳ ಮೇಲೆ ಬೆಳಕು ಚಲ್ಲುವಲ್ಲಿ ಯಶಸ್ವಿಯಾಗಿದ್ದಾರೆ. ಈ ರೀತಿಯ ಅಪರಾಧಗಳು ನಡೆಯಲು ಆಡಳಿತ ವ್ಯವಸ್ಥೆ ಎಷ್ಟು ಕಾರಣವಾಗಿರುತ್ತದೆಯೋ ಅಷ್ಟೇ ಪ್ರಮಾಣದಲ್ಲಿ ಆಡಳಿತೇತರ ವ್ಯವಸ್ಥೆಯೂ ಕಾರಣವಾಗಿರುತ್ತದೆ ಎಂದು ತೀಳಿಸುತ್ತಾರೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಡೆಯುವ ಅಪರಾಧಗಳು ತೊಲಗಬೇಕೆಂದರೆ ಆಡಳಿತಾಧಿಕಾರಿಗಳು ಮತ್ತು ಆಡಳಿತೇತರ ವ್ಯವಸ್ಥೆಯಲ್ಲಿರುವವರ ಮನಸ್ಸು

ಪಾರದರ್ಶಕವಾಗಿರಬೇಕು ಹಾಗೂ ರಾಜಕೀಯ ಬದಲಾವಣೆಯನ್ನು ಅಪೇಕ್ಷಿಸುವ ಮನಸ್ಸು ಅವರದಾಗಿರಬೇಕೆಂದು ತಿಳಿಸುತ್ತಾರೆ.

ವೈ ಅರ್ಜುನ್, ದಾರಾಶಂಕರ್ರವರ **ಲೀಡರ್‌ಶಿಪ್ ಇನ್ ಪಂಚಾಯತ್ ರಾಜ್; ಎ ಸ್ಟಡಿ ಆಫ್ ಬೀಡ್ ಡಿಸ್ಟ್ರಿಕ್ಟ್ ಆಫ್ ಮಹಾರಾಷ್ಟ್ರ (೧೯೮೯)** ದಲ್ಲಿ ರಾಜಕೀಯ ಮತ್ತು ಜಾತಿಗಳ ಮಧ್ಯ ನಡೆಯುವ ಸಂಘರ್ಷ ಸ್ಥಳೀಯ ಅಡಳಿತದಲ್ಲಿ ಹಣ ವಹಿಸುವ ಪಾತ್ರ ಹಾಗೇ ಮಹಾರಾಷ್ಟ್ರ ರಾಜ್ಯದ ಮರಾಠವಾಡ ಪ್ರದೇಶದ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಶಿಕ್ಷಣ ಮತ್ತು ಸಾಮಾಜಿಕ ಶ್ರೇಣೀಕರಣ ವಹಿಸುವ ಪಾತ್ರಗಳ ಕುರಿತು ತಿಳಿಸುತ್ತಾರೆ. ಪಂಚಾಯತ್‌ರಾಜ್ ವ್ಯವಸ್ಥೆ ಯಶಸ್ವಿಗೊಳ್ಳಬೇಕೆಂದರೆ ಚುನಾಯಿತ ಪ್ರತಿನಿಧಿಗಳ ಮೇಲೆ ಅದು ನಿಂತಿದೆ, ಅವರು ಪಂಚಾಯತ್‌ರಾಜ್ ಸಿದ್ಧಾಂತಗಳಿಗೆ ಕಟಿಬದ್ದರಾಗಿರಬೇಕು ಹಾಗೂ ಚುನಾಯಿತ ಪ್ರತಿನಿಧಿಗಳಿಗೆ ತಾವು ಆಡಳಿತ ನಡೆಸುತ್ತಿರುವ ವ್ಯವಸ್ಥೆಯ ಕುರಿತು ಸಂಪೂರ್ಣ ತಿಳುವಳಿಕೆ ಇರಬೇಕಾಗುತ್ತದೆ. ಹಾಗಿದ್ದಾಗ ಮಾತ್ರ ಪಂಚಾಯತ್‌ರಾಜ್ ವ್ಯವಸ್ಥೆ ಯಶಸ್ವಿಗೊಳ್ಳಲು ಸಾಧ್ಯವೆನ್ನುತ್ತಾರೆ.

ಸುರಜಿತ್ ಸಿಂಗ್ ಶರ್ಮ ರವರು **ರೂರಲ್ ಅಡ್ಮಿನಿಸ್ಟ್ರೇಷನ್ ಇನ್ ಇಂಡಿಯಾ (೧೯೭೮)** ದಲ್ಲಿ ಉತ್ತರ ಪ್ರದೇಶದ ಪಶ್ಚಿಮ ಭಾಗಗಳ ಗ್ರಾಮಗಳು, ಗ್ರಾಮೀಣ ಮುಖಂಡತ್ವವನ್ನು ಆಡಳಿತ ಕೇಂದ್ರವಾದ ನಗರಗಳು ಮತ್ತು ಅವುಗಳ ಮೇಲ್ಪಂಕ್ತಿಯಲ್ಲಿ ನಿಲ್ಲುವ ವ್ಯವಸ್ಥೆ, ಅವುಗಳ ರಾಜಕೀಯ ಸಾಮರ್ಥ್ಯವನ್ನು ಕುರಿತು ಅವಲೋಕಿಸಿದ್ದಾರೆ. ಪಂಚಾಯತಿ ಚುನಾವಣೆಗಳು ನಿಯಮಿತವಾಗಿ ಇಲ್ಲವೇ ಅನಿಯಮಿತವಾಗಿ ನಡೆಯುವುದು, ಅಂತಹ ಚುನಾವಣೆಗಳಲ್ಲಿ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಪಾತ್ರವಹಿಸುವ ಜನರ ವೈಯಕ್ತಿಕ ಅಭಿಲಾಸೆಗಳು, ಜಾತಿ ವ್ಯವಸ್ಥೆ ಮುಂತಾದವುಗಳು ಸಮಾಜ ಮತ್ತು ರಾಷ್ಟ್ರದ ಅಭಿವೃದ್ಧಿಯ ಬಗ್ಗೆ ಚಿಂತಿಸದೆ ಕೇವಲ ತಮ್ಮ ಹಿತಾಸಕ್ತಿಗಳನ್ನು ಕಾಪಾಡುವಲ್ಲಿಗೆ ಸೀಮಿತಗೊಂಡುಬಿಡುತ್ತವೆ.

ಸ್ಥಳೀಯ ಗ್ರಾಮೀಣ ಚುನಾವಣೆಗಳಲ್ಲಿ ಮೇಲುಜಾತಿಗಳು ಮತ್ತು ಜಮೀನ್ದಾರರ ಕೈಗಳೇ ಮೇಲಾಗಿರುತ್ತವೆ. ಅವು ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ ಇಡೀ ವ್ಯವಸ್ಥೆಯನ್ನೇ ತಮ್ಮ ಹಿಡಿತದಲ್ಲಿರಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತವೆ. ಅಧಿಕಾರದಲ್ಲಿರುವವರ ವಿರೋಧಿ ಬಣವೂ ಸಹ ಪ್ರಬಲ ಜಾತಿಯದೇ ಆಗಿರುತ್ತದೆ. ಹೀಗಾಗಿ ಅಂತಹ ಮೀಸಲಾತಿಯನ್ನು ಜಾರಿಗೊಳಿಸಿದರೂ ಸಹ

ಏನೂ ಪ್ರಯೋಜನವಾಗುವುದಿಲ್ಲ. ಕೆಳ ಜಾತಿ ಸಮುದಾಯಗಳು ಅಸಾಹಯಕತೆಯನ್ನು ಅನುಭವಿಸುವಂತಾಗುತ್ತದೆ ಎಂದು ತಿಳಿಸುತ್ತಾರೆ.

ಬಿ. ಸಿ. ಭಾರ್ಗವಿ ರವರ **ಪಂಚಾಯತ್ ರಾಜ್ ಸಿಸ್ಟಂ ಇನ್ ಪೊಲಿಟಿಕಲ್ ಪಾರ್ಟೀಸ್ (೧೯೭೯)** ನಲ್ಲಿ ರಾಜಸ್ಥಾನದ ರಾಜಕೀಯ ಪಕ್ಷಗಳು ಗ್ರಾಮೀಣ ಅಡಳಿತ ವ್ಯವಸ್ಥೆಯ ಮೇಲೆ ಹೇಗೆ ತನ್ನ ಪ್ರಭಾವವನ್ನು ಬೀರಿವೆ ಎಂಬುದನ್ನು ಪರೀಕ್ಷಾತ್ಮಕವಾಗಿ ಅವಲೋಕಿಸಿದ್ದಾರೆ. ಬಹುತೇಕ ರಾಜಕಾರಣಿಗಳು ಸ್ಥಳೀಯ ಸಂಸ್ಥೆಗಳಿಂದ ಲಾಭಗಳನ್ನು ಪಡೆಯಲು ಮುಂದಾಗುತ್ತವೆ ಮತ್ತು ರಾಜಕೀಯ ಮುಖಂಡರು ಮತ್ತು ಅವರ ಅನುಯಾಯಿಗಳು ಆ ಮೂಲಕ ಮನೋರಂಜನೆ ಪಡೆಯವವರೇ ಅಗಿರುತ್ತಾರೆ. ರಾಜಕೀಯ ಶಕ್ತಿಯನ್ನು ಪ್ರದರ್ಶಿಸುವಲ್ಲಿ ಬಹುತೇಕ ಚುನಾಯಿತರು ಒಮ್ಮುಖವಾದ ಏಕಸ್ವಾಮ್ಯತೆಯನ್ನು ಪ್ರದರ್ಶಿಸುತ್ತಾರೆ. ಬಹುತೇಕವಾಗಿ ಸರ್ಕಾರಿ ಅಧಿಕಾರಿಗಳು ಗ್ರಾಮಪಂಚಾಯತ್‌ನಂತಹ ಸಂಸ್ಥೆಗಳನ್ನು ನಿರಂತರವಾಗಿ ಶೋಷಿಸುತ್ತಲೇ ಬಂದಿದ್ದಾರೆ. ಇಂತಹ ಅನಿಷ್ಟಗಳಿಂದ ಗ್ರಾಮಪಂಚಾಯತ್‌ನಂಥವುಗಳನ್ನು ಕಾಪಾಡಬೇಕಾದರೆ ಸಂವಿಧಾನಿಕವಾದ ಕಾನೂನು ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕಾಗುತ್ತದೆ ಎಂದು ತಿಳಿಸುತ್ತಾರೆ.

ಶಿವಲಿಂಗ ಪ್ರಸಾದ್ರವರ **ಪಂಚಾಯತ್ಸ್ ಅಂಡ್ ರೂರಲ್ ಡೆವೆಲಪ್‌ಮೆಂಟ್ಸ್ (೧೯೮೦)** ಕೃತಿಯಲ್ಲಿ ಗ್ರಾಮ ಪಂಚಾಯಿತಿಗಳ ಆಡಳಿತ ವ್ಯವಸ್ಥೆಯ ಮೇಲೆ ಬೆಳಕನ್ನು ಚಲ್ಲಿದ್ದಾರೆ. ಗ್ರಾಮೀಣಾಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬೇಕಾದ ಬೆಂಬಲ, ಆಸಕ್ತಿ ಕಾಳಜಿಗಳು ಗ್ರಾಮ ಪಂಚಾಯ್ತಿ ಆಡಳಿತ ವ್ಯವಸ್ಥೆಯಲ್ಲಿ ಕಂಡು ಬರುವುದಿಲ್ಲ. ಈ ವಿಚಾರವಾಗಿ ಗ್ರಾಮ ಪಂಚಾಯ್ತಿ ಆಡಳಿತ ವ್ಯವಸ್ಥೆ ತುಂಬಾ ಬಡವಾಗಿದೆ ಎಂದೇ ಹೇಳಬಹುದು. ಪ್ರಮುಖವಾಗಿ ಕಾಳಜಿಯಿರದ ಆಲಸಿ ಸಮಾಜವೂ ಇದಕ್ಕೆ ಕಾರಣವಾಗಿರಬಹುದು. ಇದು ಕ್ರಿಯಾತ್ಮಕ ರಾಜಕೀಯದ ಕೊರತೆ ಎಂದರೂ ಸರಿಯೆ, ಒಟ್ಟಾರೆಯಾಗಿ ಅವು ಆಡಳಿತಾತ್ಮಕವಾಗಿ ಮೊದಲ ಹಂತದಲ್ಲಿಯೇ ಸೋಲುತ್ತಿರುವುದನ್ನು ಕಾಣಬಹುದು. ಈ ಹಿಂದಿನ ಯೋಜನಾ ಸಮತಿಯ ಸದಸ್ಯರಾದ ರಾಜ್ ಕೃಷ್ಣಾರವರು ಸಾರ್ವಾತ್ರಿಕವಾದ (ಸರ್ಕಾರಿ) ಹಣವನ್ನು ಗ್ರಾಮೀಣ ಬಡವರ ಅಭಿವೃದ್ಧಿಗೊಳಿಸಲು ಬಳಸಬಹುದು ಎಂದು ತಿಳಿಸಿದ್ದರು, ಇನ್ನೊಂದು ಮುಖ್ಯ ವಿಚಾರವೆಂದರೆ ಸ್ಥಳೀಯ ಆಡಳಿತಶಾಹಿ ವ್ಯವಸ್ಥೆಯು ಸಾಮುದಾಯಿಕವಾಗಿ ಮತ್ತು ಕ್ರಿಯಾತ್ಮಕವಾಗಿ ಗ್ರಾಮೀಣಾಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಲು ಹಾಗೂ ಅನುಷ್ಠಾನಗೊಳಿಸಲು ಆಸಕ್ತಿಯನ್ನು

ತಾಳುವುದಿಲ್ಲ. ಬಹುಮುಖ್ಯವಾಗಿ ಸಮಾಜದ ಸಮಸ್ಯೆಗಳ ಕುರಿತಾಗಿ ಆಡಳಿತದ ಚುಕ್ಕಾಣಿ ಹಿಡಿದವರಿಗೆ ಸರಿಯಾದ ತಿಳುವಳಿಕೆ ಇರುವುದಿಲ್ಲ. ಹಾಗೇ ತಿಳುವಳಿಕೆ ನೀಡುವ ಪುನರ್ಮನನ ಶಿಬಿರಗಳಂತಹ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲು ಸಾಧ್ಯವಗದೇ ಇರುವುದೂ ಕಾರಣವಾಗಿದೆ. ಮುಖ್ಯವಾಗಿ ಗ್ರಾಮೀಣಾಭಿವೃದ್ಧಿಯಾಗಬೇಕಾದರೆ ಸ್ಥಳೀಯ ರಾಜಕೀಯ ವ್ಯವಸ್ಥೆ ಹಾಗೂ ಆಡಳಿತಾಧಿಕಾರಿಗಳು ಮೊದಲಿಗೆ ಪಾರದರ್ಶಕವಾಗಿರಬೇಕು ಮತ್ತು ಗುಣಾತ್ಮಕವಾದ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು, ಗುಣಾತ್ಮಕ ಮೌಲ್ಯಗಳು, ಪಾರದರ್ಶಕತೆ ಇರದ ಯಾವೊಬ್ಬ ವ್ಯಕ್ತಿಯಿಂದಲೂ ವ್ಯವಸ್ಥೆಯನ್ನು ಹೊಸದಾಗಿ ರೂಪಿಸಲು ಅಸಾದ್ಯವೆಂದೇ ತಿಳಿಸುತ್ತಾರೆ.

ರವೀಂದ್ರ ಶರ್ಮರವರ ವಿಲೇಜ್ ಪಂಚಾಯತ್ ಇನ್ ರಾಜಾಸ್ತಾನ್ (೧೯೮೪) ಎನ್ನುವ ಕೃತಿಯಲ್ಲಿ ರಾಜಸ್ಥಾನದ ಜೈಪುರ ಜಿಲ್ಲೆಯ ಬಾರಾಕೋಟ್ ಮತ್ತು ಅದರ ಸುತ್ತಲಿನ ಕೆಲವು ಗ್ರಾಮ ಪಂಚಾಯತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವುದಾಗಿ ತಿಳಿಸುತ್ತಾರೆ. ಆ ಗ್ರಾಮ ಪಂಚಾಯತಿಗಳ ರಾಜಕೀಯ ಸ್ಥಿತಿಗತಿಗಳು, ಆಡಳಿತ ವೈಖರಿ ಮತ್ತು ಚುನಾಯಿತ ಸದಸ್ಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಅವಲೋಕಿಸಿದ್ದಾರೆ. ಚುನಾಯಿತ ಪ್ರತಿನಿಧಿಗಳು ಮತ್ತು ಆಡಳಿತ ವ್ಯವಸ್ಥೆಯ ಮಧ್ಯ ಇರುವ ಸಂಬಂಧಗಳು ಹಾಗೂ ಅಧಿಕಾರಿಗಳ ಭ್ರಷ್ಟತೆ ಕುರಿತು ತಿಳಿಸುತ್ತಾ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ಮನೋಭಾವನೆಯಲ್ಲಿ ಬದಲಾವಣೆಯಾಗ ಬೇಕಾಗಿರುವುದು ಅತ್ಯಗತ್ಯ ಎಂದು ತಿಳಿಸುತ್ತಾರೆ. ಮುಖ್ಯವಾಗಿ ಅಡಳಿತ ವ್ಯವಸ್ಥೆಗೆ ಚಿಕಿತ್ಸೆಯ ಅಗತ್ಯತೆ ಅತ್ಯವಶ್ಯಕವಾಗಿದೆ ಎನ್ನುತ್ತಾರೆ. ಇದಕ್ಕಾಗಿ ಹೊಸ ಸಿಬ್ಬಂದಿ ತರಲು ಮತ್ತು ಗಟ್ಟಿಯಾಗಿ ತಳವೂರಿದ ಅಧಿಕಾರಿಗಳನ್ನು ವರ್ಗಾಯಿಸಲು ಹಿಂಜರಿಯಬಾರದು ಎನ್ನುತ್ತಾರೆ. ಗ್ರಾಮಸಭೆಯಲ್ಲಿ ಜನತೆಯೇ ತಮ್ಮ ಗ್ರಾಮದ ಕುಂದುಕೊರತೆಗಳನ್ನು ತಾವೇ ನೇರವಾಗಿ ಗುರುತಿಸುವಂತಾಗಬೇಕು, ಇಲ್ಲವೆ ಅದಕ್ಕೆ ಸಹಕಾರಿಯಾಗುವಂತೆ ಸಲಹಾ ಸಮಿತಿಯ ಸಹಾಯ ಪಡೆಯಬೇಕು, ಗ್ರಾಮಸಭೆಯ ಮೂಲಕ ಗುರುತಿಸಿದ ಕುಂದುಕೊರತೆಗಳ ನಿವಾರಣೆಗೆ ಸರಿಯಾದ ರೀತಿಯ ಕ್ರಮ ಕೈಗೊಳ್ಳಬೇಕು ಮತ್ತು ಆಯಾ ವರ್ಷದ ಹಣಕಾಸಿನ ವ್ಯವಹಾರದ ಲೆಕ್ಕಪತ್ರಗಳನ್ನು ಸರಿಯಾದ ರೀತಿಯಲ್ಲಿ ಆಡಿಟ್ ಮಾಡಿಸಬೇಕು. ಪಂಚಾಯತ್‌ರಾಜ್ ಪದ್ದತಿ ಯಶಸ್ವಿಯಾಗಲು ಗ್ರಾಮೀಣಾಭಿವೃದ್ಧಿ ಸಮಿತಿಯನ್ನು ಸ್ಥಳೀಯವಾಗಿ ರಚಿಸಿಕೊಳ್ಳಬೇಕು. ಸರ್ಕಾರವು ಯಾವುದೇ ತಡೆಗಳಿಲ್ಲದೆ ಸರಿಯಾದ ಕಾಲಕ್ಕೆ ಚುನಾವಣೆ ನಡೆಸುವಂತಾಗಬೇಕು, ಹೀಗಿದ್ದಾಗ ಮಾತ್ರ ಗ್ರಾಮ ಪಂಚಾಯಿತಿಗಳ ಉದ್ಧಾರ ಸಾದ್ಯವೆನ್ನುತ್ತಾರೆ.

ಸಾಬ್‌ಸಿಂಗ್ ಮತ್ತು ಸಿವಿಂದರ್‌ಸಿಂಗ್ ರವರು ಲೋಕಲ್ ಗೌರ್ನಮೆಂಟ್ ಇಂಡಿಯಾ (೧೯೮೬) ದಲ್ಲಿ ಪಂಜಾಬ್ ಮತ್ತು ಹರ್ಯಾಣ ರಾಜ್ಯದೊಳಗಿನ ನಗರ ಹಾಗೂ ಗ್ರಾಮೀಣ ಪ್ರದೇಶದ ಸ್ಥಳೀಯ ಸರ್ಕಾರಗಳ ಕಾರ್ಯವೈಖರಿಯ ಕುರಿತು ಅವಲೋಕಿಸಿದ್ದಾರೆ. ಹಾಗೇ ನಗರ ಪ್ರದೇಶಗಳ ಆಡಳಿತ ವ್ಯವಸ್ಥೆಗೂ ಹಾಗೂ ಗ್ರಾಮೀಣ ಪ್ರದೇಶದ ಆಡಳಿತ ವ್ಯವಸ್ಥೆಗೂ ಮಧ್ಯ ಇರುವ ಅಂತರಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಹಲವಾರು ಸಮಿತಿಗಳು ತಳಮಟ್ಟದ ಆಡಳಿತ ವ್ಯವಸ್ಥೆಯ ಕುರಿತು ಹಲವಾರು ಶಿಫಾರಸ್ಸುಗಳನ್ನು ಮಾಡಿವೆ. ಈ ಶಿಫಾರಸ್ಸಗಳನ್ನು ಅನುಷ್ಠಾನಗೊಳಿಸುವ ಕುರಿತು ರಾಜ್ಯ ಹಾಗು ಕೇಂದ್ರ ಸರ್ಕಾರಗಳು ಹಲವಾರು ರೀತಿಯ ಸಮಾಲೋಚನೆಗಳನ್ನು ಸಹ ನಡೆಸಿವೆ, ಆದರೆ ಶಿಫಾರಸ್ಸುಗಳು ಅನುಷ್ಠಾನಗೊಳ್ಳುವಲ್ಲಿ ಸೋಲುತ್ತಿವೆ ಎಂದು ತಿಳಿಸುತ್ತಾರೆ. ಲೇಖಕರು ಮುಖ್ಯವಾಗಿ ಗುರುತಿಸಿರುವುದೇನೆಂದರೆ ಬಹುತೇಕ ರಾಜಕೀಯ ಮುಖಂಡರು ಗ್ರಾಮೀಣ ಮಟ್ಟದಲ್ಲಿಯೇ ತಮ್ಮ ಸಾಮರ್ಥ್ಯ ಇರುವುದು ಎಂದು ಭಾವಿಸಿರುವುದು, ಗ್ರಾಮ ಮಟ್ಟದಲ್ಲಿ ನಡೆಯುವ ಪಂಚಾಯತ್ ರಾಜ್ ಆಡಳಿತದಲ್ಲಿ ರಾಜ್ಯ ಮಟ್ಟದ ರಾಜಕಾರಣಿಗಳು ಹಸ್ತಕ್ಷೇಪ ಮಾಡುವುದು ತರವಲ್ಲವೆಂದು ತಿಳಿಸುತ್ತಾರೆ. ರಾಜ್ಯ ಮಟ್ಟದಲ್ಲಿರುವ ರಾಜಕಾರಣಗಳು ತಮ್ಮ ಭವಿಷ್ಯ ಮತ್ತು ಸ್ವಾರ್ಥಕ್ಕಾಗಿ ಸಂವಿಧಾನದ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿಬಿಡುತ್ತಾರೆ. ಉತ್ತಮ ಗುಣಮಟ್ಟದ ಸ್ಥಳೀಯ ಆಡಳಿತ ವ್ಯವಸ್ಥೆ ರೂಪುಗೊಳ್ಳಬೇಕಾದರೆ ಹಲವಾರು ಸಮಸ್ಯೆ ಹಾಗೂ ಸವಾಲುಗಳನ್ನು ಸ್ಥಳೀಯ ವ್ಯವಸ್ಥೆಗಳು ಎದುರಿಸಬೇಕಾಗುತ್ತದೆ ಎಂದು ತಿಳಿಸುತ್ತಾರೆ.

ವಸಂತರಾಜ್ ರವರ **ಪಂಚಾಯತ್‌ರಾಜ್ ಪವರ್ ಟು ದ ಪೀಪಲ್** (೧೯೯೦) ಕೃತಿಯಲ್ಲಿ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಗ್ರಾಮೀಣ ಮಟ್ಟದಲ್ಲಿ ಜವಾಬ್ದಾರಿಯುತ ಆಡಳಿತ ವ್ಯವಸ್ಥೆ ನಿರ್ಮಾಣವಾಗಬೇಕು. ಹಾಗಿದ್ದಾಗ ಮಾತ್ರ ಗ್ರಾಮೀಣ ಮಟ್ಟದಲ್ಲಿನ ಸಮಸ್ಯೆಗಳು ನಿವಾರಣೆಯಾಗಲು ಸಾಧ್ಯವಾಗುತ್ತದೆ ಎಂಬುದನ್ನು ಪಂಚಾಯತ್‌ರಾಜ್ ವ್ಯವಸ್ಥೆಯ ಚರಿತ್ರೆಯನ್ನು ಆಧರಿಸಿ ತಿಳಿಸಲು ಪ್ರಯತ್ನಿಸಿದ್ದಾರೆ. ಇದರೊಂದಿಗೆ ಸಾಮಾಜಿಕ ಮತ್ತು ಆರ್ಥಿಕ ಅಧ್ಯಯನಗಳು ವಿಭಿನ್ನ ರೀತಿಯ ಕ್ಷೇತ್ರ ಕಾರ್ಯಾಧ್ಯನಗಳಿಗೆ ದಾರಿ ಮಾಡಿಕೊಡುತ್ತವೆ. ಭಾರತ ಅಭಿವೃದ್ಧಿಯಾಗಬೇಕಾದರೆ ಗ್ರಾಮೀಣ ಮಟ್ಟದಲ್ಲಿ ಮೊದಲಿಗೆ ಅಭಿವೃದ್ಧಿಯಾಗಬೇಕು, ಆ ಕಾರಣಕ್ಕಾಗಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವ ಹೊಣೆ ಪ್ರತಿಯೊಬ್ಬ ಭಾರತದ ಪ್ರಜೆಗಳದಾಗಿದೆ. ಹೀಗಾದಾಗ ಮಾತ್ರ ಭಾರತದ ಆರ್ಥಿಕ ಅಭಿವೃದ್ಧಿಯು ಸುಸ್ಥಿತಿಗೆ ಬರಲು ಸಾಧ್ಯವಾಗುವುದು ಎಂದು ಲೇಖಕರು

ತಿಳಿಸುತ್ತಾರೆ. ಅವರು ಗ್ರಾಮೀಣಾಭಿವೃದ್ಧಿಯಲ್ಲಿ ಬಹುಮುಖ್ಯವಾಗಿ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಹಲವು ಬಗೆಯ ವಿಕೇಂದ್ರೀಕರಣ ಯೋಜನೆಯಗಳನ್ನು ಜಾರಿಗೆ ತಂದು ಅನುಷ್ಠಾನಗೊಳಿಸಬೇಕು ಎನ್ನುತ್ತಾರೆ.

ಪ್ರಸ್ತುತ ಪಂಚಾಯತ್ ರಾಜ್ ವ್ಯವಸ್ಥೆ ಹಲವಾರು ಸಮಸ್ಯೆಗಳಿಂದ ಬಳಲುತ್ತಿದೆ. ಉದಾಹರಣೆಗೆ ಹಣಕಾಸು ವ್ಯವಸ್ಥೆ, ಸಂಘಟನಾ ಸಾಮರ್ಥ್ಯ, ಕಾರ್ಯವಿಧಾನದಲ್ಲಿ ಹಲವು ಕೊರತೆಗಳನ್ನು ಅದು ಅನುಭವಿಸುತ್ತಿದೆ. ಗ್ರಾಮೀಣ ಜನರ ಜೀವನ ಮಟ್ಟ ಸುಧಾರಿಸಲು ವಿವಿಧ ರೀತಿಯ ಯೋಜನೆಗಳನ್ನು ಜಾರಿಗೆ ತರಬೇಕು ಮತ್ತು ಅವು ಪಾರದರ್ಶಕವಾಗಿ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳಬೇಕು, ಹೀಗಾದಾಗ ಮಾತ್ರ ಶೀಘ್ರವಾಗಿ ಗ್ರಾಮೀಣ ಜನರ ಬದುಕು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದು ತಿಳಿಸುತ್ತಾರೆ.

ಶಿವಣ್ಣ ಎನ್‌ರವರ ಪಂಚಾಯತ್ ರಾಜ್ ರಿಫಾರ್ಮ್ಸ್ ಅಂಡ್ ರೂರಲ್ ಡೆವೆಲಪ್‌ಮೆಂಟ್ (೧೯೯೦) ಎನ್ನುವ ಕೃತಿಯಲ್ಲಿ ಗ್ರಾಮೀಣಾಭಿವೃದ್ಧಿಯಾಗಬೇಕಾದರೆ ಪಂಚಾಯತ್ ರಾಜ್ ವ್ಯವಸ್ಥೆ ಯಾವ ರೀತಿ ಕಾರ್ಯನಿರ್ವಹಿಸಬೇಕು, ವಿಕೇಂದ್ರೀಕರಣ ನೀತಿಗೂ ಪಂಚಾಯತ್‌ರಾಜ್ ವ್ಯವಸ್ಥೆಗೂ ಇರುವ ಸಂಬಂಧಗಳು ಒಂದಕ್ಕೊಂದು ಹೇಗೆ ಪೂರಕವಾಗಿವೆ. ಪಂಚಾಯತ್‌ರಾಜ್ ವ್ಯವಸ್ಥೆ ಅನುಷ್ಠಾನಗೊಳ್ಳವಲ್ಲಿ ಏಕೆ ಸೋಲುತ್ತಿದೆ ಮುಂತಾದ ವಿಚಾರಗಳನ್ನು ಕೃತಿಯಲ್ಲಿ ವಿಶ್ಲೇಷಿಸಿದ್ದಾರೆ.

ಅಬ್ದುಲ್ ಅಜೀಜ್‌ರವರ ದ ಸೆಂಟ್ರಲೈಜ್ಡ್ ಪ್ಲಾನಿಂಗ್ ದ ಕರ್ನಾಟಕ ಎಕ್ಸಪರಿಮೆಂಟ್ (೧೯೯೩) ಕೃತಿಯಲ್ಲಿ ವಿಕೇಂದ್ರೀಕರಣ ಯೋಜನೆಗಳು ಏನೇನಿವೆ, ಅವುಗಳನ್ನು ಕರ್ನಾಟಕದಲ್ಲಿ ಹೇಗೆ ಅನುಷ್ಠಾನಗೊಳಿಸಲಾಗಿದೆ. ವಿಕೇಂದ್ರೀಕರಣ ನೀತಿಯನ್ನು ಅನುಷ್ಠಾನಗೊಳಿಸುವಲ್ಲಿ ಸ್ಥಳೀಯ ಸರ್ಕಾರಗಳು ಯಾವ ರೀತಿ ಕಾರ್ಯತತ್ಪರವಾಗಿವೆ ಅದರ ಪರಿಣಾಮಗಳೇನು ಮುಂತಾಗಿ ಅವಲೋಕಿಸಲಾಗಿದೆ.

ಇವರ (ಅಬ್ದುಲ್ ಅಜೀಜ್) ಮತ್ತೊಂದು ಕೃತಿ ದ **ಸೆಂಟ್ರಲೈಜ್ಡ್ ಗೌರ್ನಮೆಂಟ್ಸ್ ಇನ್ ಏಷಿಯನ್ ಕಂಟ್ರೀಸ್** (೧೯೯೬) ದಲ್ಲಿ ತೃತೀಯ ರಾಷ್ಟ್ರಗಳಲ್ಲಿ ವಿಕೇಂದ್ರೀಕರಣ ಸರ್ಕಾರಗಳ ಕಾರ್ಯವೈಖರಿ ಹೇಗಿದೆ ಎಂಬುದನ್ನು ನೋಡಲಾಗಿದೆ. ಬಹು ಮುಖ್ಯವಾಗಿ ಈ ಕೃತಿಯಲ್ಲಿ ಭಾರತದ ವಿಕೇಂದ್ರೀಕೃತ ಸ್ಥಳೀಯ ಸರ್ಕಾರಗಳ ಕಾರ್ಯವೈಖರಿಯ ಪರಿಣಾಮಗಳ ಕುರಿತು ಅವಲೋಕಿಸಲಾಗಿದೆ.

ಜಾರ್ಜ್ ಮಾಥ್ಯೂರವರ ಸ್ಟೇಟಸ್ ಆಫ್ ಪಂಚಾಯತ್‌ರಾಜ್ ಇನ್ ಸ್ಟೇಟ್ ಆಫ್ ಇಂಡಿಯಾ (೧೯೯೪) ಕೃತಿಯಲ್ಲಿ ಪ್ರಾಚೀನ ಕಾಲದಿಂದ ಪ್ರಸ್ತುತ ದಿನಗಳವರೆಗೆ ಪಂಚಾಯತ್‌ರಾಜ್ ವ್ಯವಸ್ಥೆ ನಡೆದು ಬಂದ ದಾರಿಯನ್ನು ಈ ಕೃತಿ ತಿಳಿಸುತ್ತದೆ. ಹಿಂದಿನ ಆಡಳಿತ ವ್ಯವಸ್ಥೆಯಲ್ಲಿ ಪಂಚಾಯತ್‌ರಾಜ್ ಎಂಬ ಹೆಸರಿರದೇ ಇದ್ದರೂ ಅದರ ಸ್ವರೂಪಗಳ ಭಿನ್ನರೂಪಗಳನ್ನು ಹಿಂದೆ ನೋಡಬಹುದಾಗಿತ್ತು. ಭಾರತ ಸ್ವತಂತ್ರವಾದ ತರುವಾಯ ಪಂಚಾಯತ್‌ರಾಜ್ ವ್ಯವಸ್ಥೆಯು ಹಲವು ರೂಪಗಳನ್ನು ಬದಲಿಸುತ್ತ ಇಂದಿನ ವಿಕೇಂದ್ರೀಕೃತ ಸ್ಥಳೀಯ ಸರ್ಕಾರದ ಸ್ವರೂಪ ಪಡೆದಿದೆ ಎಂಬುದನ್ನು ಲೇಖಕರು ಸವಿಸ್ತಾರವಾಗಿ ತಮ್ಮ ಕೃತಿಯಲ್ಲಿ ಕೊಟ್ಟಿದ್ದಾರೆ.

ರಾಯ್ ಮತ್ತು ಸಿಂಗ್ (೧೯೭೫)ರವರು ಬಲವಂತರಾಯ್ ಮೆಹ್ತಾ ಸಮಿತಿ ವರದಿಯ ಅನುಷಾವಿನ ಕುರಿತಂತೆ ಅಧ್ಯಯನ ನಡೆಸಿದ್ದಾರೆ. ಅವರು ತಮ್ಮ ಅಧ್ಯಯನದಿಂದ ಅಭಿಪ್ರಾಯ ಪಡುವಂತೆ. ಸ್ಥಳೀಯ ಮಟ್ಟದಲ್ಲಿ ಆರೋಗ್ಯಪೂರ್ಣ ಜನರ ಸಹಭಾಗಿತ್ವಕ್ಕೆ ಬೆಳವಣಿಗೆಗೆ ಚುನಾವಣೆಯು ಮಾರ್ಗದರ್ಶಿಯಾಗಿಲ್ಲ. ಅವರು ಸಲಹೆ ನೀಡುವಂತೆ, ಸಹಭಾಗಿತ್ವವನ್ನು ಬಲಪಡಿಸಲು ಸ್ಥಳೀಯ ಶೈಕ್ಷಣಿಕ ಸಂಸ್ಥೆಯ ಮುಖ್ಯಸ್ಥರು ವಿವಿಧ ರಾಜಕೀಯ ಪಕ್ಷಗಳ ಪದಾಧಿಕಾರಿಗಳು, ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಜೊತೆಗೂಡಿ ಕೆಲಸ ಮಾಡಬೇಕು. ಇವರು ಸ್ಥಳೀಯ ಸಮಸ್ಯೆಗಳು ಮತ್ತು ಸಾಮಾಜಿಕ ಸಮೀಕ್ಷೆಗಳನ್ನು ಪಂಚಾಯತ್‌ಗಳಿಗೆ ತಿಳಿಸುತ್ತಿರಬೇಕು. ಅವರ ಅಧ್ಯಯನ ತಿಳಿಸುವಂತೆ ಪಂಚಾಯತ ವ್ಯವಸ್ಥೆಯಲ್ಲಿ ಅಲಕ್ಷಿತರು, ಬಡ ಹಿಂದುಳಿದವರು ಮತ್ತು ಅಸಹಾಯಕರು ಕೇವಲ ಪ್ರೇಕ್ಷಕರಾಗಿರುತ್ತಾರೆ. ಇಂಥ ಸ್ಥಿತಿಯಲ್ಲಿ ನೈಜ ಸ್ಥಿತಿಯಲ್ಲಿ ಸಹಭಾಗಿತ್ವದ ಪ್ರಜಾಪ್ರಭುತ್ವವು ಸ್ಥಿತಿ ತಲುಪರಾರರದು.

ಹೂಜಾ (೧೯೭೮)ರವರು ಇಂಡಿಪೆಂಡೆನ್ಸ್ ಅಂಡ್ ಡೆವಲಪ್‌ಮೆಂಟ್ ಇನ್ ಪಂಚಾಯತ್‌ರಾಜ್ ಕೃತಿಯಲ್ಲಿ ಅಭಿವೃದ್ಧಿ ಮತ್ತು ಸ್ವಾತಂತ್ರ ಇವುಗಳ ದೃಷ್ಟಿಯಲ್ಲಿ ಪಂಚಾಯತ್‌ರಾಜ್ ಮತ್ತು ಪ್ರಜಾಪ್ರಭುತ್ವ ವಿಕೇಂದ್ರೀಕರಣ ಕುರಿತಂತೆ ಅಧ್ಯಯನ ನಡೆಸಿದ್ದಾರೆ. ಅವರು ತಮ್ಮ ಅಧ್ಯಯನ ಹಿನ್ನೆಲೆಯಲ್ಲಿ ಸಲಹೆ ನೀಡುವಂತೆ ಕೆಲಸ ಕಾರ್ಯಗಳ ಕುರಿತಂತೆ ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ಜಿಲ್ಲಾ ಆಡಳಿತಗಳ ನಡುವೆ ಸುಮಧುರವಾದ ಸಂಬಂಧಗಳು ಇರಬೇಕು. ಜಿಲ್ಲಾ ಆಡಳಿತ ಮತ್ತು ಪಂಚಾಯತರಾಜ್ ವ್ಯವಸ್ಥೆಗಳು ಪರಸ್ಪರ ಪೂರಕವಾಗಿ ಕೆಲಸ ಮಾಡಬೇಕು. ಪ್ರಜಾಸತ್ತಾತ್ಮಕ ಆಡಳಿತದಲ್ಲಿ ಒಂದು ಮತ್ತೊಂದನ್ನು ಬೆಂಬಲಿಸಬೇಕೆ ಹೊರತು ಅಧಿಕಾರ ಸಂಬಂಧಗಳಲ್ಲಿ ಒಂದಕ್ಕೊಂದು ವೈರಿಗಳು ಎಂಬ ಮನೋಭಾವ ಇರಬಾರದು ಎಂದು ತಿಳಿಸಿರುತ್ತಾರೆ.

ಮರಿಯಾ ಗೊನ್ಸಾರಾಜ್ (೨೦೦೧) ರವರ ಪ್ರಕಾರ ಸರ್ಕಾರವು ತೀರ್ಮಾನ ತೆಗೆದುಕೊಳ್ಳುವ ಸಂದರ್ಭದಲ್ಲಿ ಅವರ ಅಗತ್ಯತೆಗಳು, ಸಮಸ್ಯೆಗಳು, ಮೌಲ್ಯಗಳು, ನಿರೀಕ್ಷೆಗಳು, ನಾಗರೀಕತೆಗೆ ಸಂಬಂಧಿಸಿದ ವಿಷಯಗಳನ್ನು ಗಣನೆಗೆ ತೆಗೆದುಕೊಂಡಿರುವ ಅಂಶಗಳ ಮೂಲಕ ನಾಗರೀಕರ ಭಾಗವಹಿಸುವಿಕೆಯನ್ನು ಗುರುತಿಸಬಹುದು. ಇದು ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಸಾರ್ವಜನಿಕರಿಂದ, ಜನತೆಯ ಕಲ್ಯಾಣದ ಉತ್ಕರ್ಷ ಇಚ್ಛೆ, ಬಡತನ ನಿರ್ಮೂಲನೆಯ ನಿರ್ಧಾರಗಳಿಂದ ಬೆಂಬಲಿತವಾದ ನಾಗರೀಕರು ಮತ್ತು ಸರ್ಕಾರದ ನಡುವೆ ಇರುವ ದ್ವಿಮುಖ ಮಾರ್ಗದ ಸಂಪರ್ಕ ಸಾಧನವಾಗಿದೆ. ಬ್ಲೇರ್ (೨೦೦೦) ರವರ ಪ್ರಕಾರ ಭಾಗವಹಿಸುವಿಕೆ ಎಂಬ ಅಂಶವು ತಿಳೀಸುವುದೇನೆಂದರೆ ಚಟುವಟಿಗಳ್ಲಿ ಪಾಲುದಾರಿಕೆ ನೀಡುವ ಮೂಲಕ ಯೋಜನೆಗಳನ್ನು ರೂಪಿಸುವಲ್ಲಿ ಮತ್ತು ಜಾರಿಗೆ ತರುವಲ್ಲಿ ಒಂದು ರೀತಿಯ ಪಾಲುದಾರಿಕೆಯನ್ನು ಹೊಂದಿರುವುದೇ ಆಗಿದೆ. ಭಾಗವಹಿಸುವಿಕೆಯು ಪ್ರಜಾಪ್ರಭುತ್ವದ ಒಂದು ಮುಖ್ಯವಾದ ಅಂಶವಾಗಿದೆ. ಇದು ರಾಜಕಾರಣದ ಬಗ್ಗೆ ನಾಗರೀಕರ ಧೋರಣೆ, ಹಾಗೆಯೇ ಸ್ಥಳೀಯ ಸರ್ಕಾರಗಳ ತೀರ್ಮಾನ ಕೈಗೊಳ್ಳುವಿಕೆಯ ಮೇಲೆ ಪ್ರಭಾವ ಬೀರುವ ನಾಗರೀಕರ ರಾಜಕೀಯ ವರ್ತನೆ ಮತ್ತು ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ಎಂದು ಕರೆಯಬಹುದಾಗಿದೆ.

ಹಾಟೆಂಗ್ ಮತ್ತು ನೆಲ್ಸನ್ ರವರು (೧೯೯೮) ಭಾಗವಹಿಸುವಿಕೆಯನ್ನು ವಿಶಾಲ ಅರ್ಥದಲ್ಲಿ ವಿವರಿಸಿದ್ದಾರೆ. ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದರ ಮೇಲೆ ಎಲ್ಲಾ ನಾಗರೀಕರನ್ನೊಳಗೊಂಡಂತೆ ಪ್ರಭಾವ ಬೀರುವುದೇ ಆಗಿದೆ. ಅಂತಹ ನಾಗರಿಕ ಚಟುವಟಿಕೆಗಳು ವ್ಯಕ್ತಿಗತವಾಗಿರಬಹುದು ಅಥವಾ ಸಾಮೂಹಿಕವಾಗಿರಬಹುದು. ಸಂಘಟಿತವಾಗಿರಬಹುದು ಅಥವಾ ಸ್ವಯಂಪ್ರೇರಿತವಾಗಿರಬಹುದು, ಶಾಂತಿಯುತವಾಗಿರಬಹುದು, ಹಿಂಸಾತ್ಮಕವಾಗಿರಬಹುದು, ಕಾನೂನಾತ್ಮಕವಾಗಿರಬಹುದು ಅಥವಾ ಕಾನೂನು ವಿರುದ್ಧವಾಗಿರಬಹುದು. ಭಾಗವಹಿಸುಕೆಯ ಯಶಸ್ಸು ವಾಸ್ತವವಾಗಿ ಇದರಿಂದ ಪ್ರಭಾವಿತವಾದ ಸರ್ಕಾರದ ತೀರ್ಮಾನಗಳ ಸಂಖ್ಯೆ ಮತ್ತು ವ್ಯಾಪ್ತಿ ಹಾಗೂ ಆಯಾ ತೀರ್ಮಾನಗಳ ಮೇಲೆ ಯಾವ ಮಟ್ಟದ ಪ್ರಭಾವವಾಗಿದೆ ಎಂಬುದನ್ನು ಅವಲಂಬಿಸಿರುತ್ತದೆ. ಈ ರೀತಿಯಲ್ಲಿ ಜನತೆಯ ಭಾಗವಹಿಸುವಿಕೆಯ ಸರ್ಕಾರವನ್ನು ನ್ಯಾಯ ಸಮ್ಮತಗೊಳಿಸುವುದಷ್ಟೆ ಅಲ್ಲದೇ ಲಭ್ಯವಿರುವ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆ ಮತ್ತು ಸಾರ್ವಜನಿಕ ಯೋಜನೆಗಳನ್ನು ಪರಿಣಾಮಕಾರಿಯಾಗಿ ರಚಿಸಲು ಕೊಡುಗೆ ನೀಡದಂತಾಗುತ್ತದೆ.

ಬರ್ದನ್ (೨೦೦೧)ರವರ ಅಧ್ಯಯನ ತಿಳಿಸುವಂತೆ ಸ್ಥಳೀಯ ಪ್ರಜಾಸತ್ತಾತ್ಮಕ ಸಂಸ್ಥೆಗಳ ಪರಿಣಾಮಕಾರಿ ಕಾರ್ಯನಿರ್ವಹಣೆಯು ಹಲವಾರು ಅಂಶಗಳನ್ನು ಅವಲಂಬಿತವಾಗಿರುತ್ತದೆ. ಅವುಗಳೆಂದರೆ ಸ್ಥಳೀಯರ ಸರಕಾರಗಳಲ್ಲಿ ಅಧಿಕಾರದಲ್ಲಿರುವ ಅಥವಾ ಅವುಗಳ ಮೇಲೆ ಪ್ರಭಾವ ಹೊಂದಿರುವ ಸ್ಥಳೀಯ ಗಣ್ಯರರ ಸ್ವರೂಪ. ರಾಜಕೀಯ ಭಾಗವಹಿಸುವ ಸಂಪ್ರದಾಯವನ್ನು ಅವಲಂಬಿಸಿರುವ ಮತ್ತು ಮತದಾರರ ಪ್ರಜ್ಞಾವಂತಿಕೆ, ಜನರ ಶಿಕ್ಷಣ ಮತ್ತು ಸಮುದಾಯದೊಳಗಿನ ಸಾಮಾಜಿಕ, ಮತ್ತು ಆರ್ಥಿಕ ಶಕ್ತಿಗಳ ಹಂಚಿಕೆ, ಆರೋಗ್ಯಕರರ ಒತ್ತಡ ಗುಂಪುಗಳ ಲಾಭ ಮತ್ತು ಆಂದೋಲನಗಳ ಕೊಡುಗೆಗಳು, ನ್ಯಾಯಬದ್ಧ ಮತ್ತು ನಿಯಮಿತ ಚುನಾವಣೆಗಳು, ಸ್ಥಳೀಯ ಸಂಸ್ಥೆಗಳ ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಗಳಲ್ಲಿ ಮತ್ತು ಸಾರ್ವಜನಿಕ ಖರ್ಚು-ವೆಚ್ಚಗಳಲ್ಲಿರರುವ ಪಾರದರ್ಶಕತೆ, ಮಾಧ್ಯಮಗಳ ಕ್ರಿಯಾಶೀಲತೆ, ಮುಂತಾದವುಗಳು ಈ ಎಲ್ಲಾ ಅಂಶಗಳು ಮುಖ್ಯವಾದವುಗಳಾಗಿವೆಯಲ್ಲದೇ ಸ್ಥಳೀಯ ಮಟ್ಟದಲ್ಲಿನ ವಿಕೇಂದ್ರೀಕರಣದ ಪರಿಣಾಮಗಳನ್ನು ಪರೀಕ್ಷಿಸುವಾಗ ಎಲ್ಲಾ ಅಂಶಗಳನ್ನು ಸಹ ಮೌಲ್ಯಮಾಪನ ಮಾಡಬೇಕಾಗುತ್ತದೆ.

ಕರ್ನಾಟಕದಲ್ಲಿ ಸಹ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಜನರ ಮತ್ತು ಜನಪ್ರತಿನಿಧಿಗಳ ಭಾಗವಹಿಸುವಿಕೆಯ ಕುರಿತಂತೆ ಅಧ್ಯಯನಗಳು ನಡೆದಿವೆ. ಆನಂದ್ (೨೦೦೨)ರವರ ಅಧ್ಯಯನ ತಿಳಿಸುವಂತೆ, ಬಹಳಷ್ಟು ಜನರಿಗೆ ಪಂಚಾಯತಿ ಬಗೆಗಿನ ಕನಿಷವಿ ಮಾಹಿತಿಯೂ ಸಹ ಲಭ್ಯವಿಲ್ಲ. ಆದರೆ ಸ್ಥಳೀಯ ಗಣ್ಯರೆನಿಸಿಕೊಂಡ ಪ್ರಭಾವಿ ವ್ಯಕ್ತಿಗಳು ಈ ಮಾಹಿತಿಯನ್ನು ಸುಲಭವಾಗಿ ಪಡೆಯುವಲ್ಲಿ ಶಕ್ತರಾಗಿದ್ದಾರೆ. ಆದರೆ ದುರಾದೃಷ್ಟವಶಾತ್ ಹೊಸದಾಗಿ ಚುನಾಯಿತರಾದ ಮತ್ತು ಸಾಪೇಕ್ಷವಾಗಿ ಬಡವರಾಗಿರುವ ಪ್ರತಿನಿಧಿಗಳಿಗೆ ಈ ಮಾಹಿತಿಗಳು ಲಭ್ಯವಿಲ್ಲ. ಗ್ರಾಮ ಪಂಚಾಯತಿಯ ಮಾಸಿಕ ಸಭೆಗಳಿಗೂ ಹೆಚ್ಚಿನ ಸಂಖ್ಯೆಯ ಸದಸ್ಯರು ಭಾಗವಹಿಸುವುದಿಲ್ಲ ಎಂದು ತಿಳಿಸುತ್ತಾರೆ.

ಕುಮಾರ್(೧೯೯೪)ರವರ ಮಹಿಳಾ 'ಸಬಲೀಕರಣ' ಎನ್ನುವ ಕೃತಿಯಲ್ಲಿ ಮಹಿಳೆಯರ ಸಬಲೀಕರಣವನ್ನು ಬಲಿಷ್ಟಗೊಳಿಸಲು ಮಹಿಳಾ ಸಾಕ್ಷರತೆಯನ್ನು ಉತ್ತೇಜಿಸಬೇಕಾಗಿದೆ. ಶಿಕ್ಷಣವು ವಿವಿಧ ಜನವರ್ಗಗಳು ಸಮಾನ ಅವಕಾಶಗಳನ್ನು ಪಡೆಯಲು ಅವರ ಸ್ಥಿತಿಯನ್ನು ಸುಧಾರಿಸುವ ಪ್ರಮುಖ ಅಂಶವಾಗಿದೆ. ಸಬಲೀಕರಕ್ಕೆ ಆರ್ಥಿಕ ಸ್ವಾತಂತ್ರ್ಯವು ಬೆಂಬಲವಾಗಬಹುದಾಗಿದೆ. ಆರ್ಥಿಕ ಸ್ವಾತಂತ್ರ್ಯದ ಸಾಧನೆಗೆ ಉತ್ಪಾದಕ ಸಂಪನ್ಮೂಲಗಳ ಮೇಲೆ ಹತೋಟಿ (ಮುಖ್ಯ ಭೂಮಿ) ಅಂಶವು ಅತ್ಯವಶ್ಯಕವಾದುದಾಗಿದೆ. ಇವರು ಅಭಿಪ್ರಾಯ ಪಡುವಂತೆ, ಸರಕಾರ ಸರಕಾರತೇತರ

ಸಂಸ್ಥೆಗಳು ಮತ್ತು ಜನರು ಎಲ್ಲಿಯವರರೆಗೂ ಪಂಚಾಯತರಾಜ್ ವ್ಯವಸ್ಥೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಪಂಚಾಯತರಾಜ್ ಸಂಸ್ಥೆಗಳು ಸಾಮಾಜಿಕ ಪರಿವರ್ತನೆಯ ನಿಯೋಗಿಗಳಾಗಿ ಕಾರ್ಯನಿರ್ವಹಿಸಲಾರವುವು ಎನ್ನುತ್ತಾರೆ.

ಸೆಕ್ಷೇನ್ ಎನ್.ರವರ **ಇಂಪ್ರೂವಿಂಗ್ ಎಫೆಕ್ಟಿವ್‌ನೆಸ್ ಆಫ್ ಗೌರ್‍ನಮೆಂಟ್ ಪ್ರೋಗ್ರಾಮ್ಸ್ ಯಾನ್ ಅಜೆಂಡಾ ಆಫ್ ರಿಫಾರ್ಮ್ಸ್ ಫಾರ್ ದ ಟೆಂತ್ ಪ್ಲಾನ್** (೧೯೯೬) ಎನ್ನುವ ವರದಿಯಲ್ಲಿ ಸರ್ಕಾರದ ಯೋಜನೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಹತ್ತನೇ ಹಣಕಾಸು ಯೋಜನೆ ಯಾವ ರೀತಿ ಪೂರಕವಾಗಿದೆ, ಹತ್ತನೇ ಯೋಜನೆಯಿಂದ ಸ್ಥಳೀಯ ಸರ್ಕಾರಗಳಿಗೆ ಸಿಗುವ ಸವಲತ್ತುಗಳೇನು, ಅದನ್ನು ಗ್ರಾಮೀಣಾಭಿವೃದ್ಧಿಯಲ್ಲಿ ಯಾವ ರೀತಿ ಬಳಕೆ ಮಾಡಬೇಕು ಮುಂತಾದ ವಿವರಗಳು ಈ ವರದಿಯಲ್ಲಿ ದೊರೆಯುತ್ತವೆ.

ವಿ.ವಿ. ವೆಂಕಟರಾವ್ ಮತ್ತು ನೀರಾ ಹಜಾರಿಕಾ ರವರ **ಡೆಮೊಕ್ರಾಟಿಕ್ ಡಿ ಸೆಂಟ್ರಲೈಜೇಷನ್- ಥಿಯರಿ ಅಂಡ್ ಪ್ರಾಕ್ಟೀಸ್** ಎಂಬ ಲೇಖನವು **ಇಂಡಿಯನ್ ಜರ್ನಲ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್** (vol. xxl. And No3 july– ೫ &೧೯೭೮) ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅವರ ಪ್ರಕಾರ ಸ್ಥಳಿಯ ಸಂಸ್ಥೆಗಳಲ್ಲಿ ಪ್ರಜಾಪ್ರಭುತ್ವದ ಆಡಳಿತವೆಂಬುದೇ ಇಲ್ಲ. ಇಲ್ಲಿ ವಿಕೇಂದ್ರೀಕರಣದ ಅನುಷ್ಠಾನದಲ್ಲಿ ಯಾವ ಶಕ್ತಿ ಸಾಮರ್ಥ್ಯಗಳು ಬಳಕೆಯಾಗಲಾರವು. ಎಕೆಂದರೆ ಪ್ರಜಾಪ್ರಭುತ್ವದ ವಿಕೇಂದ್ರೀಕರಣವೆಂಬುದೇ ಸುಳ್ಳು ಎಂದು ಅವರು ತಿಳಿಸುತ್ತಾರೆ.

ಹರಿದ್ವಾರರಾಮ್ ಮತ್ತು ಸಕೇಂದ್ರಪ್ರಸಾದ್ ಸಿಂಗ್ ರವರು **ಇಂಡಿಯಾ ಜರ್ನಲ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಶನ್** (vol. xxl. And No.೩ ೧೯೮೫) ದಲ್ಲಿ **ಪಂಚಾಯತ್‌ರಾಜ್ ಅಂಡ್ ಸಿಟಿಜನ್ಸ್ – ದ ಮಿಥ್ ಆಫ್ ಪಾರ್ಟಿಸಿಪೇಟರಿ ಡೆಮಾಕ್ರಸಿ** ಎನ್ನುವ ಲೇಖನವೊಂದನ್ನು ಬರೆದಿದ್ದಾರೆ. ಈ ಲೇಖನದಲ್ಲಿ ಬಲವಂತರಾವ್ ಮೆಹ್ತಾರವರ ವರದಿಯು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಹೇಗೆ ಅನುಷ್ಠಾನಗೊಂಡಿದೆ ಎಂಬುದನ್ನು ವಿವರಿಸಿದ್ದಾರೆ.

ಸೀತಾರಾಮ್ ಸಿಂಗ್ರವರ **ರಿವೈಜೇಷನ್ ಆಫ್ ಪಂಚಾಯತ್** ಎನ್ನವ ಲೇಖನವೊಂದು **ಕುರುಕ್ಷೇತ್ರ ಪತ್ರಿಕೆ (ಸಂಚಿಕೆ ಸಂ ೬ ಎಪ್ರಿಲ್ ೧೯೮೬)**ಯಲ್ಲಿ ಪ್ರಕಟಗೊಂಡಿದೆ. ಈ ಲೇಖನದಲ್ಲಿ ಅವರು ಪಂಚಾಯತ್‌ರಾಜ್‌ದ ಇತಿಹಾಸ ಹಾಗೂ ಪ್ರಸ್ತುತ ಸ್ಥಿತಿಗತಿಗಳ ಕುರಿತು ವಿವರಿಸಿದ್ದಾರೆ. ಸಿಂಗ್ ರವರು ಪಂಚಾಯತ್ ರಾಜ್ ವ್ಯವಸ್ಥೆಯು ಹೊಂದಿರಬೇಕಾದ ಸೈದ್ಧಾಂತಿಕ ನೆಲೆಗಟ್ಟು,

ಸಂಘಟನೆ, ಕಾರ್ಯವಿಧಾನ ಈ ಮೂರು ದೃಷ್ಟಿಕೋನದಲ್ಲಿ ಲೇಖನವನ್ನು ಸಿದ್ದಪಡಿಸಿದ್ದಾರೆ. ಪಂಚಾಯತ್‌ರಾಜ್ ವ್ಯವಸ್ಥೆಯು ಭಾರತದಲ್ಲಿ ಮೊಟ್ಟ ಮೊದಲಿಗೆ ಬಿಹಾರದಲ್ಲಿ ೧೯೪೭ ರಲ್ಲಿ ಪ್ರಾರಂಭಗೊಂಡಿತು ಎಂದು ತಿಳಿಸುತ್ತಾರೆ. ಆದರೆ ನಿಯಮಿತವಾದ ಚುನಾವಣೆಗಳಿಲ್ಲದೆ ಹಾಗೂ ಆಡಳಿತಶಾಹಿಗಳ ದುರ್ವರ್ತನೆಯಿಂದಾಗಿ ಪಂಚಾಯತ್‌ರಾಜ್ ವ್ಯವಸ್ಥೆ ಪ್ರಾರಂಭದ ದಿಸೆಯಲ್ಲಿ ಹಾಳಾಯಿತು ಎಂಬುದನ್ನು ಅಧ್ಯಯನದ ಮೂಲಕ ಸಾಬೀತು ಮಾಡಲು ಪ್ರಯತ್ನಿಸಿದ್ದಾರೆ. ಪಂಚಾಯತ್‌ಗಳು ತರಬೇತಿ ಹಂತದಲ್ಲಿಯೇ ಸೋತವು, ಪಂಚಾಯತ್ ವ್ಯವಸ್ಥೆಯು ಸಂಪೂರ್ಣವಾಗಿ ಜಿಲ್ಲಾಮಟ್ಟದ ಮತ್ತು ರಾಜ್ಯಮಟ್ಟದ ರಾಜಕಾರಣಿಗಳ ಹಿಡಿತಕ್ಕೆ ಸಿಲುಕಿತು. ಹಾಗೇ ಆಡಳಿತಶಾಹಿಯೂ ಪಂಚಾಯತ್‌ರಾಜ್ ಬೆಳವಣಿಗೆಗೆ ತಡೆಗೋಡೆಯಾಯಿತು. ಹೀಗಾಗಿ ಮೊದಲ ಹಂತದಲ್ಲಿಯೇ ಪಂಚಾಯತ್‌ರಾಜ್ ವ್ಯವಸ್ಥೆ ರೋಗಪೀಡಿತವಾಯಿತು. ಪಂಚಾಯತ್‌ರಾಜ್ ವ್ಯವಸ್ಥೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಆಗ ಸರ್ಕಾರದಿಂದ ಸರಿಯಾದ ಹಣಕಾಸಿನ ಬೆಂಬಲವೂ ಸಿಗಲಿಲ್ಲ. ಹೀಗಾಗಿ ಪಂಚಾಯತ್‌ರಾಜ್ ವ್ಯವಸ್ಥೆ ಇತರ ರೋಗಪೀಡಿತ ಸಂಸ್ಥೆಗಳಂತೆ ಸೋಲುವಂತಾಯಿತು ಎಂದು ತಿಳಿಸುತ್ತಾರೆ.

ಎಲ್. ಎಮ್. ಸಿಂಘಾಯ್ಯವರು **ಪಬ್ಲಿಕ್ ಒಪಿನಿಯನ್ ಅಟ್ ಮೋಸ್ಟ್ ಇಂಪಾರ್ಟೆನ್ಸ್** ಅನ್ನುವ ಲೇಖನವೊಂದು **ಕುರುಕ್ಷೇತ್ರ ಪತ್ರಿಕೆಯಲ್ಲಿ** (ತ೦ಟ. ಥಥಥ ತಟಟ, ಓ೦.೬, **ಮಾರ್ಚ್ ೧೯೮೯**) ಪ್ರಕಟವಾಗಿದೆ. ಈ ಲೇಖನದಲ್ಲಿ ಮುಖ್ಯವಾಗಿ ಮಹಾತ್ಮಗಾಂಧಿ, ಜಯಪ್ರಕಾಶ್ ನಾರಾಯಣ್ ಮತ್ತು ನೆಹರೂರವರು ಸ್ಥಳೀಯ ಸರ್ಕಾರಗಳ ಕುರಿತು ಯಾವ ಧೋರಣೆ ಹೊಂದಿದ್ದರು ಎಂಬುದನ್ನು ತಿಳಿಸಲು ಪ್ರಯತ್ನಿಲಾಗಿದೆ. ಗಾಂಧಿಯವರ ಗ್ರಾಮ ಸ್ವರಾಜ್ಯ ಪರಿಕಲ್ಪನೆ, ಜಯಪ್ರಕಾಶರ ವಿಕೇಂದ್ರೀಕರಣ ನೀತಿ ಹಾಗೂ ಪಂಚಾಯತ್‌ರಾಜ್ ವ್ಯವಸ್ಥೆಯ ಕುರಿತು ನೆಹರೂರವರ ಧೋರಣೆಗಳೇನಿದ್ದವು ಎಂಬುದು ಈ ಲೇಖನದ ಮೂಲಕ ತಿಳಿಯಬಹುದು.

ಇಂದಿರಾ ಹೀರಾಬಾಯಿರವರು ಪಂಚಾಯತ್‌ರಾಜ್ ಅಟ್ ಕ್ರಾಸ್ ರೋಡ್ಸ್ ಎಂಬ ಲೇಖನವನ್ನು **ಇಕಾನಾಮಿಕ್ ಅಂಡ್ ಪಾಲಿಟಿಕಲ್ ವೀಕ್ಲಿಯಲ್ಲಿ (೧೯೮೯)** ಬರೆದಿದ್ದಾರೆ. ಈ ಲೇಖನದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಸ್ವರೂಪದ ಕುರಿತು ಅವಲೋಕಿಸಲಾಗಿದೆ. ಪ್ರಸ್ತುತ ರಾಜಕೀಯ ವ್ಯವಸ್ಥೆಯಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಯಾವ ರೀತಿ ಸಬಲೀಕರಣಗೊಳ್ಳಬಹುದು ಎಂಬುದೇ ಲೇಖಕರಿಗೆ ಸವಾಲಾಗಿ ಕಾಡಿದೆ. ತಮ್ಮ ಅಧ್ಯಯನದ ಅನುಭವದ ಹಿನ್ನೆಲೆಯಲ್ಲಿ ವಿವಿಧ ರಾಜ್ಯಗಳ

ಪಂಚಾಯತ್‌ರಾಜ್ ವ್ಯವಸ್ಥೆಯ ಸ್ವರೂಪ ಮತ್ತು ಕಾರ್ಯಾಚರಣೆಗಳನ್ನು ಅರ್ಥೈಸಿಕೊಂಡ ಬಗೆಯನ್ನು ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ. ಅವರ ದೃಷ್ಟಿಯಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಬದಲಿಸಬೇಕಾಗಿದೆ. ರಾಜಕೀಯ ಹಿತಾಸಕ್ತಿ ಮತ್ತು ಆಡಳಿತಶಾಹಿಯಿಂದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಕಾಪಾಡಬೇಕು ಹಾಗೂ ಪಂಚಾಯತ್‌ರಾಜ್ ವ್ಯವಸ್ಥೆ ಹೆಚ್ಚು ಪಾರದರ್ಶಕವಾಗಿರಬೇಕೆನ್ನುವುದೇ ಲೇಖಕರ ಅಭಿಪ್ರಾಯವಾಗಿದೆ.

ಎಂ. ಆರ್. ಸಿಂಬೊರವರ ರೂರಲ್ ಡೆವಲೆಪ್‌ಮೆಂಟ್ ಅಂಡ್ ಬ್ಯೂರಾಕ್ರಸಿ ಇನ್ ಇಂಡಿಯಾ ಎನ್ನುವ ಲೇಖನವನ್ನು **ಇಂಡಿಯನ್ ಜರ್ನಲ್ ಆಫ್ ಪಾಲಿಟಿಕಲ್ ಸ್ವಕೀನ್** (vol. 53, No.3, July six, ೧೯೯೨) ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅವರ ಪ್ರಕಾರ ಗ್ರಾಮೀಣಾಭಿವೃದ್ಧಿಯಾಗಬೇಕಾದರೆ ಗ್ರಾಮಗಳ ಆಡಳಿತ ವ್ಯವಸ್ಥೆಯಲ್ಲಿ ಸರ್ವಾಂಗೀಣ ಬದಲಾವಣೆಯಾಗಬೇಕೆಂದು ತಿಳಿಸುತ್ತಾರೆ. ಆದರೆ ಇಂದು ಗ್ರಾಮೀಣಾಭಿವೃದ್ಧಿ ಪದದ ಅರ್ಥವನ್ನೇ ಅಧಿಕಾರಿಶಾಹಿ ಮರೆತುಬಿಟ್ಟಿದೆ. ಯೋಜನೆಗಳು ಮತ್ತು ನೀತಿ ನಿಯಮಗಳನ್ನು ಪರಿಷ್ಕರಿಸುವುದೇ ಇಲ್ಲ. ಹೀಗಾಗಿ ವಾಸ್ತವತೆ ಮತ್ತು ಅವಾಸ್ತವತೆಗಳು ಯಾವುವು ಎಂಬುದೇ ತಿಳಿಯದಂತಾಗಿ ಹೋಗಿದೆ. ಒಟ್ಟಾರೆಯಾಗಿ ಅಭಿವೃದ್ದಿ ಮತ್ತು ವಾಸ್ತವತೆಗಳ ಮಧ್ಯ ಒಂದು ದೊಡ್ಡ ಬಿರುಕುಂಟಾಗಿದೆ. ಆಡಳಿತಶಾಹಿ ಮತ್ತು ಚುನಾಯಿತ ಪ್ರತಿನಿಧಿಗಳ ಅಟ್ಟಹಾಸವೇ ಮೇಲುಗೈ ಪಡೆದಿದೆ. ಅವೆರಡನ್ನು ಮಟ್ಟಹಾಕದೆ ಗ್ರಾಮೀಣಾಭಿವೃದ್ದಿ ಕನಸಿನ ಮಾತಾಗಿಯೇ ಉಳಿಯುತ್ತದೆ. ಆಡಳಿತಶಾಹಿಯು ಕತೃತ್ವ, ರಾಷ್ಟ್ರೀಯತೆಗಳನ್ನೆಲ್ಲಾ ಮರೆತು ಭ್ರಷ್ಟಾಚಾರದಲ್ಲಿ ಮುಳುಗಿದೆ. ಸಾರ್ವಾತ್ರಿಕ ಹಣದಲ್ಲಿ ಸೋರಿಕೆ ಉಂಟಾಗುತ್ತಿದೆ, ಇದನ್ನು ತಪ್ಪಿಸಲು ಮುಖ್ಯವಾಗಿ ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಾಗುವ ಸೋರಿಕೆಯನ್ನು ತಡೆಗಟ್ಟಲು ತಳಮಟ್ಟದಲ್ಲಿ ನಿಯಂತ್ರಿಸುವಂತಹ ಪಾರದರ್ಶಕತೆಯುಳ್ಳ ಮೇಲ್ವಿಚಾರಣೆ ತಾಂತ್ರಿಕತೆಯ ಅವಶ್ಯಕತೆ ಇದೆ ಎನ್ನುತ್ತಾರೆ.

ನೀಲ ಮುಖರ್ಜಿರವರು ರೂರಲ್ ಪ್ರವೇಟ್ ಅಂಡ್ ಪಂಚಾಯತ್ ರಾಜ್ ಇನ್ಸಿಟಿಟ್ಯೂನನ್ಸ್ ಎನ್ನುವ ಲೇಖನ ಕುರುಕ್ಷೇತ್ರ ಪತ್ರಿಕೆ (ಜೂನ್ ೧೯೯೪)ಯಲ್ಲಿ ಪ್ರಕಟವಾಗಿದೆ. ಅವರು ಪುರುಷಶಾಹಿ ವ್ಯವಸ್ಥೆಯನ್ನು ತೊಲಗಿಸಬೇಕಾದರೆ ಮಹಿಳಾ ಪ್ರತಿನಿಧಿಗಳು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಬೇಕು. ಆ ರೀತಿ ತೊಡಗಿಕೊಳ್ಳದೆ ಮಹಿಳೆಯರ ಪ್ರಗತಿಯಾಗದು ಎನ್ನುತ್ತಾರೆ. ಮಹಿಳೆಯರ ಸ್ಥಿತಿಗತಿ ಸುಧಾರಿಸಲು ಮಹಿಳೆಯರು ಕೇವಲ ತಮ್ಮ

ಕುಟುಂಬಕ್ಕೆ ಅಂಟಿಕೊಳ್ಳದೆ ಸಾರ್ವತ್ರಿಕ ರಂಗದಲ್ಲಿಯೂ ಕ್ರಿಯಾಶೀಲವಾಗಿ ತೊಡಗಿಕೊಳ್ಳಬೇಕು ಎನ್ನುವುದು ಲೇಖಕರ ಅಭಿಮತವಾಗಿದೆ.

ಕೀರ್ತಿಕುಮಾರ್ ರವರ **ಸ್ಟ್ರೇಟೇಜಿಯಸ್ ಫಾರ್ ಎಂಪವರಮೆಂಟ್ ಆಫ್ ವುಮೆನ್ ಇನ್ ಪಂಚಾಯತ್‌ರಾಜ್ ಇನ್ಸಿಟಿಟ್ಯೂಶನ್ಸ್** ಎನ್ನುವ ಲೇಖನವನ್ನು ಕುರುಕ್ಷೇತ್ರ (ಜೂನ್ ೧೯೯೪) ಪತ್ರಿಕೆ ಪ್ರಕಟಿಸಿದೆ

ಕೀರ್ತಿಕುಮಾರ್ ರವರು ಒತ್ತಿ ಹೇಳುವುದೇನೆಂದರೆ ಮಹಿಳೆಯರು ಆಡಳಿತಾತ್ಮಕವಾಗಿ ಸಬಲರಾಗಬೇಕಾದರೆ ಮಹಿಳೆಯರು ಮೊದಲಿಗೆ ಸಾಕ್ಷರರಾಗಬೇಕು, ಸಾಮಾನ್ಯವಾಗಿ ಬಲಿಷ್ಠ ಜಾತಿ, ಅಂತಸ್ತು, ಹಣ, ಶಿಕ್ಷಣವನ್ನು ಪಡೆದವರು ಅಧಿಕಾರವನ್ನು ಹಿಡಿದಿಟ್ಟಿಕೊಳ್ಳುವಲ್ಲಿ ಮುಖ್ಯ ಪಾತ್ರವಹಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕ ಸ್ವಾವಲಂಬನೆ ಕಲ್ಪಿಸುವಲ್ಲಿ ಕೃಷಿ ಭೂಮಿಗಳ ಪಾತ್ರ ಹಿರಿದಾದುದಾಗಿದೆ. ಲೇಖಕರ ಪ್ರಕಾರ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಅಧಿಕಾರದ ಸ್ವಾವಲಂಬನೆಯೆಂಬುದು ಇನ್ನು ಕನಸಾಗಿಯೇ ಉಳಿದಿದೆ. ಅಕಸ್ಮಾತ್ ಮೀಸಲಾತಿಯ ಕಾರಣದಿಂದಾಗಿ ಮಹಿಳೆಯರು ಅಧಿಕಾರವಹಿಸಿಕೊಂಡಿದ್ದ ಪಕ್ಷದಲ್ಲಿ ಅಧಿಕಾರವನ್ನು ಚಲಾಯಿಸುವವರು ಮಾತ್ರ ಪುರುಷರೇ ಆಗಿರುತ್ತಾರೆ. ಇದೆಲ್ಲದಕ್ಕೂ ಹಿನ್ನೆಲೆಯಾಗಿ ಸಾಮಾಜಿಕ, ಆರ್ಥಿಕ ಕಾರಣಗಳಿವೆ ಎನ್ನುತ್ತಾರೆ.

ಅರ್ಚನಾ ಕೋಲೆನಾಯ್ಕರರವರ **ಕಂಫರ್ಟಬಿಟಲಿ ಆಫ್ ಫಮಿನಿಸಮ್ ವಿತ್ ಗ್ರಾಸ್‌ರೂಟ್** ಎಂಬ ಲೇಖನವು **ಇಕನಾಮಿಕ್ ಅಂಡ್ ಪಾಲಿಟಿಕಲ್ ವೀಕ್ಲಿ** (ಎಪ್ರೀಲ್ ೨೬, ೧೯೯೭) ಯಲ್ಲಿ ಪ್ರಕಟಗೊಂಡಿದೆ. ಅಜೆಂಡಾದಂತೆ ಪ್ರತಿಫಲ ದೊರೆಯಲು ಮಹಿಳೆಯರಿಗೆ ಅವಕಾಶಗಳ ಅಗತ್ಯತೆ ಇದೆ. ಅಂತಹ ಅವಕಾಶಗಳು ಮಹಿಳೆಯರಿಗೆ ಸಿಗುವಂತಹ ಸನ್ನಿವೇಶಗಳು ಸಹ ನಿರ್ಮಾಣವಾಗಬೇಕು ಹಾಗಿದ್ದಾಗ ಮಾತ್ರ ಮಹಿಳೆಯರ ಪ್ರತಿಭೆ ಬೆಳಕು ಕಾಣಲು ಸಾಧ್ಯ.

ಬೇರು ಮಟ್ಟದಿಂದಲೇ ಅಭಿವೃದ್ಧಿ ಹೊಂದಬೇಕೆಂದರೆ ಮಹಿಳಾ ಕಾರ್ಯಸೂಚಿ ವಿಧಾನವು ಸುಧಾರಣೆಗೊಳ್ಳಬೇಕು, ಅಂದರೆ ಮಹಿಳೆಯರು ಸಾಮಾಜಿಕವಾಗಿ ಮರಳಿ ಗುರುತಿಸುವಂತಾಗಬೇಕು. ಲಿಂಗಾಧಾರಿತವಾಗಿ ಮಹಳೆಯರಿಗೆ ಸಿಗಬೇಕಾದ ನ್ಯಾಯವನ್ನು ಸರಿಯಾದ ರೀತಿಯಲ್ಲಿ ದೊರಕಿಸಿಕೊಟ್ಟಲ್ಲಿ ಮಹಿಳೆಯರ ಅಭಿವೃದ್ಧಿಗೆ ನಿಜವಾದ ಅರ್ಥದಲ್ಲಿ ನ್ಯಾಯದೊರಕಿಸಿದಂತಾಗುತ್ತದೆ.

ಎಸ್.ಕೆ. ಸಿಂಗ್ ರವರ **"ಪಂಚಾಯತ್ ಫಾರ್ ಸೆಡ್ಯೂಲ್ಡ್ ಏರಿಯಾಸ್** (೧೯೯೭) ಎಂಬ ಲೇಖನವು **ಮೇನ್ ಸ್ಟ್ರೀಮ್** ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಈ ಲೇಖನದಲ್ಲಿ ಇಂದಿಗೂ ಕೆಲವು ಬುಡಕಟ್ಟು ಸಮುದಾಯಗಳು ಆಡಳಿತ ವ್ಯವಸ್ಥೆಯಲ್ಲಿ ತಮ್ಮದೇ ಆದ ಬುಡಕಟ್ಟು ನಿಯಮಗಳನ್ನು ಅನುಸರಿಸುತ್ತವೆ. ಅಂತಹ ಪ್ರದೇಶಗಳಲ್ಲಿ ಸರ್ಕಾರದ ಯಾವ ವ್ಯವಸ್ಥೆಯೂ ಅನುಸ್ಥಾನಗೊಳ್ಳುವುದು ಕಷ್ಟಸಾಧ್ಯದ ವಿಚಾರ, ಇತ್ತೀಚೆಗೆ ಭಾರತ ಅನುಸರಿಸುತ್ತಿರುವ ಸಂವಿಧಾನಾತ್ಮಕ ಸ್ಥಳೀಯ ಸರ್ಕಾರದ ಆಡಳಿತವು ಬುಡಕಟ್ಟು ಪ್ರದೇಶಗಳಲ್ಲಿ ಪ್ರವೇಶ ಪಡೆದಿವೆಯಾದರೂ ಅವುಗಳು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಅದರ ಬದಲಾಗಿ ಸರ್ಕಾರದ ಯೋಜನೆ, ನಿಯಮಗಳೊಂದಿಗೆ ಬುಡಕಟ್ಟು ಸಮುದಾಯಗಳು ತಮ್ಮ ಸಾಂಪ್ರದಾಯಿಕ ನೀತಿ- ನಿಯಮಗಳನ್ನು ಮಿಶ್ರ ಮಾಡಿಕೊಂಡಿವೆ. ಹೀಗಾಗಿ ಬುಡಕಟ್ಟು ಪ್ರದೇಶದ ಸ್ಥಳೀಯ ಸರ್ಕಾರಗಳ ಆಡಳಿತ ವ್ಯವಸ್ಥೆಯಂಬುದು ಮಿಶ್ರ ರೀತಿಯ ಆಡಳಿತ ವ್ಯವಸ್ಥೆಯಂದೇ ಹೇಳಬಹುದು ಎಂದು ತಿಳಿಸುತ್ತಾರೆ.

ಅಮರೇಶ್ ಮಿಶ್ರ ರವರ **ಕಾರ್ಮಿಸ್ ಅಂಡ್ ಕೊಯಿರೀನ್ಸ್- ಎಮರ್ಜಿಂಗ್ ಥರ್ಡ್ ಫ್ಯಾಕ್ಟರ್** ಎಂಬ ಲೇಖನವು **ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಜನವರಿ ೪.೧೧.೧೯೯೭) ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಈ ಲೇಖನದಲ್ಲಿ ಉತ್ತರ ಪ್ರದೇಶದಲ್ಲಿ ನೆಲೆಸಿರುವ ಕಾರ್ಮಿಸ್ ಮತ್ತು ಕೊಯಿರೀನ್ ಸಮುದಾಯಗಳು ಸಂವಿಧಾನಾತ್ಮಕವಾಗಿ ಮೀಸಲಾತಿಯನ್ನು ಪಡೆಯುತ್ತಿವೆಯಾದರೂ ಅವು ನಿಜವಾಗಿ ಬಳಕೆಗೊಳ್ಳುವುದು ಕೇವಲ ವೋಟ್ ಬ್ಯಾಂಕ್‌ಗಳಾಗಿ, ಇಂದಿನವರೆಗೂ ಈ ಸಮುದಾಯಗಳು ಸಾಮಾಜಿಕವಾಗಿ ಮತ್ತು ರಾಜಕೀಯ ಸೌಲತ್ತುಗಳಿಂದ ದೂರವಾಗಿಯೇ ಉಳಿದಿವೆ. ಇಂದಿಗೂ ಈ ಸಮುದಾಯಗಳು ತಮ್ಮ ಸಾಂಪ್ರದಾಯಿಕ ಪದ್ಧತಿಗಳಂತೆಯೇ ಬದುಕುತ್ತಿವೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಮುಖ್ಯ ವಾಹಿನಿಯಲ್ಲಿರುವ ಜಾತಿಗಳು ಹಾಗೂ ತುಂಬಾ ಹಿಂದುಳಿದ ಇಂತಹ ಸಮುದಾಯಗಳನ್ನು ಒಂದೇ ರೇಖೆಯಲ್ಲಿ ತರುವ ಯಾವ ಪ್ರಯತ್ನಗಳು ಪ್ರಯೋಜನಗೊಂಡಿಲ್ಲ ವೆಂದೇ ಹೇಳಬಹುದು. ಇಲ್ಲಿ ಕೆಳವರ್ಗಗಳು ಇನ್ನು ತಳಕ್ಕೆ ಜಾರುತ್ತ ಸಾಗಿದರೆ ಮೇಲ್ವರ್ಗಗಳು ಇನ್ನೂ ಅಧಿಕವಾಗಿ ಮೇಲೆ ಸಾಗುತ್ತವೇ ಇವೆ. ಮತೀಯ ಮನೋಭಾವವನ್ನು ಹೊಂದಿದ ಜನ ಸಮುದಾಯಗಳು ಮುಸ್ಲೀಂ ವಿರೋಧಿ ಮತ್ತು ದಲಿತ ವಿರೋಧಿ ನೀತಿಗಳನ್ನು ಅನುಸರಿಸುತ್ತಲೇ ಇವೆ. ಬಂಡವಾಳಶಾಹಿ ಮೇಲ್ವರ್ಗಗಳು ಪ್ರಜಾಪ್ರಭುತ್ವ ನಿಯಮಗಳನ್ನೇ ಗಾಳಿಗೆ ತೂರುತ್ತವೆ. ಅವರು ಬಡವ ಮತ್ತು ಬಲ್ಲಿದವರ ಮಧ್ಯ ಇಬ್ಬಗೆಯ ನೀತಿಯನ್ನು ಅನುಸರಿಸುತ್ತವೆ.

ಐ.ಆರ್.ಡಿ.ಪಿ.ಸಾಲ, ಸ್ವಯಂ ಉದ್ಯೋಗ ಮುಂತಾದ ಯೋಜನೆಗಳು ಬಡವರಿಗೆ ಸಿಗದಂತೆ ನೋಡಿಕೊಳ್ಳುವುದರಲ್ಲಿ ಅವು ಯಶಸ್ವಿಯಾಗಿವೆ ಹೀಗೆ ಸಾಮಾಜಿಕ ಕೊಳಚೆ ನಿರ್ಮಿಸುವಲ್ಲಿ ಮತೀಯ ಶಕ್ತಿಗಳು ತೊಡಗಿರುವುದನ್ನು ಲೇಖಕರು ಗುರುತಿಸಿದ್ದಾರೆ.

ಇದೇ ಲೇಖಕರು (ಚಂದ್ರಶೇಖರ್ ಕೆ) ಕರ್ನಾಟಕ ವಿಕಾಸ (ಜೂನ್ ೨೦೦೮) ಪತ್ರಿಕೆಯಲ್ಲಿ ಗ್ರಾಮ ಸ್ವರಾಜ್ ಯೋಜನೆಯ ದೇಯೋದ್ದೇಶಗಳು ಹಾಗೂ ಅಭಿವೃದ್ಧಿ ಸಾಮರ್ಥ್ಯ ಸೂಚ್ಯಾಂಕಗಳು ಎನ್ನುವ ಲೇಖನದಲ್ಲಿ ಗ್ರಾಮ ಸ್ವರಾಜ್ ಯೋಜನೆಯ ದೇಯೋದ್ದೇಶಗಳನ್ನು ಕುರಿತು ಅಮೂಲಾಗ್ರವಾಗಿ ವಿಶ್ಲೇಷಿಸುವುದದೊಂದಿಗೆ ಆ ಯೋಜನೆಯ ಅನುಷ್ಠಾನದಿಂದಾಗಿ ಅಭಿವೃದ್ಧಿ ಸಾಮಾರ್ಥ್ಯ ಸೂಚ್ಯಾಂಕಗಳ ಅಳತೆಗಳೇನು ಎಂಬುದನ್ನು ನೋಡಲು ಪ್ರಯತ್ನಿಸಿದ್ದಾರೆ.

❑❑❑

ಅಧ್ಯಾಯ ಮೂರು

ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ ಮತ್ತು ಭೌಗೋಳಿಕತೆ

ಅಧ್ಯಾಯ ೩

ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ ಮತ್ತು ಭೌಗೋಳಿಕತೆ

ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೂ ಪೂರ್ವದಲ್ಲಿ ಕಲ್ಯಾಣ ಚಾಲುಕ್ಯರು, ತಲಕಾಡಿನ ಗಂಗರು, ಕಂಪಿಲರಾಯ ಕುಮಾರರಾಯರ ಸಿಂಘೇಯ ವಂಶಗಳ ಆಡಳಿತಕ್ಕೆ ಒಳಪಟ್ಟ ಪ್ರದೇಶ ಬಳ್ಳಾರಿಯಾಗಿತ್ತು. ಅಶೋಕನ ಶಿಲಾಶಾಸನಗಳು ಈ ಜಿಲ್ಲೆಯ ಸಿರಗುಪ್ಪ ತಾಲೂಕಿನ ನಿಟ್ಟೂರು ಗ್ರಾಮದ ಹೊರವಲಯದಲ್ಲಿ ಕಂಡು ಬರುತ್ತವೆ. ಅದಕ್ಕೂ ಪೂರ್ವದಲ್ಲಿ ಮಾನವನು ನೆಲೆ ನಿಂತಿರುವ ಕುರಿತು ಮಾಹಿತಿ ನೀಡುವ ಪ್ರಾಗೈತಿಹಾಸಿಕ ಕಾಲದ ಮಾನವನ ನೆಲೆಗಳು ಈ ಜಿಲ್ಲೆಯಲ್ಲಿ ಕಂಡು ಬರುತ್ತವೆ ಸಂಗನಕಲ್ಲು, ತೆಕ್ಕಲಕೋಟೆ, ದರೋಜಿ ಕರಡಿಧಾಮ ವಲಯ, ಹಂಪಿ, ತಿಮ್ಮಾಲಾಪುರ, ರಾಮಸಾಗರ, ವೆಂಕಟಾಪುರ, ಬುಕ್ಕಸಾಗರ, ಗಂಡೇಕೋಟಿ ಸುತ್ತಮುತ್ತಿನ ಬೆಟ್ಟಗಳಲ್ಲಿ ಹಳೇಶಿಲಾಯುಗ ಮತ್ತು ನೂತನ ಶಿಲಾಯುಗದ ಕುರುಹುಗಳು, ಕೆಮ್ಮಣ್ಣು ಮತ್ತು ಸುಣ್ಣದ ರೇಖಾ ಚಿತ್ರಗಳು ಹಾಗೂ ಬಂಡೆಗಳಲ್ಲಿ ಕೊರೆದ ಚಿತ್ರಗಳು ಕಂಡು ಬರುತ್ತವೆ.

ಕಲ್ಯಾಣಿ ಚಾಲುಕ್ಯರು ಕ್ರಿ. ಶ ೯೭೩ ರಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಿ ಬಳ್ಳಾರಿ ಪ್ರಾಂತ್ಯವನ್ನು ತಮ್ಮ ವಶಕ್ಕೆ ತೆಗೆದುಕೊಂಡ ವಿಚಾರವನ್ನು ತಿಳಿಸುವ ಶಿಲಾ ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ

ಹೇರಳವಾಗಿ ದೊರೆಯುತ್ತದೆ. ಈ ಶಾಸನಗಳನ್ನು ಆಧಾರಿಸಿ ಹೇಳಬಹುದಾದರೆ ಕ್ರಿ.ಶ. ೧೦೧೪ ರ ಗೋಣಿಹಾಳಿನ (ಗೋನಾಳ್) ಶಾಸನವು ಶ್ರೀಮಂತನಾದ ಇರಿವ ನೊಳಂಬವಾಡಿ ರಾಜನು ಕಂಪಲಿಯನ್ನು ಕೇಂದ್ರವಾಗಿರಿಸಿಕೊಂಡು ಈ ಪ್ರದೇಶದ ಆಳ್ವಿಕೆಯನ್ನು ನಡೆಸುತ್ತಿದ್ದನು, ಮುಂದೆ ಕಲ್ಯಾಣಿ ಚಾಲುಕ್ಯರ ದೊರೆ ಜಗದೇಕಮಲ್ಲ ಜಯಸಿಂಹದೇವನ ಸಾಮಂತನಾದ ನೊಳಂಬ ಪಲ್ಲವ ಪೆರ್ಮಾಡಿ ಎಂಬುವವನು ಈ ಪ್ರದೇಶವನ್ನು ಆಳಿದ ಕುರಿತು ಕ್ರಿ ಶ ೧೦೧೮ ರ ಶಾಸನದ ಮೂಲಕ ತಿಳಿಯುತ್ತದೆ.

ಕ್ರಿ.ಶ. ೧೦೪೫ರ ಸುಮಾರಿಗೆ ಚಾಲುಕ್ಯರ ಒಂದನೇ ಸೋಮೇಶ್ವರನು ಹಡಗಲಿಯನ್ನು ತನ್ನ ನೆಲೆಯಾಗಿಸಿಕೊಂಡಿದ್ದನು ಅವನು ಚೋಳರ ರಾಜಧಾನಿಯಾದ ನೊಳಂಬವಾಡಿ ಮೇಲೆ ದಾಳಿ ನಡೆಸಿದನು ಹಾಗೂ ಕಂಪಲಿಯನ್ನು ತನ್ನ ವಶಕ್ಕೆ ತೆಗೆದುಕೊಂಡನೆಂದು ತಿಳಿದುಬರುತ್ತದೆ.

ಕ್ರಿ.ಶ. ೧೦೫೪ ರ ಸುಮಾರಿಗೆ ಕಲ್ಯಾಣ ಚಾಲುಕ್ಯರ ಅರಸ ಒಂದನೇ ಸೋಮೇಶ್ವರ ಬಳ್ಳಾರಿ ಪ್ರದೇಶವನ್ನು ಆಳಿದನೆಂದು ತಿಳಿದುಬರುತ್ತದೆ (ಎಫಿಗ್ರಾಫಿಕಾ ಕರ್ನಾಟಕ ೧೨) ಇವರ ತುರವಾಯ ಕೆಲವು ಕಾಲ ಕುಮ್ಮಟ ದುರ್ಗವನ್ನು ರಾಜಧಾನಿಯಾಗಿಸಿಕೊಂಡು ಹೊಯ್ಸಳ ಅರಸರು ರಾಜ್ಯಭಾರ ಮಾಡಿದುದಾಗಿ ತಿಳಿದು ಬರುತ್ತದೆ (ಸಾವಿತ್ರಿ: ೨೦೦೨, ೦೫)

ಕ್ರಿ.ಶ. ೧೨೮೦ ರಿಂದ ೧೩೦೦ ರವರೆಗೆ ಕಮ್ಮಟವನ್ನು ರಾಜಧಾನಿಯಾಗಿಸಿಕೊಂಡು ಮುಮ್ಮಡಿ ಸಿಂಘೇಯನು ಕಂಪಲಿ ಮತ್ತು ಅದರ ಸುತ್ತ ಮುತ್ತಿನ ಪ್ರದೇಶಗಳನ್ನು ಆಳಿದನು. ಮುಮ್ಮಡಿ ಸಿಂಘೇಯನ ಮಗ ಕಂಪಿಲ ಹಾಗೂ ಅವನ ಮಗ ಕುಮಾರರಾಮರು ಈ ಪ್ರದೇಶಗಳನ್ನು ಆಳಿದ ಕುರಿತು ಶಾಸನಾಧಾರಗಳು ದೊರೆಯುತ್ತವೆ. ಕಂಪಿಲ ಮತ್ತು ಕುಮಾರರಾಮರು ನಾಯಕ ಸಮುದಾಯದವರಾಗಿದ್ದು ಉತ್ತರ ಪ್ರದೇಶದಿಂದ ದಕ್ಷಿಣ ರಾಜ್ಯಗಳ ಮೇಲೆ ನಿರಂತರವಾಗಿ ದಂಡೆತ್ತಿ ಬರುತ್ತಿದ್ದ ಇಸ್ಲಾಂ ಅರಸರನ್ನು ಎದುರಿಸಿ ಹಿಮ್ಮೆಟ್ಟಿಸಿದ ಕೀರ್ತಿ ಕಂಪಿಲ ಹಾಗೂ ಕುಮಾರರಾಮರಿಗೆ ಸಲ್ಲುತ್ತದೆ. ಆದರೆ ಕೊನೆಗೆ ದೆಹಲಿ ಸುಲ್ತಾನರಿಂದಾಗಿ ಪರಾಭವಗೊಂಡು ಅವರ ಸೈನ್ಯದ ಕೈಯ್ಯಲ್ಲಿ ಈ ತಂದೆ ಮಕ್ಕಳು ಅವಸಾನಗೊಳ್ಳುತ್ತಾರೆ.

ಈ ಪ್ರದೇಶದಲ್ಲಿ ಕಂಪಿಲನ ಆಡಳಿತದ ತರುವಾಯ ವಿಜಯನಗರದ ಸ್ಥಾಪನೆಯಾಗುತ್ತದೆ ಕಂಪಿಲನ ಹತ್ತಿರದ ಸಂಬಂಧಿಗಳಾದ ಹರಿಹರ ಮತ್ತು ಬುಕ್ಕ ಸಹೋದರರು ವಿದ್ಯಾರಣ್ಯರ

ಮಾರ್ಗದರ್ಶನದಲ್ಲಿ ವಿಜಯನಗರವನ್ನು ಸ್ಥಾಪಿಸುತ್ತಾರೆ. ವಿಜಯನಗರ ಸ್ಥಾಪನೆಯ ತರುವಾಯ ದಕ್ಷಿಣ ಪ್ರಾಂತ್ಯದ ಎಲ್ಲಾ ಪ್ರದೇಶಗಳಿಗೆ ಒಂದು ರೀತಿಯ ರಕ್ಷಣೆ ದೊರೆಯುತ್ತದೆ. ವಿಜಯನಗರದ ಅರಸರು ತಮ್ಮ ಸುತ್ತಮುತ್ತಲಿದ್ದ ಚಿಕ್ಕ ಪುಟ್ಟ ಸಂಸ್ಥಾನಗಳು ಮತ್ತು ಪಾಳಯಪಟ್ಟುಗಳನ್ನು ತಮ್ಮ ರಾಜ್ಯದಲ್ಲಿ ವಿಲೀನಗೊಳಿಸಿಕೊಂಡು ಅವುಗಳಿಗೆ ರಕ್ಷಣೆ ಕೊಡುವುದರೊಂದಿಗೆ ತಮ್ಮ ಸಾಮ್ರಾಜ್ಯ ವ್ಯಾಪಕವಾಗಿ ವಿಸ್ತರಿಸುತ್ತಾ ಸಾಗುತ್ತಾರೆ. ತುಳು,ಸಾಳವ, ಅರವೀಡು, ಸಂಗಮ ವಂಶಗಳು ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯನ್ನು ಮಾಡುತ್ತವೆ. ವಿಜಯನಗರದ ಕೊನೆಯ ಪ್ರಭಲ ಅರಸನಾದ ಅಳಿಯ ರಾಮರಾಯನು ರಕ್ಕಸ ತಂಗಡಗಿ ಯುದ್ಧದಲ್ಲಿ ಬಿಜಾಪುರ ಸುಲ್ತಾನರಿಂದ ಹತನಾದ ತರುವಾಯ ವಿಜಯನಗರ ಸಾಮ್ರಾಜ್ಯವು ಅವನತಿಯ ಹಾದಿ ಹಿಡಿಯುತ್ತದೆ. ಅಳಿಯ ರಾಮರಾಯನ ಅವನತಿಯ ತರುವಾಯ ಪಟ್ಟಕ್ಕೆ ಬಂದ ವಿಜಯನಗರ ಅರಸ ವೆಂಕಟಪತಿದೇವನು ಬಳ್ಳಾರಿ ಪ್ರಾಂತ್ಯವನ್ನು ತ್ಯಜಿಸಿ ಪೆನುಗೊಂಡೆ (೧೫೮೬-೧೬೧೪)ಗೆ ಸೇರಿದ ತರುವಾಯ ಬಳ್ಳಾರಿ ಪ್ರಾಂತ್ಯವನ್ನು ಹರಪನಹಳ್ಳಿಯ ಪಾಳೆಗಾರರು ತಮ್ಮ ವಶಕ್ಕೆ ತೆಗೆದುಕೊಂಡರು. ವಿಜಯನಗರ ಪತನಾನಂತರ ಜರಮಲೆ, ಉಚ್ಚಂಗಿದುರ್ಗ, ಹರಪನಹಳ್ಳಿ, ತಿಮ್ಮಲಾಪುರ ಮುಂತಾದ ಪಾಳಯಪಟ್ಟುಗಳು ಸ್ವತಂತ್ರವಾದವು ಮತ್ತು ಈ ಪಾಳಯಪಟ್ಟುಗಳ ಅಧಿಕಾರವನ್ನು ಬಹುತೇಕ ನಾಯಕ ಸಮುದಾಯದವರೇ ವಹಿಸಿಕೊಂಡರು. ನಾಯಕ ಸಮುದಾಯದ ಹರಪನಹಳ್ಳಿ ಪಾಳೆಯಗಾರರಿಂದ ಕ್ರಿ.ಶ. ೧೬೭೭-೭೮ರ ಸುಮಾರಿಗೆ ಮರಾಠರ ಅರಸು ಶಿವಾಜಿಯು ಬಳ್ಳಾರಿ ಪ್ರಾಂತ್ಯವನ್ನು ವಶಪಡಿಸಿಕೊಂಡನು. ತರುವಾಯ ಔರಂಗಜೇಬನು (೧೬೮೦) ಬಳ್ಳಾರಿ ಪ್ರಾಂತವನ್ನು ಮರಾಠರ ಹಿಡಿತವನ್ನು ತಪ್ಪಿಸಿ ತನ್ನ ಹಿಡಿತದಲ್ಲಿರಿಸಿಕೊಂಡನು.

೧೭೦೭ರಲ್ಲಿ ಹೈದರಾಬಾದಿನ ನಿಜಾಮನು ಬಳ್ಳಾರಿ ಪ್ರಾಂತವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಪಟ್ಟನಾದರೂ ಅದು ಸಾಧ್ಯವಾಗದೆ ಅವನಿಗೆ ತುಂಗಾಭದ್ರಾ ನದಿಯಾಚೆಗಿನ ಪ್ರದೇಶದ ಮೇಲೆ ಮಾತ್ರ ಹಕ್ಕು ಸ್ಥಾಪನೆ ಮಾಡಲು ಸಾಧ್ಯವಾಯಿತು.

೧೭೬೧ರ ಸುಮಾರಿಗೆ ಹೈದರಾಲಿಯು ಹರಪನಹಳ್ಳಿ ಹಾಗೂ ರಾಯದುರ್ಗ ಸಂಸ್ಥಾನಗಳಿಗೆ ದಂಡೆತ್ತಿ ಬಂದು ಅಲ್ಲಿಯ ಸ್ಥಳೀಯ ಪಾಳೆಯಗಾರರಿಂದ ಕಪ್ಪ-ಕಾಣಿಕೆ ಪಡೆದುಕೊಳ್ಳುತ್ತಾನೆ (ಬಳ್ಳಾರಿ ಜಿಲ್ಲಾ ಗೆಜೆಟಿಯರ ೧೯೦೪: ಪು ೪೫).

೧೭೭೨ರ ಸುಮಾರಿಗೆ ಈ ಪ್ರದೇಶ ಸಂಪೂರ್ಣವಾಗಿ ಹೈದರನ ವಶವಾಗಿ ಅವನ ಆಳ್ವಿಕೆ ಪ್ರಾರಂಭಗೊಂಡಿತು. ಬಳ್ಳಾರಿ ನಗರದಲ್ಲಿರುವ ಕೋಟೆಯನ್ನು ಹೈದರನೇ ನಿರ್ಮಿಸಿದ ಕುರಿತು ದಾಖಲೆಗಳು ದೊರೆಯುತ್ತವೆ. ಹೈದರನ ತರುವಾಯ ಅವನ ಮಗ ಟಿಪ್ಪುಸುಲ್ತಾನನು ತನ್ನ ಕೊನೆಗಾಲದವರೆಗೂ ಬಳ್ಳಾರಿ ಪ್ರಾಂತ್ಯದ ಮೇಲೆ ಹಿಡಿತವನ್ನು ಹೊಂದಿದ್ದನು.

೧೭೯೯ರಲ್ಲಿ ನಡೆದ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಸೋಲುತ್ತಾನೆ. ಅವನ ತರವಾಯ ಮೈಸೂರು ಪ್ರದೇಶ ಹಾಗೂ ಬಳ್ಳಾರಿ, ಉತ್ತರ ಕನ್ನಡ, ದಕ್ಷಿಣಕನ್ನಡ ಜಿಲ್ಲೆಗಳು ಇಂಗ್ಲೀಷ್‌ರಿಗೆ ವಶವಾಗುತ್ತವೆ.

ಆಗಿನ ಗವರ್ನರ್ ಆಗಿದ್ದ ಲಾರ್ಡ್ ಆರ್ಥರ್ ವೆಲ್ಲೆಸ್ಸಿಯ ಸಹಾಯಕ ಸೈನ್ಯ ಪದ್ಧತಿಗೆ ಸಮ್ಮತಿಸಿ ಕ್ರಿಶ. ೧೮೦೦ರಲ್ಲಿ ಹೈದರಾಬಾದಿನ ನಿಜಾಮನು ಬ್ರಿಟೀಷರ ಮಾಂಡಲಿಕನಾಗುತ್ತಾನೆ. ಹೀಗಾಗಿ ನಿಜಾಮರ ವಶದಲ್ಲಿದ್ದ ಕನ್ನಡ ಜಿಲ್ಲೆಗಳು ಬ್ರಿಟೀಷರ ಆಧೀನಕ್ಕೆ ಸುಲಭವಾಗಿ ಒಳಪಡುವಂತಾಯಿತು. (ವಿರೂಪಾಕ್ಷಿ ಪೂಜಾರಿಹಳ್ಳಿ, ಬಳ್ಳಾರಿ ಜಿಲ್ಲೆಯಲ್ಲಿನ ಕಲೆಕ್ಟರ್‌ಗಳ ಆಳ್ವಿಕೆ, ಕ.ವಿ.ವಿ. ಯೋಜನೆ, ಅಪ್ರಕಟಿತ)

ಕ್ರಿಶ. ೧೮೦೦ ಡಿಸೆಂಬರನಲ್ಲಿ ನಿಜಾಮನು ತನ್ನ ಆಡಳಿತಕ್ಕೆ ಒಳಪಟ್ಟಿದ್ದ ಬಳ್ಳಾರಿ ಪ್ರದೇಶವನ್ನು ಬ್ರಿಟೀಷರಿಗೆ ದತ್ತಿಯಾಗಿ ಬಿಟ್ಟುಕೊಟ್ಟನು. ಆಗಿನಿಂದ ಈ ಪ್ರದೇಶವನ್ನು ದತ್ತಿಮಂಡಲ (ಬಳ್ಳಾರಿ, ಕಡಪ, ಕರ್ನೂಲು) ವೆಂದು ಕರೆಯಲಾಯಿತು. ಕ್ರಿಶ ೧೮೦೦ ರಲ್ಲಿ ನಿಜಾಮನಿಂದ ದೊರೆತ ಬಳ್ಳಾರಿ ಪ್ರಾಂತ್ಯವು ನೇರವಾಗಿ ಬ್ರಿಟೀಷರ ಆಡಳಿತಕ್ಕೆ ಒಳಪಟ್ಟಿತು "(ಬಳ್ಳಾರಿ ಜಿಲ್ಲಾ ಸ್ವಾತಂತ್ರ್ಯ ಹೋರಾಟ ಕ.ವಿ.ವಿ. ಹಂಪಿ ೧೯೯೮, ೨೧) ನಂತರ ಈ ಪ್ರದೇಶ ಮುಂಬೈ ಪ್ರಾಂತಾಡಳಿತಕ್ಕೆ ಒಳಪಟ್ಟು ಮುಂಬೈ ಕರ್ನಾಟಕವೆಂಬ ಹೆಸರಿಗೆ ಒಳಗಾಯಿತು. ಕ್ರಿಶ ೧೮೧೮ ಸುಮಾರಿಗೆ ಈ ಪ್ರದೇಶವು ಕೆಲವು ಕಾಲ ಮರಾಠ ಪೇಶ್ವೆಗಳ ವಶದಲ್ಲಿಯೂ ಇದ್ದುದಾಗಿ ತಿಳಿದುಬರುತ್ತದೆ.

ಬಳ್ಳಾರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಳ್ಳೆಗಾಲ ಮುಂತಾದ ಕೆಲವು ಕನ್ನಡ ಪ್ರದೇಶಗಳು ಬ್ರಿಟೀಷರ ನೇರ ಆಡಳಿತಕ್ಕೆ ಒಳಪಟ್ಟು ಮದ್ರಾಸ್ ಪ್ರಾಂತಕ್ಕೆ ಸೇರಿಸಲ್ಪಟ್ಟವು.

ಬೆಳಗಾವಿ, ಬಿಜಾಪುರ, ಕೊಡಗು, ಉತ್ತರ ಕನ್ನಡದ ಕೆಲವು ಭಾಗಗಳು ಹಾಗೂ ಧಾರವಾಡ ಜಿಲ್ಲೆ ಮುಂಬೈ ಪ್ರಾಂತಕ್ಕೆ ಸೇರಿಸಲ್ಪಟ್ಟವು (ಸ್ವಾತಂತ್ರೋದಯದ ಮೈಲಿಗಲ್ಲುಗಳು; ಲೇಖನ–

ಸೂರ್ಯನಾಥ ಕಾಮತ್ (ಸಂ) ಎಸ್. ಆರ್. ರಾಮಸ್ವಾಮಿ; ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ, ೧೯೯೮-೧೯೫)

ಭಾರತದಾದ್ಯಂತ ವ್ಯಾಪಿಸಿದ್ದ ಸ್ವಾತಂತ್ರ್ಯ ಹೋರಾಟದ ಕಾವು ಬಳ್ಳಾರಿಯ ಮೇಲೂ ಪರಿಣಾಮ ಉಂಟುಮಾಡಿತು. ಆದರೆ ಬಳ್ಳಾರಿ ಪ್ರದೇಶದಲ್ಲಿ ನಡೆದ ಸ್ವಾತಂತ್ರ ಹೋರಾಟ ಚಳುವಳಿಯಲ್ಲಿ ಕೇವಲ ಮೇಲ್ವರ್ಗದವರೇ ಪಾಲ್ಗೊಂಡಂತೆ ಕಂಡು ಬರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು ಕೋಲಾಚಲಂ ವೆಂಕಟರಾವ್, ಕಲ್ಲೂರು ಸುಬ್ಬಾರಾವ್, ನೇತ್ರಹಳ್ಳಿ ಸಂಜೀವರಾವ್, ವೆಂಕಟರಮಣಾಚಾರ್ಯ, ಬಾದನಹಟ್ಟಿ ವೆಂಕೋಬರಾಯರು, ಟೀಕೂರು ನಾರಾಯಣ ಶಾಸ್ತ್ರಿಗಳು, ವ್ಯಾಂಗ್ಲಿ ಭಿಮಸೇನರಾವ್, ಬಳ್ಳಾರಿ ರಾಘವ, ಪಂಡಿತ ತಾರಾನಾಥ ಮುಂತಾದ ಮೇಲ್ವರ್ಗದವರಾಗಿದ್ದರು.

೩.೧. ಬಳ್ಳಾರಿ ಜಿಲ್ಲೆ ಹುಟ್ಟು ಮತ್ತು ಮಹತ್ವ

ಈ ಹಿಂದೆ ನೋಡಿದಂತೆ ಬಳ್ಳಾರಿಗೆ ತುಂಬಾ ಪ್ರಾಚೀನ ಇತಿಹಾಸವಿದೆ ಪ್ರಾಗೈತಿಹಾಸಿಕ ನೆಲೆಗಳು ಇಲ್ಲಿ ಕಂಡುಬರುತ್ತವೆ. ಬಳ್ಳಾರಿಯ ಸಂಗನಕಲ್ಲಿನಲ್ಲಿ ಪ್ರಾಗೈತಿಹಾಸಿಕ ಕಾಲದ ಶಿಲಾ ಆಯುಧಗಳ ಕಾರ್ಯಗಾರವಿತ್ತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ ಬಳ್ಳಾರಿಗೆ ಬಳ್ಳಾರಿ ಎಂದು ಹೆಸರು ಬರಲು ಆ ಊರಿನ ಆದಿದೈವ ಬಳ್ಳಾರಿ ದುರ್ಗಮ್ಮನೇ ಕಾರಣವೆಂಬ ವಾದವೂ ಇದೆ. ಕ್ರಿಶ ೧೨ ನೇ ಶತಮಾನದಲ್ಲಿ ರಚಿತಗೊಂಡ ಯಶೋಧರ ಚರಿತೆಯಲ್ಲಿ ಬಳರಿ ಎಂಬ ಪದ ಪ್ರಯೋಗಗೊಂಡಿದೆ ಬಳರಿ ಎಂದರೆ ದೇವತೆ, ಸ್ತ್ರೀದೈವ ಎಂಬ ಅರ್ಥಗಳಿವೆ. ಬಳ್ಳಾರಿಯ ಆದಿ ದೈವ ಬಳರಿ (ದುರ್ಗಮ್ಮ)ಯಿಂದಾಗಿಯೇ ಆ ಊರಿಗೆ ಬಳ್ಳಾರಿ ಎಂಬ ಹೆಸರು ಬಂದಿದೆ ಎಂಬ ವಾದವೂ ಇದೆ. ಈ ನಗರ ಕ್ರಿಶ ೧೨ನೇ ಶತಮಾನಕ್ಕಾಗಲೇ ಅಸ್ತಿತ್ವದಲ್ಲಿತ್ತೆಂಬ ವಾದವಿದೆ. ಬೈಲೂರಿನಲ್ಲಿ ಸಿಕ್ಕ ಶಾಸನ ಕ್ರಿ.ಶ.೧೧೩೧ರದಾಗಿದ್ದು ಆ ಶಾಸನದಲ್ಲಿ ಬಳ್ಳಾರಿ ಪ್ರದೇಶ ಉಲ್ಲೇಖ ಗೊಂಡಿರುವುದನ್ನು ಕಾಣಬಹುದಾಗಿದೆ. ನಂತರ ಸಿಂಧೀಗೇರಿ, ಕೋಳೂರು, ಕುರುಗೋಡುಗಳಲ್ಲಿ ದೊರತ ಶಾಸನಗಳಲ್ಲಿ ಬಳ್ಳಾರಿ ಎಂಬ ಪದ ಬಳಕೆಗೊಂಡಿರುವುದನ್ನು ಕಾಣಬಹುದಾಗಿದೆ. ಹೊಯ್ಸಳರ ಮೂರು ಶಾಸನಗಳು (ಕ್ರಿ.ಶ.೧೧೬೧ ಬೇಲೂರು ಶಾಸನ ೧೯೩) ಕ್ರಿಶ ೧೧೭೮ ರ ನಾಗಮಂಗಲ ಶಾಸನ, ಕ್ರಿ.ಶ.೧೧೮೩ ರ ಬೇಲೂರು ಶಾಸನ ೧೩೭) ಶಾಸನಗಳಲ್ಲಿ ಬಳ್ಳಾರಿ

ಪದ ಬಳಕೆಗೊಂಡಿರುವುದನ್ನು ಕಾಣಬಹುದಾಗಿದೆ (ಗೆಜಿಟೆಡ್ ಆಫ್ ಇಂಡಿಯಾ; ಮೈಸೂರು ಸ್ಟೇಟ್; ಬಳ್ಳಾರಿ ಜಿಲ್ಲೆ; ಸರ್ಕಾರಿ ಮುದ್ರಣಾಲಯ; ಬೆಂಗಳೂರು ೧೯೭೨)

ಬ್ರಿಟೀಷ್ ಭಾರತದ ಕಾಲದಲ್ಲಿ ಆಗಿನ ಹಳೇ ಮದ್ರಾಸ್ ಪ್ರಾಂತಕ್ಕೆ ಬಳ್ಳಾರಿ ಸೇರ್ಪಡೆಗೊಂಡಿತ್ತು ಕ್ರಿ.ಶ. ೧೮೦೦ರಲ್ಲಿ ನಿಜಾಮರಿಂದ ಬ್ರಿಟೀಷರಿಗೆ ಕಡಪ ಕರ್ನೂಲು ಅನಂತಪುರ ಜಿಲ್ಲೆ ಬಳ್ಳಾರಿಯನ್ನೊಳಗೊಂಡು ಮದ್ರಾಸ್ ಪ್ರೆಸಿಡೆನ್ಸಿಯ ದತ್ತಿ ಮಂಡಲವೆಂದು ಘೋಷಣೆಗೊಂಡಿದ್ದವು.

ಕ್ರಿ.ಶ. ೧೮೦೦ರಲ್ಲಿ ಬಳ್ಳಾರಿ ಜಿಲ್ಲೆಗೆ ಪ್ರಪ್ರಥಮ ಕಲೆಕ್ಟರಾಗಿ ಥಾಮಸ್ ಮುನ್ರೊ ನೇಮಕ ಗೊಂಡಿದ್ದರು. ಭಾಷಾವಾರು ಪ್ರಾಂತಗಳಾಗಿ ವಿಂಗಡಣೆಗೊಳ್ಳುವವರೆಗೂ ಬಳ್ಳಾರಿಯು ಮದ್ರಾಸ್ ಪ್ರೆಸಿಡೆನ್ಸಿಯಲ್ಲಿಯೇ ಇದ್ದಿತು. ಸ್ವಾತಂತ್ರ್ಯಾ ನಂತರ ಅಕ್ಟೋಬರ್ ೧, ೧೯೫೩ರಲ್ಲಿ ಭಾಷಾವಾರು ಪ್ರಾಂತಗಳು ವಿಂಗಡಣೆಯಾದ ತರುವಾಯ ಬಳ್ಳಾರಿಯು ಮೈಸೂರು ರಾಜ್ಯಕ್ಕೆ ಸೇರಿಸಲ್ಪಟ್ಟಿತು. ಬ್ರಿಟೀಷರು ಬಳ್ಳಾರಿಯನ್ನು ಸುಮಾರು ಒಂದುನೂರ ನಲವತ್ತೇಳು ವರ್ಷಗಳಷ್ಟು ದೀರ್ಘವಾಗಿ ಆಳಿದರು.

ಭಾರತ ಸ್ವತಂತ್ರವಾಗಿ ಹಲವು ವರ್ಷಗಳು ಕಳೆದರೂ ಭಾರತದಲ್ಲಿ ಇನ್ನೂ ಮಹಿಳೆಯರಿಗೆ ಪರಿಪೂರ್ಣವಾದ ಸ್ವಾತಂತ್ರ್ಯ ಸಿಕ್ಕಿರಲಿಲ್ಲ. ಅಷ್ಟೇಕೆ ಮಹಿಳಾ ಮೀಸಲಾತಿ ಕಾನೂನು ಜಾರಿಗೆ ಬಂದಿರಲಿಲ್ಲ. ಅಂತಹ ಕಾಲದಲ್ಲಿ ಮಹಿಳೆಯೊಬ್ಬರು ಬಳ್ಳಾರಿ ಪ್ರಾಂತದಿಂದ ಚುನಾವಣೆಯಲ್ಲಿ ಗೆದ್ದು ಮದ್ರಾಸ್ ಶಾಸನ ಸಭೆಯ ಸದಸ್ಯರಾದುದು ಒಂದು ವಿಶೇಷವೆಂದೇ ಹೇಳಬಹುದು

ಗೊರ್ಲೆ ಮನೆತನದ ಗೊರ್ಲೆರುದ್ರಮ್ಮನವರನ್ನು ಚುನಾವಣೆಗೆ ನಿಲ್ಲಿಸಲು ಈ ಪ್ರಾಂತದ ಬ್ರಾಹ್ಮಣೇತರ ಮುಖ್ಯ ಜಾತಿಯಾದ ಲಿಂಗಾಯಿತ ಸಮುದಾಯ ಅಪೇಕ್ಷೆಪಟ್ಟಿತು. ಆದರೆ ಗೊರ್ಲೆ ರುದ್ರಮ್ಮ ಚುನಾವಣೆಗೆ ನಿಲ್ಲಲು ಹಿಂಜರಿದುದರಿಂದ ಆಗ ಜಿಲ್ಲಾ ಕಾಂಗ್ರೇಸ್ ಅಧ್ಯಕ್ಷರಾದ ವಿ.ಬಿ. ಕೇಶವರಾವ್ ರವರ ಪತ್ನಿ ಜಯಲಕ್ಷ್ಮಿಯವರ ವಿರುದ್ಧ ಅಲ್ಲಂ ಸುಮಂಗಳಮ್ಮನವರನ್ನು ಪ್ರತಿಸ್ಪರ್ಧಿಯಾಗಿ ನಿಲ್ಲಿಸಲಾಯಿತು. ಬ್ರಾಹ್ಮಣ ವರ್ಗದ ಜಯಲಕ್ಷ್ಮಿಯವರನ್ನು ಹಿಂದೆ ಹಾಕಿ ಅಲ್ಲಂ ಸುಮಂಗಳಮ್ಮನವರು ಜಯಶಾಲಿಗಳಾದರು. ಕಾಂಗ್ರೇಸ್ ಅಭ್ಯರ್ಥಿಯನ್ನೇ ಸೋಲಿಸಿದ ಅಲ್ಲಂ ಸುಮಂಗಳಮ್ಮನವರನ್ನು ನೋಡಲು ಆಗಿನ ಪ್ರಧಾನಿಯಾಗಿದ್ದ ಜವಹಾರ್‌ಲಾಲ್ ನೆಹರೂರವರೇ ಸ್ವತಃ ಬಳ್ಳಾರಿಗೆ ಬಂದಿದ್ದರಂತೆ. ಮದ್ರಾಸ್ ಶಾಸನ ಸಭೆಗೆ ಮಹಿಳಾ ಅಭ್ಯರ್ಥಿಯಾಗಿ ಅಲ್ಲಂ ಸುಮಂಗಳಮ್ಮನವರು ಕುರುಗೋಡು

ಕ್ಷೇತ್ರದಿಂದ ಆಯ್ಕೆಯಾದುದು ತಿಳಿದು ಬರುತ್ತದೆ (ರುಮಾಲೆ, ಮೃತ್ಯಂಜಯ; ಅಲ್ಲಂ ಸುಮಂಗಳಮ್ಮ; ಗದಗ, ೧೯೯೯; ೪೯)

ಆದರೆ ಮೀಸಲಾತಿ ಕಾಯ್ದೆ ಜಾರಿಗೆ ಬರುವ ಪೂರ್ವದಲ್ಲಿ ಯಾವುದೇ ಕೆಳವರ್ಗ ಹಾಗೂ ಅಲ್ಪ ಸಂಖ್ಯಾತ ವರ್ಗದ ಮಹಿಳೆಯರಲ್ಲಿ ಒಬ್ಬೇ ಒಬ್ಬ ಮಹಿಳೆಯೂ ಯಾವುದೇ ರಾಜಕೀಯ ಸ್ಥಾನಗಳಿಗೆ ಸ್ಪರ್ಧಿಸಲು ಸಾಧ್ಯವಾಗದೇ ಹೋದುದು ದುರಂತವೆಂದೇ ಹೇಳಬಹುದು.

३.೨. ಬಳ್ಳಾರಿ ಜಿಲ್ಲೆ-ಭೌಗೋಳಿಕತೆ

ಕರ್ನಾಟಕದ ಒಟ್ಟು ಮೂವತ್ತು ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆಯೂ ಒಂದು. ಐತಿಹಾಸಿಕವಾಗಿ ತುಂಬಾ ಪ್ರಸಿದ್ಧಿಯನ್ನು ಪಡೆದ ವಿಜಯನಗರ ಸಾಮಾಜ್ಯದ ಕೇಂದ್ರ ಸ್ಥಾನವನ್ನು ಹೊಂದಿದ್ದ ಬಳ್ಳಾರಿ ಜಿಲ್ಲೆಯು ಕರ್ನಾಟಕದ ಮಧ್ಯ ಭಾಗದಲ್ಲಿದೆ. ಈ ಜಿಲ್ಲೆಯು ನೈರುತ್ಯ ಈಶಾನ್ಯ ದಿಕ್ಕುಗಳ ನಡುವೆ ಚಾಚಿಕೊಂಡಿದೆ. ಪ್ರಸ್ತುತ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯನ್ನು ಗಮನಿಸಿದಾಗ ನೈರುತ್ಯ ದಿಕ್ಕಿನ ಹಗರಿ ಬೊಮ್ಮನಹಳ್ಳಿ ತಾಲೂಕಿನ ಕಲ್ಲಹಳ್ಳಿ ಗ್ರಾಮದಿಂದ ಈಶಾನ್ಯ ದಿಕ್ಕಿನಲ್ಲಿರುವ ಸಿರಗುಪ್ಪ ತಾಲೂಕಿನ ಸಂತೆ ಕೂಡ್ಲೂರು ಗ್ರಾಮದವರೆಗೆ ಒಟ್ಟು ೧೮೭ ಕಿ.ಮೀ ಉದ್ದವಾಗಿದೆ ಹಾಗೂ ಪೂರ್ವ ದಿಕ್ಕಿನಿಂದ ಪಶ್ಚಿಮಕ್ಕೆ ಬಳ್ಳಾರಿ ತಾಲೂಕಿನ ಕಾರೇಕಲ್ ವೀರಾಪುರ ಗ್ರಾಮದಿಂದ ಹಡಗಲಿ ತಾಲೂಕಿನ ಹಿರೇಬನ್ನಟ್ಟಿ ಗ್ರಾಮದವರೆಗೆ ೧೬೧ ಕಿ.ಮೀ. ಅಗಲವಾಗಿ ವ್ಯಾಪಿಸಿಕೊಂಡಿದೆ.

೧೯೯೭ರಲ್ಲಿ ಕರ್ನಾಟಕ ರಾಜ್ಯವು ಜಿಲ್ಲೆಗಳನ್ನು ಮರುವಿಂಗಡಿಸಿದಾಗ ಹರಪನಹಳ್ಳಿಯು ದಾವಣಗೆರೆ ಜಿಲ್ಲೆಯ ಪಾಲಾಯಿತು. ಹೀಗಾಗಿ ಪ್ರಸ್ತುತ ಬಳ್ಳಾರಿ ಜಿಲ್ಲೆ ಏಳು ತಾಲೂಕುಗಳನ್ನು ಮಾತ್ರ ಹೊಂದಿದೆ. ಪ್ರಸ್ತುತ ಜಿಲ್ಲೆಯು ಭೌಗೋಳಿಕ ವಿಸ್ತೀರ್ಣವು ೮೪೪೭.೦೦ ಚ.ಕಿ. ಮೀಟರ್‌ಗಳಷ್ಟಿದೆ. ಇದು ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ. ೪.೪೦ ರಷ್ಟು ಪಾಲನ್ನು ಹೊಂದಿದೆ. ಅಂದರೆ ರಾಜ್ಯದ ಒಟ್ಟು ಜಿಲ್ಲೆಗಳಿಗೆ ಹೋಲಿಸಿದರೆ ಇದು ವಿಸ್ತೀರ್ಣದಲ್ಲಿ ಎಂಟನೇ ಸ್ಥಾನದಲ್ಲಿದೆ.

ಉತ್ತರಕ್ಕೆ ಕೊಪ್ಪಳ ಜಿಲ್ಲೆ, ದಕ್ಷಿಣಕ್ಕೆ ಚಿತ್ರದುರ್ಗ ಜಿಲ್ಲೆ, ಪಶ್ಚಿಮಕ್ಕೆ ಗದಗ ಜಿಲ್ಲೆ, ಪೂರ್ವಕ್ಕೆ ಆಂಧ್ರ ಪ್ರದೇಶಗಳಿಂದ ಬಳ್ಳಾರಿ ಜಿಲ್ಲೆಯು ಸುತ್ತುವರೆದಿದೆ. ಈ ಜಿಲ್ಲೆಯ ಪೂರ್ವಭಾಗವು ಸಮತಟ್ಟಾದ ಭೂಮಿಯನ್ನು ಹೊಂದಿದ್ದು ಕೃಷಿಗೆ ಅನುಕೂಲಕರವಾಗಿದೆ. ಜಿಲ್ಲೆಯು ಉಷ್ಣ ಹವಾಮಾನದಿಂದ ಕೂಡಿದೆ. ಈ ಜಿಲ್ಲೆಯಲ್ಲಿ ಮಳೆ ಪ್ರಮಾಣ ಕಡಿಮೆಯಂದೇ ಹೇಳಬಹುದು.

ಶುಷ್ಕ ವಾತಾವರಣದಿಂದ ಕೂಡಿದ ಪೂರ್ವಭಾಗದಲ್ಲಿ ಹೆಚ್ಚು ಅರಣ್ಯ ಪ್ರದೇಶವಿದೆ. ಈ ಭಾಗದಲ್ಲಿ ತುಂಗಾಭದ್ರ ನದಿಯಿಂದಾಗಿ ಪೂರ್ವ ತಾಲೂಕುಗಳಿಗೆ ನೀರಾವರಿ ಸೌಲಭ್ಯ ದೊರೆತಿದೆ. ಜಿಲ್ಲೆಯ ಹಡಗಲಿ ತಾಲೂಕನ್ನು ಪ್ರವೇಶಿಸುವ ತುಂಗಾಭದ್ರಾ ನದಿಯು ಮುಂದೆ ಹಗರಿಬೊಮ್ಮನ ಹಳ್ಳಿ, ಹೊಸಪೇಟೆ, ಸಿರಗುಪ್ಪ ತಾಲೂಕುಗಳನ್ನು ಹಾದು ಆಂಧ್ರ ಪ್ರದೇಶದ ಮೂಲಕ ಮುಂದೆ ಹೋಗಿ ಸಮುದ್ರ ಸೇರುತ್ತದೆ. ತುಂಗಾಭದ್ರಾ ನದಿಯು ಒಟ್ಟು ಮೂರು ನೂರ ಇಪ್ಪತ್ತು ಕಿ.ಮೀ ದೂರ ಹರಿಯುತ್ತದೆ. ತುಂಗಾಭದ್ರಾ ನದಿಯ ಹೊರತಾಗಿ ಹಗರಿ (ವೇದಾವತಿ) ಎಂಬ ಚಿಕ್ಕ ನದಿಯೊಂದು ಈ ಜಿಲ್ಲೆಯಲ್ಲಿ ಹರಿಯುತ್ತದೆ. ಇವುಗಳ ಹೊರತಾಗಿ ನಾರಿ ಹಳ್ಳದಂತಹ ಚಿಕ್ಕ ಪುಟ್ಟ ಹಳ್ಳಗಳು ಈ ಜಿಲ್ಲೆಯಲ್ಲಿ ಕಂಡುಬರುತ್ತವೆ. ಇವುಗಳಲ್ಲದೆ ಹಿಂದೆ ಕಂಪಲಿರಾಯ ಮತ್ತು ವಿಜಯನಗರದ ಅರಸರು, ಸಣ್ಣ ಪುಟ್ಟ ಪಾಳೆಯಗಾರರು ನಿರ್ಮಿಸಿದ ಕೆರೆ ಕುಂಟೆಗಳೂ ಸಹ ಜಿಲ್ಲೆಯಾದ್ಯಂತ ಕಂಡುಬರುತ್ತದೆ.

ಅತ್ಯುತ್ತಮ ಗುಣಮಟ್ಟದ ಕಬ್ಬಿಣ ಮತ್ತು ಮ್ಯಾಂಗನೀಸ್ ನಿಕ್ಷೇಪವನ್ನು ಈ ಜಿಲ್ಲೆಯಲ್ಲಿ ಕಾಣಬಹುದು. ಈ ಜಿಲ್ಲೆಯ ಸಂಡೂರು, ಹೊಸಪೇಟೆ, ಬಳ್ಳಾರಿ ತಾಲೂಕುಗಳು ಕಬ್ಬಿಣ ಮತ್ತು ಮ್ಯಾಂಗನೀಸ್ ಹೊಂದಿದ ಬೆಟ್ಟಗಳನ್ನು ಹೊಂದಿವೆ. ಕಬ್ಬಿಣ ನಿಕ್ಷೇಪದ ಪ್ರಮಾಣ ೧೦೩೨.೪೦ ದಶಲಕ್ಷ ಟನ್‌ಗಳಷ್ಟಿದೆ ಎಂದು ಭೂಗರ್ಭಶಾಸ್ತ್ರಜ್ಞರು ಅಂದಾಜಿಸಿದ್ದಾರೆ ಹಾಗೇ ಮ್ಯಾಂಗನೀಸ್ ಪ್ರಮಾಣವು ೧೮.೮೧ ದಶಲಕ್ಷ ಟನ್‌ಗಳಷ್ಟಿದೆ ಎಂದು ಗುರುತಿಸಲಾಗಿದೆ.

ಇವಲ್ಲದೆ ಗ್ರಾನೇಟ್ ಕಲ್ಲುಗಳನ್ನು ಹೊಂದಿದ ಬೆಟ್ಟಗಳು ಬಳ್ಳಾರಿ ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡಿಕೊಂಡಿದೆ. ಹೀಗಾಗಿ ಗ್ರಾನೇಟ್ ಗಣಿಗಾರಿಕೆಯು ಇಲ್ಲಿ ವ್ಯಾಪಕವಾಗಿ ಹರಡಿರುವುದನ್ನು ಕಾಣಬಹುದಾಗಿದೆ. ೧೯೯೧ರ ಮಧ್ಯ ಭಾಗದಲ್ಲಿ ಜಾರಿಗೆ ಬಂದ ಹೊಸ ಆರ್ಥಿಕ ನೀತಿಯ ಪರಿಣಾಮ ವಾಗಿ ಜಿಲ್ಲೆಯಲ್ಲಿ ಬೃಹತ್ ಪ್ರಮಾಣದ ಕಂಪನಿಗಳು ಕಬ್ಬಿಣ ಮತ್ತು ಉಕ್ಕು ಉದ್ದಿಮೆಗಳ ಮೇಲೆ ಬಂಡವಾಳ ತೊಡಗಿಸಿವೆ. ಜೊತೆಗೆ ಇದರ ಬೆನ್ನಲ್ಲೇ ಚಿಕ್ಕ ಕಾರ್ಖಾನೆಗಳಿಂದ ಹಿಡಿದು ಜಿಂದಾಲ್ ವಿಜಯನಗರ ಉಕ್ಕು ಕಾರ್ಖಾನೆಯಂತಹ ಬೃಹತ್ ಕಾರ್ಖಾನೆಗಳು ಜಿಲ್ಲೆಯಲ್ಲಿ ತಲೆಯತ್ತಿವೆ. ಇದಲ್ಲದೆ ಮಿತ್ತಲ್‌ನಂತಹ ಕಂಪನಿಗಳು ಕಬ್ಬಿಣ ಕಾರ್ಖಾನೆಗಳನ್ನು ಸ್ಥಾಪಿಸಲು ಮುಂದಾಗಿವೆ.


ಕುಡಿತಿನಿ ಮತ್ತು ತೋರಣಗಲ್‌ನಲ್ಲಿ ಎರಡು ಉಷ್ಣವಿದ್ಯುತ್ ತಯಾರಿಕಾ ಘಟಕಗಳು ತಲೆಯತ್ತಿವೆ. ಕುಡಿತಿನಿಯ ಉಷ್ಣ ವಿದ್ಯುತ್ ಸ್ಥಾವರವನ್ನು ಕರ್ನಾಟಕ ವಿದ್ಯುತ್ ನಿಗಮ ನಿರ್ವಹಿಸಿದರೆ ತೋರಣಗಲ್ಲಿನ ಉಷ್ಣ ಸ್ಥಾವರವನ್ನು ಜಿಂದಾಲ್ ಕಂಪನಿಯು ನಿರ್ವಹಿಸುತ್ತಿದೆ.

ಜಿಲ್ಲೆಯಲ್ಲಿ ಜರಗುತ್ತಿರುವ ಔದ್ಯೋಗಿಕರಣ ಪ್ರಕ್ರಿಯೆ ಜಿಲ್ಲೆಯ ಕೆಲವೇ ಪ್ರದೇಶಗಳಿಗೆ ಸೀಮಿತಗೊಂಡಿವೆ. ಪ್ರಾದೇಶಿಕವಾಗಿ ಈ ಜಿಲ್ಲೆಯನ್ನು ಎರಡು ಭಾಗಗಳಾಗಿ ವಿಂಗಡಿಸಿದ್ದು ಅವನ್ನು ಕ್ರಮವಾಗಿ ಪೂರ್ವಭಾಗ ಮತ್ತು ಪಶ್ಚಿಮ ಭಾಗವೆಂದು ವಿಂಗಡಿಸಲಾಗಿದೆ. ಪೂರ್ವ ಭಾಗದಲ್ಲಿ ಬಳ್ಳಾರಿ, ಹೊಸಪೇಟೆ, ಸಿರುಗುಪ್ಪ, ಸಂಡೂರು ತಾಲೂಕುಗಳನ್ನು ಗುರುತಿಸಿದರೆ ಪಶ್ಚಿಮ ಭಾಗದಲ್ಲಿ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹಡಗಲಿ ತಾಲೂಕುಗಳನ್ನು ಗುರುತಿಸಲಾಗಿದೆ. ಪಶ್ಚಿಮ ಭಾಗದ ಈ ಮೂರು ತಾಲೂಕುಗಳು ಔದ್ಯಮಿಕ ಚಟುವಟಿಕೆಗಳಿಂದ ದೂರವೇ ಉಳಿದಿವೆ. ಜೊತೆಗೆ ನೀರಾವರಿ ಸೌಲಭ್ಯಗಳಿಂದಲೂ ಈ ಮೂರು ತಾಲೂಕುಗಳು ವಂಚಿತಗೊಂಡಿವೆ. ಹಡಗಲಿ ಮತ್ತು ಹಗರಿಬೊಮ್ಮನಹಳ್ಳಿಯ ಮೂಲಕ ತುಂಗಾಭದ್ರ ನದಿ ಹರಿದರೂ ಅದರ ಲಾಭವನ್ನು ಸಂಪೂರ್ಣವಾಗಿ ಪಡೆಯಲು ಆ ತಾಲೂಕುಗಳು ವಂಚಿತಗೊಂಡಿವೆ ಹಾಗೇ ಜಿಲ್ಲೆಯಲ್ಲಿಯೇ ತುಂಬಾ ಹಿಂದುಳಿದ ತಾಲೂಕೆಂದು ಕೂಡ್ಲಿಗಿಯನ್ನು ಗುರುತಿಸಲಾಗುತ್ತದೆ.

೩.೨.೧. ಕುಟುಂಬಗಳು

೨೦೦೧ರ ಜನಗಣತಿ ಪ್ರಕಾರ ಕರ್ನಾಟಕದ ಒಟ್ಟು ಕುಟುಂಬಗಳು ೧,೦೨,೩೨,೧೩೩ ಎಂದು ಗುರುತಿಸಲಾಗಿದೆ. ಇದರಲ್ಲಿ ಬಳ್ಳಾರಿ ಜಿಲ್ಲೆಯ ಒಟ್ಟು ಕುಟುಂಬಗಳ ಸಂಖ್ಯೆಯು ೩,೭೩,೦೩೪ ರಷ್ಟಿದೆ ಅಂದರೆ ಕರ್ನಾಟಕ ರಾಜ್ಯದ ಒಟ್ಟು ಕುಟುಂಬಗಳಿಗೆ ಹೋಲಿಸಿದರೆ ಬಳ್ಳಾರಿ ಜಿಲ್ಲೆಯು ಶೇ.೩.೬೫ ರಷ್ಟು ಕುಟುಂಬಗಳನ್ನು ಒಳಗೊಂಡಿದೆ. ಇದರಲ್ಲಿ ಜಿಲ್ಲೆಯ ತಾಲೂಕುವಾರು ಕುಟುಂಬಗಳ ಸಂಖ್ಯೆಯನ್ನು ನೋಡಿದರೆ ಹಡಗಲಿಯು ೩೧.೦೮೪ ಕುಟುಂಬಗಳನ್ನು ಒಳಗೊಂಡಿದ್ದರೆ ಹಗರಿಬೊಮ್ಮನಹಳ್ಳಿಯು ೨೮,೮೭೧ ಕುಟುಂಬಗಳನ್ನು, ಹೊಸಪೇಟೆಯು ೭೦,೭೯೯ ಕುಟುಂಬಗಳನ್ನು, ಸಿರಗುಪ್ಪ ೪೨,೯೮೮ ಕುಟುಂಬಗಳನ್ನು, ಬಳ್ಳಾರಿಯು ೧,೧೭,೨೩೩ ಕುಟುಂಬಗಳನ್ನು, ಸಂಡೂರು ೩೫,೨೧೮ ಕುಟುಂಬಗಳನ್ನು ಹಾಗೂ ಕೂಡ್ಲಿಗಿ ೪೭,೮೧೧ ಕುಟುಂಬಗಳನ್ನು ಹೊಂದಿರುವುದು ಕಂಡುಬರುತ್ತಿದೆ.

ಕೋಷ್ಟಕ ೩.೨.೧. ಕುಟುಂಬಗಳ ವಿವರ(ಶೇಕಡವಾರುಗಳಲ್ಲಿ)



೩.೨.೨. ಜನಸಂಖ್ಯೆ

೨೦೦೧ರ ಜನಗಣತಿ ಪ್ರಕಾರ ಕರ್ನಾಟಕವು ಒಟ್ಟು ೫.೨೮.೫೦.೫೬ ಜನಸಂಖ್ಯೆಯನ್ನು ಹೊಂದಿದೆ ಇದರಲ್ಲಿ ಪುರುಷರು ೨.೬೮.೯೮.೯೧೮ ರಷ್ಟಿದ್ದರೆ ಮಹಿಳೆಯರು ೨.೫೯.೫೧.೬೪೪ ರಷ್ಟಿದ್ದಾರೆ.

ಪರಿಶಿಷ್ಟ ಜಾತಿಯ (೨೦೦೧) ಒಟ್ಟು ಜನಸಂಖ್ಯೆಯು ೮೫.೬೩.೯೩೦ರಷ್ಟಿದ್ದು ಪುರುಷರು ೪೩.೩೯.೧೪೫ ಹಾಗೂ ಮಹಿಳೆಯರು ೪೨.೨೪.೧೮೫ರಷ್ಟಿದ್ದಾರೆ. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದ (೨೦೦೧) ಒಟ್ಟು ಜನಸಂಖ್ಯೆಯು ೩೪.೬೩.೯೮೬ರಷ್ಟಿದ್ದು ಪುರುಷರು ೧೭.೫೬.೨೩೮ರಷ್ಟಿದ್ದರೆ ಮಹಿಳೆಯರು ೧೭.೦೭.೭೪೮ರಷ್ಟಿದ್ದಾರೆ.

ಕರ್ನಾಟಕದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ರಾಜ್ಯದ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯಾ ಪ್ರಮಾಣವು ಕೇವಲ ಶೇ. ೬.೫೮ರಷ್ಟಿದೆ. ಇದರಲ್ಲಿ ಪರಿಶಿಷ್ಟ ಪಂಗಡದ ಪುರುಷರ ಪ್ರಮಾಣವು ಶೇಕಡ ೩.೩೩ ಇದೆ ಹಾಗೂ ಮಹಿಳೆಯರ ಪ್ರಮಾಣವು ಶೇಕಡ ೩.೨೪ ದಷ್ಟು ಇದೆ.



೨೦೦೧ರ ಜನಗಣತಿ ಪ್ರಕಾರ ಬಳ್ಳಾರಿ ಜಿಲ್ಲೆಯ ಒಟ್ಟು ಜನಸಂಖ್ಯೆಯು ೨೦,೨೭,೧೪೦ ರಷ್ಟಿದ್ದು ಇದರಲ್ಲಿ ಪುರುಷರು ೧೦,೨೯,೭೧೪ ರಷ್ಟಿದ್ದಾರೆ ಹಾಗೂ ಮಹಿಳೆಯರು ೯,೯೭,೪೨೬ ರಷ್ಟಿದ್ದಾರೆ.

ಪರಿಶಿಷ್ಟ ಜಾತಿಯು ಜನಸಂಖ್ಯೆಯು ಒಟ್ಟು ೩,೭೪,೨೧೮ ರಷ್ಟಿದೆ ಇದರಲ್ಲಿ ಪುರುಷರು ೧,೮೮,೫೩೬ ಹಾಗೂ ಮಹಿಳೆಯರು ೧,೮೫,೬೮೨ ರಷ್ಟಿದ್ದಾರೆ.

ಪರಿಶಿಷ್ಟ ಪಂಗಡದ ಜನಸಂಖ್ಯೆಯು ಜಿಲ್ಲೆಯಲ್ಲಿ ಒಟ್ಟು ೩,೬೪,೬೩೮ರಷ್ಟಿದ್ದು ಪುರುಷರು ೧,೮೩,೬೬೨ ಹಾಗು ಮಹಿಳೆಯರು ೧,೮೦,೯೭೬ರಷ್ಟಿದ್ದಾರೆ. ಅಂದರೆ ಕರ್ನಾಟಕದ ಒಟ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಬಳ್ಳಾರಿ ಜಿಲ್ಲೆಯಲ್ಲಿ ವಾಸವಾಗಿರುವ ಪರಿಶಿಷ್ಟ ಪಂಗಡದ ಜನಸಂಖ್ಯೆ ಕೇವಲ ಶೇಕಡ ೧೦.೫೩ರಷ್ಟು ಮಾತ್ರವಿದೆ, ಇದರಲ್ಲಿ ಪುರುಷರ ಪ್ರಮಾಣವು ಶೇಕಡ ೫.೩೦ ರಷ್ಟಿದ್ದರೆ ಮಹಿಳೆಯರ ಪ್ರಮಾಣ ಶೇಕಡ ೫.೨೩ ರಷ್ಟಿದೆ. ೨೦೦೧ರ ಜನಗಣತಿ ಪ್ರಕಾರ ತಾಲೂಕುವಾರು ಮತ್ತು ಜಾತಿವಾರು ಜನಸಂಖ್ಯೆಯು ಈ ಕೆಳಗಿನಂತಿದೆ.

ಜಿಲ್ಲೆಯ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯಲ್ಲಿ ತಾಲೂಕುವಾರು ಜನಸಂಖ್ಯೆಯನ್ನು ನೋಡಿದರೆ ಹಡಗಲಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆಯು ಶೇಕಡ ೩.೫೮ರಷ್ಟಿದೆ ಇದರಲ್ಲಿ ಪುರುಷರು ಶೇಕಡ ೧.೮೧ರಷ್ಟಿದೆ. ಮಹಿಳೆಯರ ಜನಸಂಖ್ಯಾ ಪ್ರಮಾಣವು ಶೇಕಡ ೧.೭೭ರಷ್ಟಿದೆ.

ಹಡಗಲಿ ತಾಲೂಕಿನಲ್ಲಿ ವಾಲ್ಮೀಕಿ ಮತ್ತು ಮೇಧ ಎರಡು ಪರಿಶಿಷ್ಟ ಪಂಗಡಗಳು ಮಾತ್ರ ಕಂಡುಬರುತ್ತವೆ. ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಮೇಧಾ ಸಮುದಾಯದ ಒಟ್ಟು ಪ್ರಮಾಣವು ಶೇ. ೦.೦೮ರಷ್ಟು ಮಾತ್ರ ಕಂಡುಬರುತ್ತದೆ, ಮೇಧಾ ಪುರುಷರ ಜನಸಂಖ್ಯಾ ಪ್ರಮಾಣ ಕೇವಲ ೦.೦೪ರಷ್ಟಿದೆ ಹಾಗೂ ಮಹಿಳೆಯರ ಪ್ರಮಾಣ ೦.೦೪ರಷ್ಟಿದೆ ಆದರೆ ವಾಲ್ಮೀಕಿ ಸಮುದಾಯದ ಜನಸಂಖ್ಯಾ ಪ್ರಮಾಣವು ಒಟ್ಟು ಶೇ. ೩.೫೦ರಷ್ಟಿದೆ.

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಹಕ್ಕಿ ಪಿಕ್ಕಿ, ಮೇಧಾ ಮತ್ತು ವಾಲ್ಮೀಕಿ ಸಮುದಾಯಗಳು ಕಂಡು ಬರುತ್ತವೆ. ಈ ಮೂರು ಪರಿಶಿಷ್ಟ ಪಂಗಡದ ಸಮುದಾಯಗಳಲ್ಲಿ ಅತ್ಯಲ್ಪ ಪ್ರಮಾಣದ ಜನಸಂಖ್ಯೆಯನ್ನು ಹೊಂದಿದ ಪರಿಶಿಷ್ಟ ಪಂಗಡವೆಂದರೆ ಹಕ್ಕಿ ಪಿಕ್ಕಿ

ುದಾಯವಾಗಿದೆ. ಹಕ್ಕಿ ಪಿಕ್ಕಿ ಸಮುದಾಯವು ಆ ತಾಲೂಕಿನ ಯಡ್ರಾಮನಹಳ್ಳಿ ಎನ್ನುವ ುವೊಂದರಲ್ಲಿ ಮಾತ್ರ ನೆಲೆನಿಂತಿದೆ.

ಯಡ್ರಾಮನಹಳ್ಳಿಯಲ್ಲಿ ವಾಸಿಸುವ ಹಕ್ಕಿ ಪಿಕ್ಕಿಗಳಲ್ಲಿ ಪುರುಷರು ೧೯ರಷ್ಟು ಹಾಗೂ ಮಹಿಳೆಯರು ರಷ್ಟಿದ್ದಾರೆ ಅಂದರೆ ಜಿಲ್ಲೆಯ ಒಟ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಶೇ. ೧ರಷ್ಟು ಹಕ್ಕಿಪಿಕ್ಕಿಗಳು ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಕಂಡುಬರುತ್ತಾರೆ. ಇದರಲ್ಲಿ ಪುರುಷರು ಡ ೦.೦೦೫ರಷ್ಟು ಮಹಿಳೆಯರು ಶೇಕಡ ೦.೦೦೮ರಷ್ಟು ಕಂಡುಬರುತ್ತಾರೆ.

ತಾಲೂಕಿನ ಪರಿಶಿಷ್ಟ ಪಂಗಡದ ಜನಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿರುವವರು ಮೇಧಾ ುದಾಯವಾಗಿದೆ. ತಾಲೂಕಿನ ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಮೇಧಾ ುದಾಯದ ಪುರುಷರ ಪ್ರಮಾಣ ಶೇಕಡ ೦.೦೩೭ ಹಾಗೂ ಮಹಿಳೆಯರ ಪ್ರಮಾಣ ಶೇ. ೩೬ರಷ್ಟಿದೆ. ವಾಲ್ಮೀಕಿ ಸಮುದಾಯದ ಒಟ್ಟು ಜನಸಂಖ್ಯೆ ಶೇ.೫.೮೬(೨೯,೩೪೫)ರಷ್ಟಿದೆ ರಲ್ಲಿ ಪುರುಷರ ಪ್ರಮಾಣ ಶೇಕಡ ೨.೯೫ ರಷ್ಟು ಹಾಗೂ ಮಹಿಳೆಯರ ಪ್ರಮಾಣ ಶೇಕಡ ೧ರಷ್ಟಿದೆ.

ಹೊಸಪೇಟೆ ತಾಲೂಕಿನಲ್ಲಿ ಡುಂಗ್ರಿ ಗರಾಸಿಯಾ, ಹಕ್ಕಿಪಿಕ್ಕಿ, ಮೇಧಾ ವಾಲ್ಮೀಕಿ ಸಮುದಾಯಗಳು ು ಬರುತ್ತಿವೆ. ಇವುಗಳಲ್ಲಿ ಅತ್ಯಲ್ಪ ಪ್ರಮಾಣದ ಜನಸಂಖ್ಯೆ ಹೊಂದಿದ ಸಮುದಾಯವೆಂದರೆ ಗ್ರಿ ಗರಾಸಿಯಾವಾಗಿದೆ. ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಮತ್ತು ಬುಕ್ಕಸಾಗರ ಗಳಲ್ಲಿ ಕಂಡುಬರುವ ಈ ಸಮುದಾಯದವರ ಒಟ್ಟು ಜನಸಂಖ್ಯೆ ಪ್ರಮಾಣ ಶೇ. ೦.೦೪ರಷ್ಟು ತ್ರವಿದೆ. ಇದರಲ್ಲಿ ಪುರುಷರು ಶೇ.೦.೦೨ರಷ್ಟಿದ್ದಾರೆ ಮಹಿಳೆಯರು ೦.೦೨ರಷ್ಟಿದ್ದಾರೆ

ಹಕ್ಕಿ ಪಿಕ್ಕಿ ಸಮುದಾಯವು ಕಾರಿಗನೂರು, ಕಂಪ್ಲಿ, ಹೊಸಪೇಟೆ ಪ್ರದೇಶಗಳಲ್ಲಿ ಕಂಡು ತ್ತಿದ್ದು ಇವರ ಪ್ರಮಾಣವು ಮೇಧಾ ಸಮುದಾಯದ ಪ್ರಮಾಣಕ್ಕಿಂತ ಹೆಚ್ಚಾಗಿದೆ. ಜಿಲ್ಲೆಗೆ ಲಿಸಿದರೆ ಈ ತಾಲೂಕಿನಲ್ಲಿರುವ ಹಕ್ಕಿ ಪಿಕ್ಕಿಗಳ ಒಟ್ಟು ಜನಸಂಖ್ಯಾ ಪ್ರಮಾಣ ೦.೨೦ರಷ್ಟಿದೆ. ರಲ್ಲಿ ಪುರುಷರು ಶೇಕಡ ೦.೦೯ರಷ್ಟಿದ್ದರೆ ಮಹಿಳೆಯರು ಶೇಕಡ ೦.೧೧ರಷ್ಟಿದ್ದಾರೆ.

ಮೇಧಾ ಸಮುದಾಯದವರು ಒಟ್ಟು ಶೇಕಡ ೦.೧೦ರಷ್ಟು ಜನಸಂಖ್ಯೆಯನ್ನು ಈ ತಾಲೂಕಿನಲ್ಲಿ ದಿದ್ದಾರೆ. ಇದರಲ್ಲಿ ಶೇಕಡ ೦.೫ರಷ್ಟು ಪುರುಷರು ಹಾಗೂ ಶೇಕಡ ೦.೫ರಷ್ಟು ಮಹಿಳೆಯರು ಬರುತ್ತಾರೆ.

ಈ ತಾಲೂಕಿನಲ್ಲಿ ವಾಲ್ಮೀಕಿ ಸಮುದಾಯದ ಒಟ್ಟು ಜನಸಂಖ್ಯಾ ಪ್ರಮಾಣವು ಶೇಕಡ ೧೬.೨ ರಷ್ಟಿದೆ, ಇದರಲ್ಲಿ ಪುರುಷರು ಶೇಕಡ ೮.೦೪ ರಷ್ಟಿದ್ದರೆ ಮಹಿಳೆಯರು ಶೇಕಡ ೮.೧೮ ರಷ್ಟಿದ್ದಾರೆ

ಸಿರಗುಪ್ಪ ತಾಲೂಕಿನಲ್ಲಿ ಮೇಧಾ ಹಾಗು ವಾಲ್ಮೀಕಿಗಳ ಹೊರತಾಗಿ ಬೇರೆ ಪರಿಶಿಷ್ಟ ಪಂಗಡಗಳು ಕಂಡು ಬರುವುದಿಲ್ಲ. ಜಿಲ್ಲೆಯ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಸಿರಗುಪ್ಪದ ಮೇಧಾ ಸಮುದಾಯದ ಒಟ್ಟು ಜನಸಂಖ್ಯೆ ಪ್ರಮಾಣವು ೦.೦೨ ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣ ಶೇಕಡ ೦.೦೧ ಮತ್ತು ಮಹಿಳೆಯರ ಪ್ರಮಾಣವು ಸಹ ಶೇಕಡ ೦.೦೧ ಇದೆ. ವಾಲ್ಮೀಕಿ ಸಮುದಾಯದ ಒಟ್ಟು ಜನಸಂಖ್ಯಾ ಪ್ರಮಾಣವು ಶೇಕಡ ೧೧.೪೯ ಇದೆ.

ಬಳ್ಳಾರಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದ ಡುಂಗ್ರಿ ಗರಾಸಿಯ, ಹಕ್ಕಿ ಪಿಕ್ಕಿ, ಮೇಧಾ, ವಾಲ್ಮೀಕಿ ಸಮುದಾಯಗಳು ಕಂಡು ಬರುತ್ತವೆ. ಡುಂಗ್ರಿ ಗರಾಸಿಯ ಸಮುದಾಯದ ಒಟ್ಟು ಜನಸಂಖ್ಯಾ ಪ್ರಮಾಣ ಶೇಕಡ ೦.೦೫ ರಷ್ಟಿದೆ. ಇದರಲ್ಲಿ ಪುರುಷರು ಶೇಕಡ ೦.೦೨೭ ರಷ್ಟು ಹಾಗೂ ಮಹಿಳೆಯರು ಶೇಕಡ ೦.೦೨೩ ರಷ್ಟು ಕಂಡು ಬರುತ್ತಾರೆ.

ಈ ತಾಲೂಕಿನಲ್ಲಿ ಹಕ್ಕಿ ಪಿಕ್ಕಿಗಳು ಶೇಕಡ ೦.೦೧ ರಷ್ಟು ಜನಸಂಖ್ಯೆಯನ್ನು ಹೊಂದಿದ್ದಾರೆ, ಇದರಲ್ಲಿ ಪುರುಷರು ಶೇಕಡ ೦.೦೦೪ ರಷ್ಟಿದ್ದರೆ ಮಹಿಳೆಯರು ಶೇಕಡ ೦.೦೦೬ ರಷ್ಟಿದ್ದಾರೆ.

ಮೇಧಾ ಸಮುದಾಯವು ಈ ತಾಲೂಕಿನಲ್ಲಿ ಶೇ. ೦.೧೧ ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇಕಡ ೦.೦೫೯ ರಷ್ಟಿದ್ದರೆ ಮಹಿಳೆಯರ ಪ್ರಮಾಣ ಶೇಕಡ ೦.೦೫೧ ರಷ್ಟಿದೆ. ಪರಿಶಿಷ್ಟ ಪಂಗಡದಲ್ಲಿ ವಾಲ್ಮೀಕಿ ಸಮುದಾಯವು ಹೆಚ್ಚು ಜನಸಂಖ್ಯೆ ಹೊಂದಿರುವ ತಾಲೂಕು ಬಳ್ಳಾರಿಯಾಗಿದೆ. ಜಿಲ್ಲೆಯ ಜನಸಂಖ್ಯೆಗೆ ಹೋಲಿಸಿದರೆ ಬಳ್ಳಾರಿ ತಾಲೂಕಿನ ವಾಲ್ಮೀಕಿ ಸಮುದಾಯದ ಜನಸಂಖ್ಯೆ ಪ್ರಮಾಣ ಶೇಕಡ ೨೭.೭೬ ರಷ್ಟಿದೆ. ಇದರಲ್ಲಿ ಪುರುಷರು ಶೇಕಡ ೧೪.೦೫ ರಷ್ಟಿದ್ದರೆ ಮಹಿಳೆಯರು ಶೇಕಡ ೧೩.೭೧ ರಷ್ಟಿದ್ದಾರೆ.

ಸಂಡೂರು ತಾಲೂಕಿನಲ್ಲಿ ಮೇಧಾ ಹಾಗು ವಾಲ್ಮೀಕಿ ಸಮುದಾಯಗಳು ಕಂಡು ಬರುತ್ತವೆ. ಇದರಲ್ಲಿ ಮೇಧಾ ಸಮುದಾಯದ ಪ್ರಮಾಣ ಅತ್ಯಲ್ಪವೆಂದೇ ಹೇಳಬಹುದು. ಮೇಧಾ ಸಮುದಾಯದ ಒಟ್ಟು ಜನಸಂಖ್ಯೆಯು (ಜಿಲ್ಲಾ ಜನಸಂಖ್ಯೆಗೆ ಹೋಲಿಸಿದರೆ) ಶೇ. ೦.೦೩ರಷ್ಟು ಮಾತ್ರ ಕಂಡುಬರುತ್ತದೆ. ಇದರಲ್ಲಿ ಪುರುಷರು ಶೇಕಡ ೦.೦೧ರಷ್ಟು ಇದ್ದರೆ ಮಹಿಳೆಯರು ಶೇಕಡ ೦.೦೨ರಷ್ಟು ಕಂಡುಬರುತ್ತಾರೆ.

ಕೂಡ್ಲಿಗಿ ತಾಲೂಕಿನಲ್ಲಿ ಮೇಧಾ ಹಾಗೂ ವಾಲ್ಮೀಕಿ ಸಮುದಾಯಗಳ ಹೊರತಾಗಿ ಬೇರೆ ಪರಿಶಿಷ್ಟ ಪಂಗಡದ ಬುಡಕಟ್ಟುಗಳು ಕಂಡು ಬರುವುದಿಲ್ಲ. ಅದರಲ್ಲೂ ಮೇಧಾ ಸಮುದಾಯ ಅತ್ಯಲ್ಪ ಪ್ರಮಾಣದಲ್ಲಿದೆ. ತಾಲೂಕಿನ ಪ್ರಮುಖ ಸಮುದಾಯವೆಂದು ಗುರುತಿಸುವ ಸಮುದಾಯ ವಾಲ್ಮೀಕಿ ಸಮುದಾಯವಾಗಿದೆ. ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಈ ಸಮುದಾಯದ ಜನಸಂಖ್ಯಾ ಪ್ರಾಭಲ್ಯ ಅರ್ಥವಾಗುತ್ತದೆ.

ಜಿಲ್ಲಾ ಜನಸಂಖ್ಯೆಗೆ ಹೋಲಿಸಿದರೆ ಕೂಡ್ಲಿಗಿ ತಾಲೂಕಿನ ಮೇಧಾ ಸಮುದಾಯದ ಜನಸಂಖ್ಯೆಯು ಶೇಕಡ ೦.೦೨ ರಷ್ಟು ಮಾತ್ರವಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇಕಡ ೦.೦೧ ರಷ್ಟಿದೆ ಹಾಗೂ ಮಹಿಳೆಯರ ಪ್ರಮಾಣವು ಸಹ ಶೇಕಡ ೦.೦೧ರಷ್ಟು ಕಂಡುಬರುತ್ತದೆ.

ಈ ತಾಲೂಕಿನ ವಾಲ್ಮೀಕಿ ಸಮುದಾಯವನ್ನು ಜಿಲ್ಲಾ ಪರಿಶಿಷ್ಠ ಪಂಗಡದ ಜನಸಂಖ್ಯೆಗೆ ಹೋಲಿಸಿದರೆ ಶೇಕಡ ೨೦.೧೭ ರಷ್ಟಿದೆ. ಇದರಲ್ಲಿ ಪುರುಷರ ಪ್ರಮಾಣವು ಶೇಕಡ ೧೦.೨೧ ರಷ್ಟಿದೆ ಮಹಿಳೆಯರ ಪ್ರಮಾಣವು ಶೇಕಡ ೯.೯೬ ರಷ್ಟಿದೆ

ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ವಾಲ್ಮೀಕಿ ಸಮುದಾಯದ ಪ್ರಮಾಣವು ಶೇ.೨೭.೦೩ರಷ್ಟಿದೆ.

ಬಳ್ಳಾರಿ ಜಿಲ್ಲೆಯು ವಿವಿಧ ಜಾತಿ ಪಂಗಡಗಳನ್ನು ಒಳಗೊಂಡಿದೆ ಈ ಜಿಲ್ಲೆಯಲ್ಲಿ ಮುಖ್ಯವಾಗಿ ಲಿಂಗಾಯಿತ, ಕುರುಬ, ಮುಸ್ಲೀಂ, ವಾಲ್ಮೀಕಿ ಮಾದಿಗ, ಚಲುವಾದಿ, ಕಮ್ಮಾರ, ಕುಂಬಾರ, ಅಗಸ, ಬಡಿಗ, ಕ್ಷೌರಿಕ, ಕಮ್ಮಾ ಡುಂಗ್ರಿಗರಾಸಿಯ, ಹಕ್ಕಿ ಪಿಕ್ಕಿ, ಮುಂತಾದ ಜಾತಿಗಳನ್ನು ಒಳಗೊಂಡಿದೆ. ಆದರೆ ಪ್ರಭಲ ಜಾತಿಯಾಗಿ ಲಿಂಗಾಯಿತ, ಕುರುಬ ಜಾತಿಗಳು ಕಂಡು ಬರುತ್ತವೆ. ವಾಲ್ಮೀಕಿ ಮಾದಿಗ ಚಲುವಾದಿ ಜಾತಿಗಳು ಪ್ರಮಾಣದಲ್ಲಿ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದರೂ ರಾಜಕೀಯವಾಗಿ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ಜಾತಿಗಳಾಗಿ ಕಂಡುಬರುತ್ತವೆ. ಇನ್ನುಳಿದ ಮೇಧ ಡುಂಗ್ರಿಗರಾಸಿಯ ಹಕ್ಕಿಪಿಕ್ಕಿ, ಅಗಸ, ಕ್ಷೌರಿಕ, ಕಮ್ಮಾರ, ಕುಂಬಾರ ಮುಂತಾದ ಕೆಳ ಹಂತದ ಜಾತಿಗಳೂ ಜನಸಂಖ್ಯಾ ಪ್ರಮಾಣದಲ್ಲಿ ಹಿಂದುಳಿದವುಗಳಾಗಿದ್ದು ಆರ್ಥಿಕವಾಗಿ ಸಾಮಾಜಿಕವಾಗಿ ತುಂಬಾ ಹಿಂದುಳಿದಿವೆ. ಕೇವಲ ವೋಟ್ ಬ್ಯಾಂಕ್‌ಗಳ ದೃಷ್ಟಿಯಲ್ಲಿರಿಸಿಕೊಂಡು ರಾಜಕಾರಣ ಮಾಡುವುದರಿಂದ ಇಂತಹ ಕೆಳಗೆ ನೂಕಲ್ಪಟ್ಟ ಸಮುದಾಯಗಳು ಯಾವುದೇ ರೀತಿಯಲ್ಲಿ ರಾಜಕೀಯ ಸ್ಥಾನ ಗಳಿಸುವಲ್ಲಿ ಸೋಲನ್ನು ಅನುಭವಿಸಲೇಬೇಕಾಗುತ್ತವೆ

೩.೩. ಬಳ್ಳಾರಿ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ

ಕರ್ನಾಟಕದ ಒಟ್ಟು ವಿಸ್ತೀರ್ಣವು ೧,೯೧,೭೯೧ ಚ.ಕಿ.ಮೀ. ಗಳಷ್ಟಿದೆ ಅದರಲ್ಲಿ ಬಳ್ಳಾರಿ ಜಿಲ್ಲೆಯ ಒಟ್ಟು ವಿಸ್ತೀರ್ಣವು ೮,೪೫೦. ಚ.ಕಿ.ಮೀಗಳಾಗಿದೆ. ಅಂದರೆ ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿಯ ಒಟ್ಟು ವಿಸ್ತೀರ್ಣವು ಶೇಕಡ ೪.೪೦ಗಳಷ್ಟಾಗಿದೆ.


ಬಳ್ಳಾರಿ ಜಿಲ್ಲೆಯು ಏಳು ತಾಲೂಕುಗಳನ್ನು ಒಳಗೊಂಡಿದೆ. ಈ ಜಿಲ್ಲೆಯ ಪ್ರತಿಯೊಂದು ತಾಲೂಕಿನ ವಿಸ್ತೀರ್ಣವು ಈ ಕೆಳಗಿನಂತಿದೆ.

ಬಳ್ಳಾರಿ ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಹಡಗಲಿ ತಾಲೂಕಿನ ವಿಸ್ತೀರ್ಣವು ೯೪೭.೮೨ ಚ.ಕಿ.ಮೀ (ಶೇಕಡ ೧೧.೨೯)ಗಳಿದೆ. ಅದೇ ರೀತಿ ಹಗರಿಬೊಮ್ಮನಹಳ್ಳಿ ತಾಲೂಕು ೯೭೩.೯೫ ಚ.ಕಿ.ಮೀ (ಶೇಕಡ ೧೧.೬೦), ಹೊಸಪೇಟೆ ತಾಲೂಕು ೯೦೪.೭೦ ಚ.ಕಿ.ಮೀ(ಶೇಕಡ ೧೦.೭೯), ಸಿರಗುಪ್ಪ ತಾಲೂಕು ೧,೦೩,೬೧೭ ಚ.ಕಿ.ಮೀ (ಶೇಕಡ ೧೨.೩೩), ಬಳ್ಳಾರಿ ತಾಲೂಕು ೧,೬೮೮.೫೯ ಚ.ಕಿ.ಮೀ (ಶೇಕಡ ೧೯.೯೯), ಸಂಡೂರು ತಾಲೂಕು ೧,೧೫೨.೪೨ ಚ.ಕಿ.ಮೀ (ಶೇಕಡ ೧೩.೭೩) ಕೂಡ್ಲಿಗಿ ತಾಲೂಕು ೧,೬೧೮.೮೭ ಚ.ಕಿ.ಮೀ (ಶೇಕಡ ೨೦.೨೭) ವಿಸ್ತೀರ್ಣವನ್ನು ಒಳಗೊಂಡಿವೆ.

ಬಳ್ಳಾರಿ ಜಿಲ್ಲೆಯ ತಾಲೂಕುವಾರು ಭೌಗೋಳಿಕ ವಿಸ್ತೀರ್ಣದ ವಿವರ

(ಚದರ ಕಿಲೋಮೀಟರ್ ಹಾಗೂ ಶೇಕಡವಾರುಗಳಲ್ಲಿ)

ಪೈಚಾರ್ಟ್ ೩.೩.





ಒಟ್ಟು ಬಳ್ಳಾರಿ ಜಿಲ್ಲೆಯ ವಿಸ್ತೀರ್ಣಕ್ಕೆ ಹೋಲಿಸಿದರೆ ಆ ಜಿಲ್ಲೆಯ ೭ ತಾಲೂಕುಗಳಲ್ಲಿ ಅತೀ ಹೆಚ್ಚು ಭೂ ವಿಸ್ತೀರ್ಣ ಹೊಂದಿದ ತಾಲೂಕೆಂದರೆ ಬಳ್ಳಾರಿ ತಾಲೂಕಾಗಿದೆ (೧,೬೮೮.೫೯ ಚ.ಕಿ.ಮೀ) ತರುವಾಯದ ಸ್ಥಾನ ಕೂಡ್ಲಿಗಿ ತಾಲೂಕಿಗೆ (೧,೬೧೮.೮೭ ಚ.ಕಿ.ಮೀ) ಸಲ್ಲುತ್ತದೆ. ಮೂರನೇ ಸ್ಥಾನ ಸಿರುಗುಪ್ಪಕ್ಕೆ ಸಲ್ಲಿದರೆ ಕೊನೆಯ ಸ್ಥಾನ ಹೊಸಪೇಟೆ ತಾಲೂಕಿಗೆ ಸಲ್ಲುತ್ತದೆ (೯೦೪.೧೭ ಚ.ಕಿ.ಮೀ) ಆದರೆ ಜನಸಾಂದ್ರತೆಯನ್ನು ಗಮನಿಸಿದರೆ ಜಿಲ್ಲೆಯಲ್ಲಿ ಅತೀ ಹೆಚ್ಚು ಜನಸಾಂದ್ರತೆ ಹೊಂದಿರುವ ತಾಲೂಕು ಹೊಸಪೇಟೆಯಾಗಿದೆ (೧ ಚ.ಕಿ.ಮೀ ಗೆ ೪೧೫ ರಷ್ಟು) ಹಾಗೂ ಅತೀ ಕಡಿಮೆ ಜನಸಾಂದ್ರತೆ ಹೊಂದಿರುವ ತಾಲೂಕು ಹಗರಿಬೊಮ್ಮನಹಳ್ಳಿ (೧೬೪) ಯಾಗಿದೆ. ಇನ್ನೂಳಿದಂತೆ ಬಳ್ಳಾರಿಯು ೩೭೦ ಜನಸಾಂದ್ರತೆ ಹೊಂದಿದ್ದರೆ, ಸಿರುಗುಪ್ಪ ೨೨೭ ಜನಸಾಂದ್ರತೆಯನ್ನು, ಕೂಡ್ಲಿಗಿ ೧೬೮ ಜನಸಾಂದ್ರತೆಯನ್ನು ಸಂಡೂರು ೧೬೬ ಜನ ಸಾಂದ್ರತೆಯನ್ನು ಹಡಗಲಿ ೧೭೭ ಜನಸಾಂದ್ರತೆಯನ್ನು ಹೊಂದಿರುವುದನ್ನು ಕಾಣಬಹುದಾಗಿದೆ.

೩.೪. ಬಳ್ಳಾರಿ ಜಿಲ್ಲೆಯ ಸಾಕ್ಷರತೆಯ ಪ್ರಮಾಣ

೨೦೦೧ರ ಜನಗಣತಿ ಪ್ರಕಾರ ಜಿಲ್ಲೆಯ ಸಾಕ್ಷರರ ಸಂಖ್ಯೆ ೧೦,೦೦,೬೦೨ (ಶೇಕಡ ೫೮.೦೪) ರಷ್ಟಿದೆ. ರಾಜ್ಯದ ಒಟ್ಟು ಸಾಕ್ಷರತೆಗೆ ಹೋಲಿಸಿದರೆ ಜಿಲ್ಲೆಯ ಸಾಕ್ಷರತೆಯ ಪ್ರಮಾಣ ಶೇಕಡ ಒಂಭತ್ತರಷ್ಟು ಕಡಿಮೆ ಇದೆ. ಹೀಗಾಗಿ ಸಾಕ್ಷರತೆಯಲ್ಲಿ ಹಿಂದುಳಿದ ಜಿಲ್ಲೆಗಳಲ್ಲಿ ಇದೂ ಒಂದಾಗಿದೆ. ಇತ್ತೀಚೆಗೆ ಮದ್ಯಾಹ್ನದ ಬಿಸಿಯೂಟ, ಸರ್ವಶಿಕ್ಷಾ ಅಭಿಯಾನ, ಕಡ್ಡಾಯ ಶಿಕ್ಷಣ ಮುಂತಾದ ಯೋಜನೆಗಳಿಂದ ಶಾಲೆಗೆ ಹೋಗುವ ಮಕ್ಕಳ ಪ್ರಮಾಣ ಅಲ್ಪ ಮಟ್ಟಿಗೆ ಹೆಚ್ಚಾಗಿದೆಯೆಂದು ತೋರಿಬಂದರೂ ಜಿಲ್ಲೆಯಲ್ಲಿ ನಡೆಯುವ ಗಣಿಗಾರಿಕೆ, ಕೃಷಿ ಕೂಲಿ ಮುಂತಾದ ಚಟುವಟಿಕೆಗಳ ಕಾರಣಗಳಿಗಾಗಿ ಬಹುತೇಕ ಕೆಳವರ್ಗದ ಮಕ್ಕಳು ಶಾಲೆಯಿಂದ ವಂಚಿತವಾಗಿ ಶಾಲೆಯ ಹೊರಗೆ ಉಳಿಯುವುದೇ ಹೆಚ್ಚಾಗಿ ಕಂಡು ಬರುತ್ತದೆ. ಅದರಲ್ಲೂ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಹಾಗೂ ನಿರ್ಲಕ್ಷಿತ ಅಲ್ಪಸಂಖ್ಯಾತ ಕೆಳ ಜಾತಿ ವರ್ಗಗಳ ಮಕ್ಕಳು ನಾನಾ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿಯುವುದೇ ಹೆಚ್ಚು, ಅದರಲ್ಲೂ ಶಾಲೆಯಿಂದ ಹೊರಗುಳಿಯುವವರಲ್ಲಿ ಹೆಣ್ಣು ಮಕ್ಕಳ ಪ್ರಮಾಣವೇ ಹೆಚ್ಚಾಗಿ ಕಂಡು ಬರುತ್ತದೆ.

೩.೫. ಆರ್ಥಿಕ ಚಟುವಟಿಕೆಗಳು

ಜಿಲ್ಲೆಯಲ್ಲಿ ನಡೆಯುವ ಕಬ್ಬಿಣ ಮತ್ತು ಮ್ಯಾಂಗನೀಸ್ ಗಣಿಗಾರಿಕೆಯಿಂದ ಔದ್ಯೋಗಿಕ ಚಟುವಟಿಕೆಗಳು ಹೆಚ್ಚಾಗಿ ಜರಗುತ್ತಿದೆ, ಆದರೆ ವಿಪರ್ಯಾಸವೆಂದರೆ ತಾಂತ್ರಿಕ ಶಿಕ್ಷಣದ ಕೊರತೆ, ವೃತ್ತಿ ಪ್ರಾವಿಣ್ಯತೆಯ ಕೊರತೆ ಇತ್ಯಾದಿ ಕಾರಣಗಳಿಗಾಗಿ ಜಿಲ್ಲೆಯ ಬಹುತೇಕ ಯುವ ಶಕ್ತಿ ಔದ್ಯೋಗಿಕ ಚಟುಚಟಿಕೆಗಳಲ್ಲಿ ಪಾಲ್ಗೊಳ್ಳದೆ ಹೊರಗುಳಿಯಬೇಕಾಗಿದೆ. ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸಲು ಉತ್ತರ ಪ್ರದೇಶ, ರಾಜಸ್ಥಾನ ಮುಂತಾದ ಕಡೆಯಿಂದ ಜನ ಬರುವುದರಿಂದ ಸ್ಥಳೀಯ ಜನರು ಕೇವಲ ಕೂಲಿ ಕೆಲಸಕ್ಕೆ ಮಾತ್ರ ಸೀಮಿತ ಎನ್ನುವ ಮಟ್ಟದ ವಾತಾವರಣ ಸೃಷ್ಟಿಗೊಂಡಿದೆ. ಅದರಲ್ಲೂ ಪರಿಶಿಷ್ಠ ಜಾತಿ ಪರಿಶಿಷ್ಠ ಪಂಗಡದ ಯುವಕರು ಉನ್ನತ ಉದ್ಯೋಗ ಅವಕಾಶಗಳಿಂದ ಹೆಚ್ಚು ವಂಚಿತರಾಗಿರುವುದು ಕಂಡುಬರುತ್ತದೆ.

ಬಳ್ಳಾರಿ ಜಿಲ್ಲೆಯನ್ನು ಪ್ರಾದೇಶಿಕವಾಗಿ ಪೂರ್ವ ಭಾಗ ಮತ್ತು ಪಶ್ಚಿಮ ಭಾಗಗಳೆಂದು ವಿಂಗಡಿಸಲಾಗಿದೆ ಮುಖ್ಯವಾಗಿ ಪಶ್ಚಿಮ ಭಾಗದವೆಂದು ಗುರುತಿಸಲಾಗುವ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹಡಗಲಿ ತಾಲೂಕುಗಳು ಔದ್ಯೋಗಿಕ ಚಟುವಟಿಕೆಗಳಿಂದ ದೂರವುಳಿದಿವೆ. ಈ ಪ್ರದೇಶಗಳು ಹೆಚ್ಚಾಗಿ ಲಾಭಕರವಲ್ಲದ ಕೃಷಿ ಚಟುಚಟಿಕೆಗಳಲ್ಲಿ ತೋಡಗಿರುವುದನ್ನು ನೋಡಬಹುದು. ಜಿಲ್ಲೆಯ ಪೂರ್ವ ಭಾಗದಲ್ಲಿ ಔದ್ಯೋಗಿಕ ಚಟುವಟಿಕೆ, ಗಣಿಗಾರಿಕೆ ಇತ್ಯಾದಿ ಚಟುವಟಿಕೆಗಳು ತೀವ್ರಗತಿಯಲ್ಲಿ ಸಾಗಿವೆ. ಆದರೆ ಈ ಔದ್ಯೋಗಿಕ ಚಟುವಟಿಕೆ ಮತ್ತು ಗಣಿಗಾರಿಕೆಗಳ ಲಾಭ ಮಾತ್ರ ಕೆಲವೇ ಕೆಲವು ಬಂಡವಾಳಶಾಹಿಗಳಿಗೆ ಸೀಮಿತವಾಗಿ ಉಳಿದಿರುವುದು ಕಂಡುಬರುತ್ತದೆ. ಆ ಎಲ್ಲಾ ಚಟುವಟಿಕೆಗಳಿಂದ ಸಾಮಾನ್ಯ ಜನರಿಗೆ ಯಾವುದೇ ರೀತಿಯ ಲಾಭ ಕಂಡು ಬರುವುದಿಲ್ಲ. ಅಂದರೆ ಸಾಮಾನ್ಯ ಜನರು ಅ ಎಲ್ಲಾ ಚಟುವಟಿಕೆಗಳಿಂದ ದೂರವುಳಿದಿದ್ದಾರೆ. ಹೀಗಾಗಿ ಜಿಲ್ಲೆಯು ಮುಖ್ಯವಾಗಿ ಕೃಷಿಯನ್ನು ಅವಲಂಬಿಸಿರುವುದು ಕಂಡು ಬರುತ್ತಿವೆ. ಇತ್ತೀಚೆಗೆ ಕೃಷಿ ವಲಯದ ಭೂಮಿಗಳನ್ನು ಸಹ ಬಂಡವಾಳಶಾಹಿಗಳು ಹೆಚ್ಚಿನ ಲಾಭ ಕೊಡುವ ಆಮಿಷ ಒಡ್ಡಿ ಕೃಷಿಕರಿಂದ ಕೃಷಿ ಭೂಮಿಗಳನ್ನು ತಮ್ಮದಾಗಿಸಿಕೊಳ್ಳುತಿದ್ದಾರೆ. ತರುವಾಯ ಅವರು ಕೃಷಿಯೇತರ ಚಟುವಟಿಕೆಗಳಿಗೆ ಆ ಭೂಮಿಗಳನ್ನು ಬಳಸಿಕೊಳ್ಳುತ್ತಾರೆ. ಕೃಷಿ ಭೂಮಿಯನ್ನು ಮಾರಿಕೊಂಡು,

ಇಲ್ಲವೆ ಕಳೆದುಕೊಂಡ ಕೃಷಿಕನು ಕೃಷಿ ಚಟುವಟಿಕೆಯಿಂದ ದೂರವುಳಿಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಅತ್ತ ಕೃಷಿಭೂಮಿ ಇಲ್ಲ ಇತ್ತ ಉದ್ಯೋಗವಿಲ್ಲದಂತಹ ಸ್ಥಿತಿಯಲ್ಲಿರುವ ಜಿಲ್ಲೆಯ ರೈತ ಜೀವನ ನಿರ್ವಹಣೆಗಾಗಿ ಗುಳೆ ಹೋಗಬೇಕಾದ ಸ್ಥಿತಿ ನಿರ್ಮಾಣವಾಗಲು ಹೆಚ್ಚು ದೂರ ಉಳಿದಿಲ್ಲ. ವಲಯವಾರು ದುಡಿಮೆಗಾರರ ವರ್ಗವನ್ನು ನೋಡಿದಾಗ ಪ್ರಾಥಮಿಕ ವಲಯ ಶೇಕಡ ೭೬.೧೮ ರಷ್ಟು ದ್ವಿತೀಯ ವಲಯ ಶೇಕಡ ೭.೪೩ ರಷ್ಟು ತೃತೀಯ ವಲಯ ಶೇಕಡ ೧೬.೦೯ ರಷ್ಟಿದೆ. ರಾಜ್ಯಕ್ಕೆ ಹೋಲಿಸಿದರೆ ಈ ಪ್ರಮಾಣ ಕ್ರಮವಾಗಿ ಶೇಕಡ ೧೬.೦೯ರಷ್ಟಿದೆ.

ಜಿಲ್ಲೆಯ ಒಟ್ಟು ಶ್ರಮ ಶಕ್ತಿಯ ವಲಯವಾರು ವಿತರಣೆ ಹಾಗೂ ಆ ವಿತರಣೆಯಲ್ಲಿ ೧೯೮೧ ರಿಂದ ೧೯೯೧ ರಲ್ಲಿ ಉಂಟಾದ ಬದಲಾವಣೆ ಅಭಿವೃದ್ಧಿಯ ದೃಷ್ಟಿಯಿಂದ ಅಷ್ಟೇನೂ ಅನುಕೂಲಕರವಾಗಿಲ್ಲ ಪ್ರಾಥಮಿಕ ವಲಯವೆಂದರೆ ಕೃಷಿ, ಗಣಿಗಾರಿಕೆ, ಮೀನುಗಾರಿಕೆ ಮುಂತಾದ ಕಸುಬುಗಳನ್ನು ಅವಲಂಬಿಸಿರುವವರ ಪ್ರಮಾಣ ಶೇಕಡ ೮೭.೦೧ ರಿಂದ ಶೇಕಡ ೮೭.೮೭ ರಷ್ಟು ಏರಿಕೆಯಾಗಿದೆ ಇದನ್ನು ಅಭಿವೃದ್ಧಿಯ ವಿಮುಖ ಚಲನೆ ಎಂದು ಹೇಳಲಾಗುತ್ತದೆ.

ತುಂಗಾಭದ್ರಾ ನದಿ ಜಿಲ್ಲೆಯೊಳಗೆ ಹಾದು ಹೋದರೂ ಜಿಲ್ಲೆಯ ಪಶ್ಚಿಮವಲಯದ ತಾಲೂಕುಗಳಾದ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಹಡಗಲಿಗಳು ಕೃಷಿಗಾಗಿ ನೀರಾವರಿ ಸೌಲಭ್ಯ ಪಡೆಯಲು ಸಾಧ್ಯವಾಗಿಲ್ಲ. ನದಿಯ ದಂಡೆಯ ಮೇಲಿನ ಭಾಗದಲ್ಲಿರುವ ಕೆಲವೇ ಕೆಲವು ರೈತರು ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡು ನೀರಾವರಿ ಮಾಡಿಕೊಳ್ಳುವರಾದರೂ ರಾಜ್ಯದ ವಿದ್ಯುತ್ ಅಭಾವದಿಂದಾಗಿ ಪಂಪಸೆಟ್‌ಗಳು ಸಹ ಸರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ, ಸಂಡೂರು, ಬಳ್ಳಾರಿ ತಾಲೂಕುಗಳು ಸಹ ಇದರಿಂದ ಹೊರತಾಗಿಲ್ಲ. ಬಳ್ಳಾರಿಯ ಕೆಲವು ಭಾಗಗಳು ಮಾತ್ರ ಎಲ್.ಎಲ್.ಸಿ ಕಾಲುವೆ ಮತ್ತು ಹೆಚ್.ಎಲ್.ಸಿ ಕಾಲುವೆಯ ಸೋರಿಕೆ ನೀರು ಬಳಸಿ ಇಲ್ಲವೆ ಅಲ್ಪಾವಧಿ (೬ತಿಂಗಳು) ನೀರು ಬಳಸಿ ಒಂದು ಬೆಳೆಯನ್ನು ಪಡೆಯಲು ಸಾಧ್ಯವಾಗಿದೆ. ಆದರೆ ಆ ನೀರಾವರಿ ಸೌಲಭ್ಯ ಅಷ್ಟೇನೂ ತೃಪ್ತಿಕರವಾಗಿಲ್ಲ ಎಂಬ ಅಳಲು ರೈತರಿಂದ ಕೇಳಿಬರುತ್ತದೆ.

ಹಡಗಲಿ ಹಗರಿಬೊಮ್ಮನಹಳ್ಳಿಯ ರೈತರಿಗೆ ಅನುಕೂಲ ನೀಡಬಹುದಾದ ಸಿಂಗಟಾಲೂರು ಯೋಜನೆಯೊಂದು ರೂಪುಗೊಂಡಿದೆಯಾದರು ಅದು ಪೂರ್ಣಗೊಂಡು ಕಾರ್ಯಾರಂಭ ಮಾಡಲು ಇನ್ನು ಸಾಧ್ಯವಾಗಿಲ್ಲ.

ಒಟ್ಟಾರೆಯಾಗಿ ಈ ಎಲ್ಲ ಚಟುವಟಿಕೆಗಳನ್ನು ಗಮನಿಸಿದರೆ ಜಿಲ್ಲೆಯು ಒಟ್ಟಾರೆಯಾಗಿ ಹಿಂದುಳಿದಿರುವುದನ್ನು ಸೂಚಿಸುತ್ತವೆ. ಯಾವ ಪ್ರದೇಶವು ಕೇವಲ ಪ್ರಾಥಮಿಕ ವಲಯವನ್ನು ಹೆಚ್ಚು ಅವಲಂಬಿಸಿರುತ್ತದೆಯೋ ಆ ಪ್ರದೇಶವನ್ನು ಹಿಂದುಳಿದ ಪ್ರದೇಶವೆಂದು ಗ್ರಹಿಸಲಾಗಿದೆ.

ಆರ್ಥಿಕವಾಗಿ ಜಿಲ್ಲೆಯ ವರಮಾನವು ೧೯೯೫-೯೬ರ ಅವಧಿಯಲ್ಲಿ ಶೇ.೮೫೪೪ ರೂಪಾಯಿಗಳಿದ್ದು ರಾಜ್ಯದ ಸರಾಸರಿಗಿಂತ ರೂ ೮೪೦ ಕಡಿಮೆ ಇದೆ. ವರಮಾನದಲ್ಲಿ ಜಿಲ್ಲೆಯು ರಾಜ್ಯದಲ್ಲಿ ೮ನೇ ಸ್ಥಾನವನ್ನೂ ಹೊಂದಿದೆ. ಜಿಲ್ಲೆಯಲ್ಲಿ ಗಣಿಗಾರಿಕೆ ಔದ್ಯೋಗಿಕ ವಲಯದ ಪ್ರಗತಿ ಕಂಡುಬರುತಿದ್ದರೂ ಅದು ಕೇವಲ ಕೆಲವೇ ಕೆಲವು ಬಂಡವಾಳಶಾಹಿಗಳ ಹಿಡಿತದಲ್ಲಿರುವುದರಿಂದ ಜಿಲ್ಲೆಯ ಜನಸಾಮಾನ್ಯನ ವರಮಾನ ಅತ್ಯಂತ ಕಡಿಮೆಯಿರುವುದನ್ನು ಕಾಣಬಹುದಾಗಿದೆ.

ಇತ್ತೀಚೆಗೆ ರಾಜ್ಯದ ರಾಜಕೀಯದಲ್ಲಿ ಬಳ್ಳಾರಿ ಜಿಲ್ಲೆಗೆ ವಿಶಿಷ್ಟ ಸ್ಥಾನವಿದೆ. ಇಡೀ ರಾಜ್ಯದ ರಾಜಕೀಯ ದಾಳಗಳು ಬಳ್ಳಾರಿ ಜಿಲ್ಲೆಯ ಬಂಡವಾಳಶಾಹಿಗಳ ಕೈಯಲ್ಲಿದೆ ಎಂಬ ಮಾತು ಇಂದು ಪ್ರತಿಯೊಂದು ಸುದ್ದಿ ಮಾಧ್ಯಮ ವಲಯಗಳ ಮೂಲಕ ಕೇಳಿಬರುತ್ತಿದೆ. ಬಳ್ಳಾರಿಯ ಗಣಿಗಳಿಗೂ ರಾಜ್ಯದ ರಾಜಕೀಯಕ್ಕೂ ಸಂಬಂಧಗಳಿರುವುದನ್ನು ಈ ಮಾಧ್ಯಮಗಳು ಹೊರಚಲ್ಲುತ್ತಲಿರುವುದನ್ನು ನೋಡಬಹುದು

ಜಿಲ್ಲೆಯನ್ನು ಆಡಳಿತಾತ್ಮಕವಾಗಿ ಎರಡು ಉಪ ವಿಭಾಗಗಳಾಗಿ ವಿಂಗಡಿಸಲಾಗಿದೆ ಒಂದು ಬಳ್ಳಾರಿ ಮತ್ತೊಂದು ಹೊಸಪೇಟೆ ಬಳ್ಳಾರಿ ಉಪವಿಭಾಗದಲ್ಲಿ ಮೂರು ತಾಲೂಕುಗಳಿದ್ದರೆ ಹೊಸಪೇಟೆ ಉಪವಿಭಾಗದಲ್ಲಿ ನಾಲ್ಕು ತಾಲೂಕುಗಳು ಇವೆ.

ಈ ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಯ ನಾಲ್ಕು ತಾಲೂಕುಗಳನ್ನು ಹಾಗೂ ಪ್ರತಿ ತಾಲೂಕಿನ ನಾಲ್ಕು ಗ್ರಾಮಪಂಚಾಯತಿಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವುದರಿಂದ ಅವುಗಳ ಭೌಗೋಳಿಕ ಸ್ವರೂಪವನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡಲಗಿದೆ. ಅವುಗಳ ವಿವರ ಈ ಕೆಳಗಿನಂತಿದೆ.

೩.೬. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ತಾಲೂಕುಗಳು ಹಾಗೂ ಗ್ರಾಮ ಪಂಚಾಯಿತಿಗಳ ವಿವರ

ಕ್ರಸಂ	ತಾಲೂಕುಗಳು	ಗ್ರಾಮ ಪಂಚಾಯಿತಿಗಳು			
		೧	೨	೩	೪
೧	ಹೊಸಪೇಟೆ	ರಾಮಸಾಗರ	ನಂ.೧೦.ಮುದ್ದಾಪುರ	ಡಣಾಯಕನ ಕೆರೆ	ನಾಗಲಾಪುರ
೨	ಸಿರುಗುಪ್ಪ	ಸಿರಿಗೇರಿ	ಉಪ್ಪಾರ ಹೊಸಹಳ್ಳಿ	ದೇಶನೂರು	ಕೊಂಚಗೇರಿ
೩	ಹೆಚ್.ಬಿ.ಹಳ್ಳಿ	ತಂಬ್ರಹಳ್ಳಿ	ಹಂಪಾಪಟ್ಟಣ	ಬಾಚಿಗೊಂಡನಹಳ್ಳಿ	ಮುತ್ತುಕೂರು
೪	ಕೂಡ್ಲಿಗಿ	ಉಜ್ಜನಿ	ಹಿರೇಕುಂಬಳಗುಂಟೆ	ಗಂಡಬೊಮ್ಮನಹಳ್ಳಿ	ಬಣವಿಕಲ್ಲು

೩.೬.೧. ಹೊಸಪೇಟೆ ತಾಲೂಕು

ಹೊಸಪೇಟೆಯು ಬಳ್ಳಾರಿ ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ಒಂದು. ತುಂಗಾಭದ್ರಾ ನದಿಗೆ ಹೊಸಪೇಟೆ ನಗರದ ಬಳಿಯೇ ಆಣೆಕಟ್ಟು ಕಟ್ಟಲಾಗಿದೆ. ಹೀಗಾಗಿ ಈ ತಾಲೂಕಿನಲ್ಲಿ ಹೊಸಪೇಟೆ ನಗರದಿಂದ ಕೆಳಭಾಗಕ್ಕೆ ಕೃಷಿಗೆ ನೀರಾವರಿ ಸೌಲಭ್ಯ ಸುಲಭವಾಗಿ ಸಿಗುತ್ತದೆ. ಆದರೆ ಹೊಸಪೇಟೆಯ ಮೇಲ್ಭಾಗಕ್ಕೆ ನೀರಾವರಿ ಸೌಲಭ್ಯ ಇರುವುದಿಲ್ಲ. ಹೀಗಾಗಿ ಹೊಸಪೇಟೆಯಿಂದ ಮೇಲ್ಭಾಗದ ಜನರು ಕೇವಲ ಮಳೆಯಾಧಾರಿತ ಒಣ ಬೇಸಾಯವನ್ನೇ ಅವಲಂಬಿಸಬೇಕಾಗಿದೆ. ಈ ತಾಲೂಕಿನಲ್ಲಿ ಮಧ್ಯಮ ಗಾತ್ರದ ಕಬ್ಬಿಣ ಮತ್ತು ಉಕ್ಕು ಉಧ್ಯಮವನ್ನು ಹಾಗೂ ಗಣಿಗಾರಿಕೆಯನ್ನು ಕಾಣಬಹುದು. ೨೦೦೧ರ ಈಚೆಗೆ ಹೊಸಪೇಟೆಯ ಮೇಲ್ಭಾಗಕ್ಕೆ ಸ್ಪಾಂಜ್ ಐರನ್ ಉತ್ಪಾದಿಸುವ ಕಾರ್ಖಾನೆಗಳು ಹೆಚ್ಚಾಗಿ ಹುಟ್ಟಿಕೊಂಡಿವೆ. ಕೇವಲ ಇಪ್ಪತ್ತೈದು ಕಿಲೋ ಮೀಟರ್ ವ್ಯಾಪ್ತಿಯೊಳಗೆ ಸುಮಾರು ಏಳೆಂಟು ಸ್ಪಾಂಜ್ ಐರನ್ ಕಾರ್ಖಾನೆಗಳನ್ನು ಕಾಣಬಹುದು. ಇದಲ್ಲದೆ ಖ್ಯಾಧ್ಯ ಎಣ್ಣೆ ಉತ್ಪಾದನಾ ಘಟಕ, ಬಿಸ್ಕಿಟ್ ಕಾರ್ಖಾನೆ ಇತ್ಯಾದಿ ಇತರೆ ಕಾರ್ಖಾನೆಗಳನ್ನು ಹೊಸಪೇಟೆ ನಗರದ ಸುತ್ತ ಮುತ್ತಲೂ ಕಾಣಬಹುದು.

ಹೊಸಪೇಟೆ ತಾಲೂಕು ೬೦೪.೧೭ ಚ.ಕಿ.ಮೀ ವ್ಯಾಪ್ತಿಯಲ್ಲಿ ಹರಡಿಕೊಂಡಿದೆ. ಬಳ್ಳಾರಿ ಜಿಲ್ಲೆಯ ಇನ್ನುಳಿದ ಆರು ತಾಲೂಕುಗಳಿಗಿಂತ ಕಡಿಮೆ ವಿಸ್ತೀರ್ಣ (ಶೇ. ೧೦.೭೦)ವನ್ನು ಹೊಂದಿರುವ ಈ ತಾಲೂಕು ಜಿಲ್ಲೆಯ ಇತರೆ ತಾಲೂಕುಗಳಿಗಿಂತ ಹೆಚ್ಚಿನ ಜನ ಸಾಂದ್ರತೆ ಹೊಂದಿದೆ. ಈ

ತಾಲೂಕಿನ ಜನ ಸಾಂದ್ರತೆಯು ೪೧೫ ರಷ್ಟಿದೆ ಒಟ್ಟು ೭೪ ಗ್ರಾಮಗಳನ್ನು ಒಳಗೊಂಡಿರುವ ಈ ತಾಲೂಕು ಕಂಪ್ಲಿ, ಕಮಲಾಪುರ ಎಂಬ ಎರಡು ಹೋಬಳಿ ಪ್ರದೇಶಗಳನ್ನು ಒಳಗೊಂಡಿದೆ.

ಈ ತಾಲೂಕಿನಲ್ಲಿ ೨೦೦೧ರ ಜನಗಣತಿ ಪ್ರಕಾರ ಒಟ್ಟು ೭೦.೭೧೯ ಕುಟುಂಬಗಳು ನೆಲೆನಿಂತಿದ್ದು ಕಂಡುಬರುತ್ತದೆ. ಹಾಗೇ ಒಟ್ಟು ೨೦೦೧ ರ ಪ್ರಕಾರ ಜನಸಂಖ್ಯೆಯು ೩,೭೪,೯೪೯ ರಷ್ಟಿದೆ. ಇದರಲ್ಲಿ ಪುರುಷರು ೧,೮೯,೬೭೪ರಷ್ಟಿದ್ದರೆ, ಮಹಿಳೆಯರು ೧,೮೫,೨೭೫ರಷ್ಟಿದ್ದಾರೆ. ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ಒಟ್ಟು ೭೫,೭೮೦ರಷ್ಟಿದೆ. ಇದರಲ್ಲಿ ಪರಿಶಿಷ್ಠ ಜಾತಿಯ ಪುರುಷರು ೩೮,೦೪೩ರಷ್ಟಿದ್ದಾರೆ ಹಾಗೂ ಮಹಿಳೆಯರು ೩೭,೭೩೭ರಷ್ಟಿದ್ದಾರೆ

ಹೊಸಪೇಟೆ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದವರ ಒಟ್ಟು ಜನಸಂಖ್ಯೆ ೬೦,೪೯೧ರಷ್ಟಿದೆ. ಇದರಲ್ಲಿ ಪುರುಷರು ೨೯,೯೫೨ ಹಾಗೂ ಮಹಿಳೆಯರು ೩೦,೫೩೮ರಷ್ಟಿದ್ದಾರೆ.

ಈ ತಾಲೂಕಿನ ಒಟ್ಟು ಸಾಕ್ಷರತೆಯ ಪ್ರಮಾಣ ಶೇಕಡ ೬೦ರಷ್ಟಿದೆ. ಇದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣ ಶೇಕಡ ೭೧.೬ ರಷ್ಟಿದ್ದರೆ ಮಹಿಳೆಯರ ಸಾಕ್ಷರತೆ ಪ್ರಮಾಣ ಕೇವಲ ಶೇಕಡ ೫೦ ರಷ್ಟು ಮಾತ್ರವಿದೆ. ಅದರಲ್ಲೂ ಮೇಲ್ವರ್ಗದ ಮಹಿಳೆಯರೇ ಹೆಚ್ಚಿನ ಮಟ್ಟದಲ್ಲಿ ಶಿಕ್ಷಣ ಪಡೆಯುತ್ತಿದ್ದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಗೂ ಇತರೆ ಹಿಂದುಳಿದ ವರ್ಗಗಳು ಬಹುತೇಕ ಶಿಕ್ಷಣದಿಂದ ವಂಚಿತಗೊಂಡಿವೆ. ಅದರಲ್ಲೂ ಮಹಿಳೆಯರು ಶಿಕ್ಷಣದಿಂದ ಹೆಚ್ಚು ವಂಚಿತರಾಗಿರುವುದು (ಶೇ.೫೦) ಕಂಡುಬರುತ್ತದೆ.

ಈ ತಾಲೂಕಿನಲ್ಲಿನ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ನಾಲ್ಕು ಗ್ರಾಮ ಪಂಚಾಯಿತಿಗಳಲ್ಲಿ ಹೊಸಪೇಟೆ ನಗರದ ಮೇಲ್ಭಾಗದಲ್ಲಿ ಒಣಬೇಸಾಯವನ್ನೇ ಹೆಚ್ಚು ಅವಲಂಬಿಸಿರುವ ಡಣಾಪುರ ಹಾಗೂ ನಾಗಲಾಪುರ ಗ್ರಾಮ ಪಂಚಾಯಿತಿಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಅದೇ ರೀತಿಯಾಗಿ ಈ ತಾಲೂಕಿನ ನೀರಾವರಿ ಪ್ರದೇಶವನ್ನು ಒಳಗೊಂಡಿರುವ ನಂ.೧೦ ಮುದ್ದಾಪುರ ಹಾಗೂ ರಾಮಸಾಗರ ಗ್ರಾಮ ಪಂಚಾಯಿತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ರಾಮಸಾಗರ ಗ್ರಾಮ ಪಂಚಾಯತಿ

ತಾಲೂಕು ಕೇಂದ್ರದಿಂದ ಸುಮಾರು ೨೬ ಕಿ.ಮೀ ದೂರದಲ್ಲಿಯೂ, ಹೋಬಳಿಗೆ ಸುಮಾರು ೬ ಕಿ.ಮೀ. ದೂರದಲ್ಲಿ ರಾಮಸಾಗರ ಗ್ರಾಮವಿದೆ. ಕಂಪ್ಲಿ ಹೋಬಳಿಗೆ ಸೇರಿದ ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೧೫೧೪ ಹೆಕ್ಟೇರುಗಳಷ್ಟಿದೆ. ಆದರೆ ಕೃಷಿ ಯೋಗ್ಯ ಭೂಮಿಯ

ಪ್ರಮಾಣ ಮಾತ್ರ ೮೦೧ ಹೆಕ್ಟೇರುಗಳಷ್ಟು ಮಾತ್ರವಿದೆ. ಉಳಿದ ೭೧೩ ಹೆಕ್ಟೇರ್‌ನಷ್ಟು ಭೂಮಿಯು ಕೃಷಿ ಯೋಗ್ಯವಲ್ಲದ ಗ್ರೈನೇಟ್ ಕಲ್ಲುಗಳಿಂದ ಕೂಡಿದ ಗುಡ್ಡ-ಬೆಟ್ಟ ಹಾಗೂ ಕುರಚಲು ಕಾಡುಗಳಿಂದ ಕೂಡಿದೆ. ಈ ಗ್ರಾಮದ ಪಶ್ಚಿಮ ಭಾಗಕ್ಕೆ ಸುಮಾರು ೩ ಕಿ.ಮೀ ದೂರದಲ್ಲಿ ತುಂಗಾಭದ್ರ ನದಿ ಹರಿಯುತ್ತದೆ. ತುಂಗಾಭದ್ರನದಿಗೆ ವಿಜಯನಗರ ಸಮ್ರಾಜ್ಯದ ಆಡಳಿತ ಕಾಲದಲ್ಲಿಯೇ ದೇಶಿ ಮಾದರಿಯಲ್ಲಿ ಕಟ್ಟಿದ ಆಣೆಕಟ್ಟು ಕಟ್ಟಲಾಗಿದೆ ಈ ಆಣೆಕಟ್ಟಿನಿಂದ ಆ ಕಾಲದಲ್ಲಿಯೇ ನಿರ್ಮಿಸಿದ ಕಾಲುವೆ ಮೂಲಕ ನೀರು ಹರಿದು ಬರುತ್ತಿದ್ದು, ಆ ಕಾಲುವೆಯ ನೀರಿನಿಂದ ಬಹುತೇಕ ಕೃಷಿ ಭೂಮಿ ನೀರನ್ನು ಪಡೆಯುತ್ತಿದೆ. ಇದಲ್ಲದೆ ಇದೇ ಮಾದರಿಯ ಕಂಪಲಿ ಕಾಲುವೆಯ ನೀರು ಸಹ ಭಾಗಶಃ ಪ್ರಮಾಣದಲ್ಲಿ ರಾಮಸಾಗರ ಕೃಷಿ ಭೂಮಿಗೆ ನೀರುಣಿಸುತ್ತಿದೆ. ರಾಮಸಾಗರ ಗ್ರಾಮದ ಪಕ್ಕಾದಲ್ಲಿಯೇ ಹರಿದು ಹೋಗುವ ವಿಜಯನಗರ ಕಾಲುವೆ ಉದ್ದವು ಸುಮಾರು ೨ ಕಿ.ಮೀ ಗಳಿಷ್ಟಿದೆ. ಒಟ್ಟು ಈ ಕಾಲುವೆಯಿಂದ ನೀರಾವರಿಯಾದ ಕೃಷಿ ಭೂಮಿಯ ಕ್ಷೇತ್ರ ೩೮೮ ಹೆಕ್ಟೇರುಗಳಷ್ಟಿದೆ. ಅದೇ ರೀತಿ ರಾಮಸಾಗರ ಗ್ರಾಮದ ಮೇಲ್ಭಾಗಕ್ಕೆ ದಕ್ಷಿಣ ದಿಕ್ಕಿನಲ್ಲಿ ವಿಜಯನಗರ ಕಾಲಕ್ಕಿಂತಲೂ ಪೂರ್ವದಲ್ಲಿ ನಿರ್ಮಿತವಾದ ವಿಠ್ಠಲಾಪುರ ಕೆರೆ ಹೆಸರಿನ ಕೆರೆಯಿದೆ. ಈ ಕೆರೆಗೆ ರಾಮಲಿಂಗೇಶ್ವರನ ಕೆರೆ, ರಾಮಲಿಂಗನ ಕೆರೆ ಎಂದು ಸಹ ಕರೆಯಲಾಗುತ್ತದೆ ಪ್ರಾಯಶಃ ಕುಮಾರರಾಮನ ಆಳ್ವಿಕೆ ಕಾಲದಲ್ಲಿ ನಿರ್ಮಾಣ ಹೊಂದಿದ ಈ ಕೆರೆಯಿಂದಲೂ ಸುಮಾರು ೨೦೫ ಹೆಕ್ಟೇರುಗಳಷ್ಟು ಭೂಮಿಯು ಕೃಷಿಗಾಗಿ ನೀರನ್ನು ಪಡೆಯುತ್ತಿದೆ. ಕಾಲುವೆ ಹಾಗೂ ಕೆರೆಗಳಿಂದ ನೀರಾವರಿ ಹೊಂದಲು ಸಾಧ್ಯವಾಗದ ಭೂಮಿಯು ಸಹ ಈ ಗ್ರಾಮದಲ್ಲಿದ್ದು ಅದರಲ್ಲಿ ಬಹುತೇಕ ರೈತರು ತಾವೇ ಸ್ವತಂತ್ರವಾಗಿ ತೆರೆದ ಬಾವಿ ಹಾಗೂ ಕೊಳವೆ ಬಾವಿಗಳನ್ನು ನಿರ್ಮಿಸಿಕೊಂಡಿದ್ದಾರೆ. ಇಂದು ಬಹುತೇಕ ತೆರೆದ ಬಾವಿಗಳು ಭೂಮಿಗಳಿಗೆ ಹೆಚ್ಚು ನೀರನ್ನು ಒದಗಿಸದೇ ಇರುವುದರಿಂದ ಕೊಳವೆ ಬಾವಿಗಳನ್ನೇ ಆಶ್ರಯಿಸಿದವರ ಸಂಖ್ಯೆ ಈ ಗ್ರಾಮದಲ್ಲಿ ಹೆಚ್ಚಾಗಿ ನೋಡಬಹುದು. ಈ ಗ್ರಾಮದಲ್ಲಿ ಸುಮಾರು ಎಪ್ಪತ್ತೆಂಟುರಷ್ಟು ಕೊಳವೆಬಾವಿಗಳನ್ನು ನೋಡಬಹುದು. ಈ ರೀತಿಯ ಬಾವಿಗಳಿಂದ ನೀರಾವರಿಯಾದ ಕ್ಷೇತ್ರ ೩೭೧ ಹೆಕ್ಟೇರುಗಳಷ್ಟಿದೆ. ಇಷ್ಟೇ ಅಲ್ಲದೆ ಕಾಲುವೆ ಹಾಗೂ ನದಿಯಿಂದ ನೀರೆತ್ತಲು ಸಹ ಪಂಪುಸೆಟ್ಟುಗಳನ್ನು ಬಳಸಿಕೊಂಡು ಸಹ ಕೃಷಿ ಭೂಮಿಗೆ ನೀರನ್ನು ಪಡೆಯಲಾಗುತ್ತದೆ. ಒಟ್ಟು ಗ್ರಾಮ ಠಾಣಾ ಪ್ರದೇಶವು ಕೇವಲ ಐವತ್ತೊಂದು ಹೆಕ್ಟೇರುಗಳಷ್ಟು ಮಾತ್ರ ಎಂಬುದು ತಿಳಿದುಬರುತ್ತದೆ.

✷

ಈ ಗ್ರಾಮದಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳ ಸಂಖ್ಯೆಯು ೧,೧೯೯ ಇದ್ದು ಇದರಲ್ಲಿ ಪರಿಶಿಷ್ಟ ಜಾತಿ ಕುಟುಂಬಗಳ ಪ್ರಮಾಣ ೨೭೯ ಹಾಗೂ ಪರಿಶಿಷ್ಟ ಪಂಗಡಗಳ ಕುಟುಂಬ ಪ್ರಮಾಣ ೬೪ರಷ್ಟಿದೆ. ಈ ಗ್ರಾಮದಲ್ಲಿ ಬ್ರಾಹ್ಮಣ, ಲಿಂಗಾಯಿತ, ಕುರುಬ, ಉಪ್ಪಾರ, ಬೆಸ್ತ (ಗಂಗಾಮತ) ಮುಸ್ಲೀಂ, ಮಾದಿಗ, ಚಲುವಾದಿ, ಕ್ಷೌರಿಕ, ಮಡಿವಾಳ, ಸಿಂಪಿಗ, ಅಕ್ಕಸಾಲಿ, ಕಮ್ಮಾರ, ಭೋವಿ, ವಾಲ್ಮೀಕಿ ಮುಂತಾದ ಜಾತಿಗಳು ಕಂಡು ಬರುತ್ತವೆ. ಈ ಗ್ರಾಮದ ಬಲಿಷ್ಟ ಕೋಮು ಲಿಂಗಾಯಿತರದ್ದೇ ಆಗಿದೆ.

೨೦೦೧ರ ಜನಗಣತಿ ಪ್ರಕಾರ ಈ ಗ್ರಾಮದ ಒಟ್ಟು ಜನಸಂಖ್ಯೆ ೬೧೮೨ ರಷ್ಟಿದೆ. ಇದರಲ್ಲಿ ಪುರುಷರು ೩೧೫೧ ಹಾಗೂ ಮಹಿಳೆಯರು ೩೦೨೧ ರಷ್ಟಿದ್ದಾರೆ. ಒಟ್ಟು ತಾಲೂಕು ಜನಸಂಖ್ಯೆಗೆ ಹೋಲಿಸಿದರೆ ಈ ಗ್ರಾಮದ ಜನಸಂಖ್ಯೆ ಪ್ರಮಾಣ ಶೇಕಡ ೧.೬೪ ರಷ್ಟು ಮಾತ್ರವಿದೆ.

ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೧,೪೯೩ ರಷ್ಟಿದ್ದು ಇದರಲ್ಲಿ ಪುರುಷರು ೭೨೪ ಹಾಗೂ ಮಹಿಳೆಯರು ೬೭೯ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೩೨೧ ಇದ್ದು ಇದರಲ್ಲಿ ಪುರುಷರು ೧೮೭ ಹಾಗೂ ಮಹಿಳೆಯರು ೧೪೯ ರಷ್ಟಿದ್ದಾರೆ.

ಗ್ರಾಮದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಒಟ್ಟು ಪ್ರಮಾಣ ಶೇಕಡ ೨೨.೫೬ ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದ ಜನಸಂಖ್ಯೆಯ ಒಟ್ಟು ಪ್ರಮಾಣ ಶೇಕಡ ೫.೨೦ ರಷ್ಟಿದೆ ಇನ್ನುಳಿದ ಇತರೆ ಜನರ ಒಟ್ಟು ಪ್ರಮಾಣ ಶೇಕಡ ೭೨.೨೨ ರಷ್ಟಿದೆ. ಇದರಲ್ಲಿ ಅಕ್ಕಾಸಾಲಿ, ಹಾಗೂ ಕಮ್ಮಾರರ ಒಂದೊಂದು ಕುಟುಂಬಗಳು ಮಾತ್ರ ಈ ಗ್ರಾಮದಲ್ಲಿ ಕಂಡು ಬರುತ್ತಿವೆ. ಈ ಗ್ರಾಮದ ಒಟ್ಟು ಸಾಕ್ಷರತೆಯ ಪ್ರಮಾಣಕ್ಕೆ ಹೋಲಿಸಿದರೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಲ್ಲಿ ಸಾಕ್ಷರತೆಯ ಪ್ರಮಾಣ ಅತ್ಯಲ್ಪವಾಗಿದೆ. ಈ ಗ್ರಾಮದಲ್ಲಿಯೇ ಗ್ರಾಮ ಪಂಚಾಯತಿ ಇದ್ದು ಈ ಗ್ರಾಮ ಪಂಚಾಯತಿಯು ಒಟ್ಟು ಹದಿನಾರು ಜನ ಸದಸ್ಯರನ್ನು ಒಳಗೊಂಡಿದೆ. ಹದಿನಾರು ಜನ ಸದಸ್ಯರಲ್ಲಿ ಪರಿಶಿಷ್ಟ ವರ್ಗದ ಮಹಿಳೆಯರಿಗೆ ಮೀಸಲಿರುವ ಸ್ಥಾನ ಕೇವಲ ಒಂದು ಮಾತ್ರವಾಗಿದೆ.

ಮುದ್ದಾಪುರ ನಂ.೧೦ ಗ್ರಾಮಪಂಚಾಯತಿ

ತಾಲೂಕು ಕೇಂದ್ರದಿಂದ ಸುಮಾರು ೩೦ ಕಿ.ಮೀ ದೂರವಿರುವ ಮುದ್ದಾಪುರ(ನಂ-೧೦)ಹೊಸಪೇಟೆಯಿಂದ ಕಂಪ್ಲಿಗೆ ಹೋಗುವ ದಾರಿಯಲ್ಲಿ ಬರುತ್ತದೆ ಹೋಬಳಿ ಕೇಂದ್ರದಿಂದ

ಎರಡು ಕಿಲೋ ಮೀಟರ್ ದೂರದಲ್ಲಿರುವ ಈ ಗ್ರಾಮ ಹಿಂದೆ ಸಣಾಪುರ ಗ್ರಾಮ ಪಂಚಾಯಿತಿಗೆ ಸೇರಿಸಲ್ಪಟ್ಟಿತು. ಗ್ರಾಮ ಪಂಚಾಯಿತಿಗಳನ್ನು ಮರುವಿಂಗಡಿಸಿದ ತರುವಾಯ ಕಣವಿ ತಿಮ್ಮಾಲಾಪುರ, ಸಣಾಪುರ, ಹಾಗೂ ಮುದ್ದಾಪುರ ಗ್ರಾಮಗಳನ್ನು ಸೇರಿಸಿ ಮುದ್ದಾಪುರ ಗ್ರಾಮ ಪಂಚಾಯಿತಿಯನ್ನು ನಿರ್ಮಿಸಲಾಯಿತು. ಈ ಗ್ರಾಮ ಪಂಚಾಯತಿಯ ಒಟ್ಟು ಭೌಗೋಳಿಕ ವಿಸ್ತೀರ್ಣ ೮೪೬ ಚದರ ಕಿಲೋ ಮೀಟರುಗಳು. ಸಮತಟ್ಟಾದ ಭೂಮಿಯನ್ನು ಹೊಂದಿದ ಈ ಪ್ರದೇಶದ ಕೃಷಿ ಯೋಗ್ಯ ಭೂಮಿಯ ಒಟ್ಟು ವಿಸ್ತೀರ್ಣ ೬೯೯ ಹೆಕ್ಟೇರುಗಳಾಗಿದೆ. ರಾಮಸಾಗರದಿಂದ ಬರುವ ವಿಜಯನಗರ ಕಾಲುವೆ ಈ ಗ್ರಾಮದ ಮೂಲಕ ಹಾದು ಕಂಪ್ಲಿಯ ಸೋಮಪ್ಪನ ಕೆರೆಗೆ ಸೇರಿಲ್ಪಡುತ್ತದೆ. ಈ ಕಾಲುವೆಯ ಉದ್ದ ೨ ಕಿ.ಮೀ.ಗಳು. ಈ ಕಾಲುವೆಯಿಂದ ನೀರಾವರಿಯಾದ ಭೂಮಿಯ ವಿಸ್ತೀರ್ಣ ೩೯೦ ಹೆಕ್ಟೆರುಗಳಷ್ಟಿದೆ. ಈ ಗ್ರಾಮಕ್ಕೆ ಸುಮಾರು ಒಂದುವರೆ (೧.೫) ಕಿ.ಮೀ ದೂರದಲ್ಲಿರುವ ಗೌರಮ್ಮನ ಕೆರೆಯಿಂದಲೂ ನೀರಾವರಿ ಸೌಲಭ್ಯವನ್ನು ಇಲ್ಲಿಯ ಕೃಷಿಕರು ಪಡೆಯುತ್ತಿದ್ದಾರೆ. ಕೆರೆಯಿಂದ ನೀರಾವರಿಯ ಸೌಲಭ್ಯವನ್ನು ಪಡೆಯುವ ಭೂಮಿಯ ವಿಸ್ತೀರ್ಣ ೭೬ ಹೆಕ್ಟೇರುಗಳಷ್ಟಿದೆ. ಹಾಗೆ ತೆರೆದ ಬಾವಿಗಳು ಹಾಗೂ ಕೊಳವೆ ಬಾವಿಗಳಿಂದಲೂ ಭೂಮಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ರೀತಿಯ ಬಾವಿಗಳು ಒಟ್ಟು ೩೮ ಇವೆ. ಇಂಥ ಬಾವಿಗಳಿಂದ ನೀರಾವರಿಯಾದ ಪ್ರದೇಶದ ವಿಸ್ತೀರ್ಣವು ೧೪೬ ಹೆಕ್ಟೇರುಗಳಷ್ಟಿದೆ. ಈ ಗ್ರಾಮದಲ್ಲಿರುವ ಒಟ್ಟು ೬೯೯ ಹೆಕ್ಟೇರುಗಳಷ್ಟಿರುವ ಕೃಷಿ ಯೋಗ್ಯ ಭೂಮಿಯಲ್ಲಿ ಒಟ್ಟು ನೀರಾವರಿ ಸೌಲಭ್ಯ ಹೊಂದಿದ ಕೃಷಿಭೂಮಿಯ ವಿಸ್ತೀರ್ಣ ೬೧೨ ಹೆಕ್ಟೇರುಗಳಾಗಿದೆ. ಇನ್ನುಳಿದ ೮೭ ಹೆಕ್ಟೇರುಗಳಷ್ಟು ಭೂಮಿಯು ಮಳೆಯಾಧಾರಿತ ಒಣ ಬೇಸಾಯವನ್ನು ಆಶ್ರಯಿಸಿದೆ. ಆದರೆ ಬಹುತೇಕರಿಗೆ ನೀರಾವರಿ ಭೂಮಿಯಿರುವುದರಿಂದ ಒಣ ಬೇಸಾಯದ ಕಡೆ ಅಷ್ಟಾಗಿ ಲಕ್ಷ್ಯವನ್ನು ವಹಿಸುವುದಿಲ್ಲ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಣಾಪುರವು ತುಂಗಾಭದ್ರ ನದಿಯ ದಂಡೆಯ ಮೇಲಿದ್ದರೆ ಕಣವಿ ತಿಮ್ಮಲಾಪುರ ಸುತ್ತಲೂ ಗ್ರಾನೇಟ್ ಕಲ್ಲುಗಳನ್ನು ಹೊಂದಿದ ಗುಡ್ಡಗಳಿಂದ ಆವರಿಸಿದೆ. ಮುದ್ದಾಪುರವು ರಾಮಸಾಗರ, ಕಂಪ್ಲಿ ಮಾಗಾಣಿಗಳಿಂದ ಸುತ್ತುವರೆದಿದೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಣವಿ ತಿಮ್ಮಲಾಪುರದಲ್ಲಿ ಕಂಡುಬರುವ ಕುರುಚಲು ಕಾಡಿನ ಹೊರತಾಗಿ ಅಂತಹ ಹೇಳಿಕೊಳ್ಳಬಹುದಾದ ಅರಣ್ಯ ಪ್ರದೇಶವಿಲ್ಲವಾಗಿದೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯ ಒಟ್ಟು ಠಾಣಾ ಪ್ರದೇಶವು ೨೨ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನೆಲೆಸಿರುವ

ಒಟ್ಟು ಜನಸಂಖ್ಯೆ ೨೦೦೧ರ ಪ್ರಕಾರ ೪,೯೨೫ ಇದ್ದು ಇದರಲ್ಲಿ ಪುರುಷರು ೨,೪೮೫ ಹಾಗೂ ಮಹಿಳೆಯರ ೨,೪೪೦ರಷ್ಟಿದ್ದಾರೆ. ಇದರಲ್ಲಿ ಒಟ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ೧,೨೪೫ ರಷ್ಟಿದೆ. ಇದರಲ್ಲಿ ಪುರುಷರು ೬೨೪ ಹಾಗೂ ಮಹಿಳೆಯರು ೬೨೧ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಜನಸಂಖ್ಯೆ ಒಟ್ಟು ೩೨೧ರಷ್ಟಿದೆ. ಇದರಲ್ಲಿ ಪುರುಷರು ೧೬೬ ಹಾಗೂ ಮಹಿಳೆಯರು ೧೬೧ರಷ್ಟಿದ್ದಾರೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಲಿಂಗಾಯುತ, ಗೊಲ್ಲ, ಗಂಗಾಮತ, ಭೋವಿ, ಮುಸ್ಲಿಂ, ಮಾದಿಗ, ಕ್ಷೌರಿಕ, ಅಗಸ, ವಾಲ್ಮೀಕಿ ಮುಂತಾದ ಜಾತಿಗಳು ಕಂಡುಬರುತ್ತಿದ್ದು ಇವುಗಳಲ್ಲಿ ಬಲಿಷ್ಟ ಜಾತಿಯಾಗಿ ಲಿಂಗಾಯಿತ ಹಾಗೂ ಗೊಲ್ಲ ಸಮುದಾಯಗಳು ಕಂಡುಬರುತ್ತವೆ. ಪರಿಶಿಷ್ಟ ಜಾತಿಯವರ ಒಟ್ಟು ಪ್ರಮಾಣ ಶೇಕಡ ೨೫.೨೭ರಷ್ಟಿದೆ ಹಾಗೇ ಪರಿಶಿಷ್ಟ ಪಂಗಡದ ಪ್ರಮಾಣ ಶೇಕಡ ೬.೬೩ರಷ್ಟಿದೆ. ಈ ಗ್ರಾಮಗಳಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳ ಸಂಖ್ಯೆಯ ೯೨೧ ಇದ್ದು ಇದರಲ್ಲಿ ಪರಿಶಿಷ್ಟ ಜಾತಿಯವರ ಕುಟುಂಬಗಳ ಸಂಖ್ಯೆ ೨೪೯ ಹಾಗೂ ಪರಿಶಿಷ್ಟ ಪಂಗಡದವರ ಕುಟುಂಬಗಳ ಸಂಖ್ಯೆ ೬೫ರಷ್ಟಿದೆ.

ನಾಗಲಾಪುರ ಗ್ರಾಮ ಪಂಚಾಯತಿ

ಹೊಸಪೇಟೆಯಿಂದ ತಾಲೂಕಿನಲ್ಲಿರುವ ನಾಗಲಾಪುರ ಗ್ರಾಮವು ತಾಲೂಕು ಕೇಂದ್ರದಿಂದ ೨೮ ಕಿಲೋ ಮೀಟರ್ ದೂರದಲ್ಲಿದೆ. ಈ ಗ್ರಾಮವು ಮರಿಯಮ್ಮನಹಳ್ಳಿ ಹೋಬಳಿಗೆ ಸೇರಿದೆ. ನಾಗಲಾಪುರ ಗ್ರಾಮ ಹಾಗೂ ನಾಗಲಾಪುರ ತಾಂಡ, ಬ್ಯಾಲಕುಂದಿ, ಗರಗ ಗ್ರಾಮಗಳನ್ನು ಸೇರಿಸಿ ಗ್ರಾಮ ಪಂಚಾಯಿತಿಯಾಗಿ ರಚಿಸಲಾಗಿದೆ. ಗ್ರಾಮ ಪಂಚಾಯ್ತಿ ಕೇಂದ್ರವು ನಾಗಲಾಪುರ ಗ್ರಾಮದಲ್ಲಿದೆ. ಒಣ ಬೇಸಾಯವನ್ನೆ ಹೆಚ್ಚಾಗಿ ಅವಲಂಬಿಸಿರುವ ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎರಡು ಕೆರೆಗಳಿವೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯ ಒಟ್ಟು ಭೌಗೋಳಿಕ ವಿಸ್ತೀರ್ಣವು ೨,೯೮೩ ಹೆಕ್ಟೇರುಗಳಷ್ಟಿದೆ. ಮಳೆಯಾಶ್ರಿತ ನೀರನ್ನು ಮಾತ್ರ ಅವಲಂಬಿಸಿರುವ ಈ ಕೆರೆಗಳಲ್ಲಿ ಮಳೆಯಾದರೆ ಮಾತ್ರ ನೀರು ಸಂಗ್ರಹವಾಗುತ್ತದೆ ಮಳೆ ಸಮರ್ಪಕವಾಗಿ ಬಾರದಿದ್ದಲ್ಲಿ ಈ ಕೆರೆಯನ್ನಾಶ್ರಯಿಸಿ ಬೇಸಾಯದಲ್ಲಿ ತೊಡಗಿರುವ ಕೃಷಿ ಭೂಮಿಗಳಿಗೆ ನೀರಾವರಿ ಸೌಲಭ್ಯ ಇರುವುದಿಲ್ಲ. ನೀರಿಗಾಗಿ ಕೆರೆಗಳನ್ನಾಶ್ರಯಿಸಿದ ಒಟ್ಟು ಕೃಷಿ ಭೂಮಿ ೫೦೫ ಹೆಕ್ಟೇರುಗಳಷ್ಟಿದೆ. ಇದರೊಂದಿಗೆ ಕೊಳವೆ ಬಾವಿಗಳನ್ನು ಸಹ ಈ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೃಷಿ ಭೂಮಿಗೆ ನೀರುಣಿಸಲು ಬಳಸಲಾಗುತ್ತದೆ.

ಅಂದರೆ ವಿದ್ಯುತ್‌ಚ್ಛಕ್ತಿ ಹೊಂದಿದ ನೀರಾವರಿ ಪಂಪ್ ಸೆಟ್‌ಗಳು ೧೩೮ ರಷ್ಟಿವೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯ ಸರಹದ್ದಿಗೆ ಸೇರಿದ ಅರಣ್ಯ ಪ್ರದೇಶವು ೧,೮೨೩ ಹೆಕ್ಟೇರುಗಳಷ್ಟಿದೆ. ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಒಟ್ಟು ಠಾಣಾ ಪ್ರದೇಶವು ೧೦ ಹೆಕ್ಟೇರುಗಳಷ್ಟಿದ್ದು ಇದರಲ್ಲಿ ಒಟ್ಟು ೭೩೫ ರಷ್ಟು ಕುಟುಂಬಗಳು ನೆಲೆಸಿರುವುದನ್ನು ನೋಡಬಹುದು. ೨೦೦೧ರ ಜನಗಣತಿ ಪ್ರಕಾರ ಈ ಗ್ರಾಮ ಪಂಚಾಯತಿ ವ್ಯಾಪ್ತಿಯ ಒಟ್ಟು ಜನಸಂಖ್ಯೆಯು ೪,೩೨೦ ರಷ್ಟಿದೆ, ಇದರಲ್ಲಿ ಪುರುಷರು ೨,೧೯೯ ಹಾಗೂ ಮಹಿಳೆಯರು ೨,೧೨೧ರಷ್ಟಿದ್ದಾರೆ. ಇದರಲ್ಲಿ ಒಟ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆ ೧,೫೭೮ ಕಂಡುಬರುತ್ತದೆ. ಅದರಲ್ಲಿ ಪರುಷರು ೭೯೫ ಹಾಗೂ ಮಹಿಳೆಯರು ೭೮೩ರಷ್ಟಿದ್ದಾರೆ. ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧,೭೧೦ರಷ್ಟಿದೆ. ಇದರಲ್ಲಿ ಪುರುಷರು ೮೫೮ ಹಾಗೂ ಮಹಿಳೆಯರು ೮೩೨ರಷ್ಟಿದ್ದಾರೆ. ಅಂದರೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಪ್ರಮಾಣವು ಶೇಕಡ ೩೬.೫೨ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಪ್ರಮಾಣ ಶೇಕಡ ೩೯.೫೮ರಷ್ಟಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೭೬.೧ರಷ್ಟು ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರೇ ನೆಲೆನಿಂತಿರುವುದು ಕಂಡುಬರುತ್ತದೆ. ಇನ್ನುಳಿದಂತೆ ಶೇಕಡ ೨೩.೯ರಷ್ಟು ಮಾತ್ರ ಇತರ ಸಮುದಾಯದವರು ನೆಲೆನಿಂತಿದ್ದಾರೆ. ಈ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಲಿಂಗಾಯಿತ, ಗಂಗಾಮತ, ವಾಲ್ಮೀಕಿ, ಮಾದಿಗ, ಮಡಿವಾಳ, ಬಡಿಗ, ಮುಸ್ಲೀಂ ಈಡಿಗ ಮುಂತಾದ ಸಮುದಾಯಗಳು ನೆಲೆನಿಂತಿವೆ.

ಡಣಾಯಕನ ಕೆರೆ ಗ್ರಾಮಪಂಚಾಯತಿ

ಡಣಾಯಕನ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಡಣಾಯಕನಕೆರೆ, ಕೆ. ಗೊಲ್ಲರಹಳ್ಳಿ, ದೇವಲಾಪುರ, ನಂದಿಬಂಡೆ ಗ್ರಾಮುಗಳನ್ನು ಸೇರಿಸಿ ಗ್ರಾಮು ಪಂಚಾಯಿತಿಯುನ್ನು ನಿರ್ಮಿಸಲಾಗಿದೆ. ಡಣಾಯಕನಕೆರೆಯಲ್ಲಿ ಗ್ರಾಮಪಂಚಾಯತಿಯ ಕಛೇರಿಯ್ಯು ಇದೆ. ಈ ಗ್ರಾಮ ಪಂಚಾಯತಿಯು ಹೋಬಳಿಯಿಂದ ಸುಮಾರು ನಾಲ್ಕು ಕಿಲೋ ಮೀಟರ್ ದೂರಲ್ಲಿದೆ, ಹಾಗೂ ತಾಲೂಕು ಕೇಂದ್ರದಿಂದ ಸುಮಾರು ೨೧ ಕಿ.ಮೀ ದೂರದಲ್ಲಿದೆ. (ಚಿತ್ರದುರ್ಗ ಸೊಲ್ಲಾಪುರ) ರಾಷ್ಟ್ರೀಯ ಹೆದ್ದಾರಿ ೧೩ ರಕ್ಕೆ ಹೊಂದಿಕೊಂಡಂತಿರುವ ಈ ಗ್ರಾಮ ಪಂಚಾಯತ್ ವ್ಯಾಪ್ತಿಯ ಒಟ್ಟು ಭೌಗೋಳಿಕ ವಿಸ್ತೀರ್ಣವು ೨,೦೧೦ ಚದರ ಕಿಲೋಮೀಟರಗಳಷ್ಟಿದೆ ಡಣಾಯಕನ ಕೆರೆಯಿಂದ

ಗೊಲ್ಲರಹಳ್ಳಿ ಗ್ರಾಮವು ೨ ಕಿ.ಮೀ ದೂರದಲ್ಲಿದೆ, ಹಾಗೆ ದೇವಲಾಪುರ ಎರಡು ಕಿ. ಮೀ ದೂರದಲ್ಲಿದ್ದರೆ ನಂದಿಬಂಡೆಯು ಸುಮಾರು ಆರು ಕಿ, ಮೀ. ದೂರದಲ್ಲಿದೆ. ಗೊಲ್ಲರಹಳ್ಳಿ ಹಾಗೂ ಡಣಾಯಕನಕೆರೆ ಹಾಗೂ ನಂದಿಬಂಡೆ ಗ್ರಾಮಗಳು ತಲಾ ಒಂದೊಂದು ಕೆರೆಗಳನ್ನು ಹೊಂದಿವೆ. ಕರ್ನಾಟಕದಲ್ಲಿಯೆ ಅತೀ ದೊಡ್ಡ ಕೆರೆಗಳಲ್ಲಿ ಮೂರನೆ ಸ್ಥಾನವನ್ನು ಹೊಂದಿದ ಕೆರೆ ಡಣಾಯಕನ ಕೆರೆಯಾಗಿದೆ. ವಿಜಯನಗರ ಕಾಲದ ದಂಡನಾಯಕನೊಬ್ಬ ಕಟ್ಟಿಸಿದ ಕೆರೆಯಿದಾದುದರಿಂದ ಈ ಗ್ರಾಮಕ್ಕೆ ಡಣಾಯಕನಕೆರೆ ಎಂದು ಹೆಸರು ಬಂದಿದೆ. ಡಣಾಯಕನಕೆರೆ ಹಾಗೂ ಗೊಲ್ಲರಹಳ್ಳಿ, ನಂದಿಬಂಡೆ ಮೂರು ಗ್ರಾಮಗಳ ಕೆರೆಗಳಿಂದ ನೀರಾವರಿ ಹೊಂದಿದ ಕೃಷಿ ಭೂಮಿ ಪ್ರದೇಶವು ೨೦೩ ಹೆಕ್ಟೇರುಗಳಷ್ಟಿದೆ. ಕೇವಲ ಮಳೆಯಾಶ್ರಿತ ನೀರನ್ನೆ ಅವಲಂಬಿಸಿರುವ ಈ ಕೆರೆಗಳು ಮಳೆಬಾರದ ವರ್ಷ ಒಣಗಿ ನಿಲ್ಲುವುದನ್ನು ಕಾಣಬಹುದಾಗಿದೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೆರೆಯಿಂದ ನೀರಾವರಿ ಸೌಲಭ್ಯ ಪಡೆಯಲಾಗುತ್ತದೆ. ಅದೇ ರೀತಿ ಆ ಪ್ರದೇಶದಲ್ಲಿ ಸುಮಾರು ಹನ್ನೆರಡು ಕೊಳವೆಬಾವಿ ಹಾಗೂ ತೆರೆದ ಬಾವಿಗಳು ಇವೆ. ಇವುಗಳಿಂದ ನೀರಾವರಿ ಸೌಲಭ್ಯ ಹೊಂದಿದ ಕೃಷಿ ಭೂಮಿ ೪೨ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕರುಚಲು ಸಸ್ಯಗಳು ಹಾಗೂ ತಾಳೆ ಮರಗಳಿಂದ ಕೂಡಿದ ಅರಣ್ಯ ಕಂಡು ಬರುತ್ತಿದ್ದು ಆ ಅರಣ್ಯದ ಒಟ್ಟು ವಿಸ್ತೀರ್ಣ ೫೭೫ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯತಿಗಳ ಒಟ್ಟು ಗ್ರಾಮ ಠಾಣಾ ಪ್ರದೇಶವು ೩೭ ಹೆಕ್ಟೇರುಗಳಲ್ಲಿ ಹರಡಿಕೊಂಡಿರುವುದನ್ನು ಕಾಣಬಹುದು. ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎರಡು ಸ್ಪಾಜ್ ಐರನ್ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ. ಹಾಗೂ ಇತ್ತೀಚೆಗೆ ನಾಸ್ತಿಕ್ ಎಂಬ ಹೆಸರಿನ ಸ್ಪಾಂಚ್ ಐರನ್ ಕಾರ್ಖಾನೆ ತಲೆ ಎತ್ತುತ್ತಿದೆ ಈ ಮೂರು ಕಾರ್ಖಾನೆಗಳಿಂದ ಅಂತಹ ಮಹತ್ವದ ಹುದ್ದೆಗಳು ಈ ಗ್ರಾಮಸ್ಥರಿಗೆ ದೊರೆಯರಿದ್ದರೂ ಸಣ್ಣಪುಟ್ಟ ಕೂಲಿ ಕೆಲಸಗಳನ್ನು ಮಾತ್ರ ನೀಡುತ್ತಿವೆ. ಈ ಮೂರು ಕಾರ್ಖಾನೆಗಳ ಜೊತೆಗೆ ಈ ಗ್ರಾಮಕ್ಕೆ ಹತ್ತಿರದಲ್ಲಿಯೇ ಡಣಾಪುರ ಸ್ಪಾಂಜ್ ಐರನ್ ಕಾರ್ಖಾನೆಯು ಕಾರ್ಯ ನಿರ್ವಹಿಸುತ್ತಿದೆ. ಇವಲ್ಲದೆ ಗ್ರೈನೇಟ್ ಕಲ್ಲು ಹಾಗೂ ಕಬ್ಬಿಣ ಕಲ್ಲನ್ನು ನುರಿಸುವ ಮೂರು ಕ್ರಷರ್‌ಗಳು ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ತಲೆ ಎತ್ತಿವೆ. ಇವೆಲ್ಲವುಗಳಿಂದ ರೈತರ ಕೃಷಿ ಚಟುವಟಿಕೆಗೆ ಕೃಷಿ ಕಾರ್ಮಿಕರು ದೊರೆಯದಂತಾಗಿದೆ. ಅಕಸ್ಮಾತ್ ದೊರೆತರೂ ಕೃಷಿ ಕೂಲಿ ದರ ಹೆಚ್ಚಾಗಿದೆ. ಈ ಕಾರ್ಖಾನೆಗಳ ಚಟುವಟಿಕೆಯಿಂದ ಕೂಲಿ ದರ ಹೆಚ್ಚಿದೆಯಾದರೂ ಕಾರ್ಮಿಕರ ಆರೋಗ್ಯದ

ಮೇಲೆ ದುಷ್ಪರಿಣಾಮಗಳು ಉಂಟಾಗುತ್ತಿರುವುದನ್ನು ಗಮನಿಸಬಹುದಾಗಿದೆ. ೨೦೦೧ ರ ಜನಗಣತಿ ಪ್ರಕಾರ ಡಣಾಯಕನ ಕೆರೆಯ ಗ್ರಾಮ ಪಂಚಾಯತಿ ವ್ಯಾಪ್ತಿಯ ಒಟ್ಟು ಜನಸಂಖ್ಯೆ ೫,೮೯೭ ರಷ್ಟಿದೆ. ಇದರಲ್ಲಿ ಪುರುಷರು ೨,೯೫೦ ಹಾಗೂ ಮಹಿಳೆಯರು ೨,೯೪೭ ರಷ್ಟಿದ್ದಾರೆ, ಹಾಗೇ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೭೨೨ ಇದ್ದು ಇದರಲ್ಲಿ ಪುರುಷರು ೩೬೭ ಹಾಗೂ ಮಹಿಳೆಯರು ೩೫೫ ರಷ್ಟಿದ್ದಾರೆ. ಹಾಗೇ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧,೦೯೬ ಇದ್ದು ಇದರಲ್ಲಿ ಪುರುಷರು ೫೬೧ ಹಾಗೂ ಮಹಿಳೆಯರು ೫೩೫ ರಷ್ಟಿದ್ದಾರೆ. ಡಣಾಯಕನ ಕೆರೆಯ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಒಟ್ಟು ಕುಟುಂಬಗಳು ೮೫೨ ರಷ್ಟು ಕಂಡುಬರುತ್ತವೆ.

೩.೬.೨. ಸಿರಗುಪ್ಪ ತಾಲೂಕು

ಸಿರಗುಪ್ಪ ತಾಲೂಕು ಹೊಸಪೇಟೆ, ಬಳ್ಳಾರಿ, ಸಿಂಧನೂರು ತಾಲೂಕುಗಳನ್ನು ಹಾಗೂ ಆಂಧ್ರದ ಗಡಿಯನ್ನು ಹೊಂದಿದೆ. ಆಂದ್ರದ ಗಡಿಗೆ ಹೊಂದಿಕೊಂಡೇ ಇರುವ ಈ ತಾಲೂಕಿನಲ್ಲಿ ತುಂಗಾಭದ್ರಾ ನದಿಯಿಂದಾಗಿ ನೀರಾವರಿ ಕಂಡುಬರುತ್ತದೆ. ಭತ್ತ, ಕಬ್ಬು ಮೆಕ್ಕೆಜೋಳ, ಜೋಳ, ಹತ್ತಿ ಮುಂತಾಗಿ ಬೆಳೆಯಲಾಗುತ್ತದೆ. ಈ ತಾಲೂಕಿನ ಪ್ರಮುಖ ಬೆಳೆಗಳೆಂದರೆ ಕಬ್ಬು ಮತ್ತು ಭತ್ತವಾಗಿವೆ. ಭೌಗೋಳಿಕವಾಗಿ ಬಳ್ಳಾರಿ ಜಿಲ್ಲೆಯಲ್ಲಿಯೇ ವಿಸ್ತಾರದಲ್ಲಿ ಈ ತಾಲೂಕು ನಾಲ್ಕನೇ ಸ್ಥಾನವನ್ನು ಪಡೆದಿದೆ. ಈ ತಾಲೂಕಿನ ಒಟ್ಟು ವಿಸ್ತೀರ್ಣವು ೧,೦೩೬.೧೭ ಚ.ಕಿ.ಮೀಗಳಷ್ಟಿದೆ. ಪ್ರಾಗೈತಿಹಾಸಿಕ ಕುರುಹುಗಳನ್ನು ಅಡಗಿಸಿಟ್ಟುಕೊಂಡಿರುವ ಗುಡ್ಡಗಳು ಈ ತಾಲೂಕಿನಲ್ಲಿ ಕಂಡುಬರುತ್ತವೆ. ಕೃಷಿಯನ್ನು ಆಧರಿಸಿದ ಪ್ರಮುಖ ತಾಲೂಕು ಇದಾಗಿದೆ. ಈ ತಾಲೂಕು ಆರ್ಥಿಕವಾಗಿ ಮುಂದಿದ್ದರೂ ಜಿಲ್ಲೆಯಲ್ಲಿಯೇ ಶೈಕ್ಷಣಿಕವಾಗಿ ಹಿಂದುಳಿದ ತಾಲೂಕೆಂದು ಗುರುತಿಸಲ್ಪಟ್ಟಿದೆ. ಒಟ್ಟು ೮೪ ಗ್ರಾಮಗಳನ್ನು ಹೊಂದಿರುವ ಈ ತಾಲೂಕಿನಲ್ಲಿ ೪,೨೯೮ ಕುಟುಂಬಗಳು ನೆಲೆನಿಂತಿವೆ. ಆಂಧ್ರದ ಗಡಿಯಾಗಿರುವುದರಿಂದ ಆಂಧ್ರದಿಂದ ವಲಸೆ ಬಂದ ಕೃಷಿಕರು ಅಲ್ಲಲ್ಲಿ ಚಿಕ್ಕ ಚಿಕ್ಕ ಕ್ಯಾಂಪ್‌ಗಳನ್ನು ನಿರ್ಮಿಸಿಕೊಂಡು ಕೃಷಿ ಚಟುವಟಿಕೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ೨೨೭ ರಷ್ಟು ಜನ ಸಾಂದ್ರತೆಯನ್ನು ಈ ತಾಲೂಕು ಹೊಂದಿದೆ. ೨೦೦೧ ರ ಜನಗಣತಿ ಪ್ರಕಾರ ಈ ತಾಲೂಕಿನ ಜನಸಂಖ್ಯೆ ಒಟ್ಟು ೨,೩೫,೩೪೪ ರಷ್ಟಿದೆ. ಇದರಲ್ಲಿ ಪುರುಷರು ೧,೧೭,೭೩೧ ಹಾಗೂ ಮಹಿಳೆಯರು ೧,೧೭,೬೧೩ ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣವು

೪೫,೫೧೧ರಷ್ಟಿದೆ. ಪರಿಶಿಷ್ಟ ಜಾತಿಯವರಲ್ಲಿ ಪುರುಷರು ೨೨.೬೦೫ ಹಾಗೂ ಮಹಿಳೆಯರು ೨೨.೯೦೬ರಷ್ಟಿದ್ದಾರೆ. ಹಾಗೇ ಪರಿಶಿಷ್ಟ ಪಂಗಡದ ಜನಸಂಖ್ಯೆ ೪೨,೦೦೯ರಷ್ಟಿದೆ. ಇದರಲ್ಲಿ ಪುರುಷರು ೨೦.೯೫೦ ಹಾಗೂ ಮಹಿಳೆಯರು ೨೧.೦೫೯ರಷ್ಟಿದ್ದಾರೆ. ಅಂದರೆ ತಾಲೂಕಿನಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣವು ಶೇಕಡ ೧೯.೩ರಷ್ಟಿದ್ದರೆ ಪರಿಶಿಷ್ಟ ಪಂಗಡದವರ ಪ್ರಮಾಣ ಶೇಕಡ ೧೭.೯ರಷ್ಟಿದೆ. ಈ ತಾಲೂಕಿನಲ್ಲಿ ಪುರುಷರ ಸಾಕ್ಷರತೆಯ ಪ್ರಮಾಣಕ್ಕಿಂತ ಮಹಿಳೆಯರ ಸಾಕ್ಷರತೆಯ ಪ್ರಮಾಣ ಅತೀ ಕಡಿಮೆಯಾಗಿರುವುದನ್ನು ಕಾಣಬಹುದಾಗಿದೆ. ಈ ತಾಲೂಕಿನ ಸಾಕ್ಷರತೆಯ ಪ್ರಮಾಣ ಕೇವಲ ಶೇಕಡ ೪೩.೬ರಷ್ಟಿದೆ. ಇದರಲ್ಲಿ ಪರುಷರು ಶೇಕಡ ೫೬.೯ ರಷ್ಟಿದ್ದರೆ ಮಹಿಳೆಯರ ಸಾಕ್ಷರತೆಯ ಶೇಕಡ ೩೦.೩ರಷ್ಟಿದೆ. ಈ ಜಿಲ್ಲೆಯ ಇತರೆ ತಾಲೂಕುಗಳಿಗೆ ಹೋಲಿಸಿದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಈ ತಾಲೂಕು ತುಂಬಾ ಹಿಂದುಳಿದಿರುವುದು ಕಂಡುಬರುತ್ತದೆ.

ಸಿರಿಗೇರಿ ಗ್ರಾಮ ಪಂಚಾಯತ್

ಸಿರಿಗೇರಿ ಗ್ರಾಮವು ಸಿರಗುಪ್ಪ ತಾಲೂಕಿನ ದೊಡ್ಡ ಗ್ರಾಮಗಳಲ್ಲಿ ಒಂದು. ತಾಲೂಕು ಕೇಂದ್ರದಿಂದ ಈ ಗ್ರಾಮವು ಸುಮಾರು ೩೦.೩ ಕಿ.ಮೀಗಳಷ್ಟು ದೂರವಿದೆ. ಈ ಗ್ರಾಮವು ಸಿರಿಗೇರಿ ಗ್ರಾಮಪಂಚಾಯತ್ ಕಛೇರಿಯನ್ನು ಒಳಗೊಂಡಿದೆ. ಈ ಗ್ರಾಮ ಪಂಚಾಯತಿಯ ಒಟ್ಟು ಭೌಗೋಳಿಕ ವಿಸ್ತೀರ್ಣ ೩,೭೭೩ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಗ್ರೈನೇಟ್ ಗುಡ್ಡಗಳು ಆವರಿಸಿಕೊಂಡಿದೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸಾಗುವಳಿಗೆ ಲಭ್ಯವಿರುವ ಭೂಮಿಯ ವಿಸ್ತೀರ್ಣ ೩,೩೬೪ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ತುಂಗಾಭದ್ರ ಕಾಲುವೆಯು ಸುಮಾರು ಎರಡು ಕಿ.ಮೀ ನಷ್ಟು ಉದ್ದಕ್ಕೆ ಹರಿಯುತ್ತದೆ. ಈ ಕಾಲುವೆಯಿಂದಾಗಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ದೊರೆತಂತಾಗಿದೆ. ಕಾಲುವೆ ನೀರು ಉಣಿಸಲು ಸಾಧ್ಯವಾಗದ ಭೂಮಿಗಳಿಗೆ ಕೊಳವೆ ಬಾವಿಯ ನೀರನ್ನು ಪೂರೈಸಲಾಗುತ್ತದೆ. ಈ ರೀತಿಯ ಒಟ್ಟು ಹದಿನೈದು ಬಾವಿಗಳು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಂಡುಬರುತ್ತವೆ. ಇಂತಹ ಬಾವಿಗಳಿಂದಾಗಿ ನೀರಾವರಿಗೊಂಡ ಕೃಷಿ ಪ್ರದೇಶವು ಸುಮಾರು ೭೫ ಹೆಕ್ಟೇರುಗಳಷ್ಟಾಗುತ್ತದೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕೃಷಿಗಾಗಿ ನೀರಾವರಿಗೊಂಡ ಭೂಮಿಯ ವಿಸ್ತೀರ್ಣ ೨೩೯ ಹೆಕ್ಟೇರುಗಳಾಗಿದೆ. ಒಟ್ಟು ಗ್ರಾಮ ಪಂಚಾಯತ್

ವ್ಯಾಪ್ತಿಯ ಠಾಣಾ ಪ್ರದೇಶವು ೨೭ ಹೆಕ್ಟೇರುಗಳಷ್ಟಿದೆ. ಈ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ನೆಲೆನಿಂತಿರುವ ಕುಟುಂಬಗಳ ಸಂಖ್ಯೆಯು ೧,೮೯೯ರಷ್ಟಿದೆ. ಇದರಲ್ಲಿ ೩೪೭ ಪರಿಶಿಷ್ಟ ಜಾತಿ ಕುಟುಂಬಗಳು ಹಾಗೂ ೪೩೬ ಪರಿಶಿಷ್ಟ ಪಂಗಡದ ಕುಟುಂಬಗಳು ಕಂಡುಬರುತ್ತವೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯ ಒಟ್ಟು ಜನಸಂಖ್ಯೆ ೨೦೦೧ರ ಪ್ರಕಾರ ೧೦,೧೨೨ರಷ್ಟಿದೆ. ಇದರಲ್ಲಿ ಪುರುಷರು ೫,೦೮೪ ಹಾಗೂ ಮಹಿಳೆಯರು ೫,೦೩೮ರಷ್ಟಿದ್ದಾರೆ. ಪರಿಶಿಷ್ಟ ಜಾತಿಯವರ ಜನಸಂಖ್ಯೆ ಒಟ್ಟು ೧,೭೩೫ ಇದ್ದು ಇದರಲ್ಲಿ ಪುರುಷರು ೮೬೩ ಹಾಗೂ ಮಹಿಳೆಯರು ೮೭೨ ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ಒಟ್ಟು ೨,೧೮೦ರಷ್ಟಿದ್ದು ಇದರಲ್ಲಿ ಪುರುಷರು ೧,೦೯೩ ಹಾಗೂ ಮಹಿಳೆಯರು ೧,೦೮೭ರಷ್ಟು ಕಂಡು ಬರುತ್ತಾರೆ.

ಉಪ್ಪಾರ ಹೊಸಹಳ್ಳಿ ಗ್ರಾಮಪಂಚಾಯತಿ

ತಾಲೂಕು ಕೇಂದ್ರದಿಂದ ಸುಮಾರು ೧೨ ಕಿ.ಮೀ ದೂರವಿರುವ ಈ ಗ್ರಾಮವು ಭೌಗೋಳಿಕವಾಗಿ ೩೯೭೬ ಹೆಕ್ಟೇರುಗಳಷ್ಟು ವಿಸ್ತೀರ್ಣವಾಗಿದೆ. ಉಪ್ಪಾರ ಹೊಸಹಳ್ಳಿ, ಬಲಕುಂದಿ ಗ್ರಾಮಗಳನ್ನು ಸೇರಿಸಿ ಒಂದು ಗ್ರಾಮ ಪಂಚಾಯಿತಿಯಾಗಿ ರೂಪಿಸಲಾಗಿದೆ. ಉಪ್ಪಾರ ಹೊಸಹಳ್ಳಿಯಿಂದ ಬಲಕುಂದಿಯು ಸುಮಾರು ಆರು ಕಿ.ಮೀಗಳಷ್ಟು ದೂರವಿದೆ. ಈ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಉಪ್ಪಾರ ಹೊಸಳ್ಳಿ ಗ್ರಾಮವು ಸಮತಟ್ಟಾದ ಭೂಮಿಯನ್ನು ಹೊಂದಿದ್ದರೆ ಬಲಕುಂದಿ ಗ್ರಾಮವು ಒಂದು ಕಡೆ ಸಮತಟ್ಟಾದ ಭೂಮಿ ಮತ್ತೊಂದು ಕಡೆ ಗುಡ್ಡಗಳನ್ನು ಹೊಂದಿದೆ: ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು ೩,೨೮೫ ಹೆಕ್ಟೇರುಗಳಷ್ಟು ಭುಮಿಯು ಸಾಗುಗಳಿ ಮಾಡಲು ಯೋಗ್ಯವಾಗಿದೆ. ತುಂಗಾಭದ್ರ ಬಲದಂಡೆಯ ಹೆಚ್.ಎಲ್.ಸಿ. ಕಾಲುವೆ ಈ ಗ್ರಾಮ ಪಂಚಾಯತಿ ವ್ಯಾಪ್ತಿಯೊಳಗೆ ಹಾದು ಹೋಗುತ್ತದೆ. ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯೊಳಗೆ ಹರಿಯುವ ಕಾಲುವೆಯು ಆರು ಕಿ.ಮೀ.ಗಳಷ್ಟು ಉದ್ದಕ್ಕೆ ಹರಿಯುತ್ತದೆ. ಈ ಕಾಲುವೆಯಿಂದಾಗಿ ನೀರಾವರಿ ಹೊಂದಿದ ಪ್ರದೇಶವು ೫೭೪ ಹೆಕ್ಟೇರುಗಳಷ್ಟಿದೆ. ಕಾಲುವೆಯ ಹೊರತಾಗಿ ಇತರ ಮೂಲಗಳಿಂದ ನೀರಾವರಿಗೊಂಡ ಪ್ರದೇಶವು ೯೩ ಹೆಕ್ಟೇರುಗಳಷ್ಟಿದೆ. ಹೀಗಾಗಿ ಉಪ್ಪಾರ ಹೊಸಹಳ್ಳಿಯ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೀರಾವರಿಗೊಂಡ ಒಟ್ಟು ಭೂ ಪ್ರದೇಶ ೬೬೭ ಹೆಕ್ಟೇರುಗಳಷ್ಟಾಗುತ್ತದೆ. ಇಲ್ಲಿಯ ಮುಖ್ಯ ಬೆಳೆಯು ಭತ್ತವಾಗಿದ್ದು ಒಣಭೂಮಿಯಲ್ಲಿ ರಾಗಿ, ಜೋಳ, ಅಕ್ಕಡಿಕಾಳು ಮುಂತಾದವುಗಳನ್ನು ಬೆಳೆಯಲಾಗುತ್ತದೆ. ಈ ಗ್ರಾಮ ಪಂಚಾಯತಿಯ ಒಟ್ಟು ಗ್ರಾಮ ಠಾಣಾ

ಪ್ರದೇಶ ೯ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಟ್ಟು ೧,೩೦೩ ಕುಟುಂಬಗಳು ನೆಲೆನಿಂತಿದ್ದು ಇದರಲ್ಲಿ ಪರಿಶಿಷ್ಟ ಜಾತಿಗಳ ಕುಟುಂಬಗಳು ೨೦೫ ರಷ್ಟಿವೆ ಹಾಗೂ ಪರಿಶಿಷ್ಟ ಪಂಗಡದ ಕುಟುಂಬಗಳು ಒಟ್ಟು ೯೩ ರಷ್ಟಿವೆ.

೨೦೦೧ ರ ಜನಗಣತಿ ಪ್ರಕಾರ ಈ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ನೆಲೆಸಿದ ಒಟ್ಟು ಜನಸಂಖ್ಯೆಯು ೭,೦೫೧ ಇದ್ದು, ಇದರಲ್ಲಿ ಪುರುಷರು ೩,೫೪೦ ಹಾಗೂ ಮಹಿಳೆಯರು ೩,೫೧೧ ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆಯ ೧,೧೨೯ ಇದ್ದು ಪರಿಶಿಷ್ಟ ಜಾತಿಯ ಪುರುಷರು ೫೮೧ ಹಾಗೂ ಮಹಿಳೆಯರು ೫೪೮ ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೪೬೯ ಇದ್ದು ಪುರುಷರು ೨೨೭ ಹಾಗೂ ಮಹಿಳೆಯರು ೨೪೨ ರಷ್ಟಿದ್ದಾರೆ. ಅಂದರೆ ಗ್ರಾಮ ಪಂಚಾಯ್ತಿಯ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯು ಜನಸಂಖ್ಯಾ ಪ್ರಮಾಣವು ಶೇ ೧೬.೦೧ ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದವರ ಪ್ರಮಾಣವು ಶೇ ೬.೬೫ ರಷ್ಟಿದೆ. ಈ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸಾಕ್ಷರತೆಯ ಪ್ರಮಾಣ ತುಂಬಾ ಶೋಚನೀಯವಾಗಿದೆ.

ದೇಶನೂರು ಗ್ರಾಮಪಂಚಾಯತಿ

ತಾಲೂಕು ಕೇಂದ್ರದಿಂದ ಐದು ಕಿ.ಮೀ ದೂರದಲ್ಲಿರುವ ದೇಶನೂರು ಗ್ರಾಮವು ಸಮತಟ್ಟಾದ ಭೂಮಿಯನ್ನು ಹೊಂದಿದೆ. ತುಂಗಾಭದ್ರ ನದಿ ದಂಡೆಗೆ ಹೊಂದಿಕೊಂಡಂತಿರುವ ಈ ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ ೧,೪೫೨ ಹೆಕ್ಟೇರುಗಳಷ್ಟಿದೆ. ಆದರೆ ಸಾಗುವಳಿ ಮಾಡಲು ಯೋಗ್ಯವಾದ ಭೂಮಿಯು ಪ್ರಮಾಣ ಮಾತ್ರ ೮೬೩ ಹೆಕ್ಟೇರುಗಳಷ್ಟಿದೆ. ಇದರಲ್ಲಿ ನೀರಾವರಿ ಹೊಂದಿದ ಒಟ್ಟು ಭೂಮಿ ೨೫೨ ಹೆಕ್ಟೇರುಗಳಷ್ಟು ಮಾತ್ರ ಕಂಡು ಬರುತ್ತದೆ. ಕಾಲುವೆಯ ನೀರನ್ನು ಉಪಯೋಗಿಸಿಕೊಂಡು ಕೃಷಿ ಮಾಡಲ್ಪಡುವ ಭೂಮಿಯು ೪೫ ಹೆಕ್ಟೇರುಗಳಷ್ಟಿದೆ. ಇದರ ಹೊರತಾಗಿ ನೇರವಾಗಿ ನದಿಯಿಂದ ನೀರನ್ನು ಪಂಪುಸೆಟ್ಟುಗಳ ಮೂಲಕ ಪಡೆದು ಕೃಷಿಗೊಳಪಟ್ಟ ಭೂಮಿಯ ಪ್ರಮಾಣವೇ ಹೆಚ್ಚಾಗಿದೆ. ಈ ರೀತಿ ನದಿಗೆ ಅಳವಡಿಸಿದ ಪಂಪ್‌ಸೆಟ್‌ಗಳೇ ೧೩೯ ರಷ್ಟಿವೆ. ಬಳ್ಳಾರಿ ಜಾಲಿ ಹಾಗೂ ಇತರೆ ಕುರುಚಲು ಕಾಡನ್ನು ಹೊಂದಿರುವ ಈ ಗ್ರಾಮದ ಅರಣ್ಯ ಪ್ರದೇಶವು ಸುಮಾರು ೨೦ ಹೆಕ್ಟೇರುಗಳಷ್ಟಿದೆ. ಒಟ್ಟು ಗ್ರಾಮ ಪಂಚಾಯಿತಿ ವ್ಯಾಪ್ತಿಯ

ಗ್ರಾಮ ಠಾಣಾ ಪ್ರದೇಶವು ೩೭ ಚ.ಕಿ.ಮೀ ಗಳಷ್ಟು ಹರಡಿಕೊಂಡಿದೆ. ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳು ೧,೧೫೦ ರಷ್ಟಿವೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಕುಟುಂಬಗಳು ಒಟ್ಟು ೪೦೭ ಇದ್ದು ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆ ೮೯ ರಷ್ಟಿದೆ. ೨೦೦೧ ರ ಜನಗಣತಿ ಪ್ರಕಾರ ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಜನಸಂಖ್ಯೆ ೬,೧೭೬ ಇದ್ದು ಇದರಲ್ಲಿ ಪುರುಷರು ೩,೦೭೦ ಹಾಗೂ ಮಹಿಳೆಯರು ೩,೧೦೬ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯ ಜನಸಂಖ್ಯೆ ಒಟ್ಟು ೨,೦೩೫ ಇದ್ದು ಇದರಲ್ಲಿ ಪುರುಷರು ೯೬೮ ಹಾಗೂ ಮಹಿಳೆಯರು ೧,೦೬೭ ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಜನಸಂಖ್ಯೆ ಒಟ್ಟು ೪೪೯ ಇದ್ದು ಪುರುಷರು ೨೩೪ ಹಾಗೂ ಮಹಿಳೆಯರು ೨೧೫ ರಷ್ಟಿದ್ದಾರೆ. ಅಂದರೆ ಒಟ್ಟು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಪ್ರಮಾಣವು ಶೇಕಡ ೩೨.೫ ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದ ಜನಸಂಖ್ಯೆ ಪ್ರಮಾಣ ಶೇಕಡ ೭.೨೭ ರಷ್ಟಿದೆ. ಇನ್ನುಳಿದ ಇತರರ ಪ್ರಮಾಣವು ಶೇ ೬೦.೨೩ ರಷ್ಟಿದೆ. ಪರಿಶಿಷ್ಟ ಪಂಗಡಕ್ಕೆ ಹೋಲಿಸಿದರೆ ಪರಿಶಿಷ್ಟ ಜಾತಿ ಹಾಗೂ ಇತರರಲ್ಲಿ ಪುರುಷರಿಗಿಂತ ಮಹಿಳೆಯರ ಪ್ರಮಾಣವೇ ಅಧಿಕವಾಗಿರುವುದು ಕಂಡುಬರುತ್ತದೆ. ಈ ಗ್ರಾಮದಲ್ಲಿ ಕೃಷಿಕರು ಹಾಗೂ ಶ್ರೀಮಂತರಿಗಿಂತ ಕೃಷಿಕೂಲಿಕಾರರೇ ಅಧಿಕವಾಗಿದ್ದಾರೆ. ಈ ಗ್ರಾಮಗಳಿಂದ ಹತ್ತಿರದ ತಾಲೂಕು ಕೇಂದ್ರಕ್ಕೆ ಕೂಲಿಯನ್ನು ಹುಡುಕಿಕೊಂಡು ಹೋಗುವವರ ಪ್ರಮಾಣ ಅಧಿಕವಾಗಿದೆ. ಇಲ್ಲಿಯೂ ಸಾಕ್ಷರತೆಯ ಪ್ರಮಾಣ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದಗಳಲ್ಲಿ ಅತ್ಯಧಿಕವಾಗಿ ತಳಹಂತದಲ್ಲಿರುವುದು ಕಂಡುಬರುತ್ತದೆ.

ಕೊಂಚಗೇರಿ ಗ್ರಾಮ ಪಂಚಾಯಿತಿ

ತಾಲೂಕು ಕೇಂದ್ರದಿಂದ ಸುಮಾರು ೩೧ ಕಿ.ಮೀ ಗಳಷ್ಟು ದೂರದಲ್ಲಿರುವ ಈ ಗ್ರಾಮವು ಬಳ್ಳಾರಿ ತಾಲೂಕಿನ ಗಡಿಭಾಗದಲ್ಲಿದೆ. ಸಿರಿಗೇರಿ ಗ್ರಾಮಕ್ಕೆ ಹತ್ತಿರದಲ್ಲಿರುವ ಈ ಗ್ರಾಮಕ್ಕೆ ೩ ಕಿ.ಮೀ ದೂರದಲ್ಲಿರುವ ಮುದ್ದಟನೂರು ಗ್ರಾಮವನ್ನು ಸೇರಿಸಿ ಗ್ರಾಮ ಪಂಚಾತಿಯನ್ನು ರಚಿಸಲಾಗಿದೆ. ಈ ಗ್ರಾಮ ಪಂಚಾಯ್ತಿಯ ಭೌಗೋಳಿಕ ವಿಸ್ತೀರ್ಣವು ಸುಮಾರು ೨,೬೩೨ ಹೆಕ್ಟೇರುಗಳಷ್ಟಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ಸಾಗುವಳಿಗೆ ಲಭ್ಯವಿರುವ ಭೂಮಿಯು ೨,೯೬೧ ಹೆಕ್ಟೇರುಗಳಷ್ಟಾಗಿದೆ. ತುಂಗಾಭದ್ರ ಬಲದಂಡೆ ಕಾಲುವೆ ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಸುಮಾರು ೮ ಕಿ.ಮೀ ಗಳಷ್ಟು ಉದ್ದಕ್ಕೆ ಹರಿಯುತ್ತದೆ. ಈ ಕಾಲುವೆಯಿಂದ ನೀರಾವರಿಯಾದ

ಪ್ರದೇಶವು ೮೦೬ ಹೆಕ್ಟೇರುಗಳಷ್ಟಿದೆ ಕಾಲುವೆಯ ನೀರು ತಲುಪದ ಭೂಮಿಗಳಲ್ಲಿ ಬಾವಿಗಳನ್ನು ಕೊರೆಸಲಾಗಿದ್ದು ಬಾವಿಯಿಂದ ನೀರಾವರಿಯಾದ ಭೂಮಿಯ ವಿಸ್ತೀರ್ಣ ಸುಮಾರು ೩೦ ಹೆಕ್ಟೇರುಗಳಷ್ಟಿದೆ. ಕಾಲುವೆಯ ಸೋರಿಕೆ ನೀರು ಮತ್ತು ಇತರ ಮೂಲಗಳಿಂದ ನೀರಾವರಿಯಾದ ಭೂಮಿಯು ೮೭೫ ಹೆಕ್ಟೇರುಗಳಷ್ಟಿದೆ. ಬಳ್ಳಾರಿ ಜಾಲಿ, ಕುರುಚಲು ಕಾಡಿನಿಂದ ಕೂಡಿದ ಅರಣ್ಯ ಪ್ರದೇಶವು ಸುಮಾರು ೧೧೨ ಹೆಕ್ಟೇರುಗಳಷ್ಟಿದೆ. ಒಟ್ಟು ಗ್ರಾಮ ಠಾಣಾ ಪ್ರದೇಶ ಐದು ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ನೆಲೆನಿಂತಿರುವ ಒಟ್ಟು ಕುಟುಂಬಗಳ ಸಂಖ್ಯೆ ೮೧೦ ಇದ್ದು ಇದರಲ್ಲಿ ಪರಿಶಿಷ್ಟ ಜಾತಿಯ ಕುಟುಂಬಗಳು ೮೩ ಹಾಗೂ ಪರಿಶಿಷ್ಟ ಪಂಗಡದ ಕುಟುಂಬಗಳು ೧೫೧ರಷ್ಟಿವೆ.

೨೦೦೧ರ ಜನಗಣತಿ ಪ್ರಕಾರ ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿರುವ ಒಟ್ಟು ಜನಸಂಖ್ಯೆ ೪,೭೪೪ ಇದ್ದು ಇದರಲ್ಲಿ ಪುರುಷರು ೨,೪೧೬ ಹಾಗೂ ಮಹಿಳೆಯರು ೨,೩೨೮ ರಷ್ಟು ಕಂಡುಬರುತ್ತಾರೆ. ಇದರಲ್ಲಿ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೪೨೦ ಇದ್ದು ಪುರಷರು ೨೧೦ ಮತ್ತು ಮಹಿಳೆಯರು ೨೧೦ರಷ್ಟಿದ್ದಾರೆ. ಪರಿಶಿಷ್ಟ ಪಂಗಡದವರ ಒಟ್ಟು ಜನಸಂಖ್ಯೆ ೭೬೧ ಇದ್ದು ಪುರಷರು ೩೮೫ ಹಾಗೂ ಮಹಿಳೆಯರು ೩೭೬ರಷ್ಟಿದ್ದಾರೆ. ಅಂದರೆ ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿರುವ ಪರಿಶಿಷ್ಟ ಜಾತಿಯವರ ಪ್ರಮಾಣವು ಶೇಕಡ ೮.೮೫ರಷ್ಟಿದ್ದಾರೆ ಪರಿಶಿಷ್ಟ ಪಂಗಡದವರ ಜನಸಂಖ್ಯೆ ಪ್ರಮಾಣ ಶೇಕಡ ೧೬.೦೪ರಷ್ಟಿದೆ.

೩.೬.೩. ಹಗರಿಬೊಮ್ಮನಹಳ್ಳಿ ತಾಲೂಕು

ಬಳ್ಳಾರಿ ಜಿಲ್ಲೆಯಲ್ಲಿ ಎಣ್ಣೆಕಾಳು ಬೀಜೋತ್ಪಾದನೆಗೆ ಹೆಸರುವಾಸಿಯಾದ ತಾಲೂಕು ಹಗರಿಬೊಮ್ಮನಹಳ್ಳಿ, ಹಡಗಲಿ, ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ ತಾಲೂಕುಗಳಿಂದ ಸುತ್ತುವರೆದಿರುವ ಈ ತಾಲೂಕನ್ನು ಹಾಯ್ದು ತುಂಗಾಭದ್ರ ನದಿ ಮುಂದೆ ಬರುವುದಾದರೂ ಆ ತಾಲೂಕಿಗೆ ನದಿಯಿಂದಾದ ಉಪಯೋಗ ಅತ್ಯಲ್ಪ ಎಂದೇ ಹೇಳಬಹುದು. ತುಂಗಾಭದ್ರ ನದಿ ದಂಡೆಯಲ್ಲಿನ ಭೂಮಿಗಳಿಗೆ ಪಂಪ್‌ಸೆಟ್‌ಗಳ ಮೂಲಕ ನದಿ ನೀರನ್ನು ಹರಿಸಲಾಗುವುದಾದರೂ ತಾಲೂಕಿನ ಎಲ್ಲಾ ಭೂಮಿಗಳಿಗೆ ನೀರನ್ನು ಹಾಯಿಸಲು ಸಾಧ್ಯವಾಗಿಲ್ಲದಿರುವುದು ಕಂಡುಬರುತ್ತದೆ.ಈ ತಾಲೂಕಿನ ಮಾಲವಿ ಎಂಬ ಗ್ರಾಮದಲ್ಲಿ ಹಗರಿಗೆ ಆಣೆಕಟ್ಟನ್ನು ಕಟ್ಟಲಾಗಿದೆಯಾದರೂ ಮಳೆ ಪ್ರಮಾಣ ಅತ್ಯಲ್ಪವಾಗಿರುವ ಪ್ರದೇಶ ಇದಾಗಿರುವುದರಿಂದ ಮಾಲವಿ ಆಣೆಕಟ್ಟಿನಲ್ಲಿ ಮಳೆಯಾದ ವರ್ಷ

ಮಾತ್ರ ನೀರನ್ನು ಕಾಣಬಹುದು ಬಳ್ಳಾರಿ ಜಿಲ್ಲೆಯಲ್ಲಿ ಮೊದಲಿಗೆ ಈ ತಾಲೂಕಿಗೆ ಮಲ್ಲಾಪುರ ತಾಲೂಕು ಎಂದು ಕರೆಯಲಾಗುತ್ತಿತ್ತಾದರೂ ದಶಕಗಳ ಹಿಂದೆ ಮಲ್ಲಾಪುರ ಹೆಸರನ್ನು ತೆಗೆದು ಹಾಕಿ ಹಗರಿಬೊಮ್ಮನಹಳ್ಳಿ ತಾಲೂಕೆಂದು ಮರುನಾಮಕರಣ ಮಾಡಲಾಯಿತು. ಬಹುತೇಕ ಮಳೆಯಾಶ್ರಿತ ಭೂಮಿಯನ್ನು ಹೊಂದಿರುವ ಈ ತಾಲೂಕಿನ ಒಟ್ಟು ವಿಸ್ತೀರ್ಣವು ೯೭೩.೯೫ ಚ.ಕಿ.ಮೀ ಗಳು. ಇಡೀ ತಾಲೂಕಿನಲ್ಲಿ ಹಗರಿಬೊಮ್ಮನಹಳ್ಳಿಯಂತಹ ಚಿಕ್ಕ ಪಟ್ಟಣದಾಚೆ ಒಂದೇ ಒಂದು ನಗರ ಪ್ರದೇಶವನ್ನು ಕಾಣಲು ಸಾಧ್ಯವಾಗುವುದಿಲ್ಲ. ಇಡೀ ತಾಲೂಕಿನಲ್ಲಿ ನೆಲೆನಿಂತಿರುವ ಒಟ್ಟು ಕುಟುಂಬಗಳು ೨೮,೮೭೧ ರಷ್ಟು. ಈ ತಾಲೂಕಿನ ಒಟ್ಟು ಜನ ಸಾಂದ್ರತೆಯು ೧೬೪ ರಷ್ಟಿದೆ.

೨೦೦೧ ರ ಜನಗಣತಿ ಪ್ರಕಾರ ತಾಲೂಕಿನ ಒಟ್ಟು ಜನಸಂಖ್ಯೆಯು ೧,೫೯,೮೮೬ ರಷ್ಟಿದೆ. ಇದರಲ್ಲಿ ಪುರುಷರು ೮೦,೭೭೦ ಹಾಗೂ ಮಹಿಳೆಯರು ೭೯,೧೧೬ ರಷ್ಟು ಕಂಡು ಬರುತ್ತಾರೆ. ಪರಿಶಿಷ್ಟ ಜಾತಿಯವರ ಜನಸಂಖ್ಯೆ ಒಟ್ಟು ೨೯,೯೪೧ ಇದ್ದು ಪುರುಷರು ೧೫,೦೬೮ ಹಾಗೂ ಮಹಿಳೆಯರು ೧೪,೮೯೩ ರಷ್ಟು ಕಂಡು ಬರುತ್ತಾರೆ. ಈ ತಾಲೂಕಿನ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೨೧,೭೧೬ ಇದ್ದು ಇದರಲ್ಲಿ ಪುರುಷರು ೧೦,೯೨೪ ಹಾಗೂ ಮಹಿಳೆಯರು ೧೦,೭೯೨ ರಷ್ಟು ಕಂಡುಬರುತ್ತಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣ ಶೇಕಡ ೧೮.೭ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದವರ ಪ್ರಮಾಣ ಶೇಕಡ ೧೩.೬ ರಷ್ಟಿದೆ. ಈ ತಾಲೂಕಿನ ಒಟ್ಟು ಸಾಕ್ಷರತೆಯ ಪ್ರಮಾಣ ಶೇಕಡ ೫೮.೧ ರಷ್ಟು ಇರುವುದು ತಿಳಿದು ಬರುತ್ತದೆ.

ಈ ತಾಲೂಕಿನಲ್ಲಿಯ ನಾಲ್ಕು ಗ್ರಾಮ ಪಂಚಾಯಿಗಳನ್ನು ಸಹ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದ್ದು ಆ ನಾಲ್ಕು ಗ್ರಾಮ ಪಂಚಾಯಿತಿಗಳ ವಿವರಗಳು ಈ ಕೆಳಗಿನಂತಿವೆ.

ತಂಬ್ರಹಳ್ಳಿ ಗ್ರಾಮ ಪಂಚಾಯತ್

ತಾಲೂಕು ಕೇಂದ್ರದಿಂದ ಸುಮಾರು ೧೭ ಕಿ.ಮೀ ದೂರವಿರುವ ಈ ಗ್ರಾಮಕ್ಕೆ ಸೀಗೆಹಳ್ಳಿ ಹಾಗೂ ಉತ್ತರಭಾಗ ತಂಬ್ರಹಳ್ಳಿ ಗ್ರಾಮಗಳನ್ನು ಸೇರಿಸಿ ಗ್ರಾಮ ಪಂಚಾಯಿತಿಯನ್ನು ರಚಿಸಲಾಗಿದೆ. ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಒಟ್ಟು ಭೌಗೋಳಿಕ ವಿಸ್ತೀರ್ಣ ೧,೩೯೪ ಹೆಕ್ಟೇರುಗಳಷ್ಟಿದೆ. ತುಂಗಾಭದ್ರ ನದಿಯ ಪಕ್ಕದಲ್ಲಿರುವ ನದಿಗೆ ಕಟ್ಟಿದ ತುಂಗಾಭದ್ರ ಆಣೆಕಟ್ಟು ಮಳೆಗಾಲದಲ್ಲಿ

ನೀರಿನಿಂದ ತುಂಬಿದಾಗ ಆಣೆಕಟ್ಟಿನ ಹಿನ್ನೀನಿಂದ ಈ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ಗ್ರಾಮಗಳ ನದಿ ದಂಡೆಯ ಕೃಷಿಭೂಮಿಗಳೆಲ್ಲಾ ನೀರಿನಲ್ಲಿ ಮುಳುಗಿ ಹೋಗುತ್ತವೆ, ಹಿನ್ನೀರು ಸರಿದ ತರುವಾಯವೇ ಇವರು ಆ ಭೂಮಿಗಳಲ್ಲಿರುವ ಫಸಲನ್ನು ಕೊಯ್ದುಕೊಳ್ಳಬೇಕು ಇಲ್ಲವೇ ಫಸಲನ್ನು ಬಿತ್ತಬೇಕು. ಈ ಗ್ರಾಮಗಳಲ್ಲಿ ಸಾಗುವಳಿಗೆ ಲಭ್ಯವಿರುವ ಭೂಮಿಯ ವಿಸ್ತೀರ್ಣ ೩೭೦ ಹೆಕ್ಟೇರುಗಳಷ್ಟಿದೆ. ತುಂಗಾಭದ್ರ ನದಿಯು ಪಕ್ಕದಲ್ಲಿಯೇ ಹರಿದರೂ ಸಹ ಈ ಗ್ರಾಮ ಕೃಷಿ ನೀರಾವರಿ ಸೌಲಭ್ಯ ಹಾಗೂ ಕುಡಿಯುವ ನೀರಿನ ಸೌಲಭ್ಯದಿಂದ ವಂಚಿತಗೊಂಡಿವೆ. ನದಿಗೆ ಹೊಂದಿಕೊಂಡು ಕೃಷಿ ಭೂಮಿ ಹೊಂದಿರುವ ಕೆಲವು ರೈತರು ನದಿಗೆ ನೇರವಾಗಿ ಪಂಪ್‌ಸೆಟ್‌ಗಳನ್ನು ಕೂಡಿಸಿಕೊಂಡು ತಮ್ಮ ಭೂಮಿಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಿಕೊಂಡಿದ್ದಾರೆ. ನದಿಗೆ ಪಂಪ್‌ಸೆಟ್‌ಗಳನ್ನು ಜೋಡಿಸಿ ನೀರಾವರಿ ಸೌಲಭ್ಯ ಕಲ್ಪಿಸಕೊಂಡ ಭೂಮಿಯ ವಿಸ್ತೀರ್ಣ ೨೯೮ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಒಟ್ಟು ೯೫ರಷ್ಟು ಕೊಳವೆ ಬಾವಿಗಳನ್ನು ನಿರ್ಮಿಸಲಾಗಿದೆ. ಈ ಬಾವಿಗಳಿಂದ ನೀರಾವರಿಗೊಂಡ ಭೂಮಿಯು ೪೭ ಹೆಕ್ಟೇರುಗಳಷ್ಟಿದೆ. ಒಟ್ಟು ಗ್ರಾಮ ಠಾಣಾ ಪ್ರದೇಶ ೬೦ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳ ಸಂಖ್ಯೆ ೮೧೪ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಕುಟುಂಬಗಳ ಸಂಖ್ಯೆ ೯೭ ಇದ್ದರೆ ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆ ೬೧ ರಷ್ಟಿದೆ.

೨೦೦೧ರ ಜನಗಣತಿ ಪ್ರಕಾರ ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಒಟ್ಟು ಜನಸಂಖ್ಯೆಯ ೪,೩೭೭ ರಷ್ಟಿದ್ದು ಇದರಲ್ಲಿ ಪುರುಷರು ೨,೨೧೮ ಹಾಗೂ ಮಹಿಳೆಯರು ೨,೧೫೯ ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆಯು ಒಟ್ಟು ೪೮೭ ಇದ್ದು ಪುರುಷರು ೨೪೪ ಹಾಗೂ ಮಹಿಳೆಯರು ೨೪೩ ರಷ್ಟಿದ್ದಾರೆ. ಹಾಗೇ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೩೦೬ ಇದ್ದು ಇದರಲ್ಲಿ ಪುರುಷರು ೧೫೬ ಹಾಗೂ ಮಹಿಳೆಯರು ೧೫೦ ರಷ್ಟಿದ್ದಾರೆ. ಅಂದರೆ ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಪ್ರಮಾಣವು ಶೇಕಡ ೧೧.೧೨ ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದ ಜನಸಂಖ್ಯೆ ಪ್ರಮಾಣವು ಶೇಕಡ ೬.೯೯ ರಷ್ಟಿದೆ. ಲಿಂಗಾಯತ, ಬ್ರಾಹ್ಮಣ, ಮಾದಿಗ, ಕೊರಮ, ಮುಸ್ಲಿಂ ಕುರುಬ, ವಾಲ್ಮೀಕಿ ಮುಂತಾದ ಜಾತಿಗಳಿಂದ ಕೂಡಿದ ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಲಿಂಗಾಯಿತರ ಪ್ರಭಾವ ಹೆಚ್ಚಾಗಿ ಕಂಡುಬರುತ್ತದೆ.

ಹಂಪಾಪಟ್ಟಣ ಗ್ರಾಮಪಂಚಾಯತಿ

ತಾಲೂಕು ಕೇಂದ್ರದಿಂದ ಸುಮಾರು ೧೨ ಕಿ.ಮೀ ದೂರದಲ್ಲಿರುವ ಈ ಗ್ರಾಮಕ್ಕೆ ಪಕ್ಕದ ಗ್ರಾಮವಾದ ಕೆಚ್ಚಿನಬಂಡೆ ಗ್ರಾಮವನ್ನು ಸೇರಿಸಿ ಗ್ರಾಮ ಪಂಚಾಯತನ್ನು ರಚಿಸಲಾಗಿದೆ. ಕೆಚ್ಚಿನ ಬಂಡೆ ಗ್ರಾಮವು ಗ್ರಾಮ ಪಂಚಾಯಿತಿ ಕಛೇರಿ ಇರುವ ಹಂಪಾಪಟ್ಟಣದಿಂದ ಸುಮಾರು ೨ ಕಿ.ಮೀ ದೂರದಲ್ಲಿದೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯ ಒಟ್ಟು ಭೌಗೋಳಿಕ ವಿಸ್ತೀರ್ಣವು ೨,೭೬೫ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸಾಗುವಳಿಗೆ ಲಭ್ಯವಿರುವ ಭೂಮಿಯು ೨,೩೪೪ ಹೆಕ್ಟೇರುಗಳಷ್ಟಿದೆ. ಬಹುತೇಕ ಒಣ ಬೇಸಾಯ ಕ್ರಮವನ್ನೇ ಅನುಸರಿಸುವ ಈ ಗ್ರಾಮಗಳಲ್ಲಿ ಹಂಪಪಟ್ಟಣ ಹಾಗೂ ಕೆಚ್ಚಿನಬಂಡಿ ಗ್ರಾಮಗಳಿಗೆ ತಲಾ ಒಂದೊಂದು ಚಿಕ್ಕ ಕೆರೆಗಳಿವೆ. ಈ ಕೆರೆಗಳು ಸಹ ಮಳೆ ನೀರನ್ನೇ ಆ ಶ್ರಯಿಸಿದ ಕೆರೆಗಳಾಗಿವೆ. ಸಾಮಾನ್ಯವಾಗಿ ಮಳೆ ಕಡಿಮೆ ಬೀಳುವ ಪ್ರದೇಶ ಇದಾದುದರಿಂದ ಕೆರೆಗಳು ಒಂದು ವರ್ಷ ತುಂಬಿದರೆ ಮತ್ತೊಂದು ವರ್ಷ ತುಂಬಲಾರವು. ಹೀಗಾಗಿ ಕೆರೆ ನೀರನ್ನೇ ನಂಬಿ ರೈತರು ಜೀವಿಸುವಂತಿಲ್ಲ. ಕೆರೆ ನೀರಿನಿಂದ ನೀರಾವರಿಗೊಳ್ಳುವ ಭೂಮಿಯ ವಿಸ್ತೀರ್ಣ ಸುಮಾರು ೫೩ ಹೆಕ್ಟೇರುಗಳಷ್ಟಾಗಬಹುದು. ಆದರೆ ಇತ್ತೀಚೆಗೆ ರೈತರು ಕೊಳವೆ ಬಾವಿಗಳನ್ನು ತೆಗೆಸಿರುವುದರಿಂದ ಅಲ್ಪ ಪ್ರಮಾಣದಲ್ಲಿ ಒಣ ಬೇಸಾಯವನ್ನು ಅನುಸರಿಸುತ್ತಿದ್ದ ಭೂಮಿಗಳು ನೀರಾವರಿ ಕಾಣುವಂತಾಗಿದೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಈ ರೀತಿಯ ಒಟ್ಟು ೫೩ ಬಾವಿಗಳನ್ನು ಕಾಣಬಹುದು. ಬಾವಿಗಳಿಂದ ನೀರಾವರಿಗೊಂಡ ಭೂಮಿಯ ವಿಸ್ತೀರ್ಣ ೧,೧೦೨ ಹೆಕ್ಟೇರುಗಳಷ್ಟಿದೆ. ಈ ಬಾವಿಗಳು ಸಹ ಮಳೆ ಬಾರದ ವರ್ಷ ಹೆಚ್ಚಿನ ಪ್ರಮಾಣದ ನೀರನ್ನು ಹೊರಹಾಕಲಾರವು. ಕೆರೆ ಬಾವಿಗಳಿದ್ದರೂ ಈ ಗ್ರಾಮಸ್ಥರು ನೀರಾವರಿಗಾಗಿ ಹೆಚ್ಚು ಬಳಲಬೇಕಾದ ಪ್ರಸಂಗಗಳೇ ಹೆಚ್ಚಾಗಿವೆ. ಈ ಗ್ರಾಮಕ್ಕೆ ಹೊಂದಿಕೊಂಡಂತೆ ೨೪೭ ಹೆಕ್ಟೇರುಗಳಷ್ಟು ವ್ಯಾಪ್ತಿಯಲ್ಲಿ ಕುರುಚಲು ಕಾಡು ಕಂಡು ಬರುತ್ತದೆ.

ಒಟ್ಟು ಗ್ರಾಮ ಠಾಣಾ ಪ್ರದೇಶ ೩೧ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನೆಲೆನಿಂತಿರುವ ಒಟ್ಟು ಕುಟುಂಬಗಳ ಸಂಖ್ಯೆ ೧,೦೧೩ ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಕುಟುಂಬಗಳ ಸಂಖ್ಯೆ ೨೫೭ ಹಾಗೂ ಪರಿಶಿಷ್ಟ ಪಂಗಡಗಳ ಕುಟುಂಬಗಳ ಸಂಖ್ಯೆ ೨೪೨ ರಷ್ಟಿವೆ.

೨೦೦೧ ರ ಜನಗಣತಿ ಪ್ರಕಾರ ಈ ಗ್ರಾಮ ಪಂಚಾಯತಿ ವ್ಯಾಪ್ತಿಯ ಒಟ್ಟು ಜನಸಂಖ್ಯೆಯು ೬,೦೧೭ ರಷ್ಟಿದ್ದು ಇದರಲ್ಲಿ ಪುರುಷರು ೩,೦೫೧ ಹಾಗೂ ಮಹಿಳೆಯರು ೨,೯೬೬ರಷ್ಟಿದ್ದಾರೆ

ಪರಿಶಿಷ್ಟ ಜಾತಿಯವರ ಜನಸಂಖ್ಯೆ ಒಟ್ಟು ೧,೪೪೨ ಇದೆ ಇದರಲ್ಲಿ ಪುರುಷರು ೭೩೮ ಹಾಗೂ ಮಹಿಳೆಯರು ೭೦೪ ರಷ್ಟು ಇದ್ದಾರೆ. ಹಾಗೆ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧,೧೮೪ ಇದ್ದು ಪುರುಷರು ೫೯೩ ಮಹಿಳೆಯರು ೫೯೧ ರಷ್ಟಿದ್ದಾರೆ. ಇತರರಿಗೆ ಹೋಲಿಸಿದರೆ ಈ ಗ್ರಾಮದ ಒಟ್ಟು ಪರಿಶಿಷ್ಟ ಜಾತಿಯವರ ಜನಸಂಖ್ಯಾ ಪ್ರಮಾಣ ಶೇಕಡ ೨೩.೯೬ ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದವರ ಜನಸಂಖ್ಯೆ ಪ್ರಮಾಣ ಶೇಕಡ ೧೯.೬೭ ರಷ್ಟಿದೆ.

ಬಾಚಿಗೊಂಡನಹಳ್ಳಿ ಗ್ರಾಮಪಂಚಾಯತಿ

ತುಂಗಾಭದ್ರ ನದಿಯ ಪಕ್ಕಾದಲ್ಲಿಯೇ ಹರಿಯುವ ಬಾಚಿಗೊಂಡನಹಳ್ಳಿ ಗ್ರಾಮವು ತಾಲೂಕು ಕೇಂದ್ರದಿಂದ ಸುಮಾರು ೧೫ ಕಿ.ಮೀ ಗಳಷ್ಟು ದೂರದಲ್ಲಿದೆ. ತುಂಗಾಭದ್ರ ನದಿಗೆ ಆಣೆಕಟ್ಟು ಕಟ್ಟಿದ ತರುವಾಯ ಪುನರ್ವಸತಿಗೊಂಡ ಗ್ರಾಮ ಇದಾಗಿದೆ.

ಬಾಚಿಗೊಂಡನಹಳ್ಳಿ ಗ್ರಾಮ ಪಂಚಾಯಿತಿಯು ಬಾಚಿಗೊಂಡನಹಳ್ಳಿ ೧ನೇ ಕಾಲೋನಿ, ಬಾಚಿಗೊಂಡನಹಳ್ಳಿ ೨ ನೇ ಕಾಲೋನಿ, ಅಡವಿ ಆನಂದ ದೇವನಹಳ್ಳಿ, ಅಂಕಸಮುದ್ರ, ಚಿಲಗೋಡು ಹೀಗೆ ೫ ಗ್ರಾಮಗಳನ್ನು ಒಟ್ಟಾಗಿಸಿ ನಿರ್ಮಿಸಿದ ಗ್ರಾಮ ಪಂಚಾಯಿತಿ ಇದಾಗಿದೆ. ಗ್ರಾಮ ಪಂಚಾಯಿತಿ ಕಛೇರಿಯು ಬಾಚಿಗೊಂಡನಹಳ್ಳಿ ೧ ನೇ ಕಾಲೋನಿಯಲ್ಲಿದೆ. ಸಮತಟ್ಟಾದ ಭೂಮಿಯನ್ನು ಹೊಂದಿದ ಗ್ರಾಮಗಳ ಒಟ್ಟು ಭೌಗೋಳಿಕ ವ್ಯಾಪ್ತಿಯು ೪,೮೩೬ ಹೆಕ್ಟೇರುಗಳಷ್ಟಿದೆ. ಒಟ್ಟು ಸಾಗುವಳಿಗೆ ಲಭ್ಯವಿರುವ ಭೂಮಿಯ ವಿಸ್ತೀರ್ಣ ೩,೨೩೪ ಹೆಕ್ಟೇರುಗಳಷ್ಟಿದೆ. ಈ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಕಾಲುವೆಯೊಂದು ಇದ್ದು ಕಾಲುವೆಯು ಸುಮಾರು ೧೮ ಕಿ.ಮೀ ಗಳಷ್ಟು ಉದ್ದವಿದೆ. ಕಾಲುವೆಯ ನೀರನ್ನು ಉಪಯೋಗಿಸಿಕೊಂಡು ನೀರಾವರಿಗೊಂಡ ಭೂಮಿಯು ೪೮೩ ಹೆಕ್ಟೇರುಗಳಷ್ಟಿದೆ. ಇದಲ್ಲದೆ ಕಾಲುವೆಯ ನೀರು ತಾಗದ ಹೊಲಗಳಿಗೆ ಕೊಳವೆ ಬಾವಿಗಳನ್ನು ತೆಗೆಸಿದ್ದು ಇಂಥ ಬಾವಿಗಳಿಂದ ನೀರಾವರಿಗೊಂಡ ಭೂಮಿಯು ಸುಮಾರು ೧,೪೯೫ ಹೆಕ್ಟೇರುಗಳಷ್ಟಿದೆ. ಒಟ್ಟು ನೀರಾವರಿ ಹೊಂದಿದ ಭೂಮಿಯು ೨೧೦೩ ಹೆಕ್ಟೇರುಗಳಷ್ಟಿದೆ. ಆದರೆ ಕೃಷಿ ಭೂಮಿಗೆ ಅವಶ್ಯಕವಾದ ನೀರು ಪೂರ್ಣಾವಧಿಯಾಗಿ ಭೂಮಿಗಳಿಗೆ ದೊರೆಯುವುದಿಲ್ಲ. ಭತ್ತ, ಜೋಳ, ಸಜ್ಜೆ, ರಾಗಿ ಮೆಣಸಿನಕಾಯಿ ಹತ್ತಿ ಮುಂತಾದವುಗಳನ್ನು ಇಲ್ಲಿ ಬೆಳೆಯಲಾಗುತ್ತದೆ. ಐದು

ಗ್ರಾಮಗಳನ್ನು ಒಳಗೊಂಡ ಗ್ರಾಮ ಪಂಚಾಯಿತಿಯ ಒಟ್ಟು ಗ್ರಾಮ ಠಾಣಾ ಪ್ರದೇಶವು ೧೨೭ ಹೆಕ್ಟೇರುಗಳಷ್ಟಿದೆ.

ಗ್ರಾಮ ಪಂಚಾಯಿತಿ ಕಛೇರಿ ಇರುವ ಬಾಚಿಗೊಂಡನಹಳ್ಳಿ ಕಾಲೋನಿ ೧ರ ಗ್ರಾಮದಿಂದ ಬಾಚಿಗೊಂಡನಹಳ್ಳಿ ೨ನೇ ಕಾಲೋನಿಯು ಸುಮಾರು ೩ ಕಿ.ಮೀ. ಗಳಷ್ಟು ದೂರದಲ್ಲಿದೆ ಅಂಕಸಮುದ್ರವು ಸುಮಾರು ೭ ಕಿ.ಮೀ ಗಳಷ್ಟು ದೂರದಲ್ಲಿದೆ. ಅಡವಿ ಆನಂದದೇವನಹಳ್ಳಿ ಸುಮಾರು ೫ ಕಿ.ಮೀ. ಗಳಷ್ಟು ದೂರವಿದ್ದರೆ ಗ್ರಾಮ ಪಂಚಾಯಿತಿಗೆ ಕಾಲುದಾರಿಯಲ್ಲಿ ಚಿಲಗೋಡು ಗ್ರಾಮವು ೩ ಕಿ.ಮೀ.ಗಳಷ್ಟು ದೂರವಾಗುತ್ತದೆ, ಆದರೆ ಬಸ್ಸು ಅಥವಾ ಇತರ ವಾಹನಗಳಲ್ಲಿ ಗ್ರಾಮ ಪಂಚಾಯಿತಿ ತಲುಪಬೇಕೆಂದರೆ ತಾಲೂಕು ಕೇಂದ್ರದ ಮೂಲಕವೇ ಗ್ರಾಮ ಪಂಚಾಯಿತಿ ತಲುಪಬೇಕಾಗುತ್ತದೆ ಅದರಲ್ಲು ತುಂಗಾಭದ್ರ ನದಿಯ ಹಿನ್ನೀರು ಬಂದಾಗ ಚಿಲಗೋಡಿನಿಂದ ಗ್ರಾಮ ಪಂಚಾಯಿತಿಗೆ ಹೋಗುವ ಕಾಲುದಾರಿಯು ನೀರಿನಿಂದ ಮುಚ್ಚಿಹೋಗುತ್ತದೆ ಇಂಥ ಸಂದರ್ಭದಲ್ಲಿ ಕಾಲುದಾರಿಯು ಇಲ್ಲವಾಗಿ ಅನಿವಾರ್ಯವಾಗಿ ಎಲ್ಲರೂ ಗ್ರಾಮಪಂಚಾಯಿತಿ ತಲುಪಲು ಹಗರಿಬೊಮ್ಮನಹಳ್ಳಿಯ ಮೂಲಕ ಸುಮಾರು ೨೫ ಕಿ.ಮೀ ಗಳಷ್ಟು ದೂರ ಪ್ರಯಾಣಿಸಿ ಗ್ರಾಮಪಂಚಾಯತಿಯನ್ನು ತಲುಪಬೇಕಾಗುತ್ತದೆ. ಆ ಕಾರಣಕ್ಕಾಗಿ ಚಿಲಗೋಡು ಗ್ರಾಮಸ್ಥರು ತಮಗೆ ಒಂದು ಸ್ವತಂತ್ರ ಗ್ರಾಮ ಪಂಚಾಯಿತಿ ಮಂಜೂರು ಮಾಡಿಕೊಡಿ ಸ್ವತಂತ್ರವಾದ ಗ್ರಾಮ ಪಂಚಾಯಿತಿ ಕೊಡಲು ಸಾಧ್ಯವಾಗದಿದ್ದರೆ ಬ್ಯಾಸಿಗೆದೇರಿ ಗ್ರಾಮ ಪಂಚಾಯಿತಿಗಾದರೂ ತಮ್ಮ ಗ್ರಾಮವನ್ನು ಸೇರಿಸಿ ಎಂದು ಸರ್ಕಾಕ್ಕೆ ಹಲವು ಬಾರಿ ಬೇಡಿಕೆಗಳನ್ನು ಸಲ್ಲಿಸಿದ್ದಾರೆ. ಆದರೆ ಇವರ ಬೇಡಿಕೆ ಇಂದಿನವರೆಗೂ ಈಡೇರಿಲ್ಲ ಎಂಬ ಅಳಲು ಚಿಲಗೋಡು ಗ್ರಾಮದವರದಾಗಿದೆ. ಬಾಚಿಗೊಂಡನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ನೆಲೆನಿಂತ ಒಟ್ಟು ಕುಟುಂಬಗಳ ಸಂಖ್ಯೆ ೧,೩೮೧ ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಯ ಕುಟುಂಭಗಳ ಸಂಖ್ಯೆ ೩೩೬ ಇದ್ದರೆ ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆಯು ೧೪೯ರಷ್ಟಿದೆ.

೨೦೦೧ರ ಜನಗಣತಿ ಪ್ರಕಾರ ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಜನಸಂಖ್ಯೆಯು ೭,೫೧೫ ಇದ್ದು ಇದರಲ್ಲಿ ಪುರುಷರು ೩,೮೦೦ ಹಾಗೂ ಮಹಿಳೆಯರು ೩,೭೦೯ರಷ್ಟಿದ್ದಾರೆ.

ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೧,೬೮೦ ಇದ್ದು ಪುರುಷರು ೮೩೨ ಹಾಗೂ ಮಹಿಳೆಯರು ೮೪೮ ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೭೪೩ ಇದ್ದು ಇದರಲ್ಲಿ ಪುರುಷರು ೩೬೦ ಹಾಗೂ ಮಹಿಳೆಯರು ೩೮೩ ರಷ್ಟಿದ್ದಾರೆ. ಅಂದರೆ ಗ್ರಾಮ ಪಂಚಾಯಿತಿಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಪ್ರಮಾಣವು ಶೇಕಡ ೨೨.೩೫ ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದವರ ಜನಸಂಖ್ಯಾ ಪ್ರಮಾಣವು ಶೇಕಡ ೯.೮೮ ರಷ್ಟಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದಗಳೆರಡರಲ್ಲೂ ಪುರುಷರಿಗಿಂತ ಮಹಿಳೆಯರ ಪ್ರಮಾಣವೇ ಅಧಿಕವಾಗಿದೆ. ಲಿಂಗಾಯಿತ ಬ್ರಾಹ್ಮಣ, ಕುಂಬಾರ, ಕಮ್ಮಾರ, ಅಕ್ಕಸಾಲಿ, ಕುರುಬ, ವಾಲ್ಮೀಕಿ, ಮಾದಿಗ, ಕಮ್ಮ, ಮುಸ್ಲೀಂ ಮುಂತಾದ ಜಾತಿಗಳನ್ನು ಹೊಂದಿರುವ ಈ ಗ್ರಾಮಗಳಲ್ಲಿ ಲಿಂಗಾಯಿತ ಕೋಮಿನವರೆ ಬಲಿಷ್ಟರಾಗಿರುವುದು ಕಂಡುಬರುತ್ತದೆ.

ಮುತ್ತುಕೂರು ಗ್ರಾಮಪಂಚಾಯತ್

ತಾಲೂಕು ಕೇಂದ್ರದಿಂದ ಸುಮಾರು ೩೩ ಕಿ.ಮೀ ದೂರವಿರುವ ಈ ಗ್ರಾಮಕ್ಕೆ ಕಿತ್ನೂರು, ತೆಲಿಗೋಳಿ, ರಾಮೇಶ್ವರಬಂಡೆ ಮುತ್ತುಕೂರು ಗ್ರಾಮಗಳನ್ನು ಸೇರಿಸಿ ಗ್ರಾಮ ಪಂಚಾಯಿತಿಯನ್ನು ರಚಿಸಲಾಗಿದೆ. ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಒಟ್ಟು ಭೌಗೋಳಿಕ ವಿಸ್ತೀರ್ಣ ೧,೯೪ ಹೆಕ್ಟೇರುಗಳಷ್ಟಿದೆ. ತುಂಗಾಭದ್ರ ನದಿಯ ಪಕ್ಕದಲ್ಲಿರುವ ನದಿಗೆ ಕಟ್ಟಿದ ತುಂಗಾಭದ್ರ ಆಣೆಕಟ್ಟು ಮಳೆಗಾಲದಲ್ಲಿ ನೀರಿನಿಂದ ತುಂಬಿದಾಗ ಆಣೆಕಟ್ಟಿನ ಹಿನ್ನೀನಿಂದ ಈ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ಗ್ರಾಮಗಳ ನದಿ ದಂಡೆಯ ಕೃಷಿಭೂಮಿಗಳೆಲ್ಲಾ ನದಿ ನೀರಿನಲ್ಲಿ ಮುಳುಗಿ ಹೋಗುತ್ತವೆ, ಹಿನ್ನೀರು ಸರಿದ ತರುವಾಯವೇ ಇವರು ಆ ಭೂಮಿಗಳಲ್ಲಿರುವ ಫಸಲನ್ನು ಕೊಯ್ದುಕೊಳ್ಳಬೇಕು ಇಲ್ಲವೇ ಫಸಲನ್ನು ಬಿತ್ತಬೇಕು. ಈ ಗ್ರಾಮಗಳಲ್ಲಿ ಸಾಗುವಳಿಗೆ ಲಭ್ಯವಿರುವ ಭೂಮಿಯ ವಿಸ್ತೀರ್ಣ ೪೭೦ ಹೆಕ್ಟೇರುಗಳಷ್ಟಿದೆ. ತುಂಗಾಭದ್ರ ನದಿಯು ಪಕ್ಕದಲ್ಲಿಯೇ ಹರಿಯುವುದರಿಂದ ಈ ಗ್ರಾಮಗಳ ಬಹುತೇಕ ರೈತರು ಕೃಷಿಗಾಗಿ ನದಿಯ ನೀರಿಗೆ ನಿರ್ಮಿಸಲಾದ ಏತ ನೀರಾವರಿ ಯೋಜನೆಯ ಸೌಲಭ್ಯ ಪಡೆಯುತ್ತಿದ್ದಾರೆ. ಏತ ನೀರಾವರಿ ಯೋಜನೆಯ ಸೌಲಭ್ಯ ಕಲ್ಪಿಸಕೊಂಡ ಕೃಷಿ ಭೂಮಿಯ ವಿಸ್ತೀರ್ಣ ೩೯೮ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಒಟ್ಟು ೭೫ ರಷ್ಟು ಕೊಳವೆ ಬಾವಿಗಳನ್ನು ನಿರ್ಮಿಸಲಾಗಿದೆ. ಈ ಬಾವಿಗಳಿಂದ ನೀರಾವರಿಗೊಂಡ ಭೂಮಿಯು ೪೫ ಹೆಕ್ಟೇರುಗಳಷ್ಟಿದೆ. ಅದೇ ರೀತಿ ಮದಲಘಟ್ಟ ಸೇತುವೆ ಬಳಿ ಉತ್ತರ ಭಾಗ ತಂಬ್ರಳ್ಳಿ ಏತ

ನೀರಾವರಿ ಯೋಜನೆಯಿಂದ ಸುಮಾರು ೨೦ ಹೆಕ್ಟೇರುಗಳಷ್ಟು ಭೂಮಿಯು ಸಹ ನೀರಾವರಿ ಸೌಲಭ್ಯ ಪಡೆಯುವಂತಾಗಿದೆ. ಒಟ್ಟು ಗ್ರಾಮ ಠಾಣಾ ಪ್ರದೇಶ ೭೦ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳ ಸಂಖ್ಯೆ ೯೧೪ ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಕುಟುಂಬಗಳ ಸಂಖ್ಯೆ ೧೯೭ ಇದ್ದರೆ ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆ ೮೧ ರಷ್ಟಿವೆ.

೨೦೦೧ ರ ಜನಗಣತಿ ಪ್ರಕಾರ ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಒಟ್ಟು ಜನಸಂಖ್ಯೆಯ ೫,೪೭೮ ರಷ್ಟಿದ್ದು ಇದರಲ್ಲಿ ಪುರುಷರು ೨,೭೪೫ ಹಾಗೂ ಮಹಿಳೆಯರು ೨,೭೩೩ ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆಯು ಒಟ್ಟು ೫೯೭ ಇದ್ದು ಪುರುಷರು ೨೯೯ ಹಾಗೂ ಮಹಿಳೆಯರು ೨೯೮ ರಷ್ಟಿದ್ದಾರೆ. ಹಾಗೇ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೪೦೫ ಇದ್ದು ಇದರಲ್ಲಿ ಪುರುಷರು ೨೦೫ ಹಾಗೂ ಮಹಿಳೆಯರು ೨೦೦ ರಷ್ಟಿದ್ದಾರೆ. ಅಂದರೆ ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಪ್ರಮಾಣವು ಶೇಕಡ ೧೦.೯೮ ರಷ್ಟಿದೆ ಹಾಗೂ ಪರಿಶಿಷ್ಟ ಪಂಗಡದ ಜನಸಂಖ್ಯೆ ಪ್ರಮಾಣವು ಶೇಕಡ ೭.೩೯ ರಷ್ಟಿದೆ. ಲಿಂಗಾಯತ, ಬ್ರಾಹ್ಮಣ, ಮಾದಿಗ, ಕೊರಮ, ಮುಸ್ಲಿಂ ಕುರುಬ, ವಾಲ್ಮೀಕಿ ಮುಂತಾದ ಜಾತಿಗಳಿಂದ ಕೂಡಿದ ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಲಿಂಗಾಯಿತರ ಪ್ರಭಾವ ಹೆಚ್ಚಾಗಿ ಕಂಡುಬರುತ್ತದೆ.

೩.೬.೪. ಕೂಡ್ಲಿಗಿ ತಾಲೂಕು

ಬಳ್ಳಾರಿ ಜಿಲ್ಲೆಯಲ್ಲಿಯೇ ಆರ್ಥಿಕವಾಗಿ ತುಂಬಾ ಹಿಂದುಳಿದ ತಾಲೂಕೆಂದು ಗುರುತಿಸಲ್ಪಟ್ಟ ತಾಲೂಕು ಕೂಡ್ಲಿಗಿಯಾಗಿದೆ. ಜಿಲ್ಲಾ ಕೇಂದ್ರದಿಂದ ಸುಮಾರು ೧೦೦ ಕಿ.ಮೀ ಗಳಷ್ಟು ಅಂತರದಲ್ಲಿ ತಾಲೂಕು ಕೇಂದ್ರವಿದೆ. ಹೊಸಪೇಟೆ, ಹಗರಿಬೊಮ್ಮನಹಳ್ಳಿ ತಾಲೂಕುಗಳು ಹಾಗೂ ಚಿತ್ರದುರ್ಗ ಜಿಲ್ಲೆಯಿಂದ ಸುತ್ತುವರೆದಿರುವ ಈ ತಾಲೂಕಿನಲ್ಲಿ ಪರಿಶಿಷ್ಟ ಪಂಗಡದವರು ಶೇಕಡ ೨೭.೧ ರಷ್ಟಿದ್ದಾರೆ. ಸಾಂಸ್ಕೃತಿಕವಾಗಿ ಸಮೃದ್ಧವಾಗಿರುವ ಈ ತಾಲೂಕು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದೆ. ಬಳ್ಳಾರಿ ತಾಲೂಕಿನ ನಂತರ ಅತೀ ವಿಸ್ತಾರವಾದ ಭೂ ವಿಸ್ತೀರ್ಣವನ್ನು ಹೊಂದಿರುವ ತಾಲೂಕು ಇದಾಗಿದೆ. ಇದರ ಒಟ್ಟು ವಿಸ್ತೀರ್ಣವು ೧.೬೧೮.೮೭

ಚ.ಕಿ.ಮೀಟರ್‌ಗಳಷ್ಟಿದೆ ಹಾಗೇ ಜಿಲ್ಲೆಯಲ್ಲಿಯೇ ಅತೀಹೆಚ್ಚು ಗ್ರಾಮಗಳನ್ನು ಹೊಂದಿರುವ ಈ ತಾಲೂಕಿನಲ್ಲಿ ಒಟ್ಟು ೯೧ ಗ್ರಾಮಗಳಿವೆ. ತಾಲೂಕಿನಲ್ಲಿ ಕೂಡ್ಲಿಗಿಯ ನಂತರ ಕೊಟ್ಟೂರು ಪಟ್ಟಣ ಪ್ರದೇಶವಾಗಿದೆ. ಅವೆರಡರ ಹೊರತಾಗಿ ಇನ್ನುಳಿದವುಗಳೆಲ್ಲಾ ಹಳ್ಳಿಗಳೇ ಆಗಿವೆ. ಇಲ್ಲಿಯ ಬಹುತೇಕ ಗ್ರಾಮಗಳಿಗೆ ಇಂದಿಗೂ ಸಮರ್ಪಕವಾದ ಬಸ್ಸಿನ ಸೌಲಭ್ಯ ಅಥವಾ ಸಾರಿಗೆ ಸಂಪರ್ಕವಿಲ್ಲವಾಗಿದೆ.

ಒಟ್ಟು ೪೭,೮೧೧ ಕುಟುಂಬಗಳನ್ನು ಈ ತಾಲೂಕು ಹೊಂದಿದೆ. ಮಳೆಯಾಶ್ರಿತ ಚಿಕ್ಕ ಪುಟ್ಟ ಕೆರೆಗಳ ಹೊರತಾಗಿ ಇಲ್ಲಿಯ ಜನರಿಗೆ ಸಮರ್ಪಕವಾದ ನೀರಾವರಿ ಸೌಲಭ್ಯವಿಲ್ಲ. ಇಂದಿಗೂ ಮಳೆಯಾಶ್ರಿತ ಒಣಬೇಸಾಯ ಕ್ರಮವನ್ನೇ ರೈತರು ಅನುಸರಿಸುತ್ತಿರುವುದನ್ನು ತಾಲೂಕಿನಾದ್ಯಂತ ಕಾಣಬಹುದು. ಈ ತಾಲೂಕಿನ ಜನಸಾಂದ್ರತೆಯು ೧೬.೮ರಷ್ಟಿದೆ. ಈ ತಾಲೂಕು ಒಟ್ಟು ೪೭.೮೧೧ ಕುಟುಂಬಗಳನ್ನು ಹೊಂದಿರುವುದನ್ನು ಕಾಣಬಹುದು.

೨೦೦೧ ರ ಜನಗಣತಿ ಪ್ರಕಾರ ಈ ತಾಲೂಕಿನ ಒಟ್ಟು ಜನಸಂಖ್ಯೆ ೨,೭೨,೧೮೩ ಇದ್ದು ಇದರಲ್ಲಿ ಪುರುಷರು ೧,೩೯,೨೦೨ ಹಾಗೂ ಮಹಿಳೆಯರು ೧,೩೨,೯೮೧ ರಷ್ಟಿದ್ದಾರೆ. ಈ ತಾಲೂಕಿನ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೫೨,೨೧೨ ಇದ್ದು ಪುರುಷರು ೨೬,೫೪೦ ಹಾಗೂ ಮಹಿಳೆಯರು ೨೫,೬೭೨ ರಷ್ಟಿದ್ದಾರೆ. ಹಾಗೇ ಪರಿಶಿಷ್ಟ ಪಂಗಡದಲ್ಲಿ ಒಟ್ಟು ಜನಸಂಖ್ಯೆ ೭೩,೬೫೦ ಇದ್ದು ಇದರಲ್ಲಿ ಪುರುಷರು ೩೭,೨೯೮ ಹಾಗೂ ಮಹಿಳೆಯರು ೩೬,೩೫೨ ರಷ್ಟು ಕಂಡುಬರುತ್ತಾರೆ. ಜಿಲ್ಲೆಯಲ್ಲಿ ಡುಂಗ್ರಿಗರಾಸಿಯ, ಹಕ್ಕಿ ಪಿಕ್ಕಿ, ಮೇಧ ಮುಂತಾದ ಪರಿಶಿಷ್ಟ ಪಂಗಡದ ಸಮುದಾಯಗಳು ಕಂಡು ಬರುತ್ತವೆಯಾದರೂ ಕೂಡ್ಲಿಗಿ ತಾಲೂಕಿನಲ್ಲಿ ಪರಿಶಿಷ್ಟ ಪಂಗಡಗಳಲ್ಲಿ ವಾಲ್ಮೀಕಿ ಸಮುದಾಯದವರೇ ಶೇಕಡ ೯೯ ರಷ್ಟು ಕಂಡು ಬರುತ್ತಾರೆ.

ತಾಲೂಕಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಪ್ರಮಾಣವು ಶೇಕಡ ೧೯.೨ ರಷ್ಟಿದ್ದರೆ ಪರಿಶಿಷ್ಟ ಪಂಗಡದವರ ಪ್ರಮಾಣವು ಶೇಕಡ ೨೭.೧ ರಷ್ಟಿದೆ. ತಾಲೂಕಿನ ರಾಜಕೀಯ ಹಿಡಿತ ಮೇಲ್ವರ್ಗಗಳದ್ದಾದರೂ ಅದರ ನಿರ್ಣಯಕ ಶಕ್ತಿಯಿರುವುದು ಪರಿಶಿಷ್ಟ ಪಂಗಡದಲ್ಲಿದೆ ಎಂಬ ನಂಬುಗೆಯನ್ನು ಈ ತಾಲೂಕು ಉಳಿಸಿಕೊಂಡಿದೆ. ಪ್ರಸ್ತುತ ಕೂಡ್ಲಿಗಿಯು ವಿಧಾನ ಸಭಾ ಸದಸ್ಯರ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರವಾಗಿದೆ. ಜಿಲ್ಲೆಯ ಸಾಕ್ಷರರಿಗೆ ಹೋಲಿಸಿದರೆ ಈ ತಾಲೂಕಿನ ಒಟ್ಟು ಸಾಕ್ಷರತೆಯ ಪ್ರಮಾಣವು ಶೇಕಡ ೬೦ ರಷ್ಟಿದೆ. ಇದರಲ್ಲಿ

ಪುರುಷರು ಶೇಕಡ ೬೦ ರಷ್ಟು ಸಾಕ್ಷರರಿದ್ದರೆ ಮಹಿಳೆಯರು ಶೇಕಡ ೪೦ರಷ್ಟು ಸಾಕ್ಷರರಾಗಿದ್ದಾರೆ. ಈ ಜಿಲ್ಲೆಯ ಇತರ ತಾಲೂಕುಗಳಿಗೆ ಹೋಲಿಸಿದರೆ ಸಾಕ್ಷರತೆಯ ಪ್ರಮಾಣದಲ್ಲಿ ಹೊಸಪೇಟೆ (ಶೇ೬೦.೯)ಯ ನಂತರದ ಸ್ಥಾನ ಕೂಡ್ಲಿಗಿಗೇ ಸಲ್ಲುತ್ತದೆ.

ಈ ತಾಲೂಕಿನಲ್ಲಿರುವ ನಾಲ್ಕು ಗ್ರಾಮ ಪಂಚಾಯಿತಿಗಳನ್ನು ಸಹ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವುದರಿಂದ ಆ ನಾಲ್ಕು ಗ್ರಾಮ ಪಂಚಾಯಿತಿಗಳ ವಿವರಗಳು ಈ ಕೆಳಗಿನಂತಿವೆ.

ಉಜ್ಜಿನಿ ಗ್ರಾಮಪಂಚಾಯತಿ

ಉಜ್ಜಿನಿ ಗ್ರಾಮವು ತಾಲೂಕು ಕೇಂದ್ರದಿಂದ ಸುಮಾರು ೨೨ ಕಿ.ಮೀ. ಗಳಷ್ಟು ದೂರವಿದೆ. ಬೈರದೇವರ ಗುಡ್ಡ ಹಾಗೂ ಬೆನಕನಹಳ್ಳಿಗಳನ್ನು ಈ ಗ್ರಾಮ ಪಂಚಾಯತಿಗೆ ಸೇರಿಸಲಾಗಿದೆ. ಕೇವಲ ಒಣ ಬೇಸಾಯವನ್ನೇ ಆಧರಿಸಿರುವ ಈ ಗ್ರಾಮಪಂಚಾಯಿತಿ ವ್ಯಾಪ್ತಿಗೆ ನೀರಾವರಿ ಸೌಲಭ್ಯ ಇಲ್ಲವೆಂದೇ ಹೇಳಬಹುದು. ಇತ್ತೀಚೆಗೆ ರೈತರು ಕೊಳವೆ ಬಾವಿಗಳನ್ನು ತೋಡಿಸಿಕೊಂಡು ಕೃಷಿಭೂಮಿಗಳಿಗೆ ಅಲ್ಪಮಟ್ಟದ ನೀರಾವರಿ ಸೌಲಭ್ಯವನ್ನು ಹೊಂದಿದ್ದಾರೆ. ಈ ಗ್ರಾಮ ಪಂಚಾಯಿತಿಯ ಒಟ್ಟು ಭೌಗೋಳಿಕ ವಿಸ್ತೀರ್ಣವು ೪,೫೬೭ ರಷ್ಟಿದೆ. ಇದರಲ್ಲಿ ಒಟ್ಟು ಸಾಗುವಳಿಗೆ ಯೋಗ್ಯವಾದ ಭೂಮಿಯು ೩,೩೯೨ ಹೆಕ್ಟೇರುಗಳಷ್ಟು ಇದೆ. ಉಜ್ಜನಿ ಹಾಗೂ ಇತರ ಎರಡು ಗ್ರಾಮಗಳ ನಡುವೆ ಒಟ್ಟು ೯೩ ತೆರೆದ ಹಾಗೂ ಕೊಳವೆ ಬಾವಿಗಳಿವೆ. ಈ ಬಾವಿಗಳಿಂದ ನೀರಾವರಿಯಾದ ಒಟ್ಟು ಭೂಮಿಯ ವಿಸ್ತೀರ್ಣವು ೨೧೧ ಹೆಕ್ಟೇರುಗಳಷ್ಟಿದೆ. ಈ ಭೂಮಿಯಲ್ಲಿ ಶೇಂಗಾ, ಈರುಳ್ಳಿ, ತರಕಾರಿ, ಜೋಳ, ಮುಸುಕಿನಜೋಳ, ರಾಗಿ, ಸಜ್ಜೆ, ತೊಗರಿ, ರೇಷ್ಮೆ, ಹತ್ತಿ ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಈ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಚಿಕ್ಕ ಗುಡ್ಡ ಹಾಗೂ ಕುರುಚಲು ಗಿಡ ಮರಗಳನ್ನುಳ್ಳ ಅರಣ್ಯ ಪ್ರದೇಶವು ೪೭೬ ಹೆಕ್ಟೇರುಗಳಷ್ಟಿದೆ. ೨೧೧ ಹೆಕ್ಟೇರುಗಳಷ್ಟು ನೀರಾವರಿ ಹೊಂದಿದ ಕೃಷಿ ಭೂಮಿ ಹೊರತಾದ ಇನ್ನುಳಿದ ಭೂಮಿಯ ಮಳೆಯಾಶ್ರಿತ ಒಣ ಬೇಸಾಯನ್ನು ಆಶ್ರಯಿಸಿದ ಭೂಮಿಯಾಗಿದೆ. ಒಟ್ಟು ಮೂರು ಗ್ರಾಮಗಳನ್ನೊಳಗೊಂಡ ಈ ಪಂಚಾಯತಿಯ ಗ್ರಾಮ ಠಾಣಾ ಪ್ರದೇಶವು ೨೯ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ಕುಟುಂಬಗಳ ಸಂಖ್ಯೆಯು ೧,೪೨೯ ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಗಳ ಕುಟುಂಬಗಳು ೨೧೩ ಇದ್ದರೆ ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆಯು ೨೪೧ ರಷ್ಟಿವೆ.

೨೦೦೧ರ ಜನಗಣತಿ ಪ್ರಕಾರ ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ಜನಸಂಖ್ಯೆಯ ೮,೨೩೧ರಷ್ಟಿದೆ. ಇದರಲ್ಲಿ ಪುರುಷರ ಸಂಖ್ಯೆಯು ೪,೨೩೩ ಹಾಗೂ ಮಹಿಳೆಯರ ಸಂಖ್ಯೆಯು ೩,೯೯೮ರಷ್ಟಿದೆ

ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೧,೦೬೪ ಇದ್ದು ಪುರುಷರು ೫೧೨ ಹಾಗೂ ಮಹಿಳೆಯರು ೫೫೨ ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೧,೨೦೬ ಇದ್ದು ಪುರುಷರು ೫೯೮ ಹಾಗೂ ಮಹಿಳೆಯರು ೬೦೮ರಷ್ಟಿದ್ದಾರೆ. ಒಟ್ಟಾರೆಯಾಗಿ ನೋಡಿದರೆ ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪರಿಶಿಷ್ಟ ಜಾತಿಯವರ ಜನಸಂಖ್ಯಾ ಪ್ರಮಾಣವು ಶೇಕಡ ೧೨.೯ ರಷ್ಟಿದೆ, ಪರಿಶಿಷ್ಟ ಪಂಗಡದ ಜನಸಂಖ್ಯಾ ಪ್ರಮಾಣವು ಶೇಕಡ ೧೪.೬೫ ರಷ್ಟಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣವೇ ಹೆಚ್ಚಾಗಿರುವುದನ್ನು ಕಾಣಬಹುದಾಗಿದೆ. ಅದರ ಜೊತೆಗೆ ಈ ಎರಡೂ ಪಂಗಡಗಳ ಮಹಿಳೆಯರ ಸಾಕ್ಷರತಾ ಪ್ರಮಾಣವ ತುಂಭಾ ಶೋಚನೀಯವಾಗಿರುವುದು ಕಂಡುಬರುತ್ತದೆ.

ಹಿರೇಕುಂಬಳಕುಂಟೆ ಗ್ರಾಮ ಪಂಚಾಯತಿ

ತಾಲೂಕು ಕೇಂದ್ರದಿಂದ ಸುಮಾರು ೩೬ ಕಿ.ಮಿಗಳಷ್ಟು ದೂರವಿರುವ ಈ ಗ್ರಾಮಕ್ಕೆ ಚಿಕ್ಕ ಕುಂಬಳಕುಂಟೆ, ದಾಸಬೊಮ್ಮನಹಳ್ಳಿ, ಗೊಲ್ಲರಹಟ್ಟಿ ಎಂಬ ಮೂರು ಗ್ರಾಮಗಳನ್ನು ಸೇರಿಸಿ ಒಂದು ಗ್ರಾಮ ಪಂಚಾಯಾಗಿ ರೂಪಿಸಲಾಗಿದೆ. ಗ್ರಾಮ ಪಂಚಾಯತಿ ಕ್ರೇಂದ್ರವು ಹಿರೇಕುಂಬಳಗುಂಟೆಯಾಗಿದ್ದು ಅದರ ಸುತ್ತ ೩ ಕಿ.ಮೀ ವ್ಯಾಪ್ತಿಯಲ್ಲಿ ಇತರ ಗ್ರಾಮಗಳಿವೆ. ಈ ಗ್ರಾಮವು ಸಹ ಬಹುತೇಕವಾಗಿ ಒಣ ಬೇಸಾಯ ಕ್ರಮವನ್ನು ಅನುಸರಿಸುವ ಭೂಮಿಯನ್ನೇ ಒಳಗೊಂಡಿದೆ. ಈ ಗ್ರಾಮಪಂಚಾಯತಿ ವ್ಯಾಪ್ತಿಯ ಒಟ್ಟು ಭೌಗೋಳಿಕ ವಿಸ್ತೀರ್ಣವು ೧,೭೮೦ ಹೆಕ್ಟೇರುಗಳಷ್ಟಿದೆ. ಇದರಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿಯು ೧,೫೪೩ ಹೆಕ್ಟೇರುಗಳಷ್ಟಿದೆ. ಈ ಗ್ರಾಮಪಂಚಾಯತಿ ವ್ಯಾಪ್ತಿ ಯಲ್ಲಿರುವ ಕೃಷಿ ಭೂಮಿಗೆ ನೀರುಣಿಸುವ ಬಾವಿಗಳು/ಕೊಳವೆ ಬಾವಿಗಳ ಸಂಖ್ಯೆ ಕೇವಲ ೧೨ರಷ್ಟಿವೆ. ಇದರಿಂದ ಒಟ್ಟು ನೀರಾವರಿಗೊಂಡ ಕೃಷಿ ಪ್ರದೇಶವು ಸುಮಾರು ೪೦ ಹೆಕ್ಟೇರುಗಳಷ್ಟಾಗಿದೆ.

ಈ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳ ಸಂಖ್ಯೆ ೫೩೫ರಷ್ಟಿದೆ. ಪರಿಶಿಷ್ಟ ಜಾತಿಯವರ ಕುಟುಂಬಗಳು ೧೨೫ರಷ್ಟಿದ್ದು, ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆ ೧೨೫ರಷ್ಟಿದೆ.

೨೦೦೧ರ ಜನಗಣತಿ ಪ್ರಕಾರ ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಒಟ್ಟು ಜನಸಂಖ್ಯೆ ೩೦೧೩ರಷ್ಟಿದ್ದು ಪುರುಷರು ೧೫೨೭ ಹಾಗೂ ಮಹಿಳೆಯರು ೧೪೮೬ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖ್ಯೆ ೬೨೭ರಷ್ಟಿದ್ದು ಇದರಲ್ಲಿ ಪುರುಷರು ೩೦೨ ಹಾಗೂ ಮಹಿಳೆಯರು ೩೨೯ ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೬೪೬ರಷ್ಟಿದ್ದು ಇದರಲ್ಲಿ ಪುರುಷರ ಜನಸಂಖ್ಯೆ ೩೩೭ ಹಾಗೂ ಮಹಿಳೆಯರ ಜನಸಂಖ್ಯೆ ೩೨೯ರಷ್ಟಿದೆ. ಗ್ರಾಮಪಂಚಾಯ್ತಿಯ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯಾ ಪ್ರಮಾಣವು ಶೇಕಡ ೨೦.೮ರಷ್ಟು ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ಪ್ರಮಾಣವು ಶೇಕಡ ೨೧.೪೪ರಷ್ಟಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳೆರಡರಲ್ಲೂ ಪುರುಷರಿಗಿಂತ ಮಹಿಳೆಯರ ಜನಸಂಖ್ಯಾ ಪ್ರಮಾಣವು ಅಲ್ಪಮಟ್ಟಿಗೆ ಹೆಚ್ಚಿರುವುದನ್ನು ಕಾಣಬಹುದಾಗಿದೆ.

ಗಂಡಬೊಮ್ಮನಹಳ್ಳಿ ಗ್ರಾಮಪಂಚಾಯತ್

ತಾಲ್ಲೂಕು ಕೇಂದ್ರದಿಂದ ಸುಮಾರು ೪೪ ಕಿ.ಮೀ ದೂರದಲ್ಲಿರುವ ಗಂಡಬೊಮ್ಮನಹಳ್ಳಿಯನ್ನು ಕೇಂದ್ರವಾಗಿರಿಸಿಕೊಂಡು ರಾಮಸಾಗರಹಟ್ಟಿ, ಎರಗೊಂಡನಹಳ್ಳಿ, ಕೊರಮರಹಟ್ಟಿಗಳನ್ನು ಸೇರಿಸಿ ಗ್ರಾಮಪಂಚಾಯ್ತಿಯನ್ನು ರಚಿಸಲಾಗಿದೆ. ಗಂಡಬೊಮ್ಮನಹಳ್ಳಿಗೆ ಈ ಮೂರು ಗ್ರಾಮಗಳು ಸರಾಸರಿ ೪ ಕಿ.ಮೀ ಅಂತರದಲ್ಲಿವೆ. ಈ ಗ್ರಾಮಪಂಚಾಯ್ತಿ ವ್ಯಾಪ್ತಿಯ ಭೌಗೋಳಿಕ ವಿಸ್ತೀರ್ಣವು ೩,೯೮೦ ಹೆಕ್ಟೇರುಗಳಷ್ಟಿದೆ, ಹಾಗೂ ಇದರಲ್ಲಿ ಸಾಗುವಳಿಗೆ ಲಭ್ಯವಿರುವ ಭೂಮಿಯು ೨,೬೭೫ ಹೆಕ್ಟೇರುಗಳಷ್ಟಿದೆ. ಗಂಡಬೊಮ್ಮನಹಳ್ಳಿಗೆ ಹೊಂದಿಕೊಂಡು ಕೇವಲ ಒಂದು ಚಿಕ್ಕ ಕೆರೆ ಇದೆ. ಮಳೆಯಾಶ್ರಿತ ಕೆರೆ ಇದಾಗಿರುವುದರಿಂದ ಮಳೆ ಬಂದಾಗ ಮಾತ್ರ ಈ ಕೆರೆಯಲ್ಲಿ ನೀರು ಕಾಣಬಹುದು. ಸರಾಸರಿ ಕಡಿಮೆ ಮಳೆ ಬೀಳುವ ಪ್ರದೇಶ ಇದಾಗಿರುವುದರಿಂದ ಕೆರೆಯಲ್ಲಿ ಒಮ್ಮೆ ನೀರಿದ್ದರೆ ಇನ್ನೊಮ್ಮೆ ನೀರು ಕಾಣುವುದು ಕಷ್ಟ. ಸಾಮಾನ್ಯವಾಗಿ ಕೆರೆಯು ಬೇಸಿಗೆಯಲ್ಲಿ ನೀರಿಲ್ಲದೆ ಒಣಗಿರುವುದನ್ನು ಹೆಚ್ಚಾಗಿ ಕಾಣಬಹುದು. ಇತ್ತೀಚೆಗೆ ಕೊಳವೆಬಾವಿಗಳನ್ನು ರೈತರು ತೋಡಿಸಿದ್ದು ಅಂತಹ ಬಾವಿಗಳಿಂದ ನೀರಾವರಿಗೊಂಡ ಪ್ರದೇಶ ೯೦ ಹೆಕ್ಟೇರುಗಳಷ್ಟಿದೆ. ಕೊಳವೆ ಬಾವಿಗಳಿಂದ ನೀರಾವರಿಗೊಂಡ ಪ್ರದೇಶ ೧೭೪ ಹೆಕ್ಟೇರುಗಳಷ್ಟಿದೆ. ಕೆರೆ ನೀರಿನಿಂದ ನೀರಾವರಿಗೊಂಡ ಒಟ್ಟು ಭೂಮಿಯ ವಿಸ್ತೀರ್ಣ ೨೬೪ ಹೆಕ್ಟೇರುಗಳಷ್ಟಿದೆ. ಈ ಭೂಮಿಗಳಲ್ಲಿ ಶೇಂಗಾ, ಹತ್ತಿ, ಸೂರ್ಯಕಾಂತಿ, ಮುಸುಕಿನಜೋಳ, ಜೋಳ, ಅಕ್ಕಡಿಕಾಳು ಇತ್ಯಾದಿ ಅಲ್ಪಾವಧಿ ಬೆಳೆಗಳನ್ನು ಬೆಳೆಯುವುದೇ ಹೆಚ್ಚು.

ರೈತರಿಗೆ ಕೇವಲ ವರ್ಷದ ಆರು ತಿಂಗಳು ಕೃಷಿ ಕೆಲಸಗಳಿದ್ದು ಇನ್ನುಳಿದ ಆರು ತಿಂಗಳು ಕೃಷಿ ಕೆಲಸವಿರುವುದಿಲ್ಲ.

ಇಂತಹ ಸಮಯದಲ್ಲಿ ಕೂಡ್ಲಿಗಿ ಹಾಗೂ ಹಗರಿಬೊಮ್ಮನಹಳ್ಳಿ ತಾಲೂಕುಗಳ ರೈತರು ಮಂಡ್ಯ, ಬೆಳಗಾವಿ ಜಿಲ್ಲೆಗಳ ಕಡೆ ಕಬ್ಬಿನ ಕಟಾವಿನ ಕೆಲಸಕ್ಕೆ ವಲಸೆ ಹೋಗುತ್ತಾರೆ ಅಥವಾ ಕಾಫಿ ತೋಟಗಳಲ್ಲಿ ಕೆಲಸವನ್ನರಿಸಿ ಇಲ್ಲವೇ ಪಕ್ಕದ ಗೋವಾ ರಾಜ್ಯಕ್ಕೆ ಕೂಲಿಯನ್ನರಸಿ ವಲಸೆ ಹೋಗುವುದೇ ಹೆಚ್ಚಾಗಿ ಕಂಡುಬರುತ್ತದೆ. ಈ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಕುರುಚಲು ಕಾಡನ್ನು ಹೊಂದಿದ ಅರಣ್ಯ ಪ್ರದೇಶ ಸುಮಾರು ೮೫೫ ಹೆಕ್ಟೇರುಗಳಷ್ಟಿದೆ. ಒಟ್ಟು ಗ್ರಾಮ ಠಾಣಾ ಪ್ರದೇಶವು ೨೦ ಹೆಕ್ಟೇರುಗಳಷ್ಟಿದ್ದು ಈ ಗ್ರಾಮ ಪಂಚಾಯ್ತಿಯ ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳ ಸಂಖ್ಯೆ ೧,೦೧೨ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಕುಟುಂಬಗಳು ೧೬೪ ಇದ್ದು ಪರಿಶಿಷ್ಟ ಪಂಗಡದ ಕುಟುಂಬಗಳು ೬೯೬ ರಷ್ಟಿವೆ.

೨೦೦೧ರ ಜನಗಣತಿ ಪ್ರಕಾರ ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಒಟ್ಟು ಜನಸಂಖ್ಯೆ ೫,೮೭೭ ರಷ್ಟಿದೆ ಇದರಲ್ಲಿ ಪುರುಷರು ೨,೯೯೮ ಹಾಗೂ ಮಹಿಳೆಯರು ೨,೮೭೭ ರಷ್ಟಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯವರ ಒಟ್ಟು ಜನಸಂಖೆ ೯೧೩ ರಷ್ಟಿದೆ, ಇದರಲ್ಲಿ ಪುರುಷರು ೪೫೫ ಹಾಗೂ ಮಹಿಳೆಯರು ೪೫೮ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೩,೯೨೮ ರಷ್ಟಿದೆ. ಇದರಲ್ಲಿ ಪುರುಷರು ೨,೦೩೦ ಹಾಗೂ ಮಹಿಳೆಯರು ೧,೮೯೮ರಷ್ಟಿದ್ದಾರೆ. ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಪ್ರಮಾಣವು ಶೇಕಡ ೧೫.೫೩ರಷ್ಟಿದೆ. ಹಾಗೂ ಪರಿಶಿಷ್ಟ ಪಂಗಡದವರ ಒಟ್ಟು ಜನಸಂಖ್ಯೆ ಪ್ರಮಾಣವು ಶೇಕಡ ೬೬.೮೩ರಷ್ಟಿದೆ. ಇತರೇ ಸಮುದಾಯಗಳ ಒಟ್ಟು ಜನಸಂಖ್ಯಾ ಪ್ರಮಾಣವು ಕೇವಲ ಶೇಕಡ ೧೭.೬೪ರಷ್ಟು ಮಾತ್ರವಿದೆ. ಒಟ್ಟಾರೆಯಲ್ಲಿ ಈ ಗ್ರಾಮ ಪಂಚಾಯ್ತಿಯಲ್ಲಿ ಪರಿಶಿಷ್ಟ ಪಂಗಡದ ವಾಲ್ಮೀಕಿ ಸಮುದಾಯದವರೇ ಬಲಿಷ್ಟವಾಗಿರುವುದು ಕಂಡುಬರುತ್ತದೆ.

ಬಣವಿಕಲ್ಲು ಗ್ರಾಮಪಂಚಾಯತ್

ಬಣವಿಕಲ್ಲು ಗ್ರಾಮವು ತಾಲೂಕು ಕೇಂದ್ರದಿಂದ ಸುಮಾರು ೨೫ ಕಿ.ಮೀ. ಗಳಷ್ಟು ದೂರವಿದೆ. ರಾಷ್ಟ್ರೀಯ ಹೆದ್ದಾರಿ ೧೩ರಲ್ಲಿ ಬರುವ ಈ ಗ್ರಾಮವು ಗ್ರಾಮಪಂಚಾಯತಿ ಕೇಂದ್ರವನ್ನು ಹೊಂದಿದೆ.

ಈ ಗ್ರಾಮಪಂಚಾಯತಿಯಲ್ಲಿ ಎಂ ಬಿ ಅಯ್ಯನಹಳ್ಳಿ, ಉಲ್ಲಾನಹಳ್ಳಿ, ಚಿಕ್ಕೋಬನಹಳ್ಳಿ, ಕೆಂಚೋಬನಹಳ್ಳಿ, ಬಣವಿಕಲ್ಲು ಗ್ರಾಮಗಳನ್ನು ಸೇರಿಸಲಾಗಿದೆ. ಈ ಗ್ರಾಮಗಳೆಲ್ಲ ಗ್ರಾಮಪಂಚಾಯತಿ ಕೇಂದ್ರದಿಂದ ಮೂರು, ನಾಲ್ಕು ಕಿಲೋಮೀಟರುಗಳ ಅಂತರದಲ್ಲಿಯೇ ಇವೆ. ಕೇವಲ ಒಣ ಬೇಸಾಯವನ್ನೇ ಆಧರಿಸಿರುವ ಈ ಗ್ರಾಮಪಂಚಾಯಿತಿ ವ್ಯಾಪ್ತಿಗೆ ನೀರಾವರಿ ಸೌಲಭ್ಯ ಇಲ್ಲವೆಂದೇ ಹೇಳಬಹುದು. ಇತ್ತೀಚೆಗೆ ರೈತರು ಕೊಳವೆ ಬಾವಿಗಳನ್ನು ತೋಡಿಸಿಕೊಂಡು ಕೃಷಿಭೂಮಿಗಳಿಗೆ ಅಲ್ಪಮಟ್ಟದ ನೀರಾವರಿ ಸೌಲಭ್ಯವನ್ನು ಪಡೆಯುತ್ತಿದ್ದಾರೆ.. ಈ ಗ್ರಾಮ ಪಂಚಾಯಿತಿಯ ಒಟ್ಟು ಭೌಗೋಳಿಕ ವಿಸ್ತೀರ್ಣವು ೪,೭೫೪ ಹೆಕ್ಟೇರುಗಳಷ್ಟಿದೆ. ಇದರಲ್ಲಿ ಒಟ್ಟು ಸಾಗುವಳಿಗೆ ಯೋಗ್ಯವಾದ ಭೂಮಿಯು ೩,೯೯೪ ಹೆಕ್ಟೇರುಗಳಷ್ಟು ಇದೆ. ಈ ಎಲ್ಲಾ ಐದು ಗ್ರಾಮಗಳ ನಡುವೆ ಒಟ್ಟು ೫೩ ತೆರೆದ ಹಾಗೂ ಕೊಳವೆ ಬಾವಿಗಳಿವೆ. ಈ ಬಾವಿಗಳಿಂದ ನೀರಾವರಿಯಾದ ಒಟ್ಟು ಭೂಮಿಯ ವಿಸ್ತೀರ್ಣವು ೧೫೪ ಹೆಕ್ಟೇರುಗಳಷ್ಟಿದೆ. ಈ ಭೂಮಿಯಲ್ಲಿ ಶೇಂಗಾ, ಈರುಳ್ಳಿ, ತರಕಾರಿ, ಜೋಳ, ಮುಸುಕಿನಜೋಳ, ರಾಗಿ, ಸಜ್ಜೆ, ತೊಗರಿ, ರೇಷ್ಮೆ, ಹತ್ತಿ ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಈ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಚಿಕ್ಕ ಗುಡ್ಡ ಹಾಗೂ ಕುರುಚಲು ಗಿಡ ಮರಗಳನ್ನುಳ್ಳ ಅರಣ್ಯ ಪ್ರದೇಶವು ೫೩೬ ಹೆಕ್ಟೇರುಗಳಷ್ಟಿದೆ. ೧೫೪ ಹೆಕ್ಟೇರುಗಳಷ್ಟು ನೀರಾವರಿ ಹೊಂದಿದ ಕೃಷಿ ಭೂಮಿ ಹೊರತಾದ ಇನ್ನುಳಿದ ಭೂಮಿಯು ಮಳೆಯಾಶ್ರಿತ ಒಣ ಬೇಸಾಯನ್ನು ಆಶ್ರಯಿಸಿದ ಭೂಮಿಯಾಗಿದೆ. ಒಟ್ಟು ಮೂರು ಗ್ರಾಮಗಳನ್ನೊಳಗೊಂಡ ಈ ಪಂಚಾಯತಿಯ ಗ್ರಾಮ ಠಾಣಾ ಪ್ರದೇಶವು ೩೮ ಹೆಕ್ಟೇರುಗಳಷ್ಟಿದೆ. ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ಕುಟುಂಬಗಳ ಸಂಖ್ಯೆಯು ೧,೪೩೯ ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿಗಳ ಕುಟುಂಬಗಳು ೩೧೩ ಇದ್ದರೆ ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆಯು ೪೨೪ ರಷ್ಟಿವೆ.

೨೦೦೧ರ ಜನಗಣತಿ ಪ್ರಕಾರ ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಟ್ಟು ಜನಸಂಖ್ಯೆಯ ೮,೩೯೪ರಷ್ಟಿದೆ. ಇದರಲ್ಲಿ ಪುರುಷರ ಸಂಖ್ಯೆಯು ೪,೧೯೯ ಹಾಗೂ ಮಹಿಳೆಯರ ಸಂಖ್ಯೆಯು ೪,೧೯೫ರಷ್ಟಿದೆ

ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ ೧,೨೯೪ ಇದ್ದು ಪುರುಷರು ೬೫೦ ಹಾಗೂ ಮಹಿಳೆಯರು ೬೪೪ರಷ್ಟಿದ್ದಾರೆ. ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೨,೧೧೬ ಇದ್ದು ಪುರುಷರು ೧,೦೭೯ ಹಾಗೂ ಮಹಿಳೆಯರು ೧,೦೨೭ರಷ್ಟಿದ್ದಾರೆ. ಒಟ್ಟಾರೆಯಾಗಿ ನೋಡಿದರೆ

ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪರಿಶಿಷ್ಟ ಜಾತಿಯವರ ಜನಸಂಖ್ಯಾ ಪ್ರಮಾಣವು ಶೇಕಡ ೧೫.೪೫ರಷ್ಟಿದೆ. ಪರಿಶಿಷ್ಟ ಪಂಗಡದ ಜನಸಂಖ್ಯಾ ಪ್ರಮಾಣವು ಶೇಕಡ ೨೫.೦೮ ರಷ್ಟಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಕಡಿಮೆಯಿರುವುದನ್ನು ಕಾಣಬಹುದಾಗಿದೆ. ಅದರ ಜೊತೆಗೆ ಈ ಎರಡೂ ಪಂಗಡಗಳ ಮಹಿಳೆಯರ ಸಾಕ್ಷರತಾ ಪ್ರಮಾಣವ ತುಂಬಾ ಶೋಚನೀಯವಾಗಿರುವುದು ಕಂಡುಬರುತ್ತದೆ.

❑❑❑

ಅಧ್ಯಾಯ ನಾಲ್ಕು

ಕರ್ನಾಟಕದಲ್ಲಿ ಪಂಚಾಯಿತ್‌ರಾಜ್ ವ್ಯವಸ್ಥೆ

ನಡೆದು ಬಂದ ದಾರಿ

ಅಧ್ಯಾಯ ೪

ಕರ್ನಾಟಕದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ನಡೆದು ಬಂದ ದಾರಿ

೧೯೦೧ರಲ್ಲಿ ಆಗಿನ ಬ್ರಿಟೀಷ್ ಆಡಳಿತದ ಭಾರತ ಸರ್ಕಾರವು ಮೈಸೂರು ಲೋಕಲ್ ಬೋರ್ಡ್ ಕಾಯ್ದೆಗಳನ್ನು ಜಾರಿಗೊಳಿಸಿತು. ಈ ಲೋಕಲ್ ಬೋರ್ಡ್ ಸ್ಥಳೀಯ ಸರ್ಕಾರದ ರಚನೆಯಾಗಿದ್ದು, ಅದು ಮೂರು ಹಂತಗಳನ್ನೊಳಗೊಂಡಿತ್ತು. ಮೊದಲಿಗೆ ಪಂಚಾಯ್ತಿ ಹಂತ, ಎರಡನೇಯದು ಪಂಚಾಯತಿಗಳ ಒಕ್ಕೂಟ (Union Panchait)ವಾಗಿದ್ದು ಅದಕ್ಕೆ ನಾಮನಿರ್ದೇಶಿತ ಅಧ್ಯಕ್ಷನಿರುತ್ತಿದ್ದ. ಇದು ತಾಲೂಕು ಮಟ್ಟದ ಸಂಸ್ಥೆಯಾಗಿತ್ತು. ಮೂರನೆಯದು ತಾಲೂಕು ಬೋರ್ಡ್‌ನಂತಹ ಉಪವಿಭಾಗಗಳನ್ನೊಳಗೊಂಡ ಜಿಲ್ಲಾ ಸಮಿತಿಯಿದ್ದು ಅದಕ್ಕೆ ಜಮೀನ್ದಾರರು ಉಪಾಧ್ಯಕ್ಷರಾಗಿರುತ್ತಿದ್ದರು, ಮತ್ತು ಜಿಲ್ಲಾಧಿಕಾರಿಯೇ (Deputy commissioner) ಅಧ್ಯಕ್ಷನಾಗಿರುತ್ತಿದ್ದನು.

ಈ ಎಲ್ಲಾ ಸಮಿತಿ ಅಥವಾ ಬೋರ್ಡ್‌ಗಳ ಕಾರ್ಯ ವಿಧಾನವು ಗ್ರಾಮೀಣಾಭಿವೃದ್ಧಿಯನ್ನು ಮಾಡುವ ಆಯುಧಗಳಾಗದೆ ಕೇವಲ ಕನ್ಸಲೇಟಿಟಿವ್ ಬಾಡಿಗಳಾಗಿ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದವು.

೧೯೧೮ರಲ್ಲಿ ಮೈಸೂರು ಸರ್ಕಾರವು ಮೊದಲ ಬಾರಿಗೆ ಪಂಚಾಯತ್ ಕಾಯ್ದೆಯಲ್ಲಿ ಮತದಾನದ ಮೂಲಕ ಸದಸ್ಯರನ್ನು ಆಯ್ಕೆ ಮಾಡುವ ಕ್ರಮವನ್ನು ಕಾನೂನು ಬದ್ಧವಾಗಿ ಜಾರಿ ಮಾಡಿತು ಚುನಾವಣೆಯಲ್ಲಿ ಆಯ್ಕೆಯಾದ ಒಟ್ಟು ಸದಸ್ಯರುಗಳ ಸಂಖ್ಯೆಯಲ್ಲಿ ಮೂರರಲ್ಲಿ ಎರಡು ಭಾಗದ

ಸದಸ್ಯರ ಅನುಮೋದನೆ ಮೇರೆಗೆ ಜಿಲ್ಲಾ ಮತ್ತು ತಾಲೂಕು ಸಮಿತಿಗಳ ಸದಸ್ಯರನ್ನು ಆಯ್ಕೆ ಮಾಡುವಂತಾಯಿತು, ಮತ್ತು ಈ ಕಾಯ್ದೆಯ ಪ್ರಕಾರ ಯಾವುದೇ ಅಧಿಕಾರವಿಲ್ಲದಿದ್ದರೂ ಸಹ ಆ ರಾಜ್ಯದ ಶ್ರೀಸಾಮಾನ್ಯನು ಸಹ ಚುನಾವಣೆಯಲ್ಲಿ ಆಯ್ಕೆಯಾಗುವಂತೆ ಮತ್ತು ಉಪಾಧ್ಯಕ್ಷನಾಗುವಂತೆ ಕಾಯ್ದೆಯನ್ನು ಜಾರಿ ಮಾಡಲಾಯಿತು

೧೯೧೮ರ ಪಂಚಾಯ್ತಿ ಕಾಯ್ದೆಯ ತರುವಾಯ ಮೈಸೂರು ಸರ್ಕಾರವು ಮರಳಿ ೧೯೨೬ರ ಗ್ರಾಮ ಪಂಚಾಯ್ತಿ ಕಾಯ್ದೆಯನ್ನು ಜಾರಿಗೊಳಿಸಿತು. ಇದರಲ್ಲಿ ಕೇವಲ ಎರಡು ವಿಧದ ಸ್ಥಳೀಯ ಸಂಸ್ಥೆಗಳಿರುವಂತೆ ಕಾಯ್ದೆಯನ್ನು ಜಾರಿ ಮಾಡಲಾಯಿತು. ಈ ಕಾಯ್ದೆಯಲ್ಲಿ ಮುಖ್ಯವಾಗಿ ಜಿಲ್ಲಾ ಸಮಿತಿ ಮತ್ತು ಗ್ರಾಮ ಪಂಚಾಯ್ತಿಗಳನ್ನು ಪರಿಚಯಿಸಲಾಯಿತು. ಇದರ ತರುವಾಯ ೧೯೩೨ರ ವೆಂಕಟಪ್ಪ ಸಮಿತಿಯು ಪಂಚಾಯತ ರಾಜ್ ವ್ಯವಸ್ಥೆಯ ಕಾಯ್ದೆಯಲ್ಲಿ ಕೆಲವು ಸುಧಾರಣೆಗಳನ್ನು ಜಾರಿಗೆ ತರುವಂತೆ ಶಿಫಾರಸ್ಸುಗಳನ್ನು ಮಾಡಿತು. ಅದರಲ್ಲಿ ಸ್ಥಳಿಯ ಸರ್ಕಾರಗಳು ಮೊದಲಿಗೆ ಎದುರಿಸುತ್ತಿದ್ದ ಹಲವು ಸಮಸ್ಯೆಗಳನ್ನು ಮನಗಂಡಿದ್ದ ಈ ಸಮಿತಿಯು ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಸಮಿತಿಗಳ ಆಡಳಿತದಲ್ಲಿ ಹಲವಾರು ಬದಲಾವಣೆಗಳನ್ನು ತರುವಂತೆ ಶಿಫಾರಸ್ಸು ಮಾಡಿತು.

ಪಂಚಾಯತ್ ರಾಜ್ ವ್ಯವಸ್ಥೆ ಎದುರಿಸುತ್ತಿರುವ ಅಡೆತಡೆ ಹಾಗೂ ಸಮಸ್ಯೆಗಳನ್ನು ಅಧ್ಯಯನ ಮಾಡಲು ಡಿ. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ವಿಚಾರಣಾ ಸಮಿತಿಯೊಂದನ್ನು ರಚಿಸಲಾಯಿತು. ಈ ವಿಚಾರಣಾ ಸಮಿತಿಯು ಸ್ಥಳೀಯ ಸರ್ಕಾರಗಳ ಕಾರ್ಯವೈಖರಿಯ ಕುರಿತು ಅಧ್ಯಯನ ಮಾಡಿ ೨೮, ಆಗಸ್ಟ್ ೧೯೩೪ ರಂದು ಮೈಸೂರು ಸರ್ಕಾರಕ್ಕೆ ವರದಿಯೊಂದನ್ನು ಒಪ್ಪಿಸಿತು. ಈ ಸಮಿತಿಯು ಮೂರು ಹಂತದಲ್ಲಿ ಸ್ಥಳಿಯ ಸರ್ಕಾರಗಳು ಕಾರ್ಯನಿರ್ವಹಿಸಬೇಕೆಂದು ಶಿಫಾರಸ್ಸು ಮಾಡಿತು. ಇದರಲ್ಲಿ ಮೇಲುಸ್ಥರದಲ್ಲಿ ಜಿಲ್ಲಾ ಸಮಿತಿ, ಮಧ್ಯಭಾಗದಲ್ಲಿ ತಾಲೂಕ ಸಮಿತಿ ಮತ್ತು ಕೆಳ ಹಂತದಲ್ಲಿ ಗ್ರಾಮ ಪಂಚಾಯಿತಗಳು ಕಾರ್ಯ ನಿರ್ವಹಿಸಬೇಕು, ಈ ಎಲ್ಲಾ ಸಂಸ್ಥೆಗಳಿಗೂ ಚುನಾವಣೆ ಮೂಲಕ ಸದಸ್ಯರನ್ನು ಆಯ್ಕೆ ಮಾಡಬೇಕು, ಜಿಲ್ಲಾ ಬೋರ್ಡ್ ಮತ್ತು ತಾಲೂಕ ಬೋರ್ಡ್‌ಗಳು ಎಕ್ಸ್‌ಕ್ಯೂಟಿವ್ ಬಾಡಿಗಳಾಗಿ ಕಾರ್ಯ ನಿರ್ವಹಿಸಬೇಕೆಂದು ಶಿಫಾರಸ್ಸು ಮಾಡಿತು. ಅದರಲ್ಲೂ ಸಾರ್ವಜನಿಕ ಕೆಲಸಗಳಲ್ಲಿ ಈ ಎರಡೂ ಸಮಿತಿಗಳು ವಿಶೇಷ ಎಜೆನ್ಸಿಗಳಾಗಿ ಕಾರ್ಯನಿರ್ವಹಿಸಬೇಕು ಎಂದು ಶಿಫಾರಸ್ಸು ಮಾಡಲಾಗಿತ್ತು, ಆದರೆ ಚಂದ್ರಶೇಖರಯ್ಯ ಸಮಿತಿಯ

ಶಿಫಾರಸ್ಸುಗಳೆಲ್ಲಾ ಸಂಪೂರ್ಣವಾಗಿ ಜಾರಿಗೆ ಬರಲಾಗಲಿಲ್ಲ. ಬೇರುಮಟ್ಟದಲ್ಲಿಯೇ ಬದಲಾವಣೆಗಳಾಗಬೇಕು ಎಂಬ ಸಮಿತಿಯ ಆಶಯವು ಈಡೇರಲಿಲ್ಲ. ಹೀಗಾಗಿ ಸಂವಿಧಾನಾತ್ಮಕವಾಗಿ ೧೯೫೯ರ ಮೈಸೂರು ಗ್ರಾಮ ಪಂಚಾಯ್ತಿ ಕಾಯ್ದೆ ಜಾರಿಗೊಳಿಸಲಾಯಿತು. ೧೯೫೯ರ ಕಾಯ್ದೆಯು ಸಹ ಮೂರು ಹಂತದ ವ್ಯವಸ್ಥೆಯನ್ನು ಜಾಗಿಗೊಳಿಸಬೇಕೆಂದು ತಿಳಿಸಿತು. ಅದು ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ತಾಲೂಕು ಮಟ್ಟದಲ್ಲಿ ತಾಲೂಕು ಅಭಿವೃದ್ಧಿ ಸಮಿತಿ ಹಾಗೂ ಜಿಲ್ಲಾ ಕೌನ್ಸಿಲ್‌ಗಳು ಜಿಲ್ಲಾ ಮಟ್ಟದಲ್ಲಿ ಕಾರ್ಯ ನಿರ್ವಹಿಸಬೇಕೆಂದು ತಿಳಿಸಿತು. ಆ ಸಂದರ್ಭದಲ್ಲಿ ೮೩೮೦ ಪಂಚಾಯತಿಗಳನ್ನು ೧೭೫ ತಾಲೂಕು ಬೋರ್ಡ್‌ಗಳನ್ನು ಹಾಗೂ ೧೯ ಜಿಲ್ಲಾ ಅಭಿವೃದ್ಧಿ ಕೌನ್ಸಿಲ್‌ಗಳನ್ನು ಮೈಸೂರು ರಾಜ್ಯವು ಒಳಗೊಂಡಿತ್ತು.

೪.೧. ಗ್ರಾಮ ಪಂಚಾಯಿತಿಗಳು

ಈ ಕಾಯ್ದೆಯು ತಳ ಹಂತದ (ಗ್ರಾಮ ಮಟ್ಟದ) ಸಂಸ್ಥೆಗಳು ಯಾವ ರೀತಿ ರಚನೆಗೊಳ್ಳಬೇಕು ಎನ್ನುವ ಕುರಿತು ಮಾರ್ಗದರ್ಶನ ನೀಡುತ್ತದೆ. ಅದರ ಪ್ರಕಾರ ಯಾವುದೇ ಒಂದು ಗ್ರಾಮ ಪಂಚಾಯತಿಯು ೧೫೦೦ ರಿಂದ ೧೦,೦೦೦ ಜನಸಂಖ್ಯೆಯನ್ನೊಳಗೊಂಡಿರಬೇಕು. ಪ್ರತಿ ಗ್ರಾಮ ಪಂಚಾಯತಿಯು ಕನಿಷ್ಠ ೧೧ ಜನ ಹಾಗೂ ಗರಿಷ್ಠ ೧೯ ಜನ ಸದಸ್ಯರನ್ನೊಳಗೊಂಡಿರಬೇಕು. ಜನಸಂಖ್ಯಾ ಆಧಾರದ ಮೇಲೆ ಪರಿಶಿಷ್ಟ ಜಾತಿ ಹಾಗು ಪರಿಶಿಷ್ಟ ವರ್ಗದ ಸದಸ್ಯರ ಹಾಗೂ ಮಹಿಳೆಯರ ಮೀಸಲಾತಿಯನ್ನು ನಿಗದಿಗೊಳಿಸಬೇಕು.

ಕನಿಷ್ಠ ಇಬ್ಬರಾದರು ಮಹಿಳಾ ಸದಸ್ಯರು ಇರುವಂತೆ ನೋಡಿಕೊಳ್ಳಬೇಕು. ಆಯ್ಕೆಗೊಂಡ ಸದಸ್ಯರಲ್ಲಿಯೇ ಒಬ್ಬರನ್ನು ಬಹುಮತದ ಮೇಲೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕು

ಸೆಕ್ಷನ್ ೫೧(೧) (೨)(೩) ಮತ್ತು (೪) ಕಾಯ್ದೆಯನ್ವಯ ಪ್ರತಿಯೊಂದು ಗ್ರಾಮ ಪಂಚಾಯಿತಿಯು ಸಂವಿಧಾನಾತ್ಮಕವಾಗಿ ಮೂರು ಸಮಿತಿಗಳನ್ನು ಹೊಂದಿರಬೇಕು, ಚುನಾಯಿತ ಸದಸ್ಯರು ಈ ಸಮಿತಿಗಳಲ್ಲಿ ಇದ್ದು ಅವರ ಮೇಲ್ವಿಚಾರಣೆಯಲ್ಲಿ ಸಮಿತಿಗಳು ಕಾರ್ಯ ನಿರ್ವಹಿಸಿರುವಂತಿರಬೇಕು. ಮುಖ್ಯವಾಗಿ ಕೃಷಿ, ಸಾರ್ವಜನಿಕ ಆರೋಗ್ಯ, ನೈರ್ಮಲ್ಯೀಕರಣದಂತಹ ಮೂಲ ಸೌಲಭ್ಯಗಳನ್ನು ಗ್ರಾಮವು ಹೊಂದಿರಬೇಕೆಂಬ ಉದ್ದೇಶದಿಂದ ನ್ಯಾಯಬದ್ಧವಾದ ಮೂರು ಸಮಿತಿಗಳನ್ನು ರಚಿಸಲಾಗಿದೆ. ಆ ಸಮಿತಿಗಳು ಯಾವುವೆಂದರೆ–

೧. ಕೃಷಿ ಸಮಿತಿ

೨. ಆರೋಗ್ಯ ಸಮಿತಿ

೩. ಗ್ರಾಮೀಣ ಉದ್ದಿಮೆಗಳ ಸಮಿತಿ

ಇವುಗಳಲ್ಲದೇ ಇನ್ನು ಮೂರು ಸಮಿತಿಗಳನ್ನು ತಿಳಿಸಲಾಗಿದೆ

ಅವುಗಳು ಕ್ರಮವಾಗಿ

೧. ಹಣಕಾಸು ಸಮಿತಿ

೨. ಕಾರ್ಯಾಂಗ ಸಮಿತಿ

೩. ಸಾಮಾಜಿಕ ನ್ಯಾಯ ಸಮಿತಿ– ಮುಖ್ಯವಾಗಿ ಈ ಎಲ್ಲಾ ಸಮಿತಿಗಳು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸದಸ್ಯರನ್ನೊಳಗೊಂಡಿರಬೇಕು ಎಂದು ತಿಳಿಸಲಾಗಿದೆ.

ಹಣಕಾಸು ಸಮಿತಿ

ಪಂಚಾಯ್ತಿಗಳ ಭೂಮಿ ಹಾಗು ಕಟ್ಟಡಗಳ ಮೇಲೆ (ಲೆವಿ) ಕಂದಾಯವನ್ನು (ಕೃಷಿ ಭೂಮಿ ಹೊರತಾಗಿ) ಎತ್ತಬೇಕು, ಈ ತೆರಿಗೆಯು ಸಾಮಾನ್ಯವಾಗಿ ವೃತ್ತಿನಿರತ ವ್ಯಾಪಾರ, ಉದ್ಯೋಗ ಇತ್ಯಾದಿಗಳು ಹಾಗೇ ಮನೋರಂಜನೆ, ವ್ಯಾಪಾರ, ಹಬ್ಬ, ಮೋಟಾರು ವಾಹನಗಳು, ಮಾರುಕಟ್ಟೆ, ಕುದುರೆಗಾಡಿ ಮತ್ತು ಎತ್ತಿನಗಾಡಿ ನಿಲ್ದಾಣಗಳು ಇತ್ಯಾದಿಗಳಿಂದಲೂ ತೆರಿಗೆ ವಸೂಲು ಮಾಡಬಹುದು.

೪.೧.೧. ಗ್ರಾಮ ಪಂಚಾಯತಿ ಕಾರ್ಯಗಳು

೧೯೫೯ರ ಕಾಯ್ದೆ ಪ್ರಕಾರ ಗ್ರಾಮ ಪಂಚಾಯಿತಿಗಳು ಎರಡು ರೀತಿಯ ಕಾರ್ಯ ನಿರ್ವಹಣೆ ಮಾಡಬಹುದು

೧. ಕರಾರಿಗೆ ಒಳಪಟ್ಟ ಕಡ್ಡಾಯ ಕಾರ್ಯಗಳು ಹಾಗೂ (Obligatory)

೨. ವಿವೇಚನಾ ಕಾರ್ಯಗಳು (Discretionary)

ಕರಾರಿಗೆ ಒಳಪಟ್ಟ ಕಡ್ಡಾಯ ಕಾರ್ಯಗಳಲ್ಲಿ ಕಟ್ಟಡ ನಿರ್ಮಾಣ ಕೆಲಸ, ರಿಪೇರಿ, ರಸ್ತೆ ನಿರ್ವಹಣೆ, ಸಾರ್ವಜನಿಕ ಬಾವಿ, ಕೆರೆ, ಬೀದಿ ದೀಪಗಳು, ನೈರ್ಮಲ್ಯೀಕರಣ ಇತ್ಯಾದಿಗಳನ್ನು ನೋಡುವುದಾಗಿದೆ ಹಾಗೆ ಸಾಂಕ್ರಾಮಿಕ ರೋಗಗಳು ಬಾರದಂತೆ ಶುಚಿತ್ವವನ್ನು ಕಾಪಾಡುವುದು

ಮತ್ತು ತುಡುಗು ದನಗಳನ್ನು ಕೂಡಿಹಾಕುವ ದನದ ದೊಡ್ಡಿಗಳ ನಿರ್ವಹಣೆಯು ಇದರದಾಗಿದೆ. ಹಾಗೇ ಸ್ಥಳೀಯ ಜನರ ಮಧ್ಯದಲ್ಲಿ ನಡೆಯುವ ಜಗಳ ಇತ್ಯಾದಿಗಳನ್ನು ನಿಯಂತ್ರಿಸುವುದು, ಹಾಗೂ ಗ್ರಾಮದ ಆಸ್ಥಿ ಹಾಳಾಗದಂತೆ ನೋಡಿಕೊಳ್ಳುವುದು. ಆರೋಗ್ಯಕ್ಕೆ ಸಂಬಂಧಿಸಿದಂತೆ ತೀವ್ರವಾದ

ಸೋಂಕು ರೋಗಗಳು ಹರಡದಂತೆ (ಕಾಲರ, ಮಲೇರಿಯದಂತಹ ಸೊಂಕು ರೋಗಗಳು) ತಡೆಗಟ್ಟಲು ಬೇಕಾದ ಮುನ್ನಚ್ಚರಿಕೆವಹಿಸುವುದು. ಮಾರುಕಟ್ಟೆಯ ನಿಯಂತ್ರಣ ಸಹಕಾರಿಗಳ ಕಾರ್ಯವಿಧಾನಗಳನ್ನು ಗುರುತಿಸುವುದು ಮತ್ತು ನಿರ್ವಹಿಸುವುದು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಗಳ ಕಡೆಗೆ ಗಮನಹರಿಸುವುದು. ಅತೀ ಅವಶ್ಯಕವಾದ ತೀವ್ರತರದ ಕಾರ್ಯಗಳಿದ್ದರೆ ಸಮಿತಿಯ ಪರವಾನಿಗೆ ಮೇರೆಗೆ ತಾಲೂಕು ಬೋರ್ಡ್ ಅಥವಾ ಸರ್ಕಾರದ ಅನುಮತಿ ಪಡೆದು ಅನುಷ್ಟಾನಗೊಳಿಸಬಹುದು.

೪.೨. ತಾಲೂಕು ಅಭಿವೃದ್ದಿ ಮಂಡಳಿ

ಗ್ರಾಮ ಪಂಚಾಯತಿ ನಂತರದ ಮೇಲಿನ ಹಂತವೇ ತಾಲೂಕು ಅಭಿವೃದ್ಧಿ ಮಂಡಳಿ ಇದು ಪ್ರತಿ ತಾಲೂಕಿನ ಸಂವಿಧಾನಾತ್ಮಕ ಕ್ರಿಯೆಗೆ ಚಾಲನೆ ಕೊಡುವಂತಹದ್ದು. ಈ ಮಂಡಳಿಗೆ ಸದಸ್ಯರು ನೇರವಾಗಿ ಚುನಾವಣೆ ಮೂಲಕ ಆಯ್ಕೆಯಾಗುತ್ತಿದ್ದರು. ತಾಲೂಕು ಅಭಿವೃದ್ಧಿ ಮಂಡಳಿಗೆ ಸದಸ್ಯರ ಆಯ್ಕೆ ಕ್ರಮವು ತಾಲೂಕಿನ ಜನಸಂಖ್ಯೆಯನ್ನಾಧರಿಸಿ ನಡೆಯುತ್ತದೆ. ಕನಿಷ್ಟ ಒಂದು ಲಕ್ಷ ಜನಸಂಖ್ಯೆಗೆ ೧೫ ಜನ ಸದಸ್ಯರು ಹಾಗೂ ಅದಕ್ಕೂ ಮೇಲ್ಪಟ್ಟು ತಾಲೂಕಿನ ಜನಸಂಖ್ಯೆಯಿದ್ದರೆ ೧೯ ಜನ ಸದಸ್ಯರನ್ನು ಆಯ್ಕೆ ಮಾಡಬಹುದಾಗಿತ್ತು. ಹಾಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಮಹಿಳೆ ಹೀಗೆ ಆಯಾ ಪಂಗಡಕ್ಕೆ ಸಂಬಂಧಿಸಿದಂತೆ ಆಯಾ ಸಮುದಾಯದ ಅಥವಾ ಪಂಗಡದ ಜನಸಂಖ್ಯೆಯನ್ನಾಧರಿಸಿ ಸದಸ್ಯರ ಮೀಸಲಾತಿ ಇರುತ್ತಿತ್ತು. ಆಯ್ಕೆಗೊಂಡ ಸದಸ್ಯರೊಂದಿಗೆ ಪ್ರತಿ ಸಭೆಗೂ ವಿಧಾನಸಭಾ ಸದಸ್ಯರು ಹಾಗೂ ರಾಜ್ಯಸಭಾ ಸದಸ್ಯರು ಪಾಲ್ಗೊಳ್ಳಬೇಕು ಅವರೆಲ್ಲರ ಅನುಮೋದನೆ ಮೇರೆಗೆ ಗೊತ್ತುವಳಿ ಹಾಗೂ ನಿರ್ಣಯಗಳನ್ನು ಕೈಗೊಳ್ಳಬೇಕಾಗಿತ್ತು. ಚುನಾವಣೆಯಾಗಿ ಆಯ್ಕೆಗೊಂಡ ಸದಸ್ಯರ ಕಾಲಾವಧಿ ಐದು ವರ್ಷಗಳಿಗೆ ಸೀಮಿತವಾಗಿದ್ದು ಅಧ್ಯಕ್ಷ, ಉಪಾಧ್ಯಕ್ಷರ ಕಾಲಾವಧಿಯೂ ಆ ಕಾಲಾವಧಿಗೆ ಸೀಮಿತವಾಗಿತ್ತು. ತಾಲೂಕಾಭಿವೃದ್ಧಿ ಮಂಡಳಿಗೆ ಆಯ್ಕೆಗೊಂಡ

ಸದಸ್ಯರಲ್ಲಿ ಕೆಲವಾರು ಗುಂಪುಗಳನ್ನು ರಚಿಸಲಾಗುತ್ತಿತ್ತು. ಅವುಗಳು ಕ್ರಮವಾಗಿ ಸ್ಟ್ಯಾಂಡಿಂಗ್ ಕಮಿಟಿ, ಆಡಿಟ್ ಕಮಿಟಿ, ಸಾರ್ವಜನಿಕ ಆರೋಗ್ಯ ಕಮಿಟಿ, ಮತ್ತು ಸಾಮಾಜಿಕ ನ್ಯಾಯ ಸಮಿತಿ ಮುಂತಾದ ಉಪ ಸಮಿತಿಗಳನ್ನು ರಚಿಸಲಾಗುತ್ತಿತ್ತು.

೪.೨.೧. ತಾಲೂಕು ಅಭಿವೃದ್ಧಿ ಮಂಡಳಿಯ ಕಾರ್ಯಗಳು

ತಾಲೂಕು ಅಭಿವೃದ್ಧಿ ಮಂಡಳಿಯಲ್ಲಿಯೂ ಎರಡು ವಿಧದ ಕಾರ್ಯಾಂಗಗಳಿದ್ದವು. ಅವುಗಳು ಕ್ರಮವಾಗಿ, ಕರಾರು ರೀತ್ಯ ಕಾರ್ಯಗಳು (Obligatory) ಸ್ವಂತ ಇಚ್ಚೆಯಂತೆ ನಡೆಯುವ ಕಾರ್ಯಗಳು (Discretionary) ತಾಲೂಕು ಬೋರ್ಡ್ ಮುಖ್ಯವಾಗಿ ಸಾರ್ವಜನಿಕ ರಸ್ತೆ ಮತ್ತು ಜನರಿಗೆ ಅವಶ್ಯಕವಾದ ನೀರಿನ ಸೌಲಭ್ಯವೊದಗಿಸುವ ಬಾವಿಗಳ ನಿರ್ಮಾಣ ಮತ್ತು ನಿರ್ವಹಣೆಯ ಕಾರ್ಯವನ್ನು ಮಾಡಬೇಕಾಗಿತ್ತು. ಜೊತೆಗೆ ಪ್ರಾಥಮಿಕ ಶಾಲಾಕಟ್ಟಡಗಳ ನಿರ್ಮಾಣ, ಆಸ್ಪತ್ರೆಗಳ ನಿರ್ಮಾಣ, ಮಾರುಕಟ್ಟೆ ಮತ್ತು ವಿಶ್ರಾಂತಿ ಗೃಹಗಳನ್ನು ನಿರ್ಮಾಣ ಮಾಡುವುದು. ಜನಸಾಮಾನ್ಯರಿಗೆ ಮಾಹಿತಿಯೊದಗಿಸುವ ಸಲುವಾಗಿ ಕೃಷಿ ಮತ್ತು ಔದ್ಯೋಗಿಕ ವಸ್ತು ಪ್ರದರ್ಶನ ಏರ್ಪಡಿಸುವುದು ಮತ್ತು ಅವುಗಳಿಗೆ ಸಂಬಂಧಿಸಿದಂತೆ ಪ್ರತಿ ಹಳ್ಳಿಗೂ ಗೊತ್ತಾಗುವಂತೆ ಪ್ರಚಾರ ಕಾರ್ಯಗಳನ್ನು ಹಮ್ಮಿಕೊಳ್ಳುವುದು, ಹತ್ತು ಎಕರೆಗೂ ಮೀರದಂತೆ ನೀರು ಸರಬರಾಜು ಯೋಜನೆಗಳ ನಿರ್ಮಾಣ ಹಾಗೂ ನಿರ್ವಹಣೆ, ಜೊತೆಗೆ ಸಾಮಾಜಿಕ ಶಿಕ್ಷಣವು ಜನಸಾಮಾನ್ಯರಿಗೆ ದೊರೆಯುವಂತೆ ಮಾಡುವುದು ಮತ್ತು ಗ್ರಾಮೀಣಾಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಂಡು ಅವುಗಳ ಆರ್ಥಿಕ ಸ್ಥಿತಿ ಸುಧಾರಿಸುವಂತೆ ಮಾಡುವುದು. ಮುಖ್ಯವಾಗಿ ಹಳ್ಳಿಗಾಡಿನ ಕೃಷಿ ಚಟುವಟಿಕೆ ಅಭಿವೃದ್ಧಿ ಪಡಿಸುವುದು ತಾಲೂಕು ಅಭಿವೃದ್ಧಿ ಮಂಡಳಿಯ ಕಾರ್ಯವಾಗಿದೆ. ಹಾಗೇ ಮುಖ್ಯವಾಗಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳನ್ನು ಹುಟ್ಟು ಹಾಕುವುದು ಹಾಗೂ ಅವುಗಳನ್ನು ನಿರ್ವಹಿಸುವುದು, ಸಹಕಾರಿ ಸಂಸ್ಥೆಗಳ ಅಭಿವೃದ್ಧಿ ವ್ಯಾಪಾರ ಮತ್ತು ವಾಣಿಜ್ಯ ವ್ಯವಸ್ಥೆಗಳನ್ನು ಅಭಿವೃದ್ಧಿ ಪಡಿಸುವುದು ಮುಂತಾದ ಕೆಲಸಗಳನ್ನು ಅದು ನಿರ್ವಹಿಸಬೇಕಾಗಿತ್ತು.

೪.೨.೨. ತಾಲೂಕಾಭಿವೃದ್ಧಿ ಮಂಡಳಿಯ ಹಣಕಾಸು ವ್ಯವಹಾರ

೧೯೫೯ರ ಕಾಯ್ದೆಗೆ ಸಂಬಂಧಿಸಿದಂತೆ ಸಂವಿಧಾನಬದ್ಧವಾಗಿ ತಾಲೂಕು ಬೋರ್ಡ್ ನಿಧಿಯು (Fund) ಗ್ರಾಮ ಪಂಚಾಯಿತಿ ನಿಧಿಯನ್ನೆ ಹೋಲುತ್ತದೆ. ತಾಲೂಕು ಬೋರ್ಡ್‌ಗಳು ಮುಖ್ಯವಾಗಿ ಸರ್ಕಾರ ನೀಡಲ್ಪಡುವ ಹಣಕಾಸು ಸಹಾಯದ ಮೇಲೆ ಕಾರ್ಯನಿರ್ವಹಿಸಬೇಕಾಗಿತ್ತು ಮತ್ತು

ಅದು ನಿರ್ಬಂಧಿತ ಮತ್ತು ನೇರವಾಗಿ ಜನತೆಯ ಮೇಲೆ ಹಾಕಲ್ಪಡುವ ತೆರಗೆಗಳನ್ನು ಅವಲಂಬಿಸಿ ಕಾರ್ಯನಿರ್ವಹಿಸಬೇಕಾಗಿತ್ತು.

ತಾಲೂಕಾಭಿವೃದ್ಧಿ ಮಂಡಳಿಗಳು ಎರಡು ಬಗೆಯ ತೆರಿಗೆಯನ್ನು ಅವಲಂಬಿಸಿದ್ದವು ಮೊದಲನೆದಾಗಿ ಆಹಾರ ವಸ್ತು ಮತ್ತು ಇತರ ವಸ್ತುಗಳ ಸಾಗಣಿಕೆಗಳ ಮೇಲೆ ವಿಧಿಸುವ ತೆರಿಗೆ ಹಾಗೂ ಸ್ಟಾಂಪ್ ಡ್ಯೂಟಿಗಳನ್ನು ಅವಲಂಭಿಸಿತ್ತು, ಹಾಗೂ ಪ್ರಾಣಿಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವಾಗ ಮಾರಾಟವಾಗುವ ಪ್ರಾಣಿಗಳ ಮೇಲೆ ತೆರಿಗೆ ಶುಲ್ಕವನ್ನು ಹಾಕುವ ಅಧಿಕಾರ ತಾಲೂಕು ಬೋರ್ಡಿಗಿತ್ತು.

೪.೩. ಜಿಲ್ಲಾಭಿವೃದ್ಧಿ ಕೌನ್ಸಿಲ್

೧೯೫೯ ಕರ್ನಾಟಕ ಪಂಚಾಯತ್ ರಾಜ್ ಪದ್ಧತಿಯಲ್ಲಿ ಜಿಲ್ಲಾಭಿವೃದ್ಧಿ ಕೌನ್ಸಿಲ್ ಅತೀ ಎತ್ತರದ ಹಂತದಲ್ಲಿರುವ ವ್ಯವಸ್ಥೆಯಾಗಿತ್ತು. ಇದು ಜಿಲ್ಲಾ ಮಟ್ಟದ ಸಮಿತಿಯಾಗಿದ್ದಿತು, ರಾಜ್ಯದಲ್ಲಿ ಇಂತಹ ಹತ್ತೊಂಭತ್ತು ಜಿಲ್ಲಾಭಿವೃದ್ಧಿ ಕೌನ್ಸಿಲ್‌ಗಳನ್ನು ಕಾಣಬಹುದಾಗಿತ್ತು.

ಜಿಲ್ಲಾಭಿವೃದ್ಧಿ ಕೌನ್ಸಿಲ್‌ನ ಕೇಂದ್ರಬಿಂದು ಜಿಲ್ಲಾಧಿಕಾರಿ (ಡೆಪ್ಯೂಟಿ ಕಮೀಷನರ್) ಯಾಗಿದ್ದರು. ಇದರ ಸದಸ್ಯರು ಲೋಕಸಭಾ ಸದಸ್ಯರು ಮತ್ತು ವಿಧಾನಸಭಾ ಸದಸ್ಯನಾಗಿರಬೇಕಾಗಿತ್ತು. ಇವರು ಇಡೀ ಜಿಲ್ಲೆಯ ಪ್ರತಿನಿಧಿಗಳಾಗಿರುತ್ತಿದ್ದರು. ರಾಜ್ಯದ ರಾಜ್ಯಸಭಾ ಸದಸ್ಯರು ಜಿಲ್ಲಾ ಕೇಂದ್ರದಲ್ಲಿ ವಾಸಿಸಬೇಕಿತ್ತು. ತಾಲೂಕು ಬೋರ್ಡ್ ಪ್ರಸಿಡೆಂಟ್ ಮತ್ತು ಪರಿಶಿಷ್ಟ ಜಾತಿಯ ಸದಸ್ಯರು ಹಾಗೂ ಮಹಿಳಾ ಸದಸ್ಯೆಯರನ್ನು ರಾಜ್ಯ ಸರ್ಕಾರವು ನಾಮ ನಿರ್ದೇಶನದ ಮೂಲಕ ಜಿಲ್ಲಾ ಕೌನ್ಸಿಲ್‌ಗೆ ಆಯ್ಕೆ ಮಾಡುತ್ತಿತ್ತು.

ಜಿಲ್ಲಾಭಿವೃದ್ಧಿ ಕೌನ್ಸಿಲ್‌ಗೆ ಜಿಲ್ಲಾಧಿಕಾರಿಯೇ ಅಧ್ಯಕ್ಷನಾಗಿರುತ್ತಿದ್ದನು. ಈ ಕೌನ್ಸಿಲ್‌ಗೆ ರಾಜ್ಯ ಸರ್ಕಾರವು ಕಾರ್ಯದರ್ಶಿಯನ್ನು ನೇಮಿಸಿರುತ್ತಿತ್ತು. ಆ ಕಾರ್ಯದರ್ಶಿಯು ಜಿಲ್ಲಾಭಿವೃದ್ಧಿ ಕೌನ್ಸಿಲ್, ತಾಲೂಕಾಭಿವೃದ್ಧಿ ಸಂಸ್ಥೆಗಳು ಹಾಗೂ ಪಂಚಾಯತಿಗಳ ಮೇಲೆ ಮೇಲ್ವಿಚಾರಣೆ ಮಾಡುವುದು ಮತ್ತು ಅವುಗಳಿಗೆ ಅವಶ್ಯಕವಾದ ಸಹಕಾರವನ್ನು ನೀಡುವ ಕೆಲಸವನ್ನು ಮಾಡಬೇಕಾಗಿತ್ತು.

೪.೩.೧. ತಾಲೂಕಾಭಿವೃದ್ಧಿ ಕೌನ್ಸಿಲ್‌ನ ಮುಖ್ಯ ಕಾರ್ಯಗಳು

ತಾಲೂಕು ಬೋರ್ಡ್‌ಗಳಿಗೆ ಭದ್ರತೆ ಒದಗಿಸುವುದು ಮತ್ತು ಅದರ ಮುಂಗಡಗಳನ್ನು ಅನುಮೋದಿಸುವುದು.

೧. ಕಾಲಕಾಲಕ್ಕೆ ತಾಲೂಕು ಬೋರ್ಡ್ ನಿರ್ಹಹಿಸುವ ಕೆಸಲಗಳನ್ನು ವೀಕ್ಷಿಸುವುದು ಮತ್ತು ತಪ್ಪುಗಳು ಘಟಿಸದಂತೆ ನೋಡಿಕೊಳ್ಳುವುದು, ಅಕಸ್ಮಾತ್ ತಪ್ಪು ಘಟಿಸಿದಲ್ಲಿ ಅಂತಹ ತಪ್ಪನ್ನು ಮಧ್ಯಸ್ಥಿಕೆ ವಹಿಸಿ ಸರಿಪಡಿಸುವುದು.

೨. ತಾಲೂಕಾಭಿವೃದ್ಧಿ ಬೋರ್ಡ್‌ಗೆ ಸಹಕಾರಿಯಾಗುವಂತೆ ಮಾರ್ಗದರ್ಶನ ನೀಡುವುದು.

೩. ತಾಲೂಕಾಭಿವೃದ್ಧಿ ಬೋರ್ಡ್‌ಗಳ ಕಾರ್ಯದಲ್ಲಿ (ಕೋ-ಆರ್ಡಿನೇಷನ್) ಸಹಕಾರ ಕೊಡುವುದು.

೪. ಮತ್ತು ಸರ್ಕಾರದ ನೀತಿ ನಿಯಮಗಳನ್ನು ಅನುಸರಿಸುವುದು.

ರಾಜ್ಯದ ಆ ಎರಡೂ ಸಭೆಗೆಳು ನಿರ್ಣಹಿಸಿದ ಗೋತ್ತುವಳಿಗಳನ್ನು ೧೯೮೫ ರಲ್ಲಿ ಮಾನ್ಯ ರಾಷ್ಟ್ರಪತಿಗಳು ಅನುಮೋದಿಸಿದರು. ಆ ವಿಲ್ಲನ್ನು ಕರ್ನಾಟಕದ ಜಿಲ್ಲಾ ಪರಿಷತ್, ತಾಲೂಕು ಪಂಚಾಯಿತಿ ಸಮಿತಿ, ಮಂಡಲ ಪಂಚಾಯಿತಿ, ನ್ಯಾಯ ಪಂಚಾಯಿತಿ ಕಾಯ್ದೆ ೧೯೮೫ ಎಂದು ಕರೆಯಲಾಗುತ್ತದೆ. ೧೯೮೫ ರ ಈ ಕಾಯ್ದೆಯು ಮೂರು ಹಂತಗಳ ಅಧಿಕಾರ ವ್ಯವಸ್ಥೆಯಂತೆ ಕಂಡು ಬಂದರೂ ಮೂಲತಃ ಎರಡು ಹಂತಗಳ ಆಡಳಿತ ವ್ಯವಸ್ಥೆಯನ್ನೊಳಗೊಂಡ ಯೋಜನೆ/ ಯೋಚನೆ ಇದಾಗಿತ್ತು.

ಪ್ರಾರಂಭದಲ್ಲಿ ಕರ್ನಾಟಕದಲ್ಲಿ ಪರೀಕ್ಷಾರ್ಥವಾಗಿ ಈ ವ್ಯವಸ್ಥೆಯನ್ನು ಪರಿಚಯಿಸಲಾಯಿತು. ತರುವಾಯ ರಾಷ್ಟ್ರ ವ್ಯಾಪಿ ಈ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಲಾಯಿತು.

ಕರ್ನಾಟಕದಲ್ಲಿ ಪ್ರಾರಂಭಗೊಂಡ ಪಂಚಾಯತ್ ರಾಜ್ ವ್ಯವಸ್ಥೆಯ ಪ್ರಯೋಗದ ತರುವಾಯ ಅದು ರಾಷ್ಟ್ರ ವ್ಯಾಪಿಯಾಗಿ ಆಕರ್ಷಣೆಗೆ ಒಳಗಾಯಿತು ಹಾಗೂ ಇದನ್ನು ಉಪವಿಭಾಗಗಳ ಮಟ್ಟದಲ್ಲಿ ಕಟ್ಟಲಾಯಿತು. ಈ ವ್ಯವಸ್ಥೆಯ ಪ್ರಯೋಗದ ಕುರಿತು ತುಂಬಾ ಕುತೂಹಲವಿದ್ದಿತು. ಕೆಲವು ಜನರ ದೃಷ್ಟಿಯಲ್ಲಿ ಇದು ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ತುಂಬಾ ಪರಿಣಾಮಕಾರಿಯಾದ ಕ್ರಾಂತಿಕಾರಕ ಬದಲಾವಣೆ ಎಂದು ಭಾವಿಸಲಾಯಿತು. ಮತ್ತು ಈ ವ್ಯವಸ್ಥೆಯು ಭಾರತದ

ಅಭಿವೃದ್ಧಿಗೆ ಸಂಬಂಧಿಸಿದ ಇತಿಹಾಸದಲ್ಲಿ ಗುರುತಿಸಬಹುದಾದ ಮೈಲುಗಲ್ಲು ಎಂದು ಭಾವಿಸಲಾಯಿತು ಈ ವ್ಯವಸ್ಥೆಯು ಭಾರತದಲ್ಲಿ ಪ್ರತಿಷ್ಠಾಪಿತಗೊಂಡ ತರುವಾಯ ಜನಸಾಮಾನ್ಯರಿಗೆ ಸಾರ್ವಜನಿಕ ಹಿತಾಸಕ್ತಿಗಳಲ್ಲಿ ಪ್ರವೇಶ ಪಡೆಯಲು ಉತ್ತೇಜನ ನೀಡಿದಂತಾಯಿತು.

೪.೩.೨. ಗ್ರಾಮ ಸಭೆ

೧೯೮೫ರ ಕಾಯ್ದೆ ವಿಧಿಯನ್ವಯ ಸಂವಿಧಾನಬದ್ಧವಾಗಿ ಗ್ರಾಮ ಸಭೆಗಳು ಪ್ರತಿ ಹಳ್ಳಿಗಳಲ್ಲಿಯೂ ನಡೆಯಬೇಕು ಎಂಬುದಾಗಿತ್ತು. ಗ್ರಾಮದ ಪ್ರತಿಯೊಬ್ಬ ಪ್ರಬುದ್ಧ ವ್ಯಕ್ತಿಯೂ ಗ್ರಾಮ ಸಭೆಯಲ್ಲಿ ಪಾಲ್ಗೊಳ್ಳಬೇಕು. ವರ್ಷದಲ್ಲಿ ಕನಿಷ್ಠ ಆರು ತಿಂಗಳಿಗೊಮ್ಮೆಯಾದರೂ ಗ್ರಾಮ ಸಭೆಯನ್ನು ನಡೆಸಬೇಕು, ಮಂಡಲ ಪಂಚಾಯಿತಿಯ ಪ್ರಧಾನ ಮತ್ತು ಉಪಪ್ರಧಾನರು ಗ್ರಾಮೀಣಾಭಿವೃದ್ಧಿಯ ಕುರಿತು ಗ್ರಾಮದ ಕುಂದುಕೊರತೆಗಳ ಕುರಿತು ಸಾರ್ವಜನಿಕರೊಂದಿಗೆ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಬೇಕು. ಗ್ರಾಮ ಸಭೆಯು ಗ್ರಾಮ ಮತ್ತು ಮಂಡಲ ಪಂಚಾಯಿತಿಯ ಮಧ್ಯ ಬಾಂಧವ್ಯ ಬೆಸಿಯುವ ಮಧ್ಯಸ್ಥಿಕೆದಾರನ ಕೆಲಸ ಮಾಡುತ್ತದೆ ಮತ್ತು ಯೋಜನೆಗಳು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳ್ಳಲು ಗ್ರಾಮ ಸಭೆಯು ಸಹಾಯಕವಾಗಿರುತ್ತದೆ.

೪.೪. ಮಂಡಲ ಪಂಚಾಯಿತಿ

ಅಶೋಕ ಮೆಹ್ತಾ ಸಮಿತಿಯ ವರದಿಯನ್ನು ಆಧರಿಸಿ ಕರ್ನಾಟಕದಲ್ಲಿ ಮಂಡಲ ಪಂಚಾಯಿತಿ ಕಾರ್ಯವನ್ನು ಪ್ರಾರಂಭಿಸಿತು. ಮಂಡಲ ಪಂಚಾಯಿತಿಗಳು ಸಂವಿಧಾನ ಬದ್ಧವಾಗಿದ್ದು ಯಾವುದೇ ಕಂದಾಯ ಗ್ರಾಮ ಅಥವಾ ಗ್ರಾಮಗಳ ಗುಚ್ಛಗಳನ್ನು ಸೇರಿಸಿ ಆಡಳಿತ ನಡೆಸಬೇಕಾಗಿತ್ತು ಮಂಡಲ ಪಂಚಾಯಿತಿಗಳನ್ನು ಸಾಮಾನ್ಯವಾಗಿ ಜನಸಂಖ್ಯೆಯನ್ನು ಆಧರಿಸಿ ನಿರ್ಮಿಸಲಾಗುತ್ತಿತ್ತು. ಒಂದು ಮಂಡಲ ಪಂಚಾಯಿತಿಯನ್ನು ಸ್ಥಾಪಿಸಬೇಕೆಂದರೆ ಆ ಗ್ರಾಮ ಅಥವಾ ಗ್ರಾಮಗಳ ಜನಸಂಖ್ಯೆ ಕನಿಷ್ಠ ಎಂಟು ಸಾವಿರದಿಂದ ಹನ್ನೆರಡು ಸಾವಿರದವರೆಗಿರಬೇಕು, ಮಲೆನಾಡು ಪ್ರದೇಶಗಳಲ್ಲಿ ಮಂಡಲ ಪಂಚಾಯತಿ ರಚನೆಗೆ ಕನಿಷ್ಠ ನಾಲ್ಕು ಸಾವಿರದಷ್ಟು ಜನಸಂಖ್ಯೆ ಇರಬೇಕು ಎಂಬ ನಿಯಮವನ್ನು ಹುಟ್ಟು ಹಾಕಲಾಯಿತು. ಈ ಕಾಯ್ದೆಯ ಪ್ರಕಾರ ಜಿಲ್ಲಾಧಿಕಾರಿಯು ಆಯಾ ಜಿಲ್ಲೆಯ ಗ್ರಾಮಗಳ ಜನಸಂಖ್ಯೆಯನ್ನು ಆಧರಿಸಿ ಮಂಡಲಗಳನ್ನು ಘೋಷಿಸುತ್ತಿದ್ದನು. ಇದಕ್ಕೆ ಸರ್ಕಾರದ ಸಮ್ಮತಿಯೂ ಇದ್ದಿತು. ಮಂಡಲ ಪಂಚಾಯಿತಿಗೆ ಚುನಾವಣೆ ನಡೆಸಿಯೇ ಸದಸ್ಯರನ್ನು

ಆಯ್ಕೆ ಮಾಡಬೇಕಾಗಿತ್ತು. ಈ ಸದಸ್ಯರ ಸಂಖ್ಯೆಯ ಜನಸಂಖ್ಯೆಯನ್ನಾಧರಿಸಿದ್ದು ಕನಿಷ್ಟ ನಾಲ್ಕು ನೂರು ಜನರಿಗೆ ಒಬ್ಬ ಸದಸ್ಯನಂತೆ ಚುನಾವಣೆ ಆಯ್ಕೆ ಕ್ರಿಯೆ ನಡೆಯುತ್ತಿತ್ತು.

ಮೀಸಲಾತಿಗೆ ಸಂಬಂಧಿಸಿದಂತೆ ಮಂಡಲ ಪಂಚಾಯತಿಗಳಲ್ಲಿ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ, ಮಹಿಳೆಯರಿಗೆ ಶೇ:೨೫ ರಷ್ಟು (ಸದಸ್ಯತ್ವಕ್ಕೆ) ಮೀಸಲಾತಿಯನ್ನು ಕಾಯ್ದಿರಿಸಬೇಕಾಗಿತ್ತು. ಪ್ರತಿಯೊಂದು ಮೀಸಲಾತಿಯು ಆ ಮಂಡಲದ ಜನಸಂಖ್ಯೆಯನ್ನು ಆಧರಿಸಿದ ಅನುಪಾತದಲ್ಲಿ ನಿರ್ಣಯಿಸಲಾಗುತ್ತಿತು.

ಮಂಡಲ ಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳೆ ಹೀಗೆ ಪ್ರತಿಯೊಂದು ಮೀಸಲಾತಿಯೂ ಶೇಕಡ ಹದಿನೆಂಟಕ್ಕಿಂತ ಕಡಿಮೆ ಇರದಂತೆ ನೋಡಿಕೊಳ್ಳಬೇಕು. ಅಕಸ್ಮಾತ್ ಹಿಂದುಳಿದ ವರ್ಗದ ಒಬ್ಬ ಅಭ್ಯರ್ಥಿಯೂ ಚುನಾವಣೆಯಲ್ಲಿ ಆಯ್ಕೆಯಾಗದೇ ಹೋದ ಪಕ್ಷದಲ್ಲಿ ಜಿಲ್ಲಾ ಪರಿಷತ್ ನೇರವಾಗಿ ಹಿಂದುಳಿದ ವರ್ಗದ ಇಬ್ಬರು ಸೂಕ್ತ ವ್ಯಕ್ತಿಗಳನ್ನು ನಾಮ ನಿರ್ದೇಶನ ಸದಸ್ಯರಾಗಿ ಆಯ್ಕೆ ಮಾಡಬಹುದಾಗಿತ್ತು. ಮಂಡಲ ಪಂಚಾಯಿತಿಯಲ್ಲಿ ಆಯ್ಕೆಯಾದ ಸದಸ್ಯರಲ್ಲಿಯೇ ಒಬ್ಬರನ್ನು ಪ್ರಧಾನರನ್ನಾಗಿ ಮತ್ತೊಬ್ಬರನ್ನು ಉಪಪ್ರಧಾನರಾಗಿ ಆಯ್ಕೆ ಮಾಡಲಾಗುತ್ತಿತ್ತು. ಮಂಡಲ ಪಂಚಾಯಿತಿಗಳು ಮುಖ್ಯವಾಗಿ ಮೂರು ರೀತಿಯ ಕಾರ್ಯಗಳನ್ನು ಮಾಡಬೇಕಾಗಿತ್ತು ಇವುಗಳು ಕ್ರಮವಾಗಿ ಕರಾರಿಗೆ ಒಳಪಟ್ಟ ಕಡ್ಡಾಯ ಕಾರ್ಯಗಳು.

ಹಾಗೂ (Obligatory) ವಿವೇಚನಾ ಕಾರ್ಯಗಳು (Discretionary) ಮತ್ತು ವರ್ಗಾವಣೆ ಕಾರ್ಯಗಳಾಗಿದ್ದವು. ೧೯೮೫ರ ಕಾಯ್ದೆಯ ನಾಲ್ಕನೇ ಅಧ್ಯಾಯದಲ್ಲಿ ನಾಗರೀಕರ ಕುರಿತು ಮಂಡಲ ಪಂಚಾಯಿತಿ ನಿರ್ವಹಿಸಿಬೇಕಾದ ಕಾರ್ಯಗಳ ಕುರಿತೇ ಸುಧೀರ್ಘವಾಗಿ ತಿಳಿಸಲಾಗಿದೆ. ಮಂಡಲ ಪಂಚಾಯಿತಿಯ ಬಹುಮುಖ್ಯ ಕಾರ್ಯವೆಂದರೆ ಗ್ರಾಮೀಣ ಪ್ರದೇಶದ ಜನರ ಅದರಲ್ಲೂ ಕೆಳವರ್ಗದ ಜನರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ ಪ್ರಗತಿಯನ್ನು ಮಾಡುವುದಾಗಿತ್ತು.

೪.೪.೧. ಮಂಡಲ ಪಂಚಾಯಿತಿ ಹಣಕಾಸು ವ್ಯವಸ್ಥೆ

೧೯೮೫ರ ಕಾಯ್ದೆಯ ಪ್ರಕಾರ ಮಂಡಲ ಪಂಚಾಯಿತಿ ಹಣಕಾಸು ವ್ಯವಹಾರಗಳಿಗೆ ಬೇಕಾಗುವ ನಿಧಿಯನ್ನು ಸರ್ಕಾರ ಇಲ್ಲವೇ ಜಿಲ್ಲಾ ಪರಿಷತ್ ನೀಡಬೇಕಾಗಿತ್ತು.

ಇದರೊಂದಿಗೆ ಮಂಡಲದ ವ್ಯಾಪ್ತಿಯಲ್ಲಿ ಬರುವ ಕಟ್ಟಡ ತೆರಿಗೆ, ನಿವೇಶನಗಳ ತೆರಿಗೆ, ಮನೋರಂಜನಾ ತೆರಿಗೆ, ಮಾರುಕಟ್ಟೆ ತೆರಿಗೆ, ನೀರಿನ ಕರ ಇತ್ಯಾದಿಗಳಿಂದಲೂ ಮಂಡಲ ಪಂಚಾಯತಿಗೆ ಅವಶ್ಯವಾದ ಹಣವನ್ನು ಪಡೆಯಬಹುದಾಗಿತ್ತು. ಸರ್ಕಾರವು ಮಂಡಲದೊಳಗಿರುವ ಪ್ರತಿ ವ್ಯಕ್ತಿಗೂ ತಲಾ ಹತ್ತು ರೂಪಾಯಿಯಂತೆ ಖರ್ಚು ಮಾಡಲು ಮಂಡಲ ಪಂಚಾಯತಿಗೆ ನಿಧಿಯನ್ನು (Fund) ನೀಡುತ್ತಿತ್ತು. ಅಂದರೆ ಸರ್ಕಾರವು ಶೇಕಡ ಇಪ್ಪತ್ತೈದರಷ್ಟು ಹಣವನ್ನು ಮಂಡಲ ಪಂಚಾಯತಿಗಳಿಗಾಗಿ ಖರ್ಚು ಮಾಡಲು ಜಿಲ್ಲಾ ಪರಿಷತ್‌ಗೆ ಬಿಡುಗಡೆ ಮಾಡುತ್ತಿತ್ತು.

೪.೪.೨. ನ್ಯಾಯ ಪಂಚಾಯತಿ

೧೯೮೫ರ ಪಂಚಾಯತ್ ರಾಜ್ ಕಾಯ್ದೆ ಪ್ರಕಾರ ಮಂಡಲ ಪಂಚಾಯತಿಗಳ ಮಟ್ಟದಲ್ಲಿ ನ್ಯಾಯ ಪಂಚಾಯತಿಗಳನ್ನು ಸ್ಥಾಪಿಸಲಾಯಿತು. ವಿಶೇಷವಾಗಿ ಹೊರಹಾಕಲ್ಪಟ್ಟ ಮೊಕದ್ದಮ್ಮೆಗಳಿಗೆ ಸಂಬಂಧಿಸಿದಂತೆ ಅಧ್ಯಾಯ XII (ಗುತ್ತಿಗೆಯಲ್ಲಿ ಹಣ ಬಾಕಿ ಇರುವಾಗ ಮಾನವೀಯತೆಯನ್ನು ಪರಿಗಣಸುವಂತಹ ಸಂದರ್ಭಗಳಲ್ಲಿ)ರಲ್ಲಿ ವಿಶೇಷವಾಗಿ ವಿವರಿಸಲಾಗಿದೆ. ಮಂಡಲ್ ಮಟ್ಟದಲ್ಲಿ ಮೊಕದ್ದಮ್ಮೆಗಳು ಇತ್ಯರ್ಥವಾಗದಿದ್ದ ಪಕ್ಷದಲ್ಲಿ ಸರ್ಕಾರವು ಅವುಗಳ ಇತ್ಯರ್ಥದ ಕುರಿತು ವಿಶೇಷ ಕಾಳಜಿವಹಿಸಿ ಅಂತಹ ಮೊಕದ್ದಮ್ಮೆಗಳನ್ನು ಜಿಲ್ಲಾ ಪರಿಷತ್‌ಗೆ ಅನುಮೋದಿಸವಾಗುತ್ತಿತ್ತು. ಪ್ರತಿಯೊಂದು ಮಂಡಲ್‌ಗೆ ಸಂಬಂಧಿಸಿದಂತೆ ನ್ಯಾಯ ಪಂಚಾಯಿತಿಗಳಿದ್ದು, ಅವುಗಳನ್ನು ಮಂಡಲ್ ನ್ಯಾಯ ಪಂಚಾಯ್ತಿಗಳೆಂದು ಕರೆಯಲಾಗುತ್ತಿತ್ತು.

ನ್ಯಾಯ ಪಂಚಾಯತಿಯಲ್ಲಿ ಐದು ಜನ ಸದಸ್ಯರಿದ್ದು ಅವರೆಲ್ಲಾ ಚುನಾಯಿತ ಸದಸ್ಯರಾಗಿರುತ್ತಿದ್ದರು. ಮತ್ತು ಅವರು ಮಂಡಲ್‌ಗೆ ಸಂಬಂಧಿಸಿದ ಸದಸ್ಯರಾಗಿರುತ್ತಿದ್ದರು. ಇದರಲ್ಲಿ ಕನಿಷ್ಠ ಒಬ್ಬರಾದರೂ ಪರಿಶಿಷ್ಟಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವರೂ ಹಾಗೂ ಮಹಿಳಾ ಪ್ರತಿನಿಧಿಯಿರಬೇಕು ಹಾಗೂ ಒಬ್ಬ ಸದಸ್ಯರು ಹಿಂದುಳಿದ ವರ್ಗಕ್ಕೆ ಸೇರಿದವರಿರಬೇಕು.

ನ್ಯಾಯ ಪಂಚಾಯ್ತಿ ಸದಸ್ಯರ ಕಾಲಾವಧಿಯು ಇಪ್ಪತ್ತು ತಿಂಗಳಿರಬೇಕು. ತರುವಾಯ ಎರಡನೇ ಕಾಲಾವಧಿಗೆ ಬೇರೆ ಸದಸ್ಯರಿಗೆ ಅವಕಾಶ ಕಲ್ಪಿಸಿಕೊಡಬೇಕು. ನ್ಯಾಯ ಪಂಚಾಯಿತಿ ಸದಸ್ಯರಲ್ಲಿಯೇ ಮುಖ್ಯಸ್ಥನೊಬ್ಬನನ್ನು ಆಯ್ಕೆ ಮಾಡಲಾಗುತ್ತಿದ್ದು ಅವನನ್ನು ಮುಖ್ಯ ವಿಚಾರಕ ಎಂದು ಕರೆಯಲಾಗುತ್ತಿತ್ತು. ನ್ಯಾಯ ಪಂಚಾಯ್ತಿಯು ತಮ್ಮ ಮಂಡಲದ ಎಲ್ಲಾ ರೀತಿಯ (Tried & Criminal case) ಮೊಕದ್ದಮ್ಮೆಗಳನ್ನು ವಿಚಾರಣೆ ಮಾಡುತ್ತಿದ್ದಿತು.

೪.೫. ತಾಲೂಕ ಪಂಚಾಯ್ತಿ ಸಮಿತಿ

೧೯೮೫ರ ಕಾಯ್ದೆಯನ್ವಯ ತಾಲೂಕು ಪಂಚಾಯ್ತಿ ಸಮಿತಿಗಳನ್ನು ನಿರ್ಮಿಸಲಾಗಿತ್ತು. ತಾಲೂಕು ಪಂಚಾಯ್ತಿಯ ಅತೀ ಮುಖ್ಯ ಕೆಲಸವೆಂದರೆ ಮಂಡಲ ಪಂಚಾಯಿತಿಗಳಿಗೆ ಮಾರ್ಗದರ್ಶನ ನೀಡುವುದು ಮತ್ತು ಅದರ ಕಾರ್ಯಗಳಿಗೆ ಸಹಕರಿಸುವುದಾಗಿತ್ತು. ಮಂಡಲ ಪಂಚಾಯಿತಿಗಳು ಸರಿಯಾಗಿ ಕಾರ್ಯ ನಿರ್ವಹಿಸದಿದ್ದಾಗ ತಾಲೂಕ ಪಂಚಾಯಿತಿ ಸಮಿತಿಯ ಅದನ್ನು ಸರಿಪಡಿಸುವ ಕಾರ್ಯ ಮಾಡುತ್ತಿತ್ತು. ಹಾಗೂ ಸಂವಿಧಾನ ಬದ್ದವಾಗಿ ಇದು ಜಿಲ್ಲಾ ಪರಿಷತ್ತಿನ ಪರವಾಗಿ ಮಂಡಲ ಪಂಚಾಯತಿಗಳಿಗೆ ಸಹಕರಿಸುತ್ತಿತ್ತು. ತಾಲೂಕ ಪಂಚಾಯಿತಿಯು ಮುಖ್ಯವಾಗಿ ಮಂಡಲ ಪಂಚಾಯಿತಿಗಳ ಮೇಲ್ವಿಚಾರಣೆ ಮಾಡುತ್ತಿತ್ತು. ಮತ್ತು ಅಗತ್ಯತೆವೆನಿಸಿದಾಗ ಸಹಕರಿಸುತ್ತಿತ್ತು. ಕ್ಷೇತ್ರಾಭಿವೃದ್ಧಿ ಅಧಿಕಾರಿ (Block Development Officer) ತಾಲೂಕ ಪಂಚಾಯಿತಿಗಳ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದನು.

೪.೬. ಜಿಲ್ಲಾ ಪರಿಷತ್

೧೯೫೯ರ ಕಾಯ್ದೆಯನ್ವಯ ಹುಟ್ಟಿದ್ದ ಜಿಲ್ಲಾ ಅಭಿವೃದ್ಧಿ ಕೌನ್ಸಿಲ್‌ಗೆ ಬದಲಾಗಿ ಹುಟ್ಟಿದುದೇ ಜಿಲ್ಲಾ ಪರಿಷತ್. ಜಿಲ್ಲಾಭಿವೃದ್ಧಿ ಕೌನ್ಸಿಲ್‌ನಲ್ಲಿ ನೇರವಾಗಿ ಚುನಾಯಿತರಾದ ಪ್ರತಿನಿಧಿಗಳಿರುತ್ತಿರಲಿಲ್ಲ. ಮತ್ತು ಈ ಕೌನ್ಸಿಲ್ ಕೇವಲ ಗ್ರಾಮ ಪಂಚಾಯಿತಿಗಳಿಗೆ ತಿಳುವಳಿಕೆ ನೀಡುವ ಅಥವಾ ಮಾರ್ಗದರ್ಶನ ನೀಡುವ ಶಕ್ತಿಯನ್ನು ಮಾತ್ರ ಹೊಂದಿದ್ದಿತು. ಆದರೆ ೧೯೮೫ರ ಕಾಯ್ದೆಯನ್ವಯ ಹುಟ್ಟಿದ ಜಿಲ್ಲಾ ಪರಿಷತ್‌ನಲ್ಲಿ ನೇರವಾಗಿ ಚುನಾಯಿತಗೊಂಡ ಸದಸ್ಯರು ಕಾರ್ಯ ನಿರ್ವಹಿಸುವಂತಾಯಿತು. ಜಿಲ್ಲಾ ಪರಿಷತ್ ಮಂಡಲ್ ಪಂಚಾಯಿತಿಯ ವಿಸ್ತೃತ ಭಾಗವಾಗಿ ಕಾರ್ಯ ನಿರ್ವಹಿಸುವಂತಾಯಿತು. ಮುಖ್ಯವಾಗಿ ಜಿಲ್ಲಾ ಪಂಚಾಯಿತಿಯಲ್ಲಿ ಮೂರು ವಿಧದ ಸದಸ್ಯರು ಕಾರ್ಯ ನಿರ್ವಹಿಸುತ್ತಿದ್ದರು. ಅವರು ಕ್ರಮವಾಗಿ

೧. ಚುನಾಯಿತ ಸದಸ್ಯರು

೨. ಸಹ ಸದಸ್ಯರು

೩. ನಾಮ ನಿರ್ದೇಶಿತ ಸದಸ್ಯರು.

ಜಿಲ್ಲಾ ಪರಿಷತ್‌ಗೆ ಪ್ರದೇಶ ಹಾಗೂ ಜನಸಂಖ್ಯೆಯನ್ನಾಧರಿಸಿ ಚುನಾವಣೆ ನಡೆಸಲಾಗುತ್ತಿತ್ತು. ಒಬ್ಬ ಸದಸ್ಯನು ಚುನಾವಣೆಗೆ ನಿಲ್ಲಬೇಕೆಂದರೆ ಆ ಚುನಾವಣಾ ಕ್ಷೇತ್ರವು ಕನಿಷ್ಟ ೩೫,೦೦೦ ಜನಸಂಖ್ಯೆಯನ್ನು ಸಾಮಾನ್ಯವಾಗಿ ಹೊಂದಿರಬೇಕಾಗಿತ್ತು. ಕೊಡಗಿನಂತಹ ವಿಶೇಷ ಜಿಲ್ಲೆಗಳಲ್ಲಿ ಕನಿಷ್ಟ ೧೫,೦೦೦ ಜನ ಸಂಖ್ಯೆಯಾದರೂ ಇರಬೇಕಾಗಿತ್ತು. ಇದು ಆಯಾ ಜಿಲ್ಲೆ ಅಥವಾ ಪ್ರದೇಶದ ಜನಸಂಖ್ಯೆಯ ಪ್ರಮಾಣದ ಮೇಲೆ ನಿರ್ಧರಿತವಾಗುತ್ತಿತ್ತು. ಸಾಮಾನ್ಯವಾಗಿ ಲೋಕಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು ನಾಮ ನಿರ್ದೇಶಿತ ಸದಸ್ಯರಾಗಿರುತ್ತಿದ್ದರು.

ಆ ಮೂರು ಸದಸ್ಯರು ಆಯಾ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟವರಾಗಿರಬೇಕಾಗಿತ್ತು. ಇವರು ಎಲ್ಲಾ ಸದಸ್ಯರಂತೆ ಗೊತ್ತುವಳಿ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಸಮಾನವಾಗಿ ಪಾಲ್ಗೊಳ್ಳಬೇಕು ಹಾಗೂ ಜಿಲ್ಲಾ ಪರಿಷತ್‌ನೊಳಗೆ ಅಧ್ಯಕ್ಷ, ಉಪಾಧ್ಯಕ್ಷ ಇತ್ಯಾದಿ ಹುದ್ದೆಗೆ ಸದಸ್ಯರನ್ನು ಆಯ್ಕೆ ಮಾಡುವಾಗ ಮತದಾನ ಮಾಡುವ ಹಕ್ಕು ಸಹ ಇವರಿಗಿದ್ದಿತು.

ಇವರು ಮುಖ್ಯವಾಗಿ ಸಮಾಜದಲ್ಲಿನ ದುರ್ಬಲ ವರ್ಗಗಳನ್ನು ಪ್ರತಿನಿಧಿಸುವಂತಿರಬೇಕು. ಕಾಯ್ದೆ ಪ್ರಕಾರ ಜಿಲ್ಲಾ ಪರಿಷತ್ ಸದಸ್ಯರ ಸ್ಥಾನದಲ್ಲಿ .ಶೇಕಡ ಇಪ್ಪತ್ತೈದರಷ್ಟು ಸ್ಥಾನಗಳನ್ನು ಇವರಿಗಾಗಿ ಕಾಯ್ದಿರಿಸಬೇಕು. ಅದೇ ರೀತಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೂ ಸಹ ಆ ಜಿಲ್ಲೆಯ ಆ ಸಮುದಾಯದ ಜನರ ಸಂಖ್ಯಾ ಬಾಹುಳ್ಯದ ಮೇಲೆ ಮೀಸಲಾತಿ ನಿರ್ಧರಿಸಿ ಸ್ಥಾನಗಳನ್ನು ಕಲ್ಪಿಸಿಕೊಡಬೇಕು, ಜಿಲ್ಲಾ ಪರಿಷತ್ ಸದಸ್ಯರ ಒಟ್ಟು ಸಂಖ್ಯೆಯ ಕನಿಷ್ಟ ಹದಿನೆಂಟರ ಒಳಗಿರಬಾರದು.

ಜಿಲ್ಲಾ ಪರಿಷತ್ ಯಾವುದೇ ನಿರ್ಣಯಗಳನ್ನು ಕೈಗೊಳ್ಳಲು ಒಂಭತ್ತು ಉಪಸಮಿತಿಗಳನ್ನು ರಚಿಸಿಕೊಳ್ಳಬೇಕು.

ಆ ಉಪಸಮಿತಿಗಳು ಕ್ರಮವಾಗಿ ಈ ಕೆಳಗಿನಂತಿವೆ.

೧. ಸಾಮಾನ್ಯ ಸಭಾ ಸಮಿತಿ (General Meeting Comity)

೨. ಹಣಕಾಸು ನಿರ್ವಹಣಾ ಸಮಿತಿ (Finance & Audit)

೩. ಯೋಜನಾ ಕಾರ್ಯಕ್ರಮ ಮತ್ತು ಅಭಿವೃದ್ಧಿ ಸಮಿತಿ (Planning & Development)

೪. ಸಾರ್ವಜನಿಕ ಸೇವೆ ಮತ್ತು ಅಭಿವೃದ್ಧಿ (Public work & Development)

೫. ಸಾಮಾಜಿಕ ನ್ಯಾಯ ಸಮಿತಿ (Social justice Comity)

೬. ಕೃಷಿ ಮತ್ತು ಪಶು ಸಂಗೋಪನಾ ಸಮಿತಿ(Agriculture & Animal Husbandry Comity)

೭. ಆರೋಗ್ಯ ಸಮಿತಿ (Health Comity)

೮. ಶಿಕ್ಷಣ ಸ್ಥಾಯಿ ಸಮಿತಿ (Education Comity)

೯. ಔದ್ಯೋಗಿಕರಣ ಸಮಿತಿ (Industrial Comity)

೧೯೫೫ರ ಮೈಸೂರು ಪಂಚಾಯಿತಿ ಮತ್ತು ಸ್ಥಳೀಯ ಸರ್ಕಾರಗಳ ರಾಜ್ಯ ಮಟ್ಟದ ಸಮಿತಿಯು ಗ್ರಾಮೀಣ ಭಾಗದ ಸ್ಥಳೀಯ ಸರ್ಕಾರಗಳ ಕುರಿತು ವಿವಿಧ ರೀತಿಯ ಅನುಭವವನ್ನು ಹೊಂದಿತು, ಭಾರತದ ಸಂಯುಕ್ತ ಸರ್ಕಾರಕ್ಕಿಂತ ಹಾಗೂ ರಾಜ್ಯ ಸರ್ಕಾರದ ಆಡಳಿತ ವ್ಯವಸ್ಥೆಗಿಂತ ಗ್ರಾಮೀಣ ಪ್ರದೇಶದ ಸ್ಥಳೀಯ ಸರ್ಕಾರಗಳ ಆಡಳಿತ ಕ್ರಮ ತುಂಬಾ ಭಿನ್ನವಾದುದು ಎಂಬುದನ್ನು ಅರಿತುಗೊಂಡಿತು. ಗ್ರಾಮೀಣ ಪ್ರದೇಶದ ಸ್ಥಳೀಯ ಸರ್ಕಾರಗಳ ಆಡಳಿತ ಹೇಗೆ ನಡೆಸಬೇಕೆಂದು ಅರಿಯಲು ಎರಡು ಸಮಿತಿಗಳನ್ನು ನೇಮಿಸಲು ಆಗಿನ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಯಿತು. ಮದ್ರಾಸ್, ಬಾಂಬೆ, ಹೈದರಾಬಾದ್ ಸರ್ಕಾರಗಳಂತೆ ಸ್ಥಳೀಯ ಸರ್ಕಾರಗಳನ್ನು ರಚಿಸಬೇಕೆಂದು ಬಲವಂತ್‌ರಾವ್ ಮೆಹ್ತಾ ಸಮಿತಿಯು ಶಿಫಾರಸ್ಸು ಮಾಡಿತು. ಪಿ. ಆರ್. ಧುಭಾಷಿಯವರು ನಿರೂಪಿಸಿದ ಸ್ಥಳೀಯ ಸರ್ಕಾರಗಳ ನೀತಿಗಳನ್ನು ಬದಲಿಸಬೇಕಾಗುತ್ತದೆ ಎಂಬುದನ್ನು ಮೆಹ್ತಾ ಸಮಿತಿಯು ಶಿಫಾರಸ್ಸು ಮಾಡಿತು. ೧೯೬೦ ರಲ್ಲಿ ಮೊದಲಿಗೆ ಗ್ರಾಮ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಯಿತು. ೧೯೬೩ರಲ್ಲಿ ಸರ್ಕಾರವು ಕೊಂಡಜ್ಜಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಧ್ಯಯನ ಮಾಡಲು ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯು ಜಿಲ್ಲಾ ಪರಿಷತ್ ಬದಲಾಗಿ ಜಿಲ್ಲಾಭಿವೃದ್ಧಿ ಮಂಡಳಿ, ತಾಲೂಕು ಅಭಿವೃದ್ಧಿ ಮಂಡಳಿ ಮತ್ತು ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆಯಬೇಕು, ಇದರೊಂದಿಗೆ ಮಹಿಳೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇದರಲ್ಲಿ ನೇರವಾಗಿ ಪಾಲ್ಗೊಂಡು ಸದಸ್ಯರಾಗುವಂತೆ ಮೀಸಲಾತಿ ಕಲ್ಪಿಸಬೇಕು ಹಾಗೂ ಅವರ ಅಭಿವೃದ್ಧಿಗಾಗಿ ಹೆಚ್ಚಿನ (ಆರ್ಥಿಕ) ಫಲಾಕ್ಸ್ ಗಳನ್ನು ಮೀಸಾಲಿರಿಸಬೇಕು ಜೊತೆಗೆ ನ್ಯಾಯ ಪಂಚಾಯತಿಗಳನ್ನು ರಚಿಸಲು

ಸಲಹೆ ನೀಡಿತು. ರಾಜ್ಯ ಕೌನ್ಸಿಲ್ ತನ್ನ ಕೆಳಗಿನ ಜಿಲ್ಲಾ ಕೌನ್ಸಿಲ್‌ಗಳು, ತಾಲೂಕು ಅಭಿವೃದ್ಧಿ ಮಂಡಳಿ, ಗ್ರಾಮ ಪಂಚಾಯತಿಗಳ ಕಾರ್ಯ ವಿಧಾನವನ್ನು ಅವಲೋಕಿಸುತ್ತಿರಬೇಕು ಸರ್ಕಾರವು ಪಂಚಾಯತ್ ರಾಜ್ಯ ವ್ಯವಸ್ಥೆಯ ಆಡಳಿತದೊಂದಿಗೆ ಸಂಬಂಧವನ್ನು ಹೊಂದಿರಬೇಕು.

೧೯೬೪ ರಲ್ಲಿ ಜಂಟಿಯಾಗಿ ಸೆಲಿಸೇಟೆಡ್ ಕಮೀಟಿಯನ್ನು ಪಂಚಾಯತ್ ರಾಜ್ ಬಿಲ್ ನಿರ್ಮಿಸಲು ಹಾಗೂ ಅದು ೨೧ ಜನ ಸದಸ್ಯರನ್ನು ಒಳಗೊಂಡಿರಬೇಕೆಂದು ಶಿಫಾರಸ್ಸು ಮಾಡಿತು. ಶ್ರೀ ರಾಮಕೃಷ್ಣ ಹೆಗಡೆಯವರು ಪಂಚಾಯತ್ ರಾಜ್ಯ ಅಭಿವೃದ್ಧಿ ಮಂತ್ರಿಗಳು ಮತ್ತು ಸರಕಾರ ಸಂಸ್ಥೆಗಳ ಅಧ್ಯಕ್ಷಕರಾಗಿ ಕಾರ್ಯನಿರ್ವಹಿಸಿದರು. ಇವರು ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ಶಿಫಾರಸ್ಸು ಮಾಡಿದರು. ಗ್ರಾಮ ಪಂಚಾಯತಿ, ತಾಲೂಕು ಬೋರ್ಡ್, ಜಿಲ್ಲಾ ಪರಿಷತ್ ಹಾಗೂ ನ್ಯಾಯ ಪಂಚಾಯಿತಿ ಮತ್ತು ಗ್ರಾಮ ಸಭೆಗಳನ್ನು ಅವು ಒಳಗೊಂಡಿರಬೇಕೆಂದು ತಿಳಿಸಿದರು.

ಈ ಎಲ್ಲಾ ಸಮಿತಿಗಳ ಶಿಫಾರಸ್ಸಿನನ್ವಯ ಕರ್ನಾಟಕ ಸರ್ಕಾರವು ೧೯೫೯ರ ಕಾಯ್ದೆಯಲ್ಲಿ ಕೆಲವು ಅನುಸೂಚಿಗಳನ್ನು (Amendment) ೧೯೭೦ರಲ್ಲಿ ಸೇರಿಸಿತು. ಆದರೆ ಜಿಲ್ಲಾ ಪರಿಷತ್‌ನ್ನು ಈ ಅನುಸೂಚಿಯಿಂದ ಕೈಬಿಡಬೇಕೆಂದು ಆಲೋಚನೆ ಈ ಸಮಿತಿ ಒಳಗೊಂಡಿತ್ತು.

೧೯೭೮ರಲ್ಲಿ ಗ್ರಾಮ ಪಂಚಾಯತಿ ಮತ್ತು ತಾಲೂಕು ಪಂಚಾಯಿತಿಗಳಿಗೆ ಎರಡನೇ ಚುನಾವಣೆ ನಡೆಯಿತು. ಹಾಗೇ ೧೯೮೮ರಲ್ಲಿ ಮೂರನೇ ಚುನಾವಣೆಯೂ ನಡೆಯಿತು. ಮೊದಲಿಗೆ ಚುನಾಯಿತ ಸದಸ್ಯರ ಅವಧಿ ನಾಲ್ಕು ವರ್ಷವೆಂದಿತ್ತು. ತರುವಾಯ ಅದು ಐದು ವರ್ಷಗಳೆಂದಾಯಿತು. ಚುನಾಯಿತ ಸದಸ್ಯರ ಅವಧಿ ಮುಗಿದರೆ ಹೊಸ ಚುನಾವಣೆಯವರೆಗೂ ಸರ್ಕಾರವು ಆಡಳಿತಾಧಿಕಾರಿಗಳನ್ನು ನೇಮಿಸುತ್ತದೆ. ಆದರೆ ಕರ್ನಾಟಕಕ್ಕೆ ಪಂಚಾಯತ್ ರಾಜ್ ವ್ಯವಸ್ಥೆ ಕಾಲಿರಿಸಿ ೨೫ ವರ್ಷಗಳು ಪೂರ್ಣಗೊಂಡರೂ ಅದರ ಕಾರ್ಯವಿಧಾನದಲ್ಲಿ ಮಾತ್ರ ತೃಪ್ತಿಕಾಣಲು ಸಾಧ್ಯವಾಗುತ್ತಿಲ್ಲ.

ಕರ್ನಾಟಕದ ಜಿಲ್ಲಾ ಪರಿಷತ್, ತಾಲೂಕು ಪಂಚಾಯಿತಿ ಸಮಿತಿ, ಮಂಡಲ ಪಂಚಾಯತ್, ನ್ಯಾಯ ಪಂಚಾಯಿತಿ ಕಾಯ್ದೆ ೧೯೮೩, ಇಡೀ ರಾಷ್ಟ್ರದ ದೃಷ್ಟಿಯನ್ನೆ ತನ್ನತ್ತ ಸೆಳೆಯಿತು. ರಾಜ್ಯದಿಂದ, ಜಿಲ್ಲೆಗೆ, ಜಿಲ್ಲೆಯಿಂದ ಹಳ್ಳಿಗೆ ಅಧಿಕಾರದ ಹಕ್ಕು ವಿಕೇಂದ್ರಿಕರಣಗೊಂಡಿತು.

ಈ ಕಾಯ್ದೆ ಪ್ರಕಾರ ಮಂಡಲ ಪಂಚಾಯತಿಯು ಹಳ್ಳಿಗಳ ಸಮುಚ್ಛಯಗಳನ್ನೊಳಗೊಂಡಿದ್ದು ಒಂದು ಮಂಡಲದ ಜನಸಂಖ್ಯೆ ಕನಿಷ್ಟ ಎಂಟು ಸಾವಿರದಿಂದ ಹನ್ನೆರಡು ಸಾವಿರದವರೆಗೆ ಇರಬೇಕು.

ಮಂಡಲ ಪಂಚಾಯಿತಿ ಸದಸ್ಯನಾಗುವವನು ನೇರವಾಗಿ ಚುನಾವಣೆ ಎದುರಿಸಬೇಕು ಐದುನೂರು ಜನಸಂಖ್ಯೆಗೆ ಒಬ್ಬ ಸದಸ್ಯನಂತೆ ಚುನಾವಣೆಗೆ ನಿಲ್ಲಬೇಕು. ಪ್ರತಿ ಮಂಡಲದಲ್ಲಿಯೂ ಶೇಕಡ ಇಪ್ಪತ್ತೈದು ಮಹಿಳಾ ಮೀಸಲಾತಿಗೆ, ಶೇಕಡ ಹದಿನೈದು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸುವುದು, ಚುನಾಯಿತ ಸದಸ್ಯರಲ್ಲಿಯೇ ಒಬ್ಬನನ್ನು ಪ್ರಧಾನನಾಗಿ ಆರಿಸಬೇಕಾಗಿತ್ತು.

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಎರಡರಲ್ಲಿಯೂ ಕಾರ್ಯಕಾರಣಿ ಸಮಿತಿಹೊಂದಿರುತ್ತದೆ. ಇದಕ್ಕೆ ಇಡೀ ಸಮಿತಿಯನ್ನು ನಿಯಂತ್ರಿಸುವ ಶಕ್ತಿ ಇರುತ್ತದೆ. ಜಿಲ್ಲಾ ಪರಿಷತ್ ಎಂಬುದು ಜಿಲ್ಲೆಯ ಒಂದು ಚಿಕ್ಕ ಸರ್ಕಾರವಿದ್ದಂತೆ ಇದಕ್ಕೆ ಎಲ್ಲಾ ರೀತಿಯ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ಜಿಲ್ಲೆಯೊಳಗೆ ಪರಿಚಯಿಸುವ, ಅನುಷ್ಠಾನಗೊಳಿಸುವ ಹಕ್ಕಿರುತ್ತದೆ. ತೆರಿಗೆ ವಸೂಲಾತಿ ಮತ್ತು ನ್ಯಾಯ ವ್ಯವಸ್ಥೆಯೂ ಇದರ ಕೈಯೊಳಗಿರುತ್ತಾರೆ. ಇದರ ಉನ್ನತ ಅಧಿಕಾರಿಯಾಗಿ ಜಿಲ್ಲಾಧಿಕಾರಿಯಿರುತ್ತಾನೆ. ಈತನ ಮಾರ್ಗದರ್ಶನದಲ್ಲಿಯೇ ಕಾರ್ಯದರ್ಶಿ ಕಾರ್ಯನಿರ್ವಹಣೆ ಮಾಡಬೇಕಾಗಿರುತ್ತದೆ. ಪ್ರತಿಯೊಂದನ್ನು ನಿಯಂತ್ರಿಸುವ ಅಧಿಕಾರ ಅಧ್ಯಕ್ಷನಿಗಿರುತ್ತದೆ. ೧೯೮೭ ರಲ್ಲಿ ಚುನಾಯಿತ ಪ್ರತಿನಿಧಿಗಳಿಂದೊಡಗೂಡಿದ ೨೫೨೩ ಮಂಡಲ ಪಂಚಾಯತಿಗಳು ೧೭೫ ತಾಲೂಕ ಪಂಚಾಯತಿ ಸಮಿತಿ ಹಾಗೂ ೨೦ ಜಿಲ್ಲಾ ಪಂಚಾಯ್ತಿಗಳು ಕರ್ನಾಟಕದಲ್ಲಿ ಕಾರ್ಯ ನಿರ್ವಹಿಸಿದವು. ಅಬ್ದುಲ್ ನಜೀರ್ ಸಾಬರು ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಮಂತ್ರಿಗಳಾಗಿದ್ದರು.

ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ನಜೀರಸಾಬ ಅವರ ಅಭಿಪ್ರಾಯ ಈ ಕೆಳಗಿನಂತಿದೆ.

ರಾಜ್ಯ ಅಥವಾ ರಾಷ್ಟ್ರ ಮಟ್ಟದ ಮೇಲಿನ ಹಂತದ ರಾಜಕೀಯ ಆಡಳಿತ ವ್ಯವಸ್ಥೆಗೂ ಹಾಗೂ ಕೆಳಗಿನ ಹಂತದ ಪಂಚಾಯತ್ ರಾಜ್ ವ್ಯವಸ್ಥೆಯ ನಡುವೆ ಸಂಬಂಧ ಬೆಸಯಲಾಗುವುದಿಲ್ಲ ಕೆಳ ಹಂತದ ವ್ಯವಸ್ಥೆಯ ಅಸ್ವಸ್ಥ್ಯ ಸ್ಥಿತಿಯಲ್ಲಿಯೇ ಇರುತ್ತದೆ. ಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿ ಗ್ರಾಮ ಮಟ್ಟದ ಜನರ ಸೌಲಭ್ಯದ ಕಡೆಗೆ ಪೂರ್ಣವಾಗಿ ಲಕ್ಷ್ಯ ಕೊಡಲಾಗುವುದಿಲ್ಲ, ಅಂದರೆ

ಗ್ರಾಮೀಣ ಜನತೆ ಸೌಲಭ್ಯ ಪಡೆಯುವಲ್ಲಿ ಸೋಲುತ್ತಾ ಹೋಗುತ್ತಾರೆ. ಈ ಹಂತದಲ್ಲಿ ಗ್ರಾಮ ಅಥವಾ ಗ್ರಾಮಾಡಳಿತವು ಸೌಲಭ್ಯ ವಂಚಿತಗೊಳ್ಳುವ ಅಪಾಯವೇ ಹೆಚ್ಚು, ವಸ್ತು ಸ್ಥಿತಿಯೇನೆಂದರೆ ಎರಡನೇ (ತಾಲೂಕು ಹಂತದಲ್ಲಿ) ಮತ್ತು ಮೂರನೇ ಹಂತದ ವ್ಯವಸ್ಥೆಯೂ (ಜಿಲ್ಲಾ ಮಟ್ಟ) ಗ್ರಾಮ ಮಟ್ಟದ ಇನ್ನೊಂದು ಹಂತಕ್ಕೆ ವರ್ಗಾವಣೆಯಾಗಬೇಕು ಹಾಗಾದಾಗ ಮಾತ್ರ ಭಾರತೀಯ ಹಳ್ಳಿಗನಿಗೆ ನಿಜವಾದ ನ್ಯಾಯ ಸಿಗಲು ಸಾಧ್ಯವಾಗುವುದು.

ನೆಹರೂರವರು "ಪಂಚಾಯತ್‌ರಾಜ್ ವ್ಯವಸ್ಥೆ ಗ್ರಾಮೀಣಾಭಿವೃದ್ಧಿಯ ಪ್ರಭಲವಾದ ಪ್ರಯೋಗವಾಗಿದೆ" ಎಂದು ತಿಳಿಸಿದ್ದಾರೆ.

ಪಿ ಆರ್ ದೇಸಾಯಿಯವರು "ಪಂಚಾಯತ್‌ರಾಜ್ ವ್ಯವಸ್ಥೆಯು ನಿಜವಾದ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಉಪಕರಣವಾಗಿದ್ದು ಗ್ರಾಮೀಣ ಜನತೆಗೆ ರಾಜಕೀಯದಲ್ಲಿ ಸಕ್ರೀಯವಾಗಿ ಭಾಗವಹಿಸಲು ಪ್ರೋತ್ಸಹಿಸುತ್ತದೆ, ಬಹುಸಂಖ್ಯೆಯ ದುರ್ಬಲ ಮತ್ತು ಬಡವರ್ಗಗಳ ಮೇಲೆ ನಿಯಂತ್ರಣವನ್ನು ಸಾಧಿಸುವ ಮತ್ತು ತಳವರ್ಗಗಳ ಅಭಿವೃದ್ಧಿ ಹಾಗೂ ಕಲ್ಯಾಣಕ್ಕಾಗಿ ಈ ವ್ಯವಸ್ಥೆ ಶ್ರಮಿಸಬಲ್ಲದು" ಎಂದು ತಿಳಿಸುತ್ತಾರೆ.

೭೩ನೇ ಅಧಿಸೂಚನೆ ಪ್ರಕಾರ (ಪ್ರಜಾಸತ್ತಾತ್ಮಕ ವಿಕೇಂದ್ರಿಕರಣ) ೧೯೮೯ರಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ಜಿಲ್ಲಾಧಿಕಾರಿಗಳಿಗಾಗಿ ಹಲವಾರು ಕಮ್ಮಟಗಳನ್ನು, ಸರಪಂಚರಿಗಾಗಿ ಹಲವಾರು ಸಮ್ಮೇಳನಗಳನ್ನು ಹಮ್ಮಿಕೊಳ್ಳಲಾಯಿತು. ಆಗಿನ ಪ್ರಧಾನ ಮಂತ್ರಿಗಳಾಗಿದ್ದ ರಾಜೀವ ಗಾಂಧಿಯವರು ಪಂಚಾಯತ್ ರಾಜ್ ವ್ಯವಸ್ಥೆಗೆ ಸಂವಿಧಾನಾತ್ಮಕ ಸ್ಥಾನಮಾನಗಳನ್ನು ದೊರಕಿಸಲು ಪ್ರಯತ್ನಿಸಿದರು, ಇದಕ್ಕೆ ತರುವಾಯ ಹಲವಾರು ಅಡೆತಡೆಗಳು ಬಂದವು, ಆದರೂ ೧೯೯೩ ಎಪ್ರಿಲ್‌ನಲ್ಲಿ ಸಂವಿಧಾನದ ೭೩ನೇ ತಿದ್ದುಪಡಿ ಕಾಯ್ದೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಕುರಿತಾದ ಅಧಿಸೂಚನೆ ಹೊರಬಂದಿತು.

೭೩ನೇ ಸಂವಿಧಾನಿಕ ಅಧಿಸೂಚನಾ ಕಾಯ್ದೆ ೧೯೯೨ ಲೋಕಸಭೆಯಲ್ಲಿ ೨೨ನೇ ಡಿಸೆಂಬರ್ ೧೯೯೨ರಲ್ಲಿ ಮಂಡಿತವಾಯಿತು. ತರುವಾಯ ಕೇಂದ್ರ ಸರ್ಕಾರವು ೨೦ನೇ ಎಪ್ರಿಲ್ ೧೯೯೩ರಲ್ಲಿ ರಾಷ್ಟ್ರಧ್ಯಕ್ಷರ ಅನುಮೋದನೆಯೊಂದಿಗೆ ಗೆಜೆಟ್ ನೋಟಿಫಿಕೇಷನ್ ಹೊರಬಂದಿತು.

೪.೭. ಗ್ರಾಮ ಪಂಚಾಯತ್ ವ್ಯವಸ್ಥೆ

ಬ್ರಿಟೀಷ್ ಭಾರತದಲ್ಲಿ ಬಳ್ಳಾರಿ ಜಿಲ್ಲೆಯ ಹಳೇ ಮದ್ರಾಸ್ ಪ್ರಾಂತಕ್ಕೆ ಸೇರಿತ್ತು ಆದರೆ ಒಂದನೇ ಅಕ್ಟೋಬರ್ ೧೯೫೩ ರಂದು ಬಳ್ಳಾರಿ ಜಿಲ್ಲೆಯನ್ನು ಮದ್ರಾಸ್ ಪ್ರಾಂತ್ಯದಿಂದ ಬೇರ್ಪಡಿಸಿ ಹಳೇ ಮೈಸೂರು ಸಂಸ್ಥಾನಕ್ಕೆ ಸೇರ್ಪಡೆಗೊಳಿಸಲಾಯಿತು. ಇದಕ್ಕೂ ಪೂರ್ವದಲ್ಲಿ ಜಿಲ್ಲೆಯ ಏಳು ತಾಲೂಕುಗಳ ೧೪೫ ಗ್ರಾಮ ಪಂಚಾಯ್ತಿಗಳನ್ನು ಮದ್ರಾಸ್ ಸರ್ಕಾರದ ಕಾಯ್ದೆ ೧೯೫೦ ರನ್ವಯ ಈ ಕೆಳಗಿನಂತೆ ಶ್ರೇಣೀಕರಿಸಲಾಗಿತ್ತು.

ಕೋಷ್ಟಕ ೪.೭ರ ಗ್ರಾಮ ಪಂಚಾಯತ್ ವ್ಯವಸ್ಥೆಯ ವಿವರ

ಕ್ರಸಂ	ತಾಲೂಕುಗಳು	ವರ್ಗ–1 ಪಂಚಾಯತ್‌ಗಳು	ವರ್ಗ–2 ಪಂಚಾಯತ್‌ಗಳು	ಒಟ್ಟು
1	ಬಳ್ಳಾರಿ	–	42	42
2	ಹೊಸಪೇಟೆ	2	10	12
3	ಹಡಗಲಿ	1	19	20
4	ಕೂಡ್ಲಿಗಿ	2	16	18
5	ಸಂಡೂರು	1	6	7
6	ಸಿರಗುಪ್ಪ	1	25	26
7	ಹಡಗಲಿ	1	19	20
	ಒಟ್ಟು	**08**	**137**	**155**

ಈ ಪಂಚಾಯತಿಗಳನ್ನು ಕಂದಾಯ ಇಲಾಖೆಯಿಂದ ಬೇರ್ಪಡಿಸಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದ್ದ ಸ್ಥಳಿಯ ಅಭಿವೃದ್ಧಿ ವಿಭಾಗಕ್ಕೆ (Dept of Local administration) ನಿಯಂತ್ರಣ ಮಾಡಲು ಅವಕಾಶ ಮಾಡಿಕೊಡಲಾಯಿತು.

ಜಿಲ್ಲಾಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಅಧಿಕಾರಿಯೊಬ್ಬರನ್ನು ನೇಮಿಸಿ ಅವರ ಮೂಲಕ ಈ ಪಂಚಾಯಿತಿಗಳ ಆಡಳಿತ ನಿರ್ವಹಿಸಲಾಗುತ್ತಿತ್ತು ಪ್ರತಿ ತಾಲೂಕಿಗೊಬ್ಬ ಉಪ ಪಂಚಾಯಿತಿ

ಅಧಿಕಾರಿ (Deputy panchait officer) ತಾಲೂಕು ಅಡಳಿತದ ಉಸ್ತುವಾರಿ ನೋಡಿಕೊಳ್ಳ ಬೇಕಾಗಿತ್ತು.

೧ನೇ ಅಕ್ಟೋಬರ್ ೧೯೫೩ ತರುವಾಯ ಜಿಲ್ಲಾ ಮಟ್ಟದ ಜಿಲ್ಲಾ ಪಂಚಾಯತ್ ಅಧಿಕಾರಿ ಹುದ್ದೆಯನ್ನು ರದ್ದುಗೊಳಿಸಿ ಹೊಸದಾಗಿ ಜಿಲ್ಲಾ ಆಯುಕ್ತ(Deputy commissioner)ರನ್ನು ಹಾಗೂ ರೀಜಿನಲ್ ಇನ್ಸ್‌ಪೆಕ್ಟರ್ ಆಫ್ ಲೋಕಲ್ ಬೋರ್ಡ್ ಹುದ್ದೆಗಳನ್ನು ನೇಮಿಸಲಾಯಿತು. ಅದೇ ರೀತಿಯಾಗಿ ತಾಲೂಕು ಮಟ್ಟದಲ್ಲಿ ಡೆಪ್ಯೂಟಿ ಪಂಚಾಯತ್ ಆಫಿಸರ್ ಬದಲಾಗಿ ಮುಖ್ಯಾಧಿಕಾರಿ (Exicutive officer)ಗಳನ್ನು ನೇಮಿಸಲಾಯಿತು.

ಬಳ್ಳಾರಿ ಹಾಗೂ ಹೊಸಪೇಟೆಗಳಿಗೆ ಸಹಾಯಕ ಆಯುಕ್ತರನ್ನು ಜಿಲ್ಲಾ ಪಂಚಾಯತ್ ಅಧಿಕಾರಿ (Dist Panchait Officer)ಗಳಾಗಿ ನೇಮಿಸಲಾಯಿತು. ಶ್ರೇಣಿ ಒಂದರ ಎಲ್ಲಾ ಎಂಟು ಪಂಚಾಯತ್ ಸಂಸ್ಥೆಗಳಲ್ಲಿ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಶ್ರೇಣಿ ಎರಡರ ಪಂಚಾಯತ್ ಸಂಸ್ಥೆಗಳಲ್ಲಿ ಆಯಾ ತಾಲೂಕಿನ ಅಧ್ಯಕ್ಷರು ಆಡಳಿತ ಸುಧಾರಣಾ ಕಾರ್ಯನಿರ್ವಹಣಾಧಿಕಾರಿಗಳಾಗಿ ಕಾರ್ಯನಿರ್ವಹಿಸಬೇಕಾಗಿತ್ತು.

೧ ನವೆಂಬರ್ ೧೯೫೯ರಂದು ಮೈಸೂರು ಗ್ರಾಮ ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳ ಕಾಯ್ದೆ ಜಾರಿಗೊಳಿಸಲ್ಪಟ್ಟಿತು, ಹಾಗೇ ಹಿಂದಿನ ೧೯೫೦ರ ಕಾಯ್ದೆಯನ್ನು ರದ್ದುಗೊಳಿಸಲಾಯಿತು. ೧೯೫೨ರಲ್ಲಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ತಾಲೂಕು ಅಭಿವೃದ್ಧಿ ಆಡಳಿತ ಕೇಂದ್ರವಾಗಿತ್ತು. ತರುವಾಯ ೧೯೫೭ರಲ್ಲಿ ಬಲವಂತರಾವ್ ರವರ ಅಧ್ಯಕ್ಷತೆಯಲ್ಲಿ ಸಮಿತಿ ಯೊಂದನ್ನು ರಚಿಸಲಾಯಿತು.

೪.೮. ಬಲವಂತರಾವ್ ಸಮಿತಿ

೧೯೫೭ ರಲ್ಲಿ ಬಲವಂತರಾವ್ ಅಧ್ಯಕ್ಷತೆಯಲ್ಲಿ ರಚನೆಗೊಂಡ ಸಮಿತಿಯು ಪಂಚಾಯತ್ ರಾಜ್ ವ್ಯವಸ್ಥೆಯ ಆಡಳಿತ ವೈಖರಿಯನ್ನು ಅಧ್ಯಯನ ಮಾಡಿ ವರದಿಯೊಂದನ್ನು ಸಲ್ಲಿಸಿತು. ಆ ವರದಿಯನ್ನು ಆಧರಿಸಿ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು. ಇವರ ಶಿಪಾರಸ್ಸಿನಂತೆ ಜಿಲ್ಲಾ ಮಂಡಳಿಯ ಆಡಳಿತದ ಜಾಗದಲ್ಲಿ ಮೂರು ಹಂತದ ಆಡಳಿತ ವ್ಯವಸ್ಥೆ ಹೊಂದಿದ ಸಂಸ್ಥೆಗಳನ್ನು ರಚಿಸಿ ಅಧಿಕಾರವನ್ನು ವಿಕೇಂದ್ರೀಕರಿಸಲಾಯಿತು. ಅವರ ಶಿಫಾರಸ್ಸಿನ ಪ್ರಕಾರ

೧. ಗ್ರಾಮ ಪಂಚಾಯ್ತಿ

೨. ತಾಲೂಕು ಅಭಿವೃದ್ಧಿ ಮಂಡಳಿ

೩. ಜಿಲ್ಲಾ ಅಭಿವೃದ್ಧಿ ಸಮಿತಿಗಳು ರೂಪುಗೊಂಡವು.

ಹೀಗೆ ಪುನಾರಚನೆಗೊಂಡ ಆಡಳಿತ ಸಂಸ್ಥೆಗಳು ಅಲ್ಪ ಮಟ್ಟಿಗಾದರೂ ಗ್ರಾಮಾಂತರ ಪ್ರದೇಶಗಳ ಸಾಮಾಜಿಕ ಮತ್ತು ರಾಜಕೀಯ ವಲಯಗಳಲ್ಲಿ ಬದಲಾವಣೆ ತರಲು ಅನುವು ಮಾಡಿಕೊಟ್ಟವು.

ಪ್ರತಿ ಕಂದಾಯ ಹಳ್ಳಿಗಳ ಸಮೂಹದ ಜನಸಂಖ್ಯೆ ಗರಿಷ್ಟ ಹದಿನೈದು ಸಾವಿಕ್ಕಿಂತ ಕಡಿಮೆ ಇದ್ದು ಕನಿಷ್ಟ ಹತ್ತು ಸಾವಿರ ಜನಸಂಖ್ಯೆಯನ್ನು ಮೀರದ ಹಳ್ಳಿಗಳಲ್ಲಿ ಪಂಚಾಯಿತಿಗಳನ್ನು ರಚಿಸಲು ೧೯೫೯ರ ಮೈಸೂರು ಪಂಚಾಯಿತ್ ಕಾಯ್ದೆ ಅನುವು ಮಾಡಿಕೊಟ್ಟಿತು.

೧೯೬೧ ಜೂಲೈಯಲ್ಲಿ ೧೯೫೯ರ ಮೈಸೂರು ಗ್ರಾಮ ಪಂಚಾಯ್ತಿ ಬೋರ್ಡ್ ಕಾಯ್ದೆಯನ್ವಯ ಮೂರುನೂರಮೂವತ್ತನಾಲ್ಕು ಪಂಚಾಯತ್‌ಗಳನ್ನು ರಚಿಸಲಾಯಿತು. ಇವುಗಳಲ್ಲಿ ಹದಿನೈದು ಪಟ್ಟಣ ಪಂಚಾಯ್ತಿಗಳು ರಚಿಸಲಾಯಿತು. ಪಟ್ಟಣ ಪಂಚಾಯ್ತಿಗಳ ಹೊರತಾಗಿ ಮೂರುನೂರ ಹತ್ತೊಂಭತ್ತು ಗ್ರಾಮ ಪಂಚಾಯಿತಿಗಳು ಅಸ್ತಿತ್ವಗೊಂಡವು

ಮುಂದೆ ೧೯೯೩ ರವರೆಗೂ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹಲವಾರು ತಿದ್ದುಪಡಿಗಳು ಉಂಟಾದವು.

೪.೯. ಪಂಚಾಯತ್ ರಾಜ್ ವ್ಯವಸ್ಥೆಯ ಸ್ವರೂಪ

ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮೂರು ಹಂತಗಳಲ್ಲಿ ವಿಭಾಗಿಸಲ್ಪಟ್ಟಿರುವುದನ್ನು ಈ ಹಿಂದೆ ಗಮನಿಸಿದ್ದೇವೆ "ನಿಜವಾದ ಪ್ರಜಾಸತ್ತೆಯು ಗ್ರಾಮೀಣ ಜನರಿಂದ ಕಾರ್ಯರೂಪಕ್ಕೆ ಬರಬೇಕು ಮತ್ತು ಗ್ರಾಮೀಣ ವ್ಯಕ್ತಿಯೇ ತನ್ನ ಸರ್ಕಾರದ ನಿಜವಾದ ಶಿಲ್ಪಿಯಾಗಿರಬೇಕು ಎಂಬ ದೇಯೋದ್ದೇಶವನ್ನು ಇದು ಒಳಗೊಂಡಿದೆ. ಪಂಚಾಯತ್ ರಾಜ್ ಆಡಳಿತಕ್ಕೆ ಸಂಬಂಧಿಸಿದಂತೆ ೧೯೯೨ರಲ್ಲಿ ಸಂವಿಧಾನಕ್ಕೆ ೭೩ನೇ ತಿದ್ದುಪಡಿ ಮಾಡಲಾಯಿತು. ಈ ತಿದ್ದುಪಡಿ ಮಸೂದೆಯು ೨೪ನೇ ಎಪ್ರೀಲ್ ೧೯೯೩ರಲ್ಲಿ ಜಾರಿಗೆ ತರಲಾಯಿತು.

೭೩ನೇ ತಿದ್ದುಪಡಿಯ ವೈಶಿಷ್ಟ್ಯಗಳು

೨೦ ಲಕ್ಷ ಜನಸಂಖ್ಯೆಯನ್ನು ಹೊಂದಿದ ಪ್ರತಿ ರಾಜ್ಯಕ್ಕೂ ಮೂರು ಹಂತಗಳನ್ನೊಳಗೊಂಡ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಒದಗಿಸುವುದು.

ಪ್ರತಿ ಐದು ವರ್ಷಕ್ಕೊಮ್ಮೆ ನಿಯಮಿತವಾಗಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸುವುದು.

ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಅವರ ಜನಸಂಖ್ಯೆಗಳನುಗುಣವಾಗಿ ಹಾಗೂ ಮಹಿಳೆಯರಿಗೆ ೧/೩ ಕ್ಕಿಂತ ಕಡಿಮೆಯಾಗದಂತೆ ಸ್ಥಾನಗಳನ್ನು ಮೀಸಲಾತಿ ಆಧಾರದ ಮೇಲೆ ಕಾಯ್ದಿರಿಸುವುದು.

ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಣಕಾಸಿನ ಅಧಿಕಾರಿಗಳ ಕುರಿತು ಶಿಫಾರಸ್ಸು ಮಾಡಲು ರಾಜ್ಯ ಹಣಕಾಸು ಆಯೋಗವನ್ನು ರಚಿಸುವುದು.

ಜಿಲ್ಲೆಯ ಸಮಗ್ರ ಅಭಿವೃದ್ಧಿ ಯೋಜನೆಯ ಕರಡು ಪತ್ರ ತಯಾರಿಸಲು ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸುವುದು.

ಪಂಚಾಯತ್ ರಾಜ್ ಸಂಸ್ಥೆಗಳು ಸ್ವಾವಲಂಬಿ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಲು ಈ ಕೆಳಗಿನಂತೆ ಅಧಿಕಾರ ಮತ್ತು ಜವಾಬ್ದಾರಿಗಳನ್ನು ಆ ಸಂಸ್ಥೆಗಳಿಗೆ ನೀಡುವುದು. ಹೊಸದಾಗಿ ಸೇರಿಸಿದ ಸಂವಿಧಾನದ ಹನ್ನೊಂದನೇ ಅನುಚ್ಛೇದದಲ್ಲಿ ಕೊಟ್ಟಿರುವ ಇಪ್ಪತ್ತೊಂಭತ್ತು ವಿಷಯಗಳಿಗೆ ಸಂಬಂಧಿಸಿದಂತೆ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಗಳಿಗಾಗಿ ಯೋಜನೆಯನ್ನು ತಯಾರಿಸುವುದು.

ಆರ್ಥಿಕ ಅಭಿವೃದ್ಧಿಗಾಗಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಮೇಲೆ ಸೂಚಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು

ಸೂಕ್ತ ತೆರಿಗೆ, ಕರ, ಸುಂಕ ಮತ್ತು ಶುಲ್ಕಗಳನ್ನು ವಸೂಲಿ ಮಾಡುವುದು.

೪.೧೦. ಗ್ರಾಮ ಪಂಚಾಯಿತಿಗಳ ರಚನೆ ಹಾಗೂ ಕಾರ್ಯಗಳು

ಪ್ರತಿ ಗ್ರಾಮ ಪಂಚಾಯತಿಯು ಈ ಕೆಳಗಿನ ಮೂರು ಸ್ಥಾಯಿ ಸಮಿತಿಗಳನ್ನು ಹೊಂದಿರುತ್ತದೆ.

೧. ಉತ್ಪಾದನಾ ಸಮಿತಿ

೨. ಸೌಕರ್ಯಗಳ ಸಮಿತಿ

೩. ಸಾಮಾಜಿಕ ನ್ಯಾಯ ಸಮಿತಿ

ಗ್ರಾಮ ಪಂಚಾಯತಿ ಪೂರ್ಣವಾಗಿ ರಚನೆಯಾದ ತರುವಾಯ ಪ್ರತಿಯೊಂದು ಸ್ಥಾಯಿ ಸಮಿತಿಯನ್ನು ರಚಿಸಲಾಗುವುದು ಮತ್ತು ನಿಗದಿ ಪಡಿಸಿದ ಅವಧಿಯು ಪೂರ್ಣವಾಗಿ ಮುಕ್ತಾಯವಾದ ತರುವಾಯ ಪುನರಚಿಸಲಾಗುವುದು

ಸ್ಥಾಯಿ ಸಮಿತಿಗಳ ಸದಸ್ಯರು ಹಾಗೂ ಪದಾಧಿಕಾರಿಗಳ ಹುದ್ದೆಯ ಅವಧಿಯು ಮೂವತ್ತು ತಿಂಗಳು ಅಥವಾ ಗ್ರಾಮ ಪಂಚಾಯಿತಿಯ ಸದಸ್ಯನಾಗಿ ನಿಂತು ಹೋಗುವವರೆಗೂ ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯಾಗಿರುತ್ತದೆ

ಪ್ರತಿಯೊಂದು ಸ್ಥಾಯಿ ಸಮಿತಿಯಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸೇರಿದಂತೆ ಮೂರಕ್ಕೆ ಕಡಿಮೆಯಿಲ್ಲದ ಇದಕ್ಕೆ ಹೆಚ್ಚಿಲ್ಲದ ಸದಸ್ಯರಿರುತ್ತಾರೆ.

ಗ್ರಾಮ ಪಂಚಾಯಿತಿಯ ಅಧ್ಯಕ್ಷನು ಉತ್ಪಾದನಾ ಸಮಿತಿ ಮತ್ತು ಸೌಕರ್ಯ ಸಮಿತಿಗಳ ಪದನಿಮಿತ್ತ ಸದಸ್ಯ ಮತ್ತು ಅಧ್ಯಕ್ಷನಾಗಿರುತ್ತಾನೆ

ಗ್ರಾಮ ಪಂಚಾಯಿತಿ ಉಪಾಧ್ಯಕ್ಷನು ಸಾಮಾಜಿಕ ನ್ಯಾಯ ಸಮಿತಿಯ ಪದನಿಮಿತ್ತ ಸದಸ್ಯ ಮತ್ತು ಉಪಾಧ್ಯಕ್ಷನಾಗಿರುತ್ತಾನೆ.

ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಕನಿಷ್ಟ ಒಬ್ಬ ಮಹಿಳಾ ಸದಸ್ಯೆ ಹಾಗೂ ಅನುಸೂಚಿತ ಜಾತಿ ಮತ್ತು ಪಂಗಡಗಳ ಒಬ್ಬ ಸದಸ್ಯ ಇರಲೇಬೇಕು. ರೈತ ಸಂಘ, ಮಹಿಳಾ ಮಂಡಳಿ, ಯುವಕ ಮಂಡಳಿ ಅಥವಾ ಸರ್ಕಾರ ಅಂಗೀಕರಿಸಿದ ಅಂಥದೇ ಮಂಡಳಿಗಳ ಸದಸ್ಯರನ್ನು ಸಹ ಸ್ಥಾಯಿ ಸಮಿತಿಗಳ ಸದಸ್ಯರನ್ನಾಗಿ ಗ್ರಾಮ ಪಂಚಾಯಿತಿಯು ನೇಮಕ ಮಾಡಿಕೊಳ್ಳಬಹುದು

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸಹಕಾರ ಸಂಘಗಳ ಒಬ್ಬ ಪ್ರತಿನಿಧಿಯನ್ನು ಉತ್ಪಾದನ ಸಮಿತಿಗೆ ಕೋ– ಆಪ್ಟ್ ಮಾಡಿಕೊಳ್ಳುವುದು ಕೋ– ಅಪ್ಟ್ ಮಾಡಿಕೊಂಡ ಸದಸ್ಯರ ಹಕ್ಕುಗಳು ಹಾಗೂ ಬಾಧ್ಯತೆಗಳು ಗೊತ್ತುಪಡಿಸಿದ ರೀತಿಯಲ್ಲಿ ಇರುವುದು.

ಗ್ರಾಮ ಪಂಚಾಯಿತಿ ಉತ್ಪಾದನ ಸ್ಥಾಯಿ ಸಮಿತಿ ಕಾರ್ಯಗಳು

ಗ್ರಾಮ ಪಂಚಾಯಿತಿ ಪ್ರದೇಶದ ವ್ಯಾಪ್ತಿಯಲ್ಲಿನ ಕೃಷಿ ಉತ್ಪಾದನೆಗಳು, ಪಶು ಸಂಗೋಪನೆ, ಹಾಗೂ ಪಶು ಸಂಪತ್ತನ್ನು ಹೆಚ್ಚಿಸಲು ಉತ್ತೇಜನ ನೀಡುವುದು

ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮೀಣರಿಗೆ ಉಪಯುಕ್ತವಾಗುವಂತೆ ಮತ್ತು ಉದ್ಯೋಗ ನೀಡುವಂತಹ ಕೈಗಾರಿಕೆಗಳನ್ನು ಸ್ಥಾಪಿಸಲು ಎಲ್ಲಾ ರೀತಿಯ ನೆರವು ಪ್ರೋತ್ಸಾಹ ನೀಡುವುದು

ಬಡತನ ನಿವಾರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಹಾಗೂ ನೆರವೇರಿಸುವುದು

ಸಾಮಾಜಿಕ ನ್ಯಾಯ ಸಮಿತಿ

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮತ್ತು ಇತರ ದುರ್ಬಲ ವರ್ಗಗಳ ಶೈಕ್ಷಣಿಕ, ಆರ್ಥಿಕ ಪ್ರಗತಿಗಾಗಿ ಶ್ರಮಿಸುವುದು.

ಸಾಮಾಜಿಕವಾಗಿ ಶೋಷಣೆಗೊಂಡವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಕನ್ನು ಹಸನುಗೊಳಿಸುವಂಥ ಕಾರ್ಯಕ್ರಮಗಳನ್ನು ಉತ್ತೇಜಿಸುವುದು

ಸಾಮಾಜಿಕ ಅನ್ಯಾಯ ಮತ್ತು ಯಾವುದೇ ರೀತಿಯ ಶೋಷಣೆಗಳಿಗೆ ಒಳಗಾಗದಂತೆ ಅಂತಹ ಜಾತಿ, ವರ್ಗಗಳಿಗೆ ರಕ್ಷಣೆ ಕೊಡುವುದು

ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ನೆರವೇರಿಸುವುದು

ಸೌಕರ್ಯ ಸಮಿತಿ

ಶಿಕ್ಷಣ ಹಾಗೂ ಸಾರ್ವಜನಿಕ ಆರೋಗ್ಯ ಕಾಪಾಡುವಂತಹ ಕಾರ್ಯಗಳನ್ನು ನೆರವೇರಿಸುವುದು

ಲೋಕೋಪಯೋಗಿ ಕಾಮಗಾರಿಗಳು ಮತ್ತು ಗ್ರಾಮ ಪಂಚಾಯಿತಿಯು ನಿರ್ವಹಿಸುವಂತ ಇತರ ಕೆಲಸಗಳನ್ನು ನಿರ್ವಹಿಸುವುದು

ಶಿಕ್ಷಣ ಮತ್ತು ಆರೋಗ್ಯ ಸಮಿತಿ

ಜಿಲ್ಲಾ ಪಂಚಾಯಿತಿಯು ಎಲ್ಲಾ ಶೈಕ್ಷಣಿಕ ಚಟುವಟಿಕೆಗಳ ಹೊಣೆಗಾರಿಕೆ ಹೊಂದುವುದು

ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ರಾಷ್ಟ್ರೀಯ ಮತ್ತು ರಾಜ್ಯ ಯೋಜನೆಗಳ ಚೌಕಟ್ಟಿನೊಳಗೆ

ಜಿಲ್ಲೆಯಲ್ಲಿ ಶಿಕ್ಷಣ ಯೋಜನೆಗಳನ್ನು ಕೈಗೊಳ್ಳುವುದು

ಶೈಕ್ಷಣಿಕ ಚಟುವಟಿಕೆಗಳ ಸಮೀಕ್ಷೆ ಮತ್ತು ಮೌಲ್ಯ ನಿರ್ಣಯ ಮಾಡುವುದು.

ಶಿಕ್ಷಣ ಸಮಿತಿಗಳು ನಿರ್ವಹಿಸಬೇಕಾದ ಕಾರ್ಯಗಳು

ಶಾಲೆ ಬಿಟ್ಟ ಮಕ್ಕಳನ್ನು ಹಾಗೂ ಆ ಮಕ್ಕಳ ತೊಂದರೆಗಳನ್ನು ಗುರುತಿಸಿ ಅವುಗಳನ್ನು ಪರಿಹರಿಸುವತ್ತ ಗಮನಕೊಟ್ಟು ಮಕ್ಕಳ ದಾಖಲಾತಿ ಹೆಚ್ಚಿಸುವುದು.

ಶಿಕ್ಷಣದಲ್ಲಿ ಹಿಂದುಳಿದ ಪ್ರದೇಶಗಳನ್ನು ಗುರುತಿಸಿ ಅಂತಹ ಸ್ಥಳಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಬಾಲಕಾರ್ಮಿಕರನ್ನು ಗುರುತಿಸಿ ಅವರಿಗೆ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವುದು ಮತ್ತು ಕೆಳ ವರ್ಗಗಳಿಗೆ ಹೆಚ್ಚಿನ ಆದ್ಯತೆ ನೀಡುವುದು.

ಸಾರ್ವಜನಿಕ ಶಿಕ್ಷಣ ಮತ್ತು ಸಾಕ್ಷರತೆ ಹೆಚ್ಚಿಸುವ ಕಾರ್ಯಕ್ರಮಗಳಿಗೆ ಸಂಪನ್ಮೂಲಗಳ ಕ್ರೊಡೀಕರಣ ಮತ್ತು ಯೋಜನೆಗಳನ್ನು ತಯಾರಿಸುವುದು. ಇದರ ಜೊತೆಗೆ ಗ್ರಾಮೀಣ ಪ್ರದೇಶದ ಶಿಕ್ಷಣಕ್ಕೆ ಪೂರಕವಾಗಿ ಕೆಲಸ ನಿರ್ವಹಿಸುವುದು.

ಮುಖ್ಯವಾಗಿ ಶಿಕ್ಷಣದ ಕುರಿತು ಅರಿವು ಮೂಡಿಸಲು ಗ್ರಾಮ ಪಂಚಾಯಿತಿ ಸದಸ್ಯರು, ಶಾಲಾ ಶಿಕ್ಷಕರು ಜೊತೆ ಸೇರಿ ಸಮುದಾಯದ ಸದಸ್ಯರೊಂದಿಗೆ ಸಮಾಲೋಚಿಸಿ ಶೈಕ್ಷಣಿಕ ಮಹತ್ವವನ್ನು ತಿಳಿಸಿಕೊಡುವುದು. ಹಾಗೇ ಶಾಲೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಕುರಿತು ಜಾಗೃತಿ ವಹಿಸುವ ಕೆಲಸವನ್ನು ಪಂಚಾಯತಿ ಸಂಸ್ಥೆಗಳು ನಿರ್ವಹಿಸಬೇಕು. ಅದಕ್ಕಾಗಿ ಅವು ಅನುಸರಿಸಬೇಕಾದ ಅಂಶಗಳು ಈ ಕೆಳಗಿನಂತಿವೆ.

ಗ್ರಾಮದಲ್ಲಿ ಪ್ರಾಥಮಿಕ ಶಾಲೆಯ ಅವಶ್ಯಕತೆ ಇದ್ದೂ ಶಾಲೆಯು ಅಲ್ಲಿ ಇರದಿದ್ದರೆ ತಾಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ಗಮನಕ್ಕೆ ಶಾಲೆಯ ಅವಶ್ಯಕತೆ ಕುರಿತು ಮನವರಿಕೆ ಮಾಡುವುದು ಮತ್ತು ಶಾಲೆ ಪ್ರಾರಂಭಿಸುವಂತೆ ನೋಡಿಕೊಳ್ಳುವುದು.

ಗ್ರಾಮದ ೬ ರಿಂದ ೧೪ ವರ್ಷದ ಮಕ್ಕಳು ಶಾಲೆಗೆ ದಾಖಲಾಗಿರುವ ಕುರಿತು ಮತ್ತು ಅವುಗಳ ಹಾಜರಾತಿಯ ಕುರಿತು ಖಚಿತ ಪಡಿಸಿಕೊಳ್ಳುವುದು, ಇದರೊಂದಿಗೆ

ಶಾಲೆಬಿಟ್ಟ ಮಕ್ಕಳನ್ನು ಶಾಲೆಗೆ ಮರಳಿ ಕರೆತರುವಂತೆ ಪೋಷಕರಿಗೆ ಅರಿವು ಮೂಡಿಸುವುದು.

ಶಾಲೆಗಳು ಕ್ರಮಬದ್ಧವಾಗಿ ಜರುಗುವಂತೆ ಗ್ರಾಮ ಪಂಚಾಯಿತಿ ಸದಸ್ಯರು ಶಾಲೆಗಳಿಗೆ ಭೇಟಿ ಕೊಡುತ್ತಿರಬೇಕು ಮತ್ತು ಅಕ್ಷರ ದಾಸೋಹ ಮುಂತಾದ ಯೋಜನೆಗಳು ಶಾಲೆಯಲ್ಲಿ ಸರಿಯಾದ ರೀತಿಯಲ್ಲಿ ಅನುಷ್ಠಾನಗೊಂಡಿವೆಯೇ ಎಂಬುದನ್ನು ಅರಿತು ಅವು ಸಮರ್ಪಕವಾಗಿಲ್ಲದಿದ್ದಲ್ಲಿ ಶಿಕ್ಷಕರಿಗೆ ಸಮರ್ಪಕವಾದ ರೀತಿಯಲ್ಲಿ ನಡೆಸುವಂತೆ ಸೂಚನೆ ಕೊಡಬೇಕು.

ಶಾಲೆಗೆ ಬರುತ್ತಿರುವ ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಗಮನಿಸುವುದು.

ಶಾಲಾ ಪರಿಸರವನ್ನು ಸ್ವಚ್ಛವಾಗಿಡುವುದು, ಶಾಲೆಗೆ ಅಗತ್ಯವಾದ ವಸ್ತುಗಳನ್ನು ಸ್ಥಳೀಯ ದಾನಿಗಳು/ಸಂಸ್ಥೆಗಳಿಂದ ಸಂಗ್ರಹಿಸಲು ನೆರವು ಒದಗಿಸುವುದು.

ಶಿಕ್ಷಣ ಸುಧಾರಣಾ ಕಾರ್ಯಕ್ರಮಗಳು

ಗ್ರಾಮೀಣ ಪ್ರದೇಶದ ಸಾಕ್ಷರತೆಯನ್ನು ಹೆಚ್ಚಿಸಲು ಹತ್ತು ಹಲವು ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದೆ. ಅದೇ ರೀತಿ ಗ್ರಾಮೀಣ ಜನತೆಗೆ ತಲುಪುವಂತೆ ಹಲವಾರು ಶಿಕ್ಷಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅದು ವಯಸ್ಕರ ಶಿಕ್ಷಣವಾಗಿರಲಿ ಮತ್ತೊಂದಾಗಿರಲಿ, ಅದನ್ನು ಅನುಷ್ಠಾನಗೊಳಿಸುವಲ್ಲಿ ಪಂಚಾಯತ್ ಸಂಸ್ಥೆಗಳ ಹೊಣೆಗಾರಿಕೆ ಅಧಿಕವಾಗಿದೆ. ಪ್ರತಿಯೊಂದು ಗ್ರಾಮದಲ್ಲಿ ಕನಿಷ್ಟ ೧೫೦೦-೨೦೦೦ ಜನಸಂಖ್ಯೆಗೆ ಒಂದು ನಿರಂತರ ಶಿಕ್ಷಣ ಕೇಂದ್ರ ಇರಬೇಕು. ಶಿಕ್ಷಣ ಕೇಂದ್ರದ ಪ್ರೇರಕ ಮತ್ತು ಉಪಪ್ರೇರಕರನ್ನು ಗ್ರಾಮ ಪಂಚಾಯಿತಿಯೇ ಆಯ್ಕೆ ಮಾಡಬೇಕು, ಪ್ರತಿ ಗ್ರಾಮದ ಗ್ರಾಮ ಶಿಕ್ಷಣ ಸಮಿತಿಯು ನಿರಂತರ ಶಿಕ್ಷಣ ಕೇಂದ್ರದ ನಿರ್ವಹಣೆ ವಹಿಸಬೇಕು.

ಗ್ರಾಮೀಣ ಶಿಕ್ಷಣ ಸಮಿತಿ

ಪಂಚಾಯತ್ ರಾಜ್ ಕಾಯ್ದೆ ೬೧ನೇ ಪ್ರಕರಣದ ಅನ್ವಯ ಮೂರು ಸ್ಥಾಯಿ ಸಮಿತಿಗಳನ್ನು ಅದು ಹೊಂದತಕ್ಕದ್ದು. ೧೯೯೩ ರ ಪಂಚಾಯತ್ ಕಾಯ್ದೆಯಲ್ಲಿಯ ಸೌಕರ್ಯ ಸಮಿತಿಯನ್ನು ಈಗ ಗ್ರಾಮೀಣ ಶಿಕ್ಷಣ ಸಮಿತಿಯನ್ನಾಗಿ ಬದಲಿಸಲಾಗಿದೆ. ಈ ಸಮಿತಿಯು ಶಿಕ್ಷಣದ ಸುಧಾರಣೆಯ ಕಾರ್ಯಗಳನ್ನು ನಿರ್ವಹಿಸಬೇಕು. ಹಾಗೆ ಆರೋಗ್ಯ ಮತ್ತು ಲೋಕೋಪಯೋಗಿ ಕಾರ್ಯಗಳನ್ನು

ನಿರ್ವಹಿಸಬೇಕು. ಸಮಿತಿಗಳ ಅಧಿಕಾರವು ಗ್ರಾಮ ಪಂಚಾಯಿತಿಗಳು ವಹಿಸಿರುವ ಕಾರ್ಯಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಸಮಿತಿಗಳು ನಿರ್ಣಯಗಳನ್ನು ತೆಗೆದುಕೊಂಡಾಗ ಅದನ್ನು ಪಂಚಾಯತ್ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕು. ಈ ಸಮಿತಿಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನೊಳಗೊಂಡಂತೆ ಐದಕ್ಕಿಂತ ಕಡಿಮೆ ಇರದಂತೆ ಸದಸ್ಯರನ್ನು ಹೊಂದಿರತಕ್ಕದ್ದು. ಗ್ರಾಮ ಪಂಚಾಯಿತಿಯ ಸದಸ್ಯರಲ್ಲಿ ಒಬ್ಬರು ಈ ಸಮಿತಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಬಹುದು. ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳು ಈ ಸಮಿತಿಯ ಕಾರ್ಯದರ್ಶಿಗಳಾಗಿರುತ್ತಾರೆ. ಸಮಿತಿ ಸದಸ್ಯರನ್ನು ಪಂಚಾಯಿತಿ ಸದಸ್ಯರಿಂದ ಚುನಾಯಿಸುವುದು, ಗ್ರಾಮದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಆಸಕ್ತ ಮಹಿಳೆಯರು, ಶಿಕ್ಷಣ ಪ್ರೇಮಿಗಳು, ಅಂಗನವಾಡಿ ಕಾರ್ಯಕರ್ತೆಯರು ಈ ಸಮಿತಿಯ ಸದಸ್ಯರಾಗಬಹುದು. ಪ್ರತಿ ಗ್ರಾಮ ಮಟ್ಟದಲ್ಲಿ ಈ ಸಮಿತಿ ಇರುತ್ತದೆ. ಅದೇ ರೀತಿ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿ ಮಟ್ಟದಲ್ಲೂ ಶಿಕ್ಷಣ ಸಮಿತಿಗಳು ರಚನೆಗೊಂಡಿರುತ್ತವೆ. ಇವುಗಳ ವ್ಯಾಪ್ತಿ ಕ್ರಮವಾಗಿ ತಾಲೂಕುಮಟ್ಟ ಮತ್ತು ಜಿಲ್ಲಾ ಮಟ್ಟದ್ದಾಗಿರುತ್ತದೆ.

ಶಿಕ್ಷಣ ಸಮಿತಿ ಕಾರ್ಯಗಳು

- ಶಿಕ್ಷಣ ಕೇಂದ್ರಗಳ ನಿರ್ವಹಣೆಯ ಜವಬ್ದಾರಿ ಇರುವ ಸಂಘ ಸಂಸ್ಥೆಗಳನ್ನು ಗುರುತಿಸುವುದು.
- ನಿರಂತರ ಶಿಕ್ಷಣ ಕೇಂದ್ರಗಳನ್ನು ಕಾಲ ಕಾಲಕ್ಕೆ ಪರಿಶೀಲಿಸುವುದು
- ನಿರಂತರ ಶಿಕ್ಷಣ ಕೇಂದ್ರಗಳ ಪ್ರೇರಕ ಮತ್ತು ಉಪಪ್ರೇರಕರನ್ನು ನೇಮಿಸುವುದು
- ತರಬೇತಿ ಕಾರ್ಯಕ್ರಮಗಳು, ಗ್ರಾಮೀಣಾಭಿವೃದ್ಧಿ ಸಮಿತಿಗಳ ರಚನೆ ಕಾರ್ಯಗಳನ್ನು ನಿರ್ವಹಿಸುವುದು.
- ಮಕ್ಕಳ ದಾಖಲಾತಿ ಹೆಚ್ಚಳ, ಹಾಜರಾತಿ ಪರಿಶೀಲಿಸುವುದು, ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಬರುವಂತೆ ಮನವೊಲಿಸುವುದು. ಪಾಲಕರ ಸಭೆಯನ್ನು ಕರೆಯುವುದು, ಇತರ ಶೈಕ್ಷಣಿಕ ಕಾರ್ಯಕ್ರಮಗಳ ಅನುಷ್ಠಾನವನ್ನು ಪರಿಶೀಲಿಸಿ ಸೂಚನೆ ನೀಡುವುದು ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಬೇಕು.

□□□

ಅಧ್ಯಾಯ ಐದು

ಪರಿಶಿಷ್ಟ ವರ್ಗದ ಮಹಿಳಾ ಸದಸ್ಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿ

ಅಧ್ಯಾಯ ೫

ಪರಿಶಿಷ್ಟ ವರ್ಗದ ಮಹಿಳಾ ಸದಸ್ಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿ

ಭಾರತದ ಪರಿಶಿಷ್ಟ ಪಂಗಡಗಳು ಹಿಂದೊಮ್ಮೆ ಅತಿ ಉತ್ತಮ ಸ್ಥಿತಿಯ ಜೀವನ ನಡೆಸಿದ ಉದಾಹರಣೆಗಳಿವೆ. ಮಧ್ಯಕಾಲೀನ ಕರ್ನಾಟಕದಲ್ಲಿ ಬೇಡ ನಾಯಕರು ಪಾಳೆಯಗಾರರಾಗಿ, ಚಿಕ್ಕ ಚಿಕ್ಕ ರಾಜ್ಯಗಳ ಅರಸರಾಗಿ, ಸೈನಿಕರಾಗಿ ಕಾರ್ಯನಿರ್ವಹಿಸಿದ ಉದಾಹರಣೆಗಳು ಸಾಕಷ್ಟಿವೆ. ಉದಾಹರಣೆಗೆ ಚಿತ್ರದುರ್ಗದ ಪಾಳೆಯಗಾರರು, ಕಂಪಿಲರಾಯ ಮತ್ತು ಅವನ ವಂಶಸ್ಥರು, ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹರಿಹರ ಬುಕ್ಕ, ಹರಪನಹಳ್ಳಿಯ ಪಾಳೆಯಗಾರರು, ಉಚ್ಚಂಗಿ ದುರ್ಗದ ಪಾಳೆಯಗಾರರು ಮುಂತಾದವರನ್ನು ಹೆಸರಿಸಬಹುದು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ಮುಖ್ಯ ಪಾತ್ರವಹಿಸಿದ ಬೇಡ ನಾಯಕರು ಆ ಸಾಮ್ರಾಜ್ಯದ ಸೈನಿಕರಾಗಿ ಕಾರ್ಯನಿರ್ವಹಿಸಿದ ಕುರುಹುಗಳು ಇಂದಿಗೂ ಹಂಪೆ ಸುತ್ತಮುತ್ತಲ ಪ್ರದೇಶದಲ್ಲಿ ಕಂಡುಬರುತ್ತದೆ. ಕಮಲಾಪುರದ ನಾಯಕ ಸಮುದಾಯದ ಏಳು ಕೇರಿ ಹಾಗೂ ಹೊಸಪೇಟೆಯ ಏಳು ಕೇರಿಯ ನಾಯಕ ಸಮುದಾಯದ ಜನ ಹಿಂದೆ ವಿಜಯನಗರ ಅರಸರ ಸೈನಿಕರಾಗಿ ಕಾರ್ಯನಿರ್ವಹಿಸಿದವರು. ಈ ರೀತಿ ವೀರತ್ವವನ್ನೇ ಮೆರೆದ ಈ ಸಮುದಾಯವು ಬ್ರಿಟಿಷರ ಆಡಳಿತ ಕಾಲದಲ್ಲಿ ಅಪರಾಧಿ ಬುಡಕಟ್ಟು ಎಂದು ಗುರುತಿಸಲ್ಪಟ್ಟಿತು. ಅಪರಾಧಿ

ಬುಡಕಟ್ಟೆಂದು ಗುರುತಿಸಿದ್ದು ಕೇವಲ ಇದೊಂದೆ ಬುಡಕಟ್ಟನ್ನಲ್ಲ. ಕರ್ನಾಟಕದಲ್ಲಿ ನೆಲೆಸಿರುವ ಹಕ್ಕಿ ಪಿಕ್ಕಿ, ಡುಂಗ್ರಿಗರಾಸಿಯ ಮುಂತಾದ ಬುಡಕಟ್ಟು ಸಮುದಾಯಗಳನ್ನು ಸಹ ಅಪರಾಧಿ ಬುಡಕಟ್ಟುಗಳೆಂದು ಗುರುತಿಸಲಾಯಿತು. ಪ್ರಾಯಶಃ ಕರ್ನಾಟಕದ ಪರಿಶಿಷ್ಟ ಪಂಗಡಗಳ ಅದೋಗತಿ ಬ್ರಿಟೀಷರ ಕಾಲದಲ್ಲಿ ಪ್ರಾರಂಭವಾಯಿತೆಂಬುದರಲ್ಲಿ ಎರಡು ಮಾತಿಲ್ಲ. ೧೯೧೦ರಿಂದ ೧೯೧೧ರೊಳಗೆ ಬ್ರಿಟಿಷರು ಕರ್ನಾಟಕದಲ್ಲಿ ಅಪರಾಧಿ ಬುಡಕಟ್ಟುಗಳೆಂದು ಗುರುತಿಸಿದ ಸಮುದಾಯಗಳಿಗಾಗಿ ಸೆಟಲ್‌ಮೆಂಟ್‌ಗಳನ್ನು ಬಳ್ಳಾರಿ, ಹುಬ್ಬಳ್ಳಿ, ಗದಗ, ಬಾಗಲಕೋಟೆ, ಬಿಜಾಪುರ, ಗೋಕಾಕ್ ಮುಂತಾದ ಕಡೆ ಪ್ರಾರಂಭಿಸಿದವು. ಈ ಸೆಟಲ್‌ಮೆಂಟ್‌ಗಳೊಳಗೆ ಪರಿಶಿಷ್ಟ ಪಂಗಡಗಳ ಬುಡಕಟ್ಟುಗಳನ್ನು ಹಿಡಿದಿಟ್ಟು ಅವರಿಂದ ಬಿಟ್ಟಿ ಚಾಕರಿ ಮಾಡಿಸಿಕೊಳ್ಳುವುದೇ ಬ್ರಿಟಿಷರ ಮುಖ್ಯ ಉದ್ದೇಶವಾಗಿತ್ತು. ಕರ್ನಾಟಕದಲ್ಲಿ ಎಲ್ಲೆಲ್ಲಿ ರೈಲ್ವೆ ಹಾದಿಗಳಿವೆಯೋ ಅಲ್ಲಿಯ ಮುಖ್ಯ ನಗರಗಳಲ್ಲಿ ಸೆಟಲ್‌ಮೆಂಟ್‌ಗಳನ್ನು ಸ್ಥಾಪಿಸಲಾಯಿತು. ಆಶ್ರಯದಾತ ರಾಜಮನೆತನಗಳ ಅವನತಿಯಿಂದಾಗಿ ದಿಕ್ಕೇಡಿಗಳಾದ ಬುಡಕಟ್ಟುಗಳಿಗೆ ಸುಲಭವಾಗಿ ಆಸರೆ ನೀಡಿದ್ದು ಕಾಡುಗಳು. ಕಾಡುಗಳಲ್ಲಿ ನೆಲೆನಿಂತ ಬುಡಕಟ್ಟುಗಳಿಗೆ ಅರಣ್ಯ ನೀತಿ ಕಾಯ್ದೆಯ ನೆವದಿಂದ ಅರಣ್ಯಗಳಿಂದ ಹೊರಹಾಕಲಾಯಿತು. ಅವರ ಸ್ವಾವಲಂಬನೆಯ ಬದುಕಿಗೆ ಈ ಮೂಲಕ ಸಂಚಕಾರ ಬಂದುದರಿಂದ ಕೆಲವು ಬುಡಕಟ್ಟುಗಳು ಜೀವನ ಮಾರ್ಗ ತಿಳಿಯದೆ ಕಂಗಾಲಾದವು. ಈ ರೀತಿ ಕಂಗಾಲದ ಕೆಲವು ಬುಡಕಟ್ಟು ಸಮುದಾಯಗಳು ತಮ್ಮ ಜೀವನ ನಿರ್ವಹಣೆಗಾಗಿ ಚಿಕ್ಕ ಪುಟ್ಟ ಅಪರಾಧಗಳನ್ನು ಮಾಡಿರುವುದು ಸಹಜವಾಗಿರಬಹುದು. ಆದರೆ ಅದನ್ನೇ ದೊಡ್ಡ ಅಪರಾಧವೆಂದು ಬ್ರಿಟಿಷ್ ಸರ್ಕಾರ ಭಾವಿಸಿತು. ಅದಕ್ಕಿಂತಲೂ ಮುಖ್ಯವಾಗಿ ಬ್ರಿಟೀಷರು ಆ ಕಾಲದ ಸ್ವಾತಂತ್ರ್ಯ ಚಳುವಳಿಯನ್ನು ಹತ್ತಿಕ್ಕುವ ಅಸ್ತ್ರವಾಗಿಯೂ ಅಪರಾಧಿ ಬುಡಕಟ್ಟುಗಳ ಕಾಯ್ದೆಯನ್ನು ಜಾರಿಗೆ ತಂದಿತೇನೋ, ಒಟ್ಟಾರೆಯಾಗಿ ಕರ್ನಾಟಕದ ಬಹುತೇಕ ಎಲ್ಲಾ ಬುಡಕಟ್ಟು ಸಮುದಾಯಗಳು ಹಲವಾರು ಶೋಷಣೆಗಳಿಗೆ ಒಳಗಾದುದು ಮಾತ್ರ ನಿಜ.

ಬ್ರಿಟಿಷ್‌ರಿಂದ ಭಾರತ ಸ್ವಾತಂತ್ರ್ಯಗೊಂಡ ತರುವಾಯ ಭಾರತದ ಮೊದಲ ಪ್ರಧಾನಿಗಳಾದ ಜವಹರಲಾಲ್ ನೆಹರೂರವರು ೧೯೫೨ರಲ್ಲಿ ಅಪರಾಧಿ ಬುಡಕಟ್ಟುಗಳನ್ನು ಅವುಗಳ ಕಾನೂನಿನಿಂದ ಪಾರು ಮಾಡುವ ಉದ್ದೇಶದಿಂದ ಅಪರಾಧಿ ಬುಡಕಟ್ಟುಗಳನ್ನೆಲ್ಲಾ ವಿಮುಕ್ತ ಬುಡಕಟ್ಟುಗಳೆಂದು ಘೋಷಿಸಿದರು. ಅಂದಿನಿಂದ ಅಪರಾಧಿ ಬುಡಕಟ್ಟುಗಳೆಲ್ಲಾ ವಿಮುಕ್ತ ಬುಡಕಟ್ಟುಗಳಾಗಿ ಪರಿವರ್ತನೆಯಾದವು. ಆದರೆ ಅಂದಿನಿಂದ ಅಲ್ಲಿಯವರೆಗೂ ಬ್ರಿಟಿಷ್ ಸರ್ಕಾರ ನೀಡುತ್ತಿದ್ದ

ಆರೋಗ್ಯ, ಶಿಕ್ಷಣ, ತರಬೇತಿ, ಉದ್ಯೋಗದಂತಹ ಕನಿಷ್ಠ ಸವಲತ್ತುಗಳು ಈ ಬುಡಕಟ್ಟುಗಳಿಗೆ ದೊರೆಯದಂತಾಯಿತು. ಅತ್ತ ಕಾಡೂ ಇಲ್ಲದೆ ಇತ್ತ ನಾಡೂ ಇಲ್ಲದೆ ಹಲವಾರು ಬುಡಕಟ್ಟುಗಳು ಅದರಲ್ಲೂ ಡುಂಗ್ರಿಗರಾಸಿಯ, ಹಕ್ಕಿ ಪಿಕ್ಕಿ, ಮಾಂಗ್‌ಗಾರುಡಿಗ, ಚಪ್ಪರ್‌ಬಂದ್‌ಗಳಂತಹ ಸಮುದಾಯಗಳು ಭಟ್ಟಿ ಸರಾಯಿ ತಯಾರಿಕೆ, ಬಿಕ್ಷಾಟನೆ, ಚಿಂದಿ ಆಯುವುದು ಮುಂತಾದ ನಿಕೃಷ್ಟವಾದ ಕೆಲಸಗಳಲ್ಲಿ ತೊಡಗುವಂತಾಯಿತು. ಆದರೆ ಬಹುಸಂಖ್ಯಾತರಾಗಿದ್ದ ನಾಯಕ ಸಮುದಾಯವು ಜನರೊಂದಿಗೆ ಬೆರೆತು ಕೃಷಿ ಕೂಲಿ, ಕೃಷಿ ಮುಂತಾದ ಕೆಲಸಗಳನ್ನು ಮಾಡುವುದರ ಮೂಲಕ ತನಗೊದಗಿದ ಅಲ್ಪ-ಸ್ವಲ್ಪ ಕಷ್ಟದಿಂದ ಪಾರಾಯಿತು.

೫.೧. ಸಾಮಾಜಿಕ ಸ್ಥಿತಿ-ಗತಿ

ಬಹುತೇಕ ಭಾರತದ ಬುಡಕಟ್ಟುಗಳು ತುಂಬಾ ಸ್ವಾಭಿಮಾನದ ಬದುಕನ್ನು ಬದುಕಿದವು. ಮುಖ್ಯವಾಗಿ ಬುಡಕಟ್ಟುಗಳು ತಮ್ಮದೇ ಆದ ಗುಂಪುಗಳನ್ನು ರಚಿಸಿಕೊಂಡು ಜೀವನ ನಿರ್ವಹಣೆ ಮಾಡುತ್ತವೆ. ಇವುಗಳದೇ ಆದ ಕಟ್ಟೆಮನೆ ಪದ್ಧತಿ, ಜಾತಿ ಪಂಚಾಯ್ತಿಗಳನ್ನು ಇಂದಿಗೂ ಕಾಣಬಹುದು. ಒಂದು ಬುಡಕಟ್ಟು ಸಮುದಾಯ ಮತ್ತೊಂದು ಬುಡಕಟ್ಟು ಸಮುದಾಯದೊಂದಿಗೆ ಅಥವಾ ಬೇರೆ ಜಾತಿಯೊಂದಿಗೆ ಯಾವುದೇ ಕಾರಣಕ್ಕೂ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದಿಲ್ಲ. ಪ್ರತಿಯೊಂದು ಬುಡಕಟ್ಟಿಗೂ ಅವರದೇ ಆದ ವಿಶಿಷ್ಟ ಬೆಡಗುಗಳು, ಆರಾಧನಾ ದೈವಗಳು ಇವೆ. ಇವರದೇ ಆದ ಸಾಂಸ್ಕೃತಿಕ ನಾಯಕರು ಇಂದು ದೈವಗಳಾಗಿ ಪೂಜೆಗೊಳ್ಳುತ್ತವೆ. ಸಚೇತನವಾದಿಗಳಾದ ಬುಡಕಟ್ಟುಗಳು ವೈವಾಹಿಕ ಸಂಬಂಧಗಳನ್ನು ಬೆಳೆಸಲು ಮುಖ್ಯವಾಗಿ ಬೆಡಗುಗಳನ್ನು ಆಧಾರವಾಗಿ ಇರಿಸಿಕೊಳ್ಳುತ್ತವೆ.

ಬೇಡ ನಾಯಕರಲ್ಲಿ ಒಳಪಂಗಡಗಳು ಹಲವಾರಿವೆ. ಇದರಲ್ಲಿ ಮುಖ್ಯವಾಗಿ

* ಊರ ನಾಯಕರು
* ಮ್ಯಾಸ ನಾಯಕರು
* ಕರಕರ ಮೊಂಡ
* ಬುಟ್ಟಿ ನಾಯಕರು – ಮುಂತಾದ ಪಂಗಡಗಳು ಕಂಡುಬರುತ್ತವೆ. ಇಂದು ಬುಟ್ಟಿ ನಾಯಕರು ಎಲ್ಲಿದ್ದಾರೆ ಎಂಬುದು ತಿಳಿದುಬರುವುದಿಲ್ಲವಾದರೂ ಊರ ನಾಯಕರ ಮತ್ತು

ಇನ್ನುಳಿದ ಮ್ಯಾಸನಾಯಕ, ಕರಕರ ಮೊಂಡ ಸಮುದಾಯಗಳು ಕಂಡುಬರುತ್ತವೆ. ಈ ಮೂರು ಪಂಗಡಗಳು ಒಂದೇ ಜಾತಿ ಮೂಲದವರಾದರೂ ಇವುಗಳ ನಡುವೆ ಯಾವುದೇ ರೀತಿಯ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ.

ಕರಕರ ಮೊಂಡರು ಮತ್ತು ಊರ ನಾಯಕರು ದನ, ಹಂದಿ, ಕುರಿ, ಕೋಳಿ, ಉಡ ಮುಂತಾದ ಪ್ರಾಣಿಗಳ ಮಾಂಸವನ್ನು ಭಕ್ಷಣೆ ಮಾಡುತ್ತಾರೆ. ಆದರೆ ಮ್ಯಾಸ ನಾಯಕರು ಕುರಿ, ಕಾಡು ಹಂದಿ, [illegible] ಮತ್ತು ಇತರ ಕಾಡುಪ್ರಾಣಿಗಳನ್ನು ತಿನ್ನುವರಾದರೂ ಕೋಳಿ ಮತ್ತು ಕೋಳಿಯ ಮೊಟ್ಟೆ ಇವರಿಗೆ ನಿಷಿದ್ಧವಾಗಿದೆ. ಹಾಗೇ ಈಚಲು ಹೆಂಡ, ಈಚಲು ಚಾಪೆ, ಈಚಲು ಹಣ್ಣು ಯಾವುದನ್ನೂ ಇವರು ಬಳಸುವುದಿಲ್ಲ. ಕೋಳಿ ಮತ್ತು ಈಚಲು ಪದಾರ್ಥಗಳನ್ನು ಬಳಸಿದರೆ ಅಂಥವರನ್ನು ಕುಲದಿಂದ ಹೊರಗಿಡುವ ಪದ್ಧತಿ ಇವರಲ್ಲಿದೆ.

ಕಾಡುಗೊಲ್ಲರಂತೆ ಮ್ಯಾಸನಾಯಕರು ಸಹ ಪ್ರತ್ಯೇಕವಾದ ಹಟ್ಟಿಗಳಲ್ಲಿ ವಾಸ ಮಾಡುವ ಪದ್ಧತಿಯನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಆದರೆ ಕರಕರ ಮೊಂಡರು ಇಂದಿಗೂ ಅಲೆಮಾರಿಗಳಾಗಿಯೇ ಜೀವನ ನಿರ್ವಹಣೆ ಮಾಡುತ್ತಾರೆ ಮತ್ತು ಬಿಕ್ಷಾಟನೆಯನ್ನೇ ಮುಖ್ಯ ವೃತ್ತಿಯಾಗಿಸಿಕೊಂಡಿದ್ದಾರೆ. ಅದೇ ರೀತಿ ಡುಂಗ್ರಿಗರಾಸಿಯ ಮತ್ತು ಹಕ್ಕಿಪಿಕ್ಕಿ ಸಮುದಾಯಗಳು ಸಹ ಅಲೆಮಾರಿ ಸಮುದಾಯಗಳಾಗಿಯೇ ಉಳಿದಿವೆ.

ಮ್ಯಾಸಬೇಡರು ಮತ್ತು ಊರ ಬೇಡರ ನಡುವೆ ಆಚರಣೆಗಳಲ್ಲಿ ವ್ಯತ್ಯಾಸ ಕಂಡುಬರುವುದಾದರೂ ಶೇಕಡ ಎಂಭತ್ತರಷ್ಟು ಆಚರಣೆಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಬೆಡಗುಗಳಲ್ಲಿಯೂ ಬಹುತೇಕ ಹೋಲಿಕೆ ಇದೆ.

ಊರ ನಾಯಕರು ಗಂಡಿನ ಮನೆಮುಂದೆ ಮದುವೆ ಮಾಡುತ್ತಾರೆ. ಅತ್ತಿಕಂಭ, ಆಲಗಂಭ ತರುವುದು, ಮನೆ ಮುಂದೆ ಚಪ್ಪರ ಹಾಕುವುದು, ಐರಣಿ ಮತ್ತು ಸುರಗಿ ಪದ್ಧತಿಗಳು ಜಾರಿಯಲ್ಲಿವೆ. ತಾಳಿ ಕಟ್ಟಲು ಪುರೋಹಿತರನ್ನು ಕರೆಸುತ್ತಾರೆ. ಆದರೆ ಮ್ಯಾಸ ನಾಯಕರು ಹೆಣ್ಣಿನ ಮನೆ ಮುಂದೆ ಮದುವೆ ಮಾಡುತ್ತಾರೆ. ಬಾಸಿಂಗ ದಂಡೆಯನ್ನು ಕಟ್ಟುವುದಿಲ್ಲ. ಗಂಡಿಗೆ ರುಮಾಲನ್ನು ಸುತ್ತಿದರೆ ಹೆಣ್ಣಿಗೆ ಕೇವಲ ಹೂವು ಮುಡಿಸುತ್ತಾರೆ. ಮ್ಯಾಸ ನಾಯಕರು ತಮ್ಮ ಹಟ್ಟಿಗಳಲ್ಲಿಯೇ ಮದುವೆ ಮಾಡುತ್ತಾರೆ. ಕಟ್ಟೆಮನೆಯ ಯಜಮಾನನೇ ಪುರೋಹಿತನಂತೆ ಮದುವೆ ಕಾರ್ಯಗಳನ್ನು ನಡೆಸಿಕೊಡುತ್ತಾನೆ. ಇವರಲ್ಲಿ ಇಂದಿಗೂ ತೆರ ಪದ್ಧತಿ ಜಾರಿಯಲ್ಲಿದೆ.

ಮ್ಯಾಸ ನಾಯಕರಲ್ಲಿ ಮಂಡಲರು ಮತ್ತು ಮಲ್ಲಿನಾಯಕರು ಎಂಬ ಎರಡು ಪಂಗಡಗಳಿವೆ. ಈ ರೀತಿಯ ಪಂಗಡಗಳು ಊರ ನಾಯಕರಲ್ಲಿ ಕಂಡುಬರುವುದಿಲ್ಲ. ಈ ಎರಡು ಪಂಗಡಗಳು ತಮ್ಮನ್ನು ಚಂದ್ರವಂಶ ಮತ್ತು ಸೂರ್ಯವಂಶಗಳಿಗೆ ಸೇರಿದವರು ಎಂದು ತಿಳಿಸುತ್ತಾರೆ. ಈ ಎರಡು ಪಂಗಡಗಳ ನಡುವೆ ವೈವಾಹಿಕ ಸಂಬಂಧಗಳು ಏರ್ಪಡುತ್ತವೆ. ಊರ ನಾಯಕರಲ್ಲಿ ನೆಲ್ಲಬಾಮುಡ್ಲು, ಎನುಮಲೋರು, ಡೋಣಮಂಡ್ಲು, ಬೋಸುರಲು, ನಶೆನೋರು, ಮುನ್ನೋಲ್ಲೋರು, ಗಟ್ಟಿಮತ್ತೇರು, ಕುಂಬ್ರೇಲು, ಕಾದುಗಡ್ಲೇರು, ಎತ್ತಿನೋರು, ದಡ್ಡಿದಾಸರಿಗಳು, ಪಾಲಜ್ಜಿಗಳು, ಗಾಡವುಲು, ಪುವ್ವಲೋರು, ಓಬನಾಯಕರು, ಪಟ್ಟಪಲ್ಲಾರು, ಭಾನೋರ್, ಬೋನಳ್ಳಿಯೋರ್, ಚಿನ್ನನಾಯ್ಕಲು, ಪಾಮಲ್ಲೇರು, ರಾಯಬೋರ್, ಬಡಸಲೋರ್ ಮುಂತಾದ ಬೆಡಗುಗಳು ಕಂಡುಬರುತ್ತವೆ.

ಮ್ಯಾಸನಾಯಕರಲ್ಲಿ ಮಲ್ಲಿನಾಯಕರು, ಯರಮಂಚನಾಯಕರು, ಮಂದಾಲರು, ಬುಡಗ್ಲೋರು, ಮಂಡ್ಲೋರು ಮುಂತಾದ ಪ್ರಮುಖ ಬೆಡಗುಗಳಿದ್ದು ಅವುಗಳಲ್ಲಿ ಮತ್ತೆ ಉಪಬೆಡಗುಗಳು ಕಂಡು ಬರುತ್ತವೆ.

ಮಲ್ಲಿನಾಯಕ ಬೆಡಗಿನಲ್ಲಿ ಈಶ್ವರೋರು, ಎನುಮನಲೋರ್, ಓಬನಾಯಕರು, ಕಾಟಮಲ್ಲರ್, ಚೆನ್ನಕಾದನೋರ್, ಪೆದ್ಧನಾಯಕರು, ಕೇರುಲೋರ್, ಮೇಸಲೋರ್, ಎಡೇಲೋರು ಎಂಬ ಉಪ ಬೆಡಗುಗಳಿವೆ.

ಯರಮಂಚ ನಾಯಕರಲ್ಲಿ ಅಚ್ಚಪುವೇರ್, ಕರೇನೋರ್, ನಲಗಟೇರ್, ಯರಗೋಟಿಯೇರ್, ಯರಗಟ್ಲಾರ್, ಎಡೇಲರ್ ಎಂದಿವೆ.

ಮಂದಾಲರಲ್ಲಿ ಕಾಮಗೇತಿ, ಗಾದ್ರಿಪಾಲ, ಬುಲ್ಲೋಡರ್, ಸಾಕಲೋರು ಎಂದಿವೆ.

ಮಂಡ್ಲೋರಲ್ಲಿ ಜರಕಡ್ಲು ಪಾಮುಡ್ಲು, ನಲ್ಲ ಪಾಮುಡ್ಲು, ಪೂಜಾರಳ್ಳಿ ಪಾಮುಡ್ಲು, ಯರಪಾಲಮುಡ್ಲುಗಳು ಎಂದಿವೆ.

ದಾಸರಲ್ಲಿ ಗುಗ್ರಿದಾಸರು, ಗೊಡಗು ದಾಸರು, ಬೋಡ ದಾಸರು, ದಡ್ಡಿ ದಾಸರು ಎಂಬ ಉಪಬೆಡಗುಗಳು ಕಂಡುಬರುತ್ತವೆ.

ಇದೇ ರೀತಿ ಹಕ್ಕಿ ಪಿಕ್ಕಿಗಳು ಸಹ ಸಚೇತನವಾದಿಗಳು. ಇವರು ಗುಂಪುಗುಂಪಾಗಿ ವಾಸಮಾಡುತ್ತಾರೆ. ಮತ್ತು ಅಲೆಮಾರಿಗಳಾಗಿದ್ದಾರೆ. ಇವರ ವಿವಾಹ ಕ್ರಮ, ಕುಲಪಂಚಾಯ್ತಿ

ಎಲ್ಲವೂ ವಿಶೇಷತೆಯಿಂದ ಕೂಡಿವೆ. ಇವರನ್ನು ಪಾಧ್ಧಿಗಳೆಂದು ಸಹ ಕರೆಯುತ್ತಾರೆ. ಇವರಲ್ಲಿ ಮುಖ್ಯವಾಗಿ ಸಾವಂತಿಯೂ, ಖೋಡಿಯಾರ್, ಈಖೋತಿಯಾ, ಪಿಂಪಳಾಜ್, ಕೂರ್‌ಭಿಯಾ, ಆರ್‌ಖ್ಛತಿಯಾ ಎಂಬ ಬೆಡಗುಗಳು ಕಂಡುಬರುತ್ತವೆ. (ಶಿಕಾರಿರಾಮು:೨೦೦೮:೧೬) ಮೇಥ ಹಾಗೂ ಡುಂಗ್ರಿಗರಾಸಿಯಾದಲ್ಲಿಯೂ ಇದೇ ರೀತಿ ಹಲವಾರು ಬೆಡಗುಗಳನ್ನು ಕಾಣಬಹುದು. ಒಟ್ಟಾರೆಯಾಗಿ ಈ ಎಲ್ಲಾ ಬುಡಕಟ್ಟು ಸಮುದಾಯಗಳು ವಿಜಾತಿ ಬೆಡಗುಗಳಲ್ಲಿಯೇ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳುತ್ತವೆ.

೫.೧.೧. ಮಹಿಳೆಯರ ಸಾಮಾಜಿಕ ಸ್ಥಿತಿ-ಗತಿ

ಬಹುತೇಕ ಬುಡಕಟ್ಟುಗಳು ಮೂಲತಃ ಸಚೇತನವಾದಿಗಳು ಮತ್ತು ಮಾತೃ ದೇವತಾರಾಧನೆಯನ್ನು ಒಳಗೊಂಡವುಗಳು. ಮಾತೃದೇವತಾರಾಧನೆಯೆಂಬುದು ಈ ಸಮುದಾಯಗಳ ಬದುಕಿನ ರೀತಿಯನ್ನು ತಿಳಿಸುತ್ತವೆ. ಪ್ರಾಯಶಃ ಈ ಸಮುದಾಯಗಳೆಲ್ಲವೂ ಮಾತೃಪ್ರಧಾನ ಕುಟುಂಬಗಳಾಗಿದ್ದವು. ಹೆಣ್ಣಿಗೆ ವಿಶೇಷವಾದ ಸ್ಥಾನವನ್ನು ಈ ಸಮುದಾಯಗಳು ಹೊಂದಿದ್ದವು. ಆದರೆ ಕಾಲಾಂತರದಲ್ಲಿ ಹೆಣ್ಣಿನ ಸ್ಥಾನವನ್ನು ಪುರುಷ ಆಕ್ರಮಿಸಿದನು. ಇಂದು ಬಹುತೇಕವಾಗಿ ಕರ್ನಾಟಕದ ಎಲ್ಲಾ ಬುಡಕಟ್ಟುಗಳಲ್ಲಿ ಪುರುಷ ಪ್ರಾಧಾನ್ಯತೆ ಎದ್ದು ಕಾಣುತ್ತದೆ.

ಕೂಲಿ ಕಾರ್ಮಿಕ ಪದ್ಧತಿಯನ್ನು ಮತ್ತು ಭಿಕ್ಷಾಟನೆಯನ್ನು ಅನುಸರಿಸುವ ಬುಡಕಟ್ಟುಗಳಲ್ಲಿ ಹೆಣ್ಣು ಗಂಡುಗಳಲ್ಲಿ ಸಮಾನತೆ ಕಂಡುಬರುತ್ತದೆಯಾದರೂ ಜಾತಿ ಪಂಚಾಯ್ತಿಯಂತಹ ಸಂದರ್ಭಗಳಲ್ಲಿ ಪುರುಷರೇ ಪ್ರಧಾನ ಪಾತ್ರವಹಿಸುತ್ತಾರೆ. ಮೇಲ್ಜಾತಿಗಳಂತೆ ಹೆಣ್ಣನ್ನು ಕೀಳಾಗಿ ಕಾಣುವ ಪದ್ಧತಿ ಬುಡಕಟ್ಟು ಸಮುದಾಯಗಳಲ್ಲಿ ಇಲ್ಲವಾದರೂ ಮಹಿಳೆ ಪುರುಷರಿಗಿಂತ ಕಡಿಮೆ ಎಂಬ ಭಾವನೆ ಅವರಲ್ಲಿರುವುದು ಕಂಡುಬರುತ್ತದೆ. ಇಂದಿಗೂ ಪುರುಷರು ಮನೆಯ ಹೊರಗಡೆ ಬೇಟೆ ಮತ್ತು ಇತರ ಚಟುವಟಿಕೆಗಳಲ್ಲಿ ತೊಡಗಿದರೆ ಹೆಣ್ಣು ಮನೆಯ ಉಸ್ತುವಾರಿಯನ್ನು ನೋಡಿಕೊಳ್ಳುವವಳಾಗಿರುತ್ತಾಳೆ. ಆದರೆ ಶೀಲತ್ವಕ್ಕೆ ಬುಡಕಟ್ಟು ಸಮುದಾಯಗಳು ಹೆಚ್ಚಿನ ಪ್ರಾಧಾನ್ಯತೆ ಕೊಡುತ್ತವೆ. ಹೀಗಾಗಿಯೇ ಬಹುತೇಕ ಬುಡಕಟ್ಟುಗಳಲ್ಲಿ ಮಹಿಳೆ ಲೈಂಗಿಕ ವ್ಯಭಿಚಾರದಲ್ಲಿ ತೊಡಗುವುದಿಲ್ಲ. ಪುರುಷನೂ ಕೂಡ ಲೈಂಗಿಕ ವ್ಯಭಿಚಾರದಿಂದ ದೂರವುಳಿದಿರುತ್ತಾನೆ. ಅಕಸ್ಮಾತ್ ಅವರು ಲೈಂಗಿಕ ವ್ಯಭಿಚಾರದಲ್ಲಿ ತೊಡಗಿದ ಬಗ್ಗೆ ದೈವಕ್ಕೆ ತಿಳಿದುಬಂದರೆ ಅಂಥವರನ್ನು ಜಾತಿಯಿಂದ ಬಹಿಷ್ಕರಿಸುತ್ತಾರೆ

ಮತ್ತು ಕಠಿಣ ಶಿಕ್ಷೆಗಳಿಗೆ ಒಳಪಡಿಸುತ್ತಾರೆ. ಬಹುತೇಕ ಬುಡಕಟ್ಟುಗಳು ದೇವದಾಸಿ ಪದ್ಧತಿಯಂತಹ ಅನಿಷ್ಟ ಪದ್ಧತಿಯಿಂದ ದೂರವುಳಿದಿವೆ.

ಆದರೆ ನಾಯಕ ಸಮುದಾಯಗಳಲ್ಲಿ ಕರಕರ ಮೊಂಡರ ಹೊರತಾಗಿ ಮ್ಯಾಸನಾಯಕ ಮತ್ತು ಊರ ನಾಯಕರಲ್ಲಿ ದೇವದಾಸಿ ಪದ್ಧತಿ ಜಾರಿಯಲ್ಲಿದೆ. ಈ ಪದ್ಧತಿ ಒಂದರ್ಥದಲ್ಲಿ ಬುಡಕಟ್ಟು ನಿಯಮಗಳಿಗೆ ವಿರುದ್ಧವಾದುದಾಗಿದೆ. ಪ್ರಾಯಶಃ ಮಧ್ಯಕಾಲೀನ ಕರ್ನಾಟಕದ ರಾಜರ ಆಡಳಿತ ಸಂದರ್ಭದಲ್ಲಿ ನಾಯಕ ಸಮುದಾಯದಲ್ಲಿ ಇಂತಹ ಅನಿಷ್ಟ ಆಚರಣೆ ಪ್ರವೇಶ ಪಡೆದಿರಬೇಕು. ಹಿಂದೆ ರಾಜರ ಸೇವಕರಾಗಿ, ಸೈನಿಕರಾಗಿ ನಾಯಕ ಪುರುಷರು ರಾಜ ಮಹಾರಾಜರ ಸೇವೆ ಮಾಡಿದರೆ ಅವರ ಕುಟುಂಬದ ಮಹಿಳೆಯರು ದೇವರ ಸೇವೆಯ ಹೆಸರಿನಲ್ಲಿ ರಾಜಮಹಾರಾಜರ ಲೈಂಗಿಕ ಅಭಿಲಾಷೆಯನ್ನು ತೀರಿಸುವವಳಾಗಿ ಕಾರ್ಯನಿರ್ವಹಿಸುತ್ತಿದ್ದಳೆನಿಸುತ್ತದೆ. ಈ ಅನಿಷ್ಟ ಪದ್ಧತಿ ದೇವರ ಹೆಸರಿನಲ್ಲಿ ಇಂದಿಗೂ ಜಾರಿಯಲ್ಲಿರುವುದು ಕಂಡುಬರುತ್ತದೆ. ಇವರ ಈ ಪದ್ಧತಿಗೆ ಹುಲಿಗೆಮ್ಮ, ಯಲ್ಲಮ್ಮ, ತುಳಜಾ ಭವಾನಿ, ಅಂಬಾ ಜೋಗಾಯಿ, ಗುತ್ಯಮ್ಮನಂತಹ ದೈವಗಳು ನೆರವಾಗಿವೆ. ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ಕೂಡ್ಲಿಗಿ, ಕಮಲಾಪುರ, ಹೊಸಪೇಟೆ, ಬಳ್ಳಾರಿಯಂತಹ ಊರುಗಳಲ್ಲಿ ದೇವದಾಸಿ ಹೆಸರಿನಲ್ಲಿ ಜೀವನ ನಿರ್ವಹಣೆ ಮಾಡುವ ನಾಯಕ ಸಮುದಾಯದ ಮಹಿಳೆಯರನ್ನು ಕಾಣಬಹುದು. ಸಾಮಾಜಿಕವಾಗಿ ಅವಮಾನಕರವಾದ ಈ ಅನಿಷ್ಟ ಪದ್ಧತಿಯಿಂದಾಗಿ ಮಹಿಳೆಯರು ಅನುಭವಿಸುವ ನೋವು ಯಾತನೆಗಳು ಎಂಥವು ಎಂಬುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ. ದೇವದಾಸಿ ಪದ್ಧತಿ ಅಳವಡಿಸಿಕೊಂಡ ಏಕೈಕ ಕಾರಣಕ್ಕಾಗಿ ಈ ನಾಯಕ ಸಮುದಾಯದ ಬಹುತೇಕ ಮಹಿಳೆಯರು ಸಾಮಾಜಿಕವಾಗಿ ತುಂಬಾ ಅಪಮಾನಕಾರಿ ಜೀವನ ನಿರ್ವಹಿಸಬೇಕಾದಂತಹ ಅನಿವಾರ್ಯ ಸ್ಥಿತಿ ನಿರ್ಮಾಣವಾಗಿದೆ. ಇತ್ತೀಚೆಗೆ ವಿದ್ಯಾಭ್ಯಾಸ ನಡೆಸಿ ಶಿಕ್ಷಿತರಾದ ಹೊಸ ತಲೆಮಾರಿನ ಹುಡುಗಿಯರು ಈ ಅನಿಷ್ಟ ಪದ್ಧತಿಯಿಂದ ದೂರವಾಗುತ್ತಿರುವುದು ಸಂತೋಷದ ವಿಚಾರ.

ಇದರಾಚೆಗೆ ವಿವಾಹಿತ ನಾಯಕ ಸಮುದಾಯದ ಮಹಿಳೆಯರಲ್ಲಿ ಬಹುತೇಕರು ಅವಿದ್ಯಾವಂತರಾದುದರಿಂದ ಅವರಿಗೆ ಆರ್ಥಿಕ ಸ್ವಾತಂತ್ರ್ಯ ಇಲ್ಲವಾಗಿದೆ. ಹೀಗಾಗಿ ಪುರುಷಶಾಹಿ ವ್ಯವಸ್ಥೆಯ ಅಡಿಯಾಳಾಗಿ ಮಹಿಳೆ ಬದುಕಬೇಕಾದ ಅನಿವಾರ್ಯತೆ ಇದೆ.

✷

ಸಾಮಾಜಿಕವಾಗಿ ತುಂಬಾ ಕೀಳಾಗಿ ಕಾಣಲಾಗುವ ನಾಯಕ ಸಮುದಾಯದ ಮಹಿಳೆಗೆ ಇನ್ನೂ ಸಾಮಾಜಿಕವಾಗಿ ಸ್ವಾತಂತ್ರ್ಯ ಸಿಗಬೇಕಾದ ಕಾಲ ದೂರವಿದೆ ಎಂದೆನಿಸುತ್ತದೆ.

೫.೨. ಆರ್ಥಿಕ ಸ್ಥಿತಿ-ಗತಿ

ಸಾಮಾನ್ಯವಾಗಿ ಬುಡಕಟ್ಟು ಸಮುದಾಯಗಳು ತಮ್ಮ ಜೀವನಾಧಾರಕ್ಕಾಗಿ ಕೃಷಿ, ಬೇಟೆ, ಕಾಡಿನ ಉತ್ಪನ್ನಗಳ ಸಂಗ್ರಹಣೆ, ಪಶುಪಾಲನೆ ಮುಂತಾದ ಕೆಲಸಗಳಲ್ಲಿ ತೊಡಗಿರುತ್ತವೆ. ಮುಖ್ಯವಾಗಿ ಪಶ್ಚಿಮ ಘಟ್ಟಗಳ ಕಾಡು, ಕೊಡಗು, ಬಿಳಿಗಿರಿ ರಂಗನಬೆಟ್ಟ, ಮಲೆ ಮಹಾದೇಶ್ವರ ಕಾಡು ಮುಂತಾದ ಕಡೆ ಇರುವ ಬುಡಕಟ್ಟುಗಳು ಬಹುತೇಕ ಇಂದಿಗೂ ಜೇನು ಸಂಗ್ರಹಣೆ, ಮರದ ಮೇಲಿನ ಪಾಚಿ ಸಂಗ್ರಹಣೆ, ಕೃಷಿ, ವನಸ್ಪತಿಗಳ ಸಂಗ್ರಹಣೆ ಮತ್ತು ಮಾರಾಟಗಳಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಆದರೆ ಬಯಲು ಸೀಮೆಯಲ್ಲಿ ಜೀವನ ನಿರ್ವಹಣೆ ಮಾಡುತ್ತಿರುವ ಬುಡಕಟ್ಟು ಸಮುದಾಯಗಳು ಇಂದು ಪಶುಪಾಲನೆ ಮತ್ತು ಸಣ್ಣ ಹಿಡುವಳಿಯ ಬೇಸಾಯ ಕ್ರಮವನ್ನೇ ಹೆಚ್ಚಾಗಿ ಅವಲಂಬಿಸಿವೆ. ಇದರಲ್ಲಿ ಪ್ರಮುಖವಾಗಿ ಗುರುತಿಸಬಹುದಾದ ಸಮುದಾಯವೆಂದರೆ ಬೇಡ ನಾಯಕ ಸಮುದಾಯ.

ಡುಂಗ್ರಿ ಗರಾಸಿಯದಂತಹ ಸಮುದಾಯ ಬಿಕ್ಷಾಟನೆ, ಪ್ಲಾಸ್ಟಿಕ್ ವಸ್ತುಗಳ ರಿಪೇರಿ, ಮೀನುಗಾರಿಕೆ, ಚಿಂದಿ ಆಯುವ ಕೆಲಸಗಳಲ್ಲಿ ತೊಡಗಿದರೆ, ಹಕ್ಕಿ ಪಿಕ್ಕಿ ಸಮುದಾಯ ಇಂದಿಗೂ ಬಿಕ್ಷಾಟನೆ, ಭಟ್ಟಿ ಸರಾಯಿ ತಯಾರಿಕೆ, ಚಿಕ್ಕ ಪುಟ್ಟ ಕೂಲಿ ಕೆಲಸ ಮುಂತಾದವುಗಳಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ.

ಮೇಧ ಸಮುದಾಯವು ಬಿದಿರಿನ ವಸ್ತುಗಳನ್ನು ತಯಾರಿಸುವುದನ್ನೇ ಮುಖ್ಯ ವೃತ್ತಿಯಾಗಿಸಿ ಕೊಂಡಿದೆ. ಗ್ರಾಮೀಣ ಭಾರತೀಯರ ಆರ್ಥಿಕ ಸ್ಥಿತಿ ಸುಧಾರಿಸಲೆಂದೇ ಸರ್ಕಾರ ಇಂದು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿವೆ. ಅಂತಹ ಯೋಜನೆಗಳಲ್ಲಿ ಪ್ರಮುಖವಾದವುಗಳು ಜವಹಾರ್ ಗ್ರಾಮ ಸಮೃದ್ಧಿ ಯೋಜನೆ, ಕೂಲಿಗಾಗಿ ಕಾಳು, ಉದ್ಯೋಗ ಖಾತ್ರಿ ಯೋಜನೆಯಂತಹ ಹಲವಾರು ಯೋಜನೆಗಳನ್ನು ಹಾಕಿಕೊಂಡಿವೆ. ಈ ಯೋಜನೆಗಳ ಸಂಕ್ಷಿಪ್ತ ರೂಪು ರೇಷೆಗಳು ಈ ಕೆಳಗಿನಂತಿವೆ

೫.೨.೧. ಜವಾಹರ್ ಗ್ರಾಮ ಸಮೃದ್ಧಿ ಯೋಜನೆ

ಗ್ರಾಮೀಣ ಪ್ರದೇಶದ ಜನರ ನಿರುದ್ಯೋಗ ಮತ್ತು ಅರೆ ನಿರುದ್ಯೋಗ ನಿವಾರಿಸುವ ದೃಷ್ಟಿಯಿಂದ ಭಾರತ ಸರ್ಕಾರವು ಮೊದಲು ಅಸ್ತಿತ್ವದಲ್ಲಿದ್ದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಮತ್ತು ಗ್ರಾಮೀಣ ಭೂ ರಹಿತ ಉದ್ಯೋಗ ಭರವಸೆ ಯೋಜನೆಗಳನ್ನು ವಿಲೀನಗೊಳಿಸುವ ಮೂಲಕ ೧೯೮೯ರಲ್ಲಿ ಜವಹಾರ ರೋಜಗಾರ್ ಯೋಜನೆಯನ್ನು ಅನಷ್ಟಾನಕ್ಕೆ ತರಲಾಯಿತು. ಈ ಯೋಜನೆಯನ್ನು ಪುನರ್ ರಚಿಸಿ ೧೯೯೯ರಲ್ಲಿ ಜವಾಹರ್ ಗ್ರಾಮ ಸಮೃದ್ಧಿ ಯೋಜನೆಯಾಗಿ ಜಾರಿಗೊಳಿಸಲಾಯಿತು.

ಈ ಯೋಜನೆಯ ಮುಖ್ಯಗುರಿ ಗ್ರಾಮೀಣ ಪ್ರದೇಶದ ಪುರುಷ ಮತ್ತು ಮಹಿಳೆಯರಿಗೆ ಸೂಕ್ತ ಉದ್ಯೋಗವನ್ನು ಕಲ್ಪಿಸುವುದಾಗಿತ್ತು. ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ಇದಕ್ಕೆ ಸಂಬಂಧಿಸಿದ ಅನುದಾನವನ್ನು ಶೇ೭೫:೨೫ ಪ್ರಮಾಣದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಭರಿಸುತ್ತವೆ. ಗ್ರಾಮ ಪಂಚಾಯಿತಿಗಳು ಈ ಯೋಜನೆಯ ಅನುಷ್ಠಾನದ ಅಂಗ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತವೆ. ಗ್ರಾಮ ಪಂಚಾಯಿತಿಗಳು ಅಭಿವೃದ್ಧಿ ಕಾಮಗಾರಿಗಳು, ಗುಂಪು ಮನೆಗಳ ನಿರ್ಮಾಣ, ಕಟ್ಟಡಗಳು, ರಸ್ತೆ, ಚರಂಡಿ ಮತ್ತು ಗ್ರಾಮಕ್ಕೆ ಅವಶ್ಯವಾದ ಇತರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯೋಜನೆಯಲ್ಲಿ ಅಳವಡಿಸಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ ಪ್ರತಿ ವರ್ಷವೂ ಕ್ರಿಯಾ ಯೋಜನೆ ತಯಾರಿಸುವಾಗ ಗ್ರಾಮ ಪಂಚಾಯಿತಿಯು ಹಿಂದಿನ ವರ್ಷ ಕೈಗೆತ್ತಿಕೊಂಡ ಪೂರ್ಣಗೊಳ್ಳದ ಕಾಮಗಾರಿಗಳಿಗೆ ಮೊದಲು ಆಧ್ಯತೆಯನ್ನು ನೀಡಿ, ತರುವಾಯ ಹೊಸ ಕಾಮಗಾರಿಗಳಿಗೆ ಹಣವನ್ನು ನಿಗದಿಗೊಳಿಸಬೇಕು ಮೇಲ್ಕಂಡ ವಾರ್ಷಿಕ ಯೋಜನೆಗಳನ್ನು ತಯಾರಿಸುವ ಮುನ್ನ ಗ್ರಾಮಸಭೆಯಲ್ಲಿ ಪ್ರತಿ ವರ್ಷವೂ ಪ್ರತಿ ಗ್ರಾಮದಲ್ಲಿ ತೆಗೆದುಕೊಳ್ಳುವ ಅನುಮೋದನೆ ಪಡೆದು ಗ್ರಾಮ ಪಂಚಾಯಿತಿಯ ವಾರ್ಷಿಕ ಯೋಜನೆಯಲ್ಲಿ ಎಲ್ಲಾ ಕಾರ್ಯಕ್ರಮಗಳ ಜೊತೆಗೆ ಅಳವಡಿಸಬೇಕು ಈ ರೀತಿ ಪ್ರತಿಯೊಂದು ಗ್ರಾಮ ಪಂಚಾಯಿತಿಗಳು ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿ ತರುವಾಯ ಅನುಷ್ಠಾನಗೊಳಿಸಬೇಕು.

ಯೋಜನೆಯ ಉದ್ದೇಶಗಳು

ಜವಹಾರ್ ಗ್ರಾಮ ಸಮೃದ್ಧಿ ಯೋಜನೆಯು ಗ್ರಾಮ ಪಂಚಾಯಿತಿಯ ಪ್ರಮುಖ ಯೋಜನೆಯಾಗಿದೆ ಈ ಯೋಜನೆಯು ಮುಖ್ಯ ಉದ್ದೇಶಗಳೂ ಈ ಕೆಳಗಿನಂತಿವೆ.

* ಗ್ರಾಮೀಣ ಪ್ರದೇಶದ ನಿರುದ್ಯೋಗಿ ಮತ್ತು ಅರೆ ನಿರುದ್ಯೋಗಿಗಳಿಗೆ ಹೆಚ್ಚುವರಿ ಉದ್ಯೋಗ ದೊರಕುವಂತೆ ಮಾಡುವುದು.
* ಬಡಕುಟುಂಬಗಳು ದೀರ್ಘಕಾಲದವರೆಗೆ ಬಳಸುವಂತಾಗುವ ಸಾಮೂಹಿಕ ಉತ್ಪಾದನೆಯ ಅಸ್ತಿಯನ್ನು ನಿರ್ಮಿಸುವುದು
* ಗ್ರಾಮೀಣ ಪ್ರದೇಶದ ಜನತೆಯ ಜೀವನ ಮಟ್ಟ ಸುಧಾರಿಸುವುದು.
* ಗ್ರಾಮಾಂತರ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಬಲಪಡಿಸುವುದು ಮತ್ತು ಬಡಜನತೆಯ ಆದಾಯ ಮಟ್ಟವನ್ನು ಹೆಚ್ಚುಸುವುದಾಗಿದೆ.

ಸಾಮಾನ್ಯವಾಗಿ ಈ ಯೋಜನೆಯ ಫಲಾನುಭವಿಗಳು ಈ ಕೆಳಗಿನಂತಿರುತ್ತಾರೆ.

* ಬಡತನದ ರೇಖೆಗಿಂತ ಕೆಳಗಿರುವವರು
* ಪರಿಶಿಷ್ಟ ಜಾತಿ/ಪಂಗಡಗಳಿಗೆ ಮೊದಲ ಆಧ್ಯತೆ
* ಮಹಿಳೆಯರಿಗೆ ಶೇ ೩೩ ರಷ್ಟು ಉದ್ಯೋಗಾವಕಾಶ
* ಪರಿಶಿಷ್ಟ ಜಾತಿ/ ಪಂಗಡಗಳಿಗೆ ಶೇ ೨೨.೫ ರಷ್ಟು ಮೊತ್ತವನ್ನು ವೈಯಕ್ತಿಕ ಸವಲತ್ತು ನೀಡುವ ಕೆಲಸಗಳಿಗೆ ವಿನಯೋಗಿಸಬೇಕು. ಈ ಯೋಜನೆಯಲ್ಲಿ ಜೀತವಿಮುಕ್ತರಿಗೆ ಫಲಾನುಭವಿಗಳ ಪಟ್ಟಿಯಲ್ಲಿ ಸೇರಿಸುವ ಅವಕಾಶವನ್ನು ಕಲ್ಪಿಸಲಾಗಿದೆ.

ಈ ಯೋಜನೆಯ ಅನುಷ್ಠಾನಕ್ಕಾಗಿ ಪಂಚಾಯತ್ ಸಂಸ್ಥೆಯ ಗ್ರಾಮ ಸಭೆಯಲ್ಲಿ ವಿವರವಾಗಿ ಚರ್ಚಿಸಿ ಫಲಾನುಭವಿಗಳನ್ನು ಗುರುತಿಸಬೇಕು. ಮತ್ತು ಅವರ ಪಟ್ಟಿಯನ್ನು ತಯಾರಿಸಬೇಕು. ಅಕಸ್ಮಾತ್ ಫಲಾನುಭವಿಗಳ ಹೆಸರನ್ನು ಬದಲಿಸಬೇಕಾಗಿ ಬಂದ ಸಂದರ್ಭದಲ್ಲಿಯೂ ಸಹ ಗ್ರಾಮ ಸಭೆಯಲ್ಲಿ ಚರ್ಚಿಸಿ ಒಪ್ಪಿಗೆಯನ್ನು ಪಡೆಯಬಹುದು.

ಯೋಜನೆಯ ಹಣಕಾಸು ಹಂಚಿಕೆ

ಜವಾಹರ ರೋಜಗಾರ್ ಯೋಜನೆಯ ಹಣವನ್ನು ನಿರ್ಧಿಷ್ಟ ಪಡಿಸಿದ ಕೆಲಸಗಳಿಗೆ ವಿನಿಯೋಗಿಸಬೇಕು.

* ಜಿ.ಆರ್.ವೈ. ಒಟ್ಟು ಅನುದಾನದಲ್ಲಿ ಶೇ ೫ ರಷ್ಟು ಹಣವನ್ನು ಆಡಳಿತ ವೆಚ್ಚಕ್ಕಾಗಿ ಪ್ರತಿವರ್ಷವೂ ಗ್ರಾಮ ಪಂಚಾಯಿತಿ ಉಪಯೋಗಿಸಬಹುದು.

* ಯೋಜನೆಯ ಒಟ್ಟು ಅನುದಾನದಲ್ಲಿ ಶೇ. ೨೨.೫ ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ/ ಪಂಗಡದವರ ನೆರವಿಗಾಗಿ ಉಪಯೋಗಿಸುವುದು.
* ಶೇ. ೩ ರಷ್ಟು ಹಣವನ್ನು ಅಂಗವಿಕಲರ ಮೂಲಭೂತ ಸೌಕರ್ಯಗಳನ್ನು ಒದಗಿಸಲು ವ್ಯಯಿಸಬೇಕು.
* ಒಟ್ಟು ಅನುದಾನದ ಶೇ. ೨೩ ರಷ್ಟು ಹಣವನ್ನು ಸಾಮಾಜಿಕ ಅರಣ್ಯ ಸಂರಕ್ಷಣೆಯನ್ನು ಕೈಗೊಳ್ಳಲು ವೆಚ್ಚ ಮಾಡಬಹುದು.
* ಸಾರ್ವಜನಿಕವಾಗಿ ಉಪಯೋಗವಾಗುವ ರಸ್ತೆ, ಕಟ್ಟಡಗಳು ಮುಂತಾದ ಕಾಮಗಾರಿಗಳಿಗೆ ಶೇ. ೨೫ ರಷ್ಟು ಹಣವನ್ನು ಬಳಸಬಹುದು. ಇದಲ್ಲದೆ ಗ್ರಾಮ ಪಂಚಾಯಿತಿಯ ಗ್ರಾಮ ಸಭೆಯ ಅನುಮೋದನೆಯೊಂದಿಗೆ ೫೦,೦೦೦ ರೂ ಗಳಷ್ಟು ಕಾಮಗಾರಿಗಳನ್ನು ಈ ಯೋಜನೆಯಡಿ ಅನುಷ್ಠಾನಗೊಳಿಸಬಹುದು.

ಮೇಲ್ಕಂಡ ರೀತಿಯಲ್ಲಿ ಅಭಿವೃದ್ಧಿ ಮತ್ತು ಸಾಗಣಿಕೆ ವೆಚ್ಚವು ಕೂಲಿಯ ಘಟಕದಿಂದ ಹೆಚ್ಚಿದಲ್ಲಿ ಬೇರೆ ರಾಜ್ಯದ ನಿಧಿಯಿಂದ ಅಥವಾ ವಂತಿಗೆಯಿಂದ ಭರಿಸಬಹುದು. ಸ್ಥಳಿಯ ಸಾಮಾಗ್ರಿಗಳ ಸಂಸ್ಕಾರಣಾ ವೆಚ್ಚವನ್ನು ಕೂಲಿಯ ಘಟಕದಲ್ಲಿ ಸೇರಿಸಬಹುದು. ಅದರೆ ಬೇರೆಡೆಯಿಂದ ತಂದ ಸಾಮಾಗ್ರಿಗಳ ಕುರಿತು ಈ ವೆಚ್ಚವನ್ನು ಭರಿಸಬಾರದು ಕೂಲಿ ಪ್ರಮಾಣ ಶೇ ೬೦ ರಷ್ಟು ಇಲ್ಲದಿದ್ದಲ್ಲಿ ಮತ್ತು ಶೇ. ೨೨.೫ ರಷ್ಟು ಪರಿಶಿಷ್ಟ ಜಾತಿ/ ಪಂಗಡಗಳಿಗೆ ಒದಗಿಸದಿದ್ದಲ್ಲಿ ಕ್ರಿಯಾ ಯೋಜನೆಯನ್ನು ಗ್ರಾಮ ಪಂಚಾಯಿತಿಗಳಿಗೆ ಹಿಂತಿರುಗಿಸಬಹುದು.

ಕೂಲಿ

ಕೂಲಿಯನ್ನು ಭಾಗಶಃ ಹಣ ಮತ್ತು ಆಹಾರ ಧಾನ್ಯಗಳ ರೂಪದಲ್ಲಿ ಕೊಡಲಾಗುವುದು ಒಂದು ದಿನಕ್ಕೆ ೧.೫ ಕೆ.ಜಿ ಯಷ್ಟು ಆಹಾರ ಧಾನ್ಯವನ್ನು ಕೊಡಲಾಗುತ್ತದೆ. ಈ ಯೋಜನೆಯಡಿ ಕೂಲಿಗಾಗಿ ೧೬ ರೂಪಾಯಿ ನಗದು ರೂಪದಲ್ಲಿ ನೀಡಬೇಕಾಗುತ್ತದೆ.

೫.೨.೨. ವಾರ್ಷಿಕ ಯೋಜನೆ

ಜವಹಾರ ಗ್ರಾಮ ಸಮೃದ್ಧಿ ಯೋಜನೆಗೆ ಗ್ರಾಮ ಪಂಚಾಯಿತಿಗಳಿಗೆ ಪ್ರತ್ಯೇಕವಾಗಿ ಅನುದಾನ ಬರುವುದರಿಂದ ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳು ಆದೇಶದಂತೆ ಅಭಿವೃದ್ಧಿ


ಬ್ಯಾಂಕ್ ಚೆಕ್‌ಗಳ ಮೇಲೆ ಕೂಲಿಕಾರರ ಸಹಿ ಪಡೆದು ಹಣವನ್ನು ತಾವು ತೆಗೆದುಕೊಳ್ಳುವುದು ಕಂಡುಬರುತ್ತದೆ. ಈ ಯೋಜನೆಯಡಿ ಕೆಲಸ ಮಾಡುವವರೇ ಬೇರೆಯಿದ್ದೂ ಕೂಲಿಯನ್ನೂ ಮತ್ತೊಬ್ಬರ ಹೆಸರಿನಲ್ಲಿ ಪಡೆಯುತ್ತಿರುವುದು. ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ಕಂಡುಕೊಳ್ಳಲಾಯಿತು. ಅದರಲ್ಲೂ ಗ್ರಾಮ ಪಂಚಾಯಿತಿ ಸದಸ್ಯರು ತಮ್ಮ ಬಂಧುಗಳ ಹೆಸರಿನಲ್ಲಿ ಹಸಿರು ಕಾರ್ಡ್‌ಗಳನ್ನು ಮಾಡಿಸಿರುವುದು ಬೆಳಕಿಗೆ ಬಂದಿದೆ. ಅಷ್ಟೇ ಅಲ್ಲ ತಮ್ಮ ಸಂಬಂಧಿಕರ ಹೆಸರಿನಲ್ಲಿಯೇ ಉದ್ಯೋಗ ಖಾತ್ರಿ ಕಾರ್ಡ್‌ಗಳನ್ನು ಪಡೆದಿರುವುದು ಕಂಡುಬರುತ್ತದೆ. ಈ ರೀತಿಯ ಲೋಪಗಳನ್ನು ಮನಗಂಡ ಸರ್ಕಾರವು ನಿಖರವಾದ ಫಲಾನುಭವಿಗಳನ್ನು ಗುರುತಿಸಲು ಸ್ಮಾರ್ಟ್ ಕಾರ್ಡ್‌ಗಳನ್ನು ಜಾರಿಗೆ ತರಬೇಕೆಂದು ಯೋಚಿಸುತ್ತಿದೆಯಾದರೂ ಅದು ಇಂದಿಗೂ ಅನುಷ್ಠಾನಗೊಳ್ಳದಿರುವುದು ಕಂಡು ಬಂದಿದೆ. ಒಟ್ಟಾರೆಯಾಗಿ ಸರ್ಕಾರ ಎಷ್ಟು ಪಾರದರ್ಶಕವಾಗಿ ಯೋಜನೆಗಳನ್ನು ರೂಪಿಸಲು ಪ್ರಯತ್ನಿಸಿದರೂ ಅದಕ್ಕೆ ಬುದ್ಧಿವಂತ ಮೇಲ್ವರ್ಗ ಅಥವಾ ಬಂಡವಾಳಶಾಹಿಗಳು ಮತ್ತೊಂದು ರೀತಿಯ ಷಡ್ಯಂತ್ರವನ್ನು ರೂಪಿಸುತ್ತಿರುವುದು ಕಂಡುಬರುತ್ತಿದೆ.

೨೦೦೧ರ ಜನಗಣತಿಯ ಅಂಕಿ ಅಂಶಗಳು ತಿಳಿಸುವಂತೆ ಪರಿಶಿಷ್ಟ ಪಂಗಡದ ಅರ್ಧದಷ್ಟು ಜನರು ದುಡಿಮೆಗಾರ ವರ್ಗದಲ್ಲಿದ್ದಾರೆ. ದುಡಿಮೆಗಾರರಲ್ಲಿ ಶೇಕಡ ೪೧.೭ರಷ್ಟು ಪ್ರಮಾಣದಲ್ಲಿ ಮಹಿಳೆಯರಿದ್ದಾರೆ. ಶೇಕಡ ೮೫ ಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ದುಡಿಮೆಗಾರರು ಗ್ರಾಮೀಣ ಪ್ರದೇಶದಲ್ಲಿದ್ದಾರೆ. ಪರಿಶಿಷ್ಟ ಪಂಗಡದ ಮುಖ್ಯ ಕೆಲಸಗಾರರು ಶೇಕಡ ೭೬.೪ರಷ್ಟಿದ್ದಾರೆ. ಬಹುತೇಕ ಶೇಕಡ ೫೧.೫ರಷ್ಟು ಮುಖ್ಯಕೆಲಸಗಾರರು ಗ್ರಾಮೀಣ ಪ್ರದೇಶದಲ್ಲಿ ಕೇಂದ್ರಿಕೃತವಾಗಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಮುಖ್ಯ ಕೆಲಸಗಾರರ ಪ್ರಮಾಣ (ಶೇಕಡ ೧೧.೫) ಅಧಿಕವಾಗಿದೆ. ಅದರ ನಂತರದ ಸ್ಥಾನ ರಾಯಚೂರಿಗೆ (೭.೮೦) ಸಲ್ಲುತ್ತದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಅತ್ಯಧಿಕ ಪರಿಶಿಷ್ಟ ಪಂಗಡವನ್ನು ಹೊಂದಿರುವ ರಾಯಚೂರು ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಅತಿ ಸಣ್ಣ ಕೆಲಸಗಾರರ ಪ್ರಮಾಣ (ಶೇ ೧೧.೭) ಅತ್ಯಧಿಕವಾಗಿದ್ದು ಈ ಪ್ರಮಾಣವು ರಾಯಚೂರು ಜಿಲ್ಲೆಯಲ್ಲಿನ ಆ ಜನರ ಜೀವನಾಧಾರ ಸ್ಥಿತಿಯನ್ನು ವ್ಯಕ್ತಪಡಿಸುತ್ತದೆ.

೫.೨.೪. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆಯ ಕೆಲಸಗಾರರ ವಿಂಗಡಣೆ - ೨೦೦೧ (ಶೇಕಡವಾರುಗಳಲ್ಲಿ)

ಪೈಚಾರ್ಟ್ ೫.೨.೪.



ಮುಖ್ಯವಾಗಿ ಬಳ್ಳಾರಿಯಲ್ಲಿಯ ಡುಂಗ್ರಿ ಗರಾಸಿಯಾ, ಮತ್ತು ಹಕ್ಕಿ ಪಿಕ್ಕಿಗಳು, ಮೇಧಾ ಸಮುದಾಯಗಳು ಭೂ ಹಿಡುವಳಿಯಿಂದ ದೂರವೇ ಉಳಿದಿವೆ. ಈ ಸಮುದಾಯಗಳೆಲ್ಲಾ ತಮ್ಮ ಕೈ ಕಸುಬನ್ನೇ ನಂಬಿ ಜೀವನ ನಡೆಸುತ್ತಿವೆ. ಆದರೆ ನಾಯಕ ಸಮುದಾಯ ಮಾತ್ರ ಅಲ್ಪ ಸ್ವಲ್ಪ ಕೃಷಿ ಭೂಮಿಯನ್ನೇ ನಂಬಿ ಜೀವನ ನಿರ್ವಹಣೆ ಮಾಡುತ್ತಿದೆ. ಅದರಾಚೆಗೆ ಕೆಲವು ಜನ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕದ ಒಟ್ಟು ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ, ಅದರಲ್ಲಿ ಪರಿಶಿಷ್ಟ ಪಂಗಡದ ಕೆಲಸಗಾರರನ್ನು ವಿಂಗಡಿಸಿದರೆ ದೊರೆಯುವ ಅಂಕಿ ಅಂಶಗಳನ್ನು ಶೇಕಡವಾರುಗಳಲ್ಲಿ ನೀಡಲಾಗಿದೆ. ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣವು ಶೇಕಡ ೪೯.೪೦ ಇದ್ದು ಇದರಲ್ಲಿ ಪುರುಷರು ಶೇಕಡ ೫೮.೩ ಮಹಿಳೆಯರು ಶೇಕಡ ೭೧.೭ ರಷ್ಟಿದ್ದಾರೆ. ಒಟ್ಟು ಪರಿಶಿಷ್ಟ



ಪಂಗಡದ ಜನಸಂಖ್ಯೆಯಲ್ಲಿ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಕೆಲಸಗಾರರನ್ನು ಕಾಣಬಹುದು. ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣ ಶೇಕಡ ೫೧.೫೦ ಇದ್ದು ಇದರಲ್ಲಿ ಪುರುಷರು ಶೇಕಡ ೫೭.೬೦ ಹಾಗೂ ಮಹಿಳೆಯರು ಶೇಕಡ ೪೫.೩೦ರಷ್ಟಿದ್ದಾರೆ. ಹಾಗೇ ನಗರ ಪ್ರದೇಶದಲ್ಲಿ ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣ ಶೇಕಡ ೩೭.೬೦ ಇದ್ದು ಇದರಲ್ಲಿ ಪುರುಷರು ಶೇಕಡ ೫೨.೬೦ ಹಾಗೂ ಮಹಿಳೆಯರು ಶೇಕಡ ೨೧.೯೦ರಷ್ಟಿದ್ದಾರೆ.

'೦' ವಯೋಮಾನದಿಂದ ೧೮ ವರ್ಷದವರೆಗಿನ ಮತ್ತು ೬೦ ವರ್ಷಕ್ಕೆ ಮೇಲ್ಪಟ್ಟವರನ್ನು ಕೆಲಸಗಾರರೆಂದು ಪರಿಗಣಿಸಿರುವುದಿಲ್ಲ. ಹೀಗಾಗಿ ಇಂತಹ ಕೆಲಸಗಾರರಲ್ಲದವರ ಒಟ್ಟು ಪ್ರಮಾಣ ಶೇಕಡ ೫೦.೬ರಷ್ಟಿದೆ.

ಮುಖ್ಯ ಕೆಲಸಗಾರರೆಂದು ಪರಿಗಣಿತವಾದವರ ಒಟ್ಟು ಪ್ರಮಾಣವು ಶೇಕಡ ೭೭.೯೦ರಷ್ಟಿದೆ. ಇದರಲ್ಲಿ ಗ್ರಾಮೀಣ ಪ್ರದೇಶದ ಒಟ್ಟು ಮುಖ್ಯಕೆಲಸಗಾರರು ಶೇಕಡ ೭೬.೪೦ರಷ್ಟಿದ್ದರೆ, ನಗರ ಪ್ರದೇಶದಲ್ಲಿ ಇವರ ಪ್ರಮಾಣವು ಶೇಕಡ ೮೯.೧೦ರಷ್ಟಿದೆ.

ಖಾಯಂ ಆಗಿ ವರ್ಷಪೂರ್ತಿ ಕೆಲಸವಿಲ್ಲದೆ ಅರೆಕಾಲಿಕ ಕೆಲಸಗಾರರಾಗಿ ದುಡಿಯುವವರ ಪ್ರಮಾಣವು ಒಟ್ಟು ಶೇಕಡ ೨೨.೧ ಇದ್ದು ಇದು ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇಕಡ ೨೩.೬೦ ರಷ್ಟಿದ್ದರೆ ನಗರ ಪ್ರದೇಶದಲ್ಲಿ ಇವರ ಪ್ರಮಾಣವು ಶೇಕಡ ೧೦.೯೦ರಷ್ಟಿದೆ.

ಭೂ ಹಿಡುವಳಿ

ಪರಿಶಿಷ್ಟ ಪಂಗಡಗಳು ಹೊಂದಿರುವ ಭೂಮಿಗಳು ಸಣ್ಣ ಹಿಡುವಳಿಯ ತುಂಡು ಭೂಮಿಗಳಾಗಿವೆ. ಅದರಲ್ಲೂ ಇವರ ಕೃಷಿ ಭೂಮಿಗಳು ಕೆಳಮಟ್ಟದ ಉತ್ಪಾದನೆಯನ್ನು ನೀಡುವ ಭೂಮಿಗಳೇ ಹೆಚ್ಚಾಗಿವೆ. ಇವರು ಹೆಚ್ಚಿನ ಆದಾಯ ತರುವ ಯಾವ ಹುದ್ದೆಯಲ್ಲೂ ಇರದಿರುವುದಕ್ಕೆ ಕಾರಣ ಇವರ ಕೆಳಮಟ್ಟದ ಸಾಕ್ಷರತೆ, ವೃತ್ತಿ ಕೌಶಲ್ಯಗಳ ಕೊರತೆ ಇರುವುದರಿಂದ ಕಡಿಮೆ ಸಂಭಾವನೆ ಬರುವಂಥ ಕೆಲಸಗಳಿಗೆ ಅವರು ತಳ್ಳಲ್ಪಟ್ಟಿದ್ದಾರೆ. ಅವರ ತಲಾವಾರು ಮಾಸಿಕ ವೆಚ್ಚವು ತಮ್ಮ ಅಗತ್ಯಕ್ಕಿಂತಲೂ ಕಡಿಮೆ ಕೂಲಿ ಪಡೆಯುತ್ತಿರುವುದನ್ನು ಪ್ರತಿನಿಧಿಸುತ್ತದೆ (ಮಾನವಾಭಿವೃದ್ಧಿ ವರದಿ ೨೦೦೫; ೨೬೦) ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡದವರಿಗೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿರುವ ಪರಿಶಿಷ್ಟ ಪಂಗಡದವರು ಸ್ವಲ್ಪ ಉತ್ತಮ ಸ್ಥಿತಿಯಲ್ಲಿದ್ದಾರೆ. ೨೦೦೧ ರ

ಜನಗಣತಿ ಪ್ರಕಾರ ಪರಿಶಿಷ್ಟ ಪಂಗಡದವರಲ್ಲಿ ಶೇಕಡ ೭.೬ ರಷ್ಟು ಸಾಗುವಳಿದಾರರಿದ್ದಾರೆ. ಶೇಕಡ ೧೧.೮೬ ರಷ್ಟು ಕೃಷಿ ಕಾರ್ಮಿಕರಿದ್ದರೆ ಶೇಕಡ ೪.೭೦ ಯಷ್ಟು ಗೃಹ ಸಂಬಂಧಿ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ.


ಪರಿಶಿಷ್ಟ ಪಂಗಡದ ಮಹಿಳೆಯರಲ್ಲಿ ಅಧಿಕ ಮಹಿಳೆಯರು, ಅಂದರೆ ಶೇಕಡ ೫೮.೮೦ ರಷ್ಟು ಮಹಿಳೆಯರು ಗೃಹ ಸಂಬಂದಿ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ. ಕೇವಲ ಶೇಕಡ ೫೯.೮೯ ರಷ್ಟು ಮಹಿಳೆಯರು ಮಾತ್ರ ಸಾಗುವಳಿದಾರರಾಗಿದ್ದಾರೆ.

"ಮಾದರಿ ಸಮೀಕ್ಷೆಯು ತಿಳಿಸುವಂತೆ ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಶೇಕಡ ೫೭.೩೯ ರಷ್ಟು ಕುಟುಂಬಗಳು ಭೂ ಒಡೆತನ ಹೊಂದಿವೆ. ಅದರಲ್ಲಿ ಶೇಕಡ ೭೪.೩೫ ರಷ್ಟು ಒಣಭೂಮಿಯಾಗಿದೆ. ರಾಜ್ಯದಲ್ಲಿ ಬಿತ್ತನೆಗೊಳ್ಳುವ ನೀರಾವರಿ ಕೃಷಿ ಭೂಮಿಯು ಶೇಕಡ ೨೧ ರಷ್ಟು ಮಾತ್ರವಾಗಿದೆ. (ಕೃಷಿ ಗಣತಿ ವರದಿ ೨೦೦೧)

೨೦೦೧ ರ ಕರ್ನಾಟಕ ಕೃಷಿ ಗಣತಿಯ ಪ್ರಕಾರ ಪರಿಶಿಷ್ಟ ಪಂಗಡದವರಲ್ಲಿ ಶೇಕಡ ೩೦.೯ ರಷ್ಟು ಅತಿ ಸಣ್ಣ ಹಿಡುವಳಿದಾರರು ಮತ್ತು ಶೇಕಡ ೧೯.೪ ರಷ್ಟು ಅರೆ ಮಧ್ಯಮ ಗಾತ್ರದ ಹಿಡುವಳಿದಾರರಿದ್ದಾರೆ ಈ ವಿಷಯದಲ್ಲಿ ಪರಿಶಿಷ್ಟ ಪಂಗಡದವರಿಗೆ ಮತ್ತು ಇತರರಿಗೆ ಅಷ್ಟೇನೂ ವ್ಯತ್ಯಾಸವಿಲ್ಲ.

ಕೋಷ್ಟಕ ೫.೨.೫. ಪರಿಶಿಷ್ಟ ಪಂಗಡದವರ ಗಾತ್ರವಾರು ಭೂ ಹಿಡುವಳಿ ಹೊಂದಿರುವವರ ಶೇಕಡವಾರು ವಿವರ (ಪೈಚಾರ್ಟ್)

ಕೃಪೆ: ೨೦೦೧ರ ಕೃಷಿ ಗಣತಿ



ಆದರೆ ಮಧ್ಯಮ (ಶೇಕಡ ೭.೯) ಮತ್ತು ದೊಡ್ಡ ಹಿಡುವಳಿಗಳ (ಶೇಕಡ ೧.೦) ಪ್ರಮಾಣ ಕಡಿಮೆ ಇದೆ. (ಮೇಲಿನ ಕೋಷ್ಟಕ ನೋಡಿ)

ಇಲ್ಲಿ ಗಮನಿಸಬೇಕಾದ ಅತಿ ಮುಖ್ಯವಾದ ಅಂಶವೆಂದರೆ ಬಹುಪಾಲು ಪರಿಶಿಷ್ಟ ಪಂಗಡಗಳು ಕಡಿಮೆ ಉತ್ಪಾದಕತೆಯ ಸಣ್ಣ ಘಟಕಗಳನ್ನು ಹೊಂದಿವೆ. ಅವು ಆರ್ಥಿಕವಾಗಿಯೂ ಲಾಭಕರವಲ್ಲ. ಆದ್ದರಿಂದಲೇ ಬಹುತೇಕ ಸಣ್ಣ ಹಿಡುವಳಿದಾರರು ಜೀವನ ನಿರ್ವಹಣೆಗಾಗಿ ಕೂಲಿ ಕಾರ್ಮಿಕ ವೃತ್ತಿಗೆ ತಳ್ಳಲ್ಪಟ್ಟಿದ್ದಾರೆ.

ವರಮಾನದ ವಿಚಾರವಾಗಿ ತಿಳಿಸಬಹುದೇನೆಂದರೆ ೧೯೯೯-೨೦೦೦ ಅಂಕಿ-ಅಂಶಗಳ ಪ್ರಕಾರ ಬಹುಪಾಲು ಗ್ರಾಮೀಣ ಪರಿಶಿಷ್ಟ ಪಂಗಡದ ಕುಟುಂಬಗಳ ವರಮಾನದ ಮೂಲವೆಂದರೆ ಕೃಷಿ ಕಾರ್ಮಿಕರಾಗಿ ಕೆಲಸಮಾಡುವುದು. (ಶೇಕಡ ೯.೭) ಸಾಗುವಳಿ (ಶೇಕಡ ೭.೭) ಮೀನುಗಾರಿಕೆ ಹಾಗೂ ಇತರ ಸಣ್ಣ ಪುಟ್ಟ ಉದ್ದಿಮೆಗಳು (ಶೇಕಡ ೧೧.೪) ಅವರ ವರಮಾನದ ಮೂಲಗಳಾಗಿವೆ.

ನಗರ ಪ್ರದೇಶದಲ್ಲಿಯ ಪರಿಶಿಷ್ಟ ಪಂಗಡದವರ ವಾರ್ಷಿಕ ತಲಾವಾರು ವರಮಾನ ರೂ ೧೦.೯೮೭ರಷ್ಟಾಗಿದ್ದರೆ ಗ್ರಾಮೀಣ ಪ್ರದೇಶದಲ್ಲಿಯ ಪರಿಶಿಷ್ಟ ಪಂಗಡದವರ ವಾರ್ಷಿಕ ತಲಾವಾರು ವರಮಾನ ಕೇವಲ ರೂ. ೪.೭೬ ಆಗಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರವೆಂದರೆ ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಪಂಗಡದ ಕುಟುಂಬಗಳ ಪೈಕಿ ಶೇಕಡ ೪೦ರಷ್ಟು ಕುಟುಂಬಗಳು ಬಡತನ ರೇಖೆಯ ಕೆಳಗಿನ ಕುಟುಂಬಗಳಾಗಿವೆ. ಇದೇ ನಗರ ಪ್ರದೇಶದ ಪರಿಶಿಷ್ಟ ಪಂಗಡದ ಕುಟುಂಬಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಪ್ರಮಾಣ ಶೇಕಡ ೨೫ ರಷ್ಟಾಗಿದೆ (ಮಾನವಾಭಿವೃದ್ಧಿ ವರದಿ: ೨೦೦೫:೨೬೧)

ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಪಂಗಡಗಳ ಜನರ ತಲಾವಾರು ಮಾಸಿಕ ವೆಚ್ಚವು ಅತ್ಯಂತ ಕಡಿಮೆ ಇದೆ. ಪರಿಶಿಷ್ಟ ಪಂಗಡಗಳ ತಲಾವಾರು ಮಾಸಿಕ ವೆಚ್ಚ ರೂ ೪೧೯ ಆಗಿದ್ದರೆ ಇತರರ ತಲಾವಾರು ವೆಚ್ಚ ರೂ ೫೦೦ ಆಗಿದೆ. ಇತರರ ಮಾಸಿಕ ತಲಾವಾರು ವೆಚ್ಚಕ್ಕೆ ಹೋಲಿಸಿದರೆ ಪರಿಶಿಷ್ಟ ಪಂಗಡದವರ ತಲಾವಾರು ವೆಚ್ಚವು ಅತ್ಯಂತ ಕಡಿಮೆಯಂದೇ ಹೇಳಬಹುದು. ನಗರವಾಸಿ ಪರಿಶಿಷ್ಟ ಪಂಗಡಗಳ ತಲಾವಾರು ಮಾಸಿಕ ವೆಚ್ಚವು ರೂ. ೬೩೪ ಆಗಿದ್ದು ನಗರವಾಸಿ ಇತರರಿಗೆ ಹೋಲಿಸಿದರೆ ಅವರ ತಲಾವಾರು ವೆಚ್ಚದ ಪ್ರಮಾಣ ಅತ್ಯಂತ ಕಡಿಮೆಯೆನಿಸುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡಗಳು ತಮ್ಮ ಜೀವನ ನಿರ್ವಹಣೆಗಾಗಿ ಕೃಷಿ ಕೂಲಿ ಮತ್ತು ಕೃಷಿಯನ್ನೇ ಆಧರಿಸಿರುವುದರಿಂದ ಅವರ ಮಾಸಿಕ ತಲಾವಾರು ವೆಚ್ಚವು ಕಡಿಮೆಯಾಗಿರುವುದು ಸಹಜವಾಗಿದೆ. ಸಾಮಾನ್ಯವಾಗಿ ಮಳೆಯಾಶ್ರಿತ ಕೃಷಿ ಚಟುವಟಿಕೆಗಳು ವರ್ಷದಲ್ಲಿ ಕೇವಲ ಆರು ತಿಂಗಳು ಮಾತ್ರ ಚುರುಕಾಗಿರುತ್ತದೆ. ಇನ್ನುಳಿದ ಆರು ತಿಂಗಳು ಕೃಷಿಕರಿಗೆ ಬೇರೆ ಯಾವುದೇ ಕೆಲಸವಿರುವುದಿಲ್ಲ. ಅದೂ ಮಳೆ ಬಂದರೆ ಮಾತ್ರ ಕೃಷಿ ಚಟುವಟಿಕೆಗಳು ನಡೆಯುತ್ತವೆ. ಮಳೆ ಸರಿಯಾಗಿ ಬಾರದೇ ಇದ್ದರೆ ಆ ಆರು ತಿಂಗಳು ಸಹ ಅಂತಹ ಹೇಳಿಕೊಳ್ಳುವಂತಹ ಕೆಲಸಗಳು ಇರುವುದಿಲ್ಲ. ಹೀಗಾಗಿ ಅನಿಶ್ಚಿತವಾದ ದುಡಿಮೆಯನ್ನೇ ಪರಿಶಿಷ್ಟ ಪಂಗಡದವರು ನೆಚ್ಚಿಕೊಂಡಿರಬೇಕಾಗುತ್ತದೆ. ಸಾಮಾನ್ಯವಾಗಿ ಬಳ್ಳಾರಿ ಜಿಲ್ಲೆಯಂತಹ ಬಿರುಬಿಸಿಲ ನಾಡಲ್ಲಿ ಕೃಷಿ ಚಟುವಟಿಕೆ ಪೂರ್ಣಗೊಂಡ ತರುವಾಯ ಸಣ್ಣ ಹಿಡುವಳಿದಾರ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಜೀವನೋಪಾಯಕ್ಕಾಗಿ ಚಿಕ್ಕಮಗಳೂರು ಮುಂತಾದ ಕಡೆಯ ಕಾಫಿ ಎಸ್ಟೇಟುಗಳಲ್ಲಿ ಕೂಲಿಗಳಾಗಿ ದುಡಿಯಲು ಹೋಗುತ್ತಾರೆ. ಇಲ್ಲವಾದರೆ ಕೂಲಿ ಕೆಲಸವನ್ನು ಹುಡುಕಿಕೊಂಡು ಬೆಂಗಳೂರು, ಗೋವಾ, ಹೈದರಾಬಾದ್ ಮುಂತಾದ ಕಡೆ ವಲಸೆ ಹೋಗುತ್ತಾರೆ. ಬಹುತೇಕ ಈ ರೀತಿ ವಲಸೆ ಹೋಗುವ ಅನಿವಾರ್ಯತೆ ಇರುವುದರಿಂದ ಇವರ ಮಕ್ಕಳು ಶಾಲೆಗೆ ಸಮರ್ಪಕವಾಗಿ ಹೋಗಲು ಸಾಧ್ಯವಾಗುವುದಿಲ್ಲ.

ಬಳ್ಳಾರಿ ಜಿಲ್ಲೆಯಲ್ಲಿ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ ತಾಲೂಕಿನ ತುಂಗಾಭದ್ರಾ ಆಣೆಕಟ್ಟಿನಿಂದ ಮೇಲ್ಭಾಗಕ್ಕೆ, ಒಣಬೇಸಾಯವನ್ನು ಅವಲಂಬಿಸಿದ ಗ್ರಾಮೀಣ ಪರಿಶಿಷ್ಟ ಪಂಗಡದವರು ಗೋವಾ, ಚಿಕ್ಕಮಗಳೂರು ಮುಂತಾದ ಕಡೆ ಕೂಲಿಯನ್ನು ಹುಡುಕಿಕೊಂಡು ವಲಸೆ ಹೋಗುವುದು ಸಹಜ. ಈ ರೀತಿ ವಲಸೆ ಹೋದವರು ಮರಳಿ ತಮ್ಮ ಗ್ರಾಮಗಳಿಗೆ ಮರಳುವುದು ಮಳೆಗಾಲಕ್ಕೆ.

ಪ್ರಸ್ತುತ ಬಳ್ಳಾರಿ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿರುವ ಪರಿಶಿಷ್ಟ ಪಂಗಡದ ಪಂಚಾಯತ್ ರಾಜ್ ವ್ಯವಸ್ಥೆಯ ಸದಸ್ಯರ ಆರ್ಥಿಕ ಸ್ಥಿತಿ-ಗತಿಗಳನ್ನು ಇಲ್ಲಿ ಗಮನಿಸಲಾಗಿದೆ.

ಮುಖ್ಯವಾಗಿ ಪರಿಶಿಷ್ಟ ಪಂಗಡದ ಬಹುತೇಕ ಮಹಿಳಾ ಸದಸ್ಯರ ಹೆಸರಿನಲ್ಲಿ ಯಾವುದೇ ಭೂ ಹಿಡುವಳಿ ಇಲ್ಲದಿರುವುದು ಕಂಡು ಬರುತ್ತದೆ. ಅದರಲ್ಲಿ ಬೆರಳೆಣಿಕೆಯಷ್ಟು ಸದಸ್ಯರ ಹೆಸರಿನಲ್ಲಿದ್ದರೂ ಅವೆಲ್ಲವೂ ತುಂಡು ಭೂಮಿಗಳಾಗಿವೆ.

ಭೂ ಹಿಡುವಳಿ ಹೊಂದಿದ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ವಿವರ

(ಶೇಕಡವಾರುಗಳಲ್ಲಿ)

ವಿವರ	ಭೂ ಹಿಡುವಳಿ ಹೊಂದಿದ ಸದಸ್ಯರು	ಭೂ ಹಿಡುವಳಿ ಹೊಂದದಿರುವ ಸದಸ್ಯರು
ಗ್ರಾ.ಪಂ.ಸದಸ್ಯರು	೧೫	೫೫
ತಾ.ಪಂ. ಸದಸ್ಯರು	೧೦	೧೫
ಜಿ.ಪಂ. ಸದಸ್ಯರು	೦೫	೦೦

ಒಟ್ಟು ೨೭ ಜನ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಲ್ಲಿ ಕೇವಲ ಶೇಕಡ ೩೦ರಷ್ಟು ಜನರಿಗೆ ಮಾತ್ರ ಭೂಮಿ ಇದ್ದು ಇನ್ನುಳಿದ ಶೇಕಡ ೭೦ರಷ್ಟು ಜನರಿಗೆ ಭೂಮಿಯೇ ಇಲ್ಲವೆಂಬುದು ಕ್ಷೇತ್ರಕಾರ್ಯದಲ್ಲಿ ತಿಳಿದುಬಂದಿದೆ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಒಟ್ಟು ೨೭ ಜನ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಲ್ಲಿ ಶೇಕಡ ೧೦ರಷ್ಟು ಜನರಿಗೆ ಎರಡು ಎಕರೆಯಷ್ಟು ಮಳೆಯಾಶ್ರಿತ ಒಣಭೂಮಿ ಇರುವುದು ಕಂಡುಬರುತ್ತದೆ. ಇನ್ನುಳಿದ ಶೇಕಡ ೧೫ರಷ್ಟು ಮಹಿಳಾ ಸದಸ್ಯರಿಗೆ ೩ ಎಕರೆಯಷ್ಟು ಭೂಮಿ ಕಂಡುಬರುತ್ತದೆ, ಶೇಕಡ ೧೫ರಷ್ಟು ಸದಸ್ಯೆರಿಗೆ ಕೇವಲ ಅರ್ಧ ಎಕರೆಯಷ್ಟು ಮಾತ್ರ ಭೂಮಿ ಇದೆ. ಇನ್ನುಳಿದಂತೆ ಶೇಕಡ ೬೦ರಷ್ಟು ಜನರಿಗೆ ಯಾವುದೇ ರೀತಿಯ ಭೂಮಿ ಕಂಡು ಬಂದಿಲ್ಲ.

ಕೋಷ್ಟಕ ೫.೨.೬. ಪರಿಶಿಷ್ಟ ಪಂಗಡದ ಪಂಚಾಯತ್‌ರಾಜ್ ವ್ಯವಸ್ಥೆಯ ಮಹಿಳಾ ಸದಸ್ಯರ ಸಂಬಂಧಿಕರ ಹೆಸರಿನಲ್ಲಿರುವ ಭೂಮಿಯ ವಿವರ

(ಶೇಕಡವಾರುಗಳಲ್ಲಿ)

	ಗಂಡ	ತಂದೆ	ಮಾವ	ಭೂಮಿ ಇಲ್ಲ
ಗ್ರಾಮ ಪಂಚಾಯತ್	೨೯.೬	೭.೪೦	೧೪.೮೦	೧೮.೦೦
ತಾಲೂಕು ಪಂಚಾಯತ್	೧೧.೭೦	೭.೪೦	೩.೭೦	೦೦
ಜಿಲ್ಲಾ ಪಂಚಾಯತ್	೩.೭೦	೦೦	೩.೭೦	೦೦

ಗ್ರಾಮ ಪಂಚಾಯತ್ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಶೇಕಡ೨೯.೬೦ ಜನ ಗಂಡಂದಿರ ಹೆಸರಿನಲ್ಲಿ ಭೂಮಿ ಇರುವುದು ಕಂಡು ಬರುತ್ತದೆ. ಇದರಲ್ಲಿ ಹೊಸಪೇಟೆ ಗ್ರಾಮ ಪಂಚಾಯತ್ ಸದಸ್ಯರ ಗಂಡಂದಿರಲ್ಲಿ ಇಬ್ಬರಿಗೆ ಎರಡು ಎಕರೆಯಷ್ಟು ಭೂಮಿ ಇದೆ. ರಾಮಸಾಗರದ ಒಬ್ಬ ಸದಸ್ಯೆಯ ಗಂಡನಿಗೆ ೨ ಎಕರೆ ನೀರಾವರಿ ಭೂಮಿ ಇದ್ದು ಈ ಭೂಮಿ ಹಿಂದೆ ಟೆನೆನ್ಸಿ ಆಕ್ಟ್‌ನಲ್ಲಿ ಈತನ ವಶವಾದುದಾಗಿ ತಿಳಿದು ಬರುತ್ತದೆ. ಇನ್ನೊಬ್ಬರು ಡಣಾಯಕನ ಕೆರೆ ಗ್ರಾಮ ಪಂಚಾಯತಿ ಸದಸ್ಯೆಯ ಗಂಡನ ಹೆಸರಿನಲ್ಲಿ ಮಳೆಯಾಧಾರಿತ ಒಣ ಭೂಮಿಯು ಎರಡು ಎಕರೆಗಳಷ್ಟಿದೆ. ಮಾವನ ಹೆಸರಿನಲ್ಲಿ ೧.೭೫ರಷ್ಟು ಭೂಮಿ ಇದೆ.

ಸಿರುಗುಪ್ಪದ ಗ್ರಾಮ ಪಂಚಾಯತಿಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಪೈಕಿ ಕೊಂಚಗೇರಿಯ ಸದಸ್ಯೆಯ ಗಂಡನ ಹೆಸರಿನಲ್ಲಿ ೧.೫ ಎಕರೆಗಳಷ್ಟು ಕೃಷಿ ಯೋಗ್ಯ ಭೂಮಿ ಇರುವುದು ಕಂಡು ಬರುತ್ತದೆ. ಇನ್ನೊಬ್ಬ ಸದಸ್ಯೆಯ ಮಾವನ ಹೆಸರಿನಲ್ಲಿ ೨.೫ ಎಕರೆ ಭೂಮಿ ಇರುವುದು ಕಂಡು ಬರುತ್ತದೆ. ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿರುವ ಗ್ರಾ. ಪಂ. ಸದಸ್ಯರ ಪೈಕಿ ಬಾಚಿಕೊಂಡನಹಳ್ಳಿಯ ಸದಸ್ಯೆಯ ಗಂಡನ ಹೆಸರಿನಲ್ಲಿ ೩ ಎಕರೆಗಳಷ್ಟು ಭೂಮಿ ಇದ್ದರೆ, ಇನ್ನೊಬ್ಬ ಸದಸ್ಯೆಯ ಗಂಡನ ಹೆಸರಿನಲ್ಲಿ ೨ ಎಕರೆಗಳಷ್ಟು ಒಣ ಭೂಮಿ ಇರುವುದು ಕಂಡುಬರುತ್ತದೆ ಹಾಗೇ ಒಬ್ಬ ಸದಸ್ಯೆಯ ಮಾವನ ಹೆಸರಿನಲ್ಲಿ ೪ ಎಕರೆ ಮಳೆಯಾಶ್ರಿತ ಒಣ ಭೂಮಿ ಇದೆ.

ಕೂಡ್ಲಿಗಿ ತಾಲೂಕಿನ ಒಬ್ಬ ಸದಸ್ಯೆಯ ಗಂಡನ ಹೆಸರಿನಲ್ಲಿ ಮೂರು ಎಕರೆ ಭೂಮಿ ಕಂಡು ಬಂದರೆ ಇನ್ನೊಬ್ಬ ಸದಸ್ಯೆಯ ಮಾವನ ಹೆಸರಿನಲ್ಲಿ ೨.೫ ಎಕರೆ, ಜನ ಮಾವನವರ ಹೆಸರಿನಲ್ಲಿ ೨ ಎಕರೆ ಹಾಗೂ ಜನ ತಂದರೆಯವರ ಹೆಸರಿನಲ್ಲಿ ೫ ಎಕರೆಗಳ ಒಳಗೆ ಭೂಮಿ ಇರುವುದು ಕಂಡುಬರುತ್ತದೆ.

ಇನ್ನುಳಿದ ಐದು ಜನ ಪರಿಶಿಷ್ಟ ಪಂಗಡದ ಗ್ರಾಮ ಪಂಚಾಯತ್ ಸದಸ್ಯರ ಹೆಸರಿನಲ್ಲಾಗಲಿ ಅವರ ಕುಟುಂಬದ ಯಾರೊಬ್ಬ ಸದಸ್ಯರ ಹೆಸರಿನಲ್ಲಾಗಲೀ ಯಾವುದೇ ಕೃಷಿ ಭೂಮಿ ಇರುವುದಿಲ್ಲ. ಇವರಲ್ಲಿ ನಾಲ್ಕು ಜನ ಗುತ್ತಿಗೆಯಾಧಾರದಲ್ಲಿ ಕೃಷಿ ಮಾಡುತ್ತಾರೆ. ಇಬ್ಬರು ಹೊಸಪೇಟೆ ತಾಲೂಕಿನವರಾಗಿದ್ದು ಇನ್ನಿಬ್ಬರು ಸಿರುಗುಪ್ಪ ತಾಲೂಕಿನವರಾಗಿದ್ದಾರೆ. ಈ ನಾಲ್ಕು ಜನ ಸದಸ್ಯರ ಕುಟುಂಬದವರು ಬೇರೆಯವರ ಭೂಮಿಯನ್ನು ಗುತ್ತಿಗೆಯಾಧಾರದಲ್ಲಿ ಕೃಷಿ ಮಾಡುವುದು ಕಂಡು

ಬರುತ್ತದೆ. ಹೊಸಪೇಟೆ ತಾಲೂಕಿನ ನಂ.೧೦ ಮುದ್ದಾಪುರ, ಮತ್ತು ಇತರ ಕಡೆ ಮೂರು ಎಕರೆ ಒಬ್ಬರೂ, ಎರಡು ಎಕರೆ ಒಬ್ಬರು ಕೃಷಿ ಮಾಡುತ್ತಿದ್ದಾರೆ.

ಸಿರುಗುಪ್ಪ ತಾಲೂಕಿನ ಇಬ್ಬರಲ್ಲಿ ೪ ಎಕರೆ ಒಬ್ಬರು, ೫ ಎಕರೆ ಒಬ್ಬರು ಕೃಷಿ ಮಾಡುತ್ತಾರೆ. ಹೊಸಪೇಟೆ ತಾಲೂಕಿನವರು ಬಾಳೆ ಬೆಳೆಯನ್ನು ಬೆಳೆದರೆ ಸಿರಗುಪ್ಪ ತಾಲೂಕಿನ ಗುತ್ತಿಗೆಯಾಧಾರಿತ ಕೃಷಿಕರು ಭತ್ತವನ್ನು ಬೆಳೆಯುತ್ತಾರೆ.

ಇನ್ನೊಬ್ಬ ಸದಸ್ಯರು ಕೂಡ್ಲಿಗಿ ತಾಲೂಕಿನರಾಗಿದ್ದು ಅವರಿಗೆ ಯಾವುದೇ ಕೃಷಿ ಭೂಮಿ ಇರುವುದಿಲ್ಲ. ಸಣ್ಣ ಪುಟ್ಟ ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದ ಇವರು ತಮ್ಮ ಕುಟುಂಬದ ಸದಸ್ಯೆ ಗ್ರಾಮ ಪಂಚಾಯ್ತಿ ಸದಸ್ಯೆಯಾದ ತರುವಾಯ ತಮ್ಮ ವಾರ್ಡಿನ ಸಣ್ಣ ಪುಟ್ಟ ಕಾಮಗಾರಿ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಇದರಿಂದ ಇವರ ಆರ್ಥಿಕ ಸ್ಥಿತಿ ಅಲ್ಪಮಟ್ಟಿಗೆ ಸುಧಾರಿಸಿದೆಯಂದೂ ತಿಳಿಸುತ್ತಾರೆ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ತಾಲೂಕು ಪಂಚಾಯ್ತಿ ಪರಿಶಿಷ್ಟ ಪಂಗಡದ ಶೇಕಡ ಆರು ಮಹಿಳಾ ಸದಸ್ಯರ ಒಬ್ಬರಿಗೆ ಮಾತ್ರ ಒಂದು ಎಕರೆಯಷ್ಟು ಕೃಷಿ ಭೂಮಿ ಇದೆ, ಇವರ ಹೊರತಾಗಿ ಯಾರ ಹೆಸರಿನಲ್ಲಿಯೂ ಯಾವುದೇ ಕೃಷಿ ಭೂಮಿ ಮುಂತಾದವುಗಳಿಲ್ಲ. ಆದರೆ ಅವರ ಗಂಡ, ಮಾವ, ತಂದೆಯ ಹೆಸರಿನಲ್ಲಿ ಭೂಮಿ ಇರುವುದು ಕಂಡು ಬಂದಿದೆ. ಒಟ್ಟು ಆರು ಜನ ಸದಸ್ಯರಲ್ಲಿ ಹೊಸಪೇಟೆ ಒಬ್ಬ ಸದಸ್ಯರಿಗೆ ಹಾಗೂ ಸಿರಗುಪ್ಪದ ಒಬ್ಬ ಸದಸ್ಯರ ಗಂಡಂದಿರ ಹೆಸರಿನಲ್ಲಿ ನೀರಾವರಿ ಕೃಷಿ ಭೂಮಿ ಇರುವುದರಿಂದ ಸ್ವಲ್ಪ ಸ್ಥಿರಿವಂತರಾಗಿ ಕಂಡು ಬರುತ್ತಾರೆ. ಹಾಗೇ ಕೂಡ್ಲಿಗಿಯ ಒಬ್ಬ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಗಂಡನಿಗೂ ೫ ಎಕರೆ ಭೂಮಿ ಇದ್ದು, ಇತ್ತೀಚೆಗೆ ಅದಕ್ಕೆ ಕೊಳವೆ ಬಾವಿ ಕೊರಸಿರುವುದರಿಂದ ಭೂಮಿಯಲ್ಲಿ ಕೃಷಿ ಚಟುವಟಿಕೆ ನಡೆಸಲು ಸಾಧ್ಯವಾಗಿದೆ ಎಂದು ತಿಳಿಸುತ್ತಾರೆ. ಇದೇ ತಾಲೂಕಿನ ಇನ್ನೊಬ್ಬ ಮಹಿಳಾ ಸದಸ್ಯೆಯ ತಂದೆಯ ಹೆಸರಿನಲ್ಲಿ ೩ ಎಕರೆ ಭೂಮಿ ಇದ್ದು ಅವರ ಮನೆಯಲ್ಲಿಯೇ ಮಹಿಳಾ ಸದಸ್ಯೆಯೂ ವಾಸಿಸುತ್ತಿರುವುದು.

ಹಗರಿಬೊಮ್ಮನಹಳ್ಳಿಯ ತಾಲೂಕು ಪಂಚಾಯ್ತಿಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯೆಯ ಹೆಸರಿನಲ್ಲಿ ಯಾವುದೇ ಭೂಮಿ ಇರದೇ ಇದ್ದರೂ ಕುಟುಂಬದ ಹಿರಿಯ ಸದಸ್ಯರಾದ ಅವರ

ಮಾವನ ಹೆಸರಿನಲ್ಲಿ ೪ ಎಕರೆ ಭೂಮಿ ಇದ್ದು ಇವರೂ ಸಹ ಕೊಳವೆ ಬಾವಿಯ ಲಾಭ ಪಡೆದುಕೊಂಡು ಕೃಷಿ ಮಾಡುತ್ತಿದ್ದಾರೆ.

ಜಿಲ್ಲಾ ಪಂಚಾಯಿತ್ತಿಯ ಪರಿಶಿಷ್ಟ ಪಂಗಡದ ಇಬ್ಬರು ಸದಸ್ಯರಿಗೂ ಯಾವ ತರಹದ ಕೃಷಿ ಭೂಮಿ ಇತ್ಯಾದಿ ಇಲ್ಲವಾದರೂ ಒಬ್ಬ ಮಹಿಳೆಯ ಗಂಡನ ಹೆಸರಿನಲ್ಲಿ ೫ ಎಕರೆ ಕೃಷಿ ಭೂಮಿ ಇದ್ದರೆ ಇನ್ನೊಬ್ಬ ಮಹಿಳೆಯ ಮಾವನ ಹೆಸರಿನಲ್ಲಿ ೬ ಎಕರೆ ಭೂಮಿ ಇದೆ. ಇವೆರಡೂ ಭೂಮಿಗಳು ಮೊದಲು ಮಳೆಯಾಧಾರಿತ ಭೂಮಿಯಾಗಿದ್ದರೂ ಇತ್ತೀಚೆಗೆ ಕೊಳವೆ ಬಾವಿಯನ್ನು ಕೊರಸಿ ನೀರಾವರಿ ಭೂಮಿಯಾಗಿ ಪರಿವರ್ತಿಸಿಕೊಂಡು ಅದರಲ್ಲಿ ಕೃಷಿ ಚಟುವಟಿಕೆ ನಡೆಸುತ್ತಿದ್ದಾರೆ. ಆದರೆ ಕೊಳವೆ ಬಾವಿಯನ್ನು ಹೊಂದಿರುವ ಎಲ್ಲಾ ಸದಸ್ಯರ ಸಮಸ್ಯೆ ವಿದ್ಯುತ್ ಆಗಿದೆ. ಸಮರ್ಪಕವಾಗಿ ಕೃಷಿ ಭೂಮಿಗೆ ಕೊಳವೆ ಬಾವಿಯ ನೀರು ಹರಿಸಬೇಕಾದರೆ ವಿದ್ಯುತ್ ಅತಿ ಅವಶ್ಯಕಬೇಕು. ಆದರೆ ಹಳ್ಳಿಗಳಲ್ಲಿ ದಿನದ ಇಪ್ಪತ್ನಾಲ್ಕು ತಾಸುಗಳಲ್ಲಿ ಕೇವಲ ಆರು ತಾಸು ಮಾತ್ರ ವಿದ್ಯುತ್ ಸರಬರಾಜಾಗುತ್ತದೆ. ಆರು ತಾಸು ವಿದ್ಯುತ್ ಒದಗಿಸಿದರೂ ಅದು ಸಮರ್ಪಕವಾಗಿರುವುದಿಲ್ಲ. ಭೂಮಿಯಲ್ಲಿ ಹೇರಳವಾಗಿ ನೀರಿದ್ದರೂ ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಾಧ್ಯವಾಗದ ಸ್ಥಿತಿ ಇವರಿದಾಗಿದೆ. ಹೀಗಾಗಿ ವರ್ಷದ ಕೆಲವೇ ಕೆಲವು ತಿಂಗಳು ಮಾತ್ರ ಮೆಕ್ಕೆಜೋಳ, ಜೋಳ, ಇತ್ಯಾದಿ ಬೆಳೆಯುವರಾದರೂ ಇನ್ನುಳಿದ ದಿನಗಳಲ್ಲಿ ಕೇವಲ ಅಲ್ಪ ಪ್ರಮಾಣದ ತರಕಾರಿಗಳನ್ನು ಬೆಳೆಯುವುದರಲ್ಲಿಯೇ ಸಂತೃಪ್ತಿ ಹೊಂದಬೇಕಾದ ಸ್ಥಿತಿ ಇವರದಾಗಿದೆ.

೫.೨.೭. ಕರ್ನಾಟಕದ ಪರಿಶಿಷ್ಟ ಪಂಗಡದವರ ವಸತಿ ವಿವರ

ಕರ್ನಾಟಕದಲ್ಲಿ ಒಟ್ಟು ೫೦ ಅನುಸೂಚಿತ ಪರಿಶಿಷ್ಟ ಪಂಗಡಗಳಿವೆ. ಆದರೆ ಅನುಸೂಚಿತವಲ್ಲದ ಎಷ್ಟೋ ಪರಿಶಿಷ್ಟ ಪಂಗಡಗಳು ಕಂಡುಬರುತ್ತವೆ. ಪ್ರಸ್ತುತ ಇಲ್ಲಿ ಅನುಸೂಚಿತ ಪರಿಶಿಷ್ಟ ಪಂಗಡಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡಿದ್ದು ಕರ್ನಾಟಕದ ಒಟ್ಟಾರೆ. ಪರಿಶಿಷ್ಟ ಪಂಗಡಗಳ ವಸತಿ ರೂಪು ರೇಷೆಗಳನ್ನು ಈ ರೀತಿ ವರ್ಗೀಕರಿಸಲಾಗಿದೆ.

ಕೋಷ್ಟಕ ೫.೨.೭. ಕರ್ನಾಟಕದ ಪರಿಶಿಷ್ಟ ಪಂಗಡದವರ ವಸತಿ ವಿವರ

(ಶೇಕಡವಾರುಗಳಲ್ಲಿ)

ಶಾಶ್ವತ	ಅರೆ ಶಾಶ್ವತ	ತಾತ್ಕಾಲಿಕ
೬೬.೯	೨೩.೧	೧೦.೦

ಕರ್ನಾಟಕದ ಒಟ್ಟು ಪರಿಶಿಷ್ಟ ಪಂಗಡಗಳಲ್ಲಿ ಈ ಹಿಂದೆ ಶಾಶ್ವತ ಮನೆಗಳು ಕಂಡು ಬರುವುದು ಅತ್ಯಲ್ಪವಾಗಿತ್ತು. ಕೇವಲ ಹುಲ್ಲಿನ ಗುಡಿಸಲು, ತಾಳೆಗರಿ ಗುಡಿಸಲುಗಳ ಪ್ರಮಾಣವೇ ಶೇಕಡ ತೊಂಭತ್ತ ರಷ್ಟಿದ್ದಿತು. ಆದರೆ ಇತ್ತೀಚಿನ ಎರಡು ದಶಕಗಳೀಚೆಗೆ ಸರ್ಕಾರ ಕೊಡಮಾಡುವ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಮುಂತಾದ ವಸತಿ ಯೋಜನೆಗಳ ಲಾಭ ಪಡೆದ

ಪರಿಶಿಷ್ಟ ಪಂಗಡಗಳು ತಮ್ಮ ಹುಲ್ಲು ಮನೆಯ ಬದಲಾಗಿ ಶಾಶ್ವತವಾದ ಮನೆಗಳನ್ನು ಕಾಣುವಂತಾಗಿದೆ.

ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಸಬಲರಾದವರು ಸರ್ಕಾರದ ಯೋಜನೆಗಳ ಗೊಡವೆಗೆ ಹೋಗದೆ ಸ್ವತಂತ್ರವಾಗಿ ಮನೆಗಳನ್ನು ನಿರ್ಮಿಸಿಕೊಂಡ ಉದಾಹರಣೆಗಳು ಉಂಟು. ಒಟ್ಟಾರೆಯಾಗಿ ಪಕ್ಕಾ (ಶಾಶ್ವತ) ಮನೆಗಳನ್ನು ಹೊಂದಿದ ಪರಿಶಿಷ್ಟ ಪಂಗಡಗಳ ಪ್ರಮಾಣ ಶೇಕಡ ೬೬.೯ರಷ್ಟಿದೆ. ಅರೆ ಶಾಶ್ವತ ಅಂದರೆ ಕೆಳ ಭಾಗವೆಲ್ಲಾ ಕಲ್ಲು ಅಥವಾ ಇಟ್ಟಿಗೆ ಗೋಡೆಗಳನ್ನು ನಿರ್ಮಿಸಿಕೊಂಡಿದ್ದು ಮೇಲ್ಭಾಗದಲ್ಲಿ ಹುಲ್ಲು ಮುಂತಾದ ತಾತ್ಕಾಲಿವಾದ ಮೇಲು ಹೊದಿಕೆ ಹೊಂದಿದ ಮನೆಗಳ ಪ್ರಮಾಣ ಶೇಕಡ ೧೧.೮ ರಷ್ಟಿದೆ. ಇನ್ನೂ ತಾತ್ಕಾಲಿಕವಾದ ಗುಡಿಸಲು ರಚಿಸಿಕೊಂಡು ಜೀವಿಸುವ ಪರಿಶಿಷ್ಟ ಪಂಗಡಗಳಿದ್ದು ಬಹುತೇಕ ಅವು ಕಾಡಿನಲ್ಲಿ ವಾಸಿಸುವ ಬುಡಕಟ್ಟುಗಳಾಗಿವೆ. ಇಂತಹ ಸಮುದಾಯಗಳ ಮನೆಗಳು ಶೇಕಡ ೧೦.೦ರಷ್ಟಿವೆ. (ಮಾನವಾಭಿವೃದ್ಧಿ ವರದಿ; ೨೦೦೫; ೨೦೫)

ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡಗಳನ್ನು ಗಮನಿಸಿದರೆ, ಡುಂಗ್ರಿ ಗರಾಸಿಯ ಮತ್ತು ಹಕ್ಕಿ ಪಿಕ್ಕಿಗಳು ಇನ್ನು ತಾತ್ಕಾಲಿಕವಾದ ಕಚ್ಚಾ ಮನೆಗಳಲ್ಲಿ ಹಾಗೂ ತಾತ್ಕಾಲಿಕವಾದ ಗುಡಸಲಿನಲ್ಲಿ ವಾಸಿಸುತ್ತಿವೆ. ಇವುಗಳ ಹೊರತಾಗಿ ಮೇಧಾ ಹಾಗೂ ನಾಯಕ ಸಮುದಾಯದವರು ಸ್ವಂತ ಮನೆಗಳನ್ನು ಹೊಂದಿದ್ದು ಸರ್ಕಾರದ ವಸತಿ ಯೋಜನೆಗಳ ಲಾಭ ಪಡೆದು ಇದ್ದುದರಲ್ಲಿಯೇ

ಸಂಪೂರ್ಣವಾಗಿ ಇಲ್ಲದಿದ್ದರೂ ವಾಸಕ್ಕೆ ಯೋಗ್ಯವಾದ ಮನೆಗಳನ್ನು ನಿರ್ಮಿಸಿಕೊಳ್ಳಲು ಯಶಸ್ವಿಯಾಗಿದ್ದಾರೆ. ಪ್ರಸ್ತುತ ಬಳ್ಳಾರಿ ಜಿಲ್ಲೆಯ ಪಂಚಾಯತ್‌ರಾಜ್ ವ್ಯವಸ್ಥೆಯ ಸದಸ್ಯರಾಗಿ ಆಯ್ಕೆಯಾದ ಪರಿಶಿಷ್ಟ ಪಂಗಡಗಳ ಮಹಿಳೆಯರ ಕುಟುಂಬಗಳ ವಸತಿಗಳ ಕುರಿತು ಇಲ್ಲಿ ನೋಡಲಾಗಿದೆ.

೫.೨.೭.೧. ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ವಸತಿ ವಿವರ

ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಲ್ಲಿ ಶೇ. ೧೯% ಜನ ಗ್ರಾಮ ಪಂಚಾಯ್ತಿ ಸದಸ್ಯರ ಪೈಕಿ ಶೇ.೬ ಜನ ಸದಸ್ಯರ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಸಣ್ಣ ಪ್ರಮಾಣದ ಮಣ್ಣಿನ ಮಾಳಿಗೆ ಮನೆಗಳಿದ್ದು, ಇವರು ಸದಸ್ಯರಾದ ತರುವಾಯ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಂಡಿದ್ದಾರೆ. ಬದಲಾವಣೆಯೆಂದರೆ ಗೋಡೆಗಳಿಗೆ ಸಿಮೆಂಟಿನಿಂದ ಪ್ಲಾಸ್ಟಿಂಗ್ ಮಾಡಿಕೊಂಡಿರುವುದು, ನೆಲಕ್ಕೆ ಕರಿಬಂಡೆ ಹಾಸನ್ನು ಹಾಕಿಸಿರುವುದು, ಇನ್ನು ಕೆಲವರು ನೆಲಕ್ಕೆ ಗಾರೆಯನ್ನು ಹಾಕಿಸಿರುವುದು ಮುಂತಾದ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ಇನ್ನುಳಿದ ಮೂರು ಜನ ಸದಸ್ಯರ ಕುಟುಂಬದವರು ತಮ್ಮ ಹಳೆ ಮನೆಯ ಬದಲಿಗೆ ಬೇರೆ ಹೊಸ ಮನೆಗಳನ್ನು ಕಟ್ಟಿಸಿಕೊಂಡಿರುವುದಾಗಿ ತಿಳಿಸುತ್ತಾರೆ. ಈ ಒಂಭತ್ತು ಜನಗಳ ಹೊರತಾಗಿ ಇನ್ನುಳಿದ ಹತ್ತು ಜನ ಸದಸ್ಯರ ಕುಟುಂಬಗಳು ಸರ್ಕಾರ ನೀಡುವ ಆಶ್ರಯ, ಅಂಬೇಡ್ಕರ್ ಮುಂತಾದ ಹೆಸರಿನ ಯೋಜನೆಗಳ ಲಾಭ ಪಡೆದು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ಇನ್ನುಳಿದ ತಾಲೂಕು ಪಂಚಾಯ್ತಿ ಸದಸ್ಯರಲ್ಲಿ ಕೂಡ್ಲಿಗಿ ತಾಲೂಕಿನ ಸದಸ್ಯೆಯೊಬ್ಬ ಗಂಡ (ರಾಮದುರ್ಗ) ತಮ್ಮ ಹೊಲದಲ್ಲಿಯೇ ಒಂದು ಹೊಸ ಮನೆ ಕಟ್ಟಿಸಿಕೊಂಡು ಆ ಮನೆಯಲ್ಲಿ ತಮ್ಮ ಕುಟುಂಬದೊಂದಿಗೆ ವಾಸಿಸುತ್ತಿದ್ದಾರೆ. ತಮ್ಮ ಹಳ್ಳಿಯಲ್ಲಿದ್ದ ಪಿತ್ರಾರ್ಜಿತ ಮನೆಯನ್ನು ತಮ್ಮ ತಮ್ಮನವರಿಗೆ ಅವರು ಬಿಟ್ಟುಕೊಟ್ಟಿದ್ದಾರೆ.

ಇನ್ನುಳಿದಂತೆ ಹೊಸಪೇಟೆಯ ಒಬ್ಬ ಸದಸ್ಯೆಯು ತನ್ನ ಗಂಡನಿಗೆ ಪಿತ್ರಾರ್ಜಿತವಾಗಿ ಬಂದ ಮನೆಯಲ್ಲಿ ವಾಸಿಸುತ್ತಿದ್ದಾರೆ ಹಾಗೂ ಹಗರಿಬೊಮ್ಮನಹಳ್ಳಿಯ ಸದಸ್ಯೆ ಕೂಡ ಅದೇ ರೀತಿ

ಗಂಡನ ಪಿತ್ರಾರ್ಜಿತ ಮನೆಯಲ್ಲಿ ವಾಸಿಸಿದರೆ ಸಿರಗುಪ್ಪದ ಇಬ್ಬರು ಸದಸ್ಯರು ಹಾಗೂ ಕೂಡ್ಲಿಗಿಯ ಇಬ್ಬರು ಸದಸ್ಯರು ಸರ್ಕಾರ ಯೋಜನೆಯಲ್ಲಿ ದೊರೆತ ಆಶ್ರಯ ಮನೆಗಳಲ್ಲಿ ವಾಸಿಸುತ್ತಿದ್ದು ಇತ್ತೀಚೆಗೆ ತಾವು ತಾಲೂಕು ಪಂಚಾಯ್ತಿ ಸದಸ್ಯರಾದ ತರುವಾಯ ಅ ಮನೆಗಳನ್ನು ನವೀಕರಿಸಿಕೊಂಡಿದ್ದಾರೆ.

ಕರ್ನಾಟಕದ ಪರಿಶಿಷ್ಟ ಪಂಗಡದ ಕುಟುಂಬಗಳು ಶೌಚಾಲಯ ಸೌಲಭ್ಯ ಪಡೆದ ವಿವರ


ಕರ್ನಾಟಕದ ೫೦ ಅನುಸೂಚಿತ ಪರಿಶಿಷ್ಟ ಪಂಗಡಗಳಲ್ಲಿ ಶೇಕಡ ೪೦ ರಷ್ಟು ಸಮುದಾಯಗಳು ಗುಂಪುಗಳಾಗಿ ಪ್ರತ್ಯೇಕವಾಗಿ ಕಾಡಿನ ಮಧ್ಯಕ್ಕೋ ಅಥವ ಜನ ಸಮುದಾಯದಿಂದ ದೂರವಾಗಿಯೋ ಜೀವಿಸುತ್ತಿವೆ. ಇನ್ನುಳಿದ ಶೇಕಡ ೧೦ ರಷ್ಟು ಸಮುದಾಯಗಳು ಮಾತ್ರ ಜನ ಸಮುದಾಯದೊಂದಿಗೆ ಬೆರೆತು ಜೀವನ ಸಾಗಿಸುತ್ತಿವೆ. ಬಹುತೇಕವಾಗಿ ಕಾಡಿನಲ್ಲಿ ಅಥವಾ ಕಾಡಿನಂಚಿಗೆ ಹೊಂದಿಕೊಂಡು ನೆಲೆಸಿರುವ ಪರಿಶಿಷ್ಟ ಪಂಗಡಗಳು ಪ್ರತ್ಯೇಕವಾದ ಶೌಚಾಲಯಗಳನ್ನು ಆಪೇಕ್ಷಿಸದೆ ಬಯಲನ್ನೇ ಶೌಚ ಕಾರ್ಯಕ್ಕಾಗಿ ಬಳಸುತ್ತಿವೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡಗಳ ಸ್ಥಿತಿಯೇನೂ ಇದಕ್ಕಿಂತ ಭಿನ್ನವಾಗಿಲ್ಲ. ಇಂದಿಗೂ ಎಷ್ಟೋ ಹಳ್ಳಿಗಳಲ್ಲಿ ಪರಿಶಿಷ್ಟ ಪಂಗಡಗಳು ಇತರರಂತೆ ಶೌಚಕ್ಕಾಗಿ ಬಯಲನ್ನೇ ಆಶ್ರಯಿಸಿರಬೇಕಾದ ಅನಿವಾರ್ಯತೆ ಇದೆ.

ಕರ್ನಾಟಕದ ಪರಿಶಿಷ್ಟ ಪಂಗಡಗಳು ಯಾವ ಸ್ವರೂಪದ ಶೌಚಾಲಯಗಳನ್ನು ಎಷ್ಟರಮಟ್ಟಿಗೆ ಬಳಸುತ್ತಿವೆ ಎಂಬುದನ್ನು ಇಲ್ಲಿ ಗಮನಿಸಲಾಗಿದೆ.

೫.೨.೭.೨. ಪರಿಶಿಷ್ಟ ಪಂಗಡಗಳ ಶೌಚಾಲಯ ಸ್ವರೂಪದ ವಿವರ (ಪೈಚಾರ್ಟ್)

ಬಹುತೇಕ ನಗರ ಪ್ರದೇಶದಲ್ಲಿ ವಾಸಿಸುವ ಪರಿಶಿಷ್ಟ ಪಂಗಡಗಳು ಮನೆಯ ಆವರಣದೊಳಗೆ ಶೌಚಾಲಯಗಳನ್ನು ಹೊಂದಿದ್ದು ಅವುಗಳ ಪ್ರಮಾಣವು ಶೇಕಡ ೮.೩೫ರಷ್ಟಿದೆ. ಅದೇ ರೀತಿ ಹೆಚ್ಚಾಗಿ ಸ್ವಲ್ಪ ಸ್ಥಿತಿವಂತರಾದ ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡಗಳು ಮನೆಯ ಆವರಣದ ಹೊರಗೆ ಶೌಚಾಲಯಗಳನ್ನು ಹೊಂದಿದ್ದು ಅವುಗಳ ಪ್ರಮಾಣ ಶೇಕಡ ೯.೩೩ರಷ್ಟಿದೆ. ಇವು ಬಹುತೇಕ ಗುಂಡಿ ಶೌಚಾಲಯಗಳಾಗಿವೆ. ಆದರೆ ಇಲ್ಲಿ ನೀರನ್ನು ಹೊರಗಿನಿಂದಲೇ


ಒಯ್ಯಬೇಕಾಗಿರುತ್ತದೆ. ನೀರಿನ ಸೌಲಭ್ಯ ಹೊಂದಿರುವ ಶೌಚಾಲಯಗಳ ಪ್ರಮಾಣ ಶೇಕಡ ೭.೯ರಷ್ಟಿದ್ದರೆ, ಇತರ ಸ್ವರೂಪದ ಶೌಚಾಲಯಗಳು ಶೇಕಡ ೩.೬ರಷ್ಟಿವೆ. ಆದರೆ ಶೇಕಡ ೭೯.೭ರಷ್ಟು ಪರಿಶಿಷ್ಟ



ಪಂಗಡಗಳು ಇಂದಿಗೂ ಬಯಲನ್ನೇ ಶೌಚಕ್ಕೆ ಬಳಸುತ್ತಿರುವುದು ಕಂಡುಬರುತ್ತದೆ.

೫.೨.೭.೩. ಶೌಚಾಲಯವನ್ನು ಇತರ ಕಾರ್ಯಗಳಿಗಾಗಿ ಬಳಸಿಕೊಳ್ಳುವವರ ವಿವರ

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ೪ ತಾಲೂಕುಗಳ ಶೇಕಡ ೧೯ ಗ್ರಾಮ ಪಂಚಾಯ್ತಿ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಲ್ಲಿ ಒಟ್ಟು ಶೇಕಡ ೧೦ ಜನ ಮಹಿಳಾ ಸದಸ್ಯರ ಮನೆಗಳಿಗೆ ಹೊಂದಿಕೊಂಡು ಪ್ರತ್ಯೇಕ ಶೌಚಾಲಯಗಳಿವೆ. ಈ ಹತ್ತರಲ್ಲಿ ಶೇಕಡ ೪ ಜನ ಮಾತ್ರ ಸ್ವಂತ ಖರ್ಚಿನಲ್ಲಿ ಶೌಚಾಲಯಗಳನ್ನು ನಿರ್ಮಿಸಿಕೊಂಡಿದ್ದು ಇನ್ನೂಳಿದ ಆರು ಜನ ಸದಸ್ಯರು ನಿರ್ಮಲ ಕರ್ನಾಟಕ ಯೋಜನೆಯಡಿ ನಿರ್ಮಿಸಿಕೊಂಡ ಶೌಚಾಲಯಗಳಾಗಿವೆ. ಒಟ್ಟಾರೆಯಾಗಿ ಹತ್ತು ಜನ ಗ್ರಾಮ ಪಂಚಾಯಿತಿಯ ಪರಿಶಿಷ್ಟ ಪಂಗಡದ ಮಹಿಳೆಯರು ಶೌಚಾಲಯಗಳನ್ನು ಸಮರ್ಪಕವಾಗಿ



ಬಳಕೆ ಮಾಡಿಕೊಳ್ಳುತ್ತಿರುವುದು ಕಂಡು ಬಂದಿದೆ. ಹಾಗೇ ತಾಲೂಕು ಪಂಚಾಯ್ತಿಯ ಮೂರು ಜನ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರು ವಾಸಿಸುವ ಸ್ವಂತ ಮನೆಗಳಿಗೂ ಶೌಚಾಲಯದ ಸೌಲಭ್ಯವಿದೆ. ಹಾಗೇ ಕೂಡ್ಲಿಗಿ ತಾಲೂಕಿನ ಒಬ್ಬ ಜಿಲ್ಲಾ ಪಂಚಾಯತ್ ಸದಸ್ಯೆ ಹಾಗೂ ಸಿಂಧಗೇರಿಯ ಜಿಲ್ಲಾ ಪಂಚಾಯತ್ ಸದಸ್ಯರ ಮನೆಗಳಲ್ಲಿಯೂ ಶೌಚಾಲಯಗಳ ಸೌಲಭ್ಯವಿರುವುದು ಕಂಡುಬಂದಿದೆ.

ಆದರೆ ಶೌಚಾಲಯದ ಉಪಯೋಗದ ಮಹತ್ವವನ್ನು ಅರೆಯದೆ ತಮ್ಮ ಮನೆಗಳಿಗೆ ಪ್ರತ್ಯೇಕವಾಗಿ ನೀಡಲಾದ ಶೌಚಾಲಯಗಳನ್ನು ಬಚ್ಚಲಾಗಿ (ಸ್ನಾನಗೃಹ) ಪರಿವರ್ತಿಸಿಕೊಂಡು ಬಳಸುವ ಮೂವರು ಗ್ರಾಮ ಪಂಚಾಯಿತಿ ಸದಸ್ಯರನ್ನು ಕಾಣಬಹುದಾಗಿದೆ.

ನೀವೇಕೆ ಶೌಚಾಲಯಗಳನ್ನು ಶೌಚಾಲಯಗಳಾಗಿ ಉಪಯೋಗಿಸುತ್ತಿಲ್ಲ ಎಂಬ ಪ್ರಶ್ನೆಗೆ ಆ ಮೂರು ಮನೆಯ ಜನರು ನೀಡುವ ಉತ್ತರಗಳು ಭಿನ್ನ ಭಿನ್ನವಾಗಿವೆ.

ಹೊಸಪೇಟೆ ತಾಲೂಕಿನ ಒಬ್ಬ ಸದಸ್ಯೆಯ ಕುಟುಂಬದವರು ನಾವು ಓಣಿಯಲ್ಲಿ ಬದುಕುತ್ತಿದ್ದೇವೆ ನಮ್ಮ ಓಣಿಯಲ್ಲಿ ಯಾರೂ ಶೌಚಾಲಯ ಹೊಂದಿಲ್ಲ. ಅಕಸ್ಮಾತ್ ನಾವು ಶೌಚಾಲಯ ಬಳಸಿದರೆ ಓಣಿಯಲ್ಲಿರುವವರೆಲ್ಲಾ ಹೇಸಿಗೆ ಪಡುತ್ತಾರೆ, ಆ ಕಾರಣಕ್ಕಾಗಿ ಸರ್ಕಾರ ನೀಡಿದ ಶೌಚಾಲಯವನ್ನು ಸ್ನಾನಗೃಹವಾಗಿ ಬದಲಿಸಕೊಂಡಿದ್ದೇವೆ ಎಂದು ತಿಳಿಸುತ್ತಾರೆ.

ಕೂಡ್ಲಿಗಿ ತಾಲೂಕಿನ ಒಬ್ಬ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯೆ ನೀಡುವ ಉತ್ತರದಂತೆ ಅವರ ಮನೆ ಪಕ್ಕದಲ್ಲಿಯೇ ದೇವರ ಗುಡಿ ಇರುವುದರಿಂದ ತಾವು ಶೌಚಾಲಯವನ್ನು ಬಳಸಲು ಸಾಧ್ಯವಾಗದೆ ಕೇವಲ ಬಚ್ಚಲಾಗಿ ಅದನ್ನು ಬಳಸುತ್ತಿರುವುದಾಗಿ ತಿಳಿಸುತ್ತಾರೆ.

ಇನ್ನೊಬ್ಬ ಮಹಿಳಾ ಸದಸ್ಯೆಯ ಕುಟುಂಬದವರು ತಮ್ಮ ಮನೆ ತುಂಬಾ ಚಿಕ್ಕದಿದ್ದು ಮೊದಲಿಗೆ ತಮ್ಮ ಮನೆಗೆ ಬಚ್ಚಲಿರಲಿಲ್ಲ. ಈ ಶೌಚಾಲಯ ಕಟ್ಟಿಸಿದ ತರುವಾಯ ಅದನ್ನೇ ಬಚ್ಚಲಾಗಿ ಪರಿವರ್ತಿಸಿಕೊಳ್ಳಲಾಗಿದೆ, ಮುಖ್ಯವಾಗಿ ಶೌಚಾಲಯವನ್ನು ಶೌಚಕಾರ್ಯಕ್ಕಾಗಿ ಬಳಸುವುದರಿಂದ ತಮಗೆ ವಾಸನೆ ಬರುತ್ತದೆ, ತಮ್ಮದು ಹಳ್ಳಿಯಾಗಿರುವುದರಿಂದ ಮತ್ತು ಆ ಹಳ್ಳಿಯಲ್ಲಿ ತುಂಬಾ ಬಯಲು ಪ್ರದೇಶ ಇರುವುದರಿಂದ ಶೌಚಕಾರ್ಯಕ್ಕಾಗಿ ಬಯಲಿಗೆ ಹೋಗುತ್ತಿರುವುದಾಗಿ ತಿಳಿಸುತ್ತಾರೆ.

ಗ್ರಾಮ ಪಂಚಾಯ್ತಿ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಹೊರತಾಗಿ ಇತರ ತಾಲೂಕು ಮತ್ತು ಜಿಲ್ಲಾ ಪಂಚಾಯ್ತಿ ಸದಸ್ಯರು ಈ ರೀತಿ ನಿರ್ದಿಷ್ಟ ಪಡಿಸಿದ ಶೌಚಾಲಯಗಳನ್ನು ಸ್ನಾನಗೃಹಗಳಾಗಿ ಬಳಸಿಕೊಂಡ ನಿದರ್ಶನಗಳು ಕಂಡು ಬರಲಿಲ್ಲ. ಅದೇ ರೀತಿಯಾಗಿ ಹೊಸಪೇಟೆ ತಾಲೂಕಿನಲ್ಲಿ

ಪರಿಶಿಷ್ಟ ಪಂಗಡದ ಗ್ರಾಮ ಪಂಚಾಯಿತಿಯ ಒಬ್ಬ ಮಹಿಳಾ ಸದಸ್ಯರ ಮನೆಗೆ ನಿರ್ಮಲ ಕರ್ನಾಟಕ ಯೋಜನೆಯಡಿ ನೀಡಿದ ಶೌಚಾಲಯವನ್ನು ಉರವಲು ಕಟ್ಟಿಗೆ, ಮೇವು ಇತ್ಯಾದಿಗಳನ್ನು ಇಡುವ ಕೊಠಡಿಯಾಗಿ ಪರಿವರ್ತಿಸಿ ಕೊಂಡಿದ್ದಾರೆ, ಆ ಶೌಚಾಲಯಕ್ಕೆ ಪೂರ್ಣ ಪ್ರಮಾಣದಲ್ಲಿ ಕಟ್ಟಡವೂ ಸಹ ಇಲ್ಲ. ಏಕೆ ಶೌಚಾಲಯ ಈ ರೀತಿ ಇದೆ ಎಂದರೆ ತಾವು ಸದಸ್ಯರಾಗುವ ಪೂರ್ವದಲ್ಲಿ ನೀಡಿದ ಈ ಶೌಚಾಲಯಕ್ಕೆ ಕುಣಿಯನ್ನು ಸಹ ತೆಗೆಸಲಿಲ್ಲ. ಕೇವಲ ಸಿಮೆಂಟಿನ ಮೇಲುಗೋಡೆ ಕಟ್ಟಿ ಬಿಟ್ಟರು, ಹೀಗಾಗಿ ಅದನ್ನು ಕಟ್ಟಿಗೆ ಇತ್ಯಾದಿ ಇಡುವುದಕ್ಕೆ ಬಳಸುತ್ತಿದ್ದೇವೆ ಎಂದು ತಿಳಿಸಿದರು.

ನಿಮ್ಮ ಆಡಳಿತಾವಧಿಯಲ್ಲಿಯಾದರೂ ಶೌಚಾಲಯವನ್ನು ನಿರ್ಮಿಸಿಕೊಳ್ಳಬಹುದಾಗಿತ್ತಲ್ಲ ಎಂಬ ಪ್ರಶ್ನೆಗೆ ಅವರು ನೀಡಿದ ಉತ್ತರ ಕುತೂಹಲಕಾರಿಯಾದುದಾಗಿದೆ.

ನಿರ್ಮಿಸಿಕೊಳ್ಳಬಹುದು ನಿಜ, ಆದರೆ ಸರ್ಕಾರ ಶೌಚಾಲಯ ನಿರ್ಮಾಣಕ್ಕಾಗಿ ಕೊಡುವ ಸಹಾಯ ಧನ ಕೇವಲ ಎರಡು ಸಾವಿರದ ಐದು ನೂರು ರೂಪಾಯಿಗಳು ಮಾತ್ರ, ಅಷ್ಟು ಹಣದಲ್ಲಿ ಒಂದು ಶೌಚಾಲಯ ನಿರ್ಮಿಸಿಕೊಳ್ಳುವುದು ಕಷ್ಟ, ಅದರಲ್ಲೂ ತಾವು ಶೌಚಕಾರ್ಯಕ್ಕೆ ಬಯಲನ್ನೇ ಬಳಸುತ್ತಿರುವುದರಿಂದ ವೈಯಕ್ತಿಕವಾದ ಶೌಚಾಲಯದ ಅವಶ್ಯಕತೆ ಇದೆಯೆಂದು ಅನಿಸಿರುವುದಿಲ್ಲ ಎಂದು ತಿಳಿಸಿದರು.

ನಾಲ್ಕು ತಾಲೂಕುಗಳಲ್ಲಿ ಹೊಸಪೇಟೆ ತಾಲೂಕಿನ ಪರಿಶಿಷ್ಟ ಪಂಗಡದ ಗ್ರಾಮ ಪಂಚಾಯಿತಿ ಸದಸ್ಯರ ಎರಡು ಕುಟುಂಬಕ್ಕೆ, ಸಿರಗುಪ್ಪ ಹಾಗೂ ಹಗರಿಬೊಮ್ಮನಹಳ್ಳಿಯ ತಲಾ ಒಂದೊಂದು ಕುಟುಂಬಕ್ಕೆ ಹಾಗೂ ಕೂಡ್ಲಿಗಿಯ ಎರಡು ಕುಟುಂಬಗಳು ಹಾಗೂ ತಾಲೂಕು ಪಂಚಾಯ್ತಿ ಸದಸ್ಯರ ಒಂದು ಕುಟುಂಬ ಒಟ್ಟಾರೆ ಏಳು ಕುಟುಂಬಗಳು ಯಾವುದೇ ರೀತಿಯ ಶೌಚಾಲಯ ತಮ್ಮ ಮನೆಗಳಿಗೆ ಹೊಂದಿರದೆ ಬಯಲು ಮತ್ತು ಸಾರ್ವಜನಿಕ ಶೌಚಾಲಯಗಳನ್ನೇ ಬಳಸುತ್ತಾರೆ. ಈ ಕುಟುಂಬದ ಎಲ್ಲಾ ಮಹಿಳೆಯರು ತಮಗೆ ವೈಯಕ್ತಿಕ ಶೌಚಾಲಯದ ಅಗತ್ಯತೆ ಇದೆ ಎಂದೆನಿಸಿದರೂ ಕೆಲವೊಂದು ಅನಿವಾರ್ಯ ಕಾರಣಗಳಿಗಾಗಿ ಶೌಚಾಲಯ ನಿರ್ಮಿಸಿಕೊಳ್ಳದೆ ಸಾರ್ವಜನಿಕವಾದ ಶೌಚಾಲಯ ಇಲ್ಲವೆ ಬಯಲನ್ನು ಆಶ್ರಯಿಸಬೇಕಾಗಿದೆ ಎಂದು ತಿಳಿಸಿದರು. ಬಹುತೇಕ ಪುರುಷರು ಊರ ಹೊರಭಾಗದ ಬಯಲನ್ನೇ ಶೌಚಾಲಯಕ್ಕೆ ಬಳಸಬೇಕಾದ ಅನಿವಾರ್ಯತೆ ಇದೆ. ಮಹಿಳೆಯರೂ ಈ ಸಂಕಷ್ಟದಿಂದ ಹೊರತಾಗಿಲ್ಲ.

ಇಲ್ಲಿ ಮನೆಗಳ ಸ್ವರೂಪ ಮತ್ತು ಶೌಚಾಲಯಗಳು ಪರೋಕ್ಷವಾಗಿ ಆಯಾ ಕುಟುಂಬಗಳ ಆರ್ಥಿಕ ಸ್ಥಿತಿಗತಿಯನ್ನು ಪ್ರದರ್ಶಿಸುತ್ತಿವೆ ಎಂಬ ಕಾರಣಕ್ಕಾಗಿ ಇಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರು ನೆಲೆಸಿರುವ ಮನೆಗಳು ಮತ್ತು ಶೌಚಾಲಯಗಳ ಸ್ಥಿತಿಗತಿಗಳನ್ನು ತಿಳಿಸಲಾಗಿದೆ.

ಬಹುತೇಕ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಕುಟುಂಬಗಳು ವ್ಯವಸಾಯ, ಕೃಷಿ ಕೂಲಿಗಳನ್ನೇ ಆಶ್ರಯಿಸಿ ಜೀವನ ನಿರ್ವಹಣೆ ಮಾಡುವುದು ಕಂಡು ಬರುತ್ತದೆ. ಮಹಿಳಾ ಸದಸ್ಯರನ್ನು ನಿಮ್ಮ ಮನೆಯಲ್ಲಿ ಯಾರು ದುಡಿಯುತ್ತಾರೆ, ಯಾರ ವರಮಾನದಿಂದ ಕುಟುಂಬ ನಿರ್ವಹಣೆಯಾಗುತ್ತದೆ ಎಂಬ ಪ್ರಶ್ನೆಗೆ 'ತಮ್ಮ ಗಂಡ ಕೃಷಿ ಮಾಡುತ್ತಾನೆ. ಅಪ್ಪ, ಮಾವ, ಮೈದುನ, ಅಣ್ಣ ತಮ್ಮಂದಿರು ಕೃಷಿ ಮತ್ತು ಕೃಷಿ ಕೂಲಿಯಿಂದ ಕುಟುಂಬವನ್ನು ಸಲಹುತ್ತಾರೆ ಎಂದು ತಿಳಿಸುತ್ತಾರೆ ' ಮತ್ತೆ ನಿಮ್ಮ ಕೆಲಸವೇನು ಎಂದು ಕೇಳಿದರೆ ಆ ಮಹಿಳಾ ಸದಸ್ಯರು ತಾವು ಗೃಹಿಣಿಯರು ಎಂದು ಮಾತ್ರ ತಿಳಿಸುತ್ತಾರೆ. ಆದರೆ ವಾಸ್ತವ ಸ್ಥಿತಿಯೇ ಬೇರೆ, ಈ ಮಹಿಳಾ ಸದಸ್ಯರ ಕುಟುಂಬಗಳಲ್ಲಿ ಪುರುಷರಿಗೆ ಸಮಾನವಾಗಿ ವ್ಯವಸಾಯ ಇತ್ಯಾದಿ ಕೆಲಸಗಳಲ್ಲಿ ತೊಡಗಿರುವವರು ಮಹಿಳೆಯರಾಗಿದ್ದುದು ಕಂಡು ಬಂದಿತು. ಹಾಗೇ ಮನೆಯೊಳಗೆ ಮತ್ತು ಮನೆಯ ಹೊರಗೆ ಎರಡೂ ಕಡೆ ಕೆಲಸ ನಿರ್ವಹಿಸಬೇಕಾದ ಅನಿವಾರ್ಯತೆ ಆ ಮಹಿಳಾ ಸದಸ್ಯರು ಮತ್ತು ಅವರ ಕುಟುಂಬದ ಇತರ ಮಹಿಳೆಯರದಾಗಿದೆ.

ಪಂಚಾಯತ್‌ರಾಜ್ ವ್ಯವಸ್ಥೆಯ ಬಹುತೇಕ ಮಹಿಳೆಯರು ಎತ್ತು, ಎಮ್ಮೆ, ಕುರಿ, ಕೋಳಿ ಇತ್ಯಾದಿಗಳನ್ನು ಸಾಕಿದ್ದಾರೆ. ಸಾಮಾನ್ಯವಾಗಿ ಗ್ರಾಮ ಪಂಚಾಯತಿಯ ಒಟ್ಟು ೧೯ ಸದಸ್ಯರ ಕುಟುಂಬಗಳಲ್ಲಿ ಎಂಟು ಕುಟುಂಬಗಳು ಒಂದೊಂದು ಜೊತೆ ಎತ್ತುಗಳನ್ನು ಹೊಂದಿವೆ. ಇವರ ಕುಟುಂಬದ ಪುರುಷರು ತಮ್ಮ ಹೊಲದ ಕೆಲಸ ಮೀರಿದ ತರುವಾಯ ಬೇರೆಯವರ ಹೊಲಗಳಿಗೆ ಎತ್ತುಗಳನ್ನು ಬಳಸಿ ಕೂಲಿ ಕೆಲಸ ಮಾಡುತ್ತಾರೆ. ಹಾಗೇ ಆರು ಕುಟುಂಬಗಳು ಎರಡೆರಡು ಎಮ್ಮೆಗಳನ್ನು ಹೊಂದಿದ್ದು ಕನಿಷ್ಟ ಒಂದು ಎಮ್ಮೆಯಿಂದಾದರೂ ಹಾಲನ್ನು ಉತ್ಪಾದಿಸಿ ಚಿಲ್ಲರೆಯಾಗಿ ತಮ್ಮ ಹಳ್ಳಿಗಳಲ್ಲಿ ಮಾರುವುದು ಕಂಡು ಬರುತ್ತದೆ. ಹಾಗೇ ಎರಡು ಕುಟುಂಬಗಳು ಒಂದೆರಡು ಕುರಿ ಮತ್ತು ಐದಾರು ಮೇಕೆಗಳನ್ನು ಹೊಂದಿದ್ದು ಅದರಿಂದಲೂ ಅಲ್ಪ ಪ್ರಮಾಣದ ಉತ್ಪಾದನೆ

ಪಡೆಯುತ್ತಾರೆ. ಎರಡು ಕುಟುಂಬಗಳು ನಾಟಿ ಕೋಳಿಯ ಸಾಕಣಿಕೆಯನ್ನು ಮಾಡುತ್ತಾರೆ. ಇದರಲ್ಲಿ ಕೂಡ್ಲಿಗಿ ತಾಲೂಕಿನ ತಾಲೂಕು ಪಂಚಾಯ್ತಿ ಅಧ್ಯಕ್ಷೆಯು ಸಹ ತಮ್ಮ ಹೊಲದಲ್ಲಿಯೇ ಮನೆ ಕಟ್ಟಿಕೊಂಡಿರುವುದರಿಂದ ೮-೧೦ ಕೋಳಿಯನ್ನು ಸಾಕಿದ್ದಾರೆ. ಇದರಿಂದ ತಮ್ಮ ಕುಟುಂಬಕ್ಕೆ ಬೇಕಾದಷ್ಟು ಮೊಟ್ಟೆ ಇತ್ಯಾದಿ ಬಳಸಿ ಇನ್ನಿತರ ಮೊಟ್ಟೆಗಳನ್ನು ಹಳ್ಳಿಯ ಜನಕ್ಕೆ ಮಾರುವುದಾಗಿ ತಿಳಿಸಿದರು. ಜೊತೆಗೆ ಕೋಳಿಯನ್ನು ಸಹ ಮಾರುವುದಾಗಿ ತಿಳಿಸಿದರು.


ಒಟ್ಟಾರೆಯಾಗಿ ಅಲ್ಪ ಪ್ರಮಾಣದ ಇಂತಹ ಮೇಲುತ್ಪಾದನೆಯೊಂದಿಗೆ, ತಾವು ಸದಸ್ಯರಾದ ತರುವಾಯ ಮಹಿಳಾ ಸದಸ್ಯರ ಗಂಡಂದಿರು ಸಣ್ಣ ಪುಟ್ಟ ಕಾಂಟ್ರಾಕ್ಟ್ ಇತ್ಯಾದಿಗಳನ್ನು ಮಾಡಿ ಸಹ ಹಣ ಸಂಪಾದನೆ ಮಾಡುತ್ತಿರುವುದು ಕಂಡು ಬಂದಿತು.

ಪರಿಶಿಷ್ಟ ಪಂಗಡಗಳ ಕುಡಿಯುವ ನೀರಿನ ಸೌಲಭ್ಯ

ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದ ಶೇಕಡ ೫೩.೭ ರಷ್ಟು ಕುಟುಂಬಗಳಿಗೆ ನಲ್ಲಿ ನೀರೇ ಕುಡಿಯುವ ನೀರಿನ ಪ್ರಮುಖ ಮೂಲವಾಗಿದೆ. (ಎಲ್ಲಾ ಕುಟುಂಬಗಳಲ್ಲಿ ಅದು ಶೇಕಡ ೫೮.೩೯ ರಷ್ಟು ಆಗಿದೆ) ಪರಿಶಿಷ್ಟ ಜಾತಿಯವರಿಗೆ ಅವರ ಮನೆಯ ಆವರಣದೊಳಗೆ ಅಥವಾ ಸನಿಹದಲ್ಲಿ ನಲ್ಲಿಯ ಮೂಲಕ ಕುಡಿಯುವ ನೀರು ದೊರೆಯುವ ಪ್ರಮಾಣ ಶೇ ೧೨.೬ ಆಗಿದ್ದರೆ, ಪರಿಶಿಷ್ಟ ಪಂಗಡಗಳಿಗೆ ದೊರೆಯುವ ಪ್ರಮಾಣ ಶೇಕಡ ೧೨.೭ ಆಗಿದೆ. ಆದರೆ ಇತರೆ ಎಲ್ಲಾ ಕುಟುಂಬಗಳಿಗೆ ಶೇಕಡ ೨೪.೧ರಷ್ಟು ಕುಟುಂಬಗಳಿಗೆ ಅವರ ಮನೆಯ ಆವರಣ ಅಥವಾ ಸನಿಹದಲ್ಲಿ ನಲ್ಲಿಯ ಮೂಲಕ ಕುಡಿಯುವ ನೀರು ದೊರೆಯುತ್ತದೆ (೨೦೦೧ ರ ಜನಗಣತಿ ವರದಿ)

೨೦೦೧ರ ಜನಗಣತಿ ವರದಿಯ ಪ್ರಕಾರ ಪರಿಶಿಷ್ಟ ಪಂಗಡಗಳು ನೆಲೆಸಿರುವ ಗ್ರಾಮಗಳ ಪೈಕಿ ಶೇಕಡ ೮೯ರಷ್ಟು ಗ್ರಾಮಗಳು ಕೈ ಪಂಪು ಸಹಿತ ಕೊಳವೆ ಬಾವಿಗಳು, ಕಿರುನೀರು ಸರಬರಾಜು ಯೋಜನೆ ಮತ್ತು ಕೊಳವೆ ನೀರು ಸರಬರಾಜು ಯೋಜನೆಗಳ ಮೂಲಕ ಕುಡಿಯುವ ನೀರಿನ ಸೌಕರ್ಯ ಹೊಂದಿದೆ. ನಾಲ್ಕರಲ್ಲಿ ಮೂರು ಗ್ರಾಮಗಳು ಎಲ್ಲಾ ಋತುಗಳಲ್ಲಿ ಸಾಕಷ್ಟು ಕುಡಿಯುವ ನೀರಿನ ಸೌಕರ್ಯವನ್ನು ಹೊಂದಿವೆ. ಅದಕ್ಕೆ ಸಂಬಂಧಿಸಿದ ಮಾಹಿತಿ ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

೫.೨.೭.೪. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳಿಗೆ ಕುಡಿಯುವ ನೀರಿನ ಸೌಕರ್ಯದ ವಿಧಗಳು (ಶೇಕಡವಾರುಗಳಲ್ಲಿ) (ಪೈಚಾರ್ಟ್)



ಪರಿಶಿಷ್ಟ ಪಂಗಡಗಳ ಕಾಲೋನಿಯೊಳಗೆ ಅಥವಾ ಅದಕ್ಕೆ ಹತ್ತಿರದಲ್ಲಿ ಕೈ ಪಂಪು ಸಹಿತ ಕೊಳವೆ ಬಾವಿಗಳನ್ನು ಹೊಂದಿದ್ದು ಅಂತಹ ಕೊಳವೆ ಬಾವಿಗಳಿಂದ ಶೇಕಡ ೬೫.೮೪ ರಷ್ಟು ಕುಟುಂಬಗಳು ಬಳಕೆಗೆ ಮತ್ತು ಕುಡಿಯುವುದಕ್ಕೆ ನೀರನ್ನು ಪಡೆಯುತ್ತವೆ, ಅದೇ ರೀತಿ ಗ್ರಾಮ ಪಂಚಾಯಿತಿಗಳ ನಿರ್ವಹಣೆಯಲ್ಲಿ ನಡೆಯುತ್ತಿರುವ ಕಿರು ನೀರು ಯೋಜನೆಯಡಿ ಶೇಕಡ ೫೩.೪೨ ರಷ್ಟು ಪರಿಶಿಷ್ಟ ಪಂಗಡಗಳು ಕುಡಿಯುವ ನೀರನ್ನು ಪಡೆದರೆ ಇನ್ನು ಶೇಕಡ ೫೮.೩೯ ರಷ್ಟು ಕುಟುಂಬಗಳು ಕೊಳವೆ ನೀರನ್ನು ಬಳಸುತ್ತವೆ. ಇನ್ನು ಕಾಡಿನ ಮಧ್ಯ ಜೀವಿಸುತ್ತಿರುವ ಕೆಲವು ಪರಿಶಿಷ್ಟ ಪಂಗಡ ಬುಡಕಟ್ಟುಗಳಲ್ಲಿ ಶೇಕಡ ೪.೩೫ ರಷ್ಟು ಜನ ನದಿಯ ಮೂಲದಿಂದ ಕುಡಿಯುವ ನೀರನ್ನು ಪಡೆದರೆ ಗ್ರಾಮೀಣ ಪ್ರದೇಶದಲ್ಲಿ ಬದುಕುವ ಪರಿಶಿಷ್ಟ ಪಂಗಡಗಳು ಶೇಕಡ ೧೫.೫೩ ರಷ್ಟು ತೆರೆದ ಬಾವಿಯಿಂದ ನೀರನ್ನು ಪಡೆಯುತ್ತವೆ. ಅದೇ ರೀತಿ ಹಳ್ಳ, ಒರತೆ, ಜರಿ ಮುಂತಾದವುಗಳಿಂದ ಕುಡಿಯುವ ನೀರಿನ ಸವಲತ್ತನ್ನು ಪಡೆಯುತ್ತಿರುವವರಲ್ಲಿ ಶೇಕಡ

೪.೯೭ ರಷ್ಟು ಪರಿಶಿಷ್ಟ ಪಂಗಡದ ಜನರಿದ್ದಾರೆ. (ಮಾದರಿ ಸಮೀಕ್ಷೆ ; ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ- ೨೦೦೪ ಎ)

೫.೨.೭.೫. ಪಂಚಾಯತ್ ರಾಜ್ ವ್ಯವಸ್ಥೆಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಕುಟುಂಬಗಳ ಕುಡಿಯುವ ನೀರಿನ ಸೌಲಭ್ಯಗಳ ಕುರಿತ ವಿವರ

ಪ್ರಸ್ತುತ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಲ್ಲಿ ಗ್ರಾಮ ಪಂಚಾಯ್ತಿ, ತಾಲೂಕು ಪಂಚಾಯ್ತಿ, ಮತ್ತು ಜಿಲ್ಲಾ ಪಂಚಾಯ್ತಿಯ ಒಟ್ಟು ೨೦೦ ಸದಸ್ಯರಲ್ಲಿ ಎಷ್ಟು ಕುಟುಂಬಗಳು ಕುಡಿಯುವ ನೀರಿನ ಸೌಲಭ್ಯಗಳನ್ನು ಸಮರ್ಪಕವಾಗಿ ಹೊಂದಿವೆ ಎಂದು ನೋಡಲಾಗಿ ಕಂಡು ಬಂದ ಅಂಶಗಳನ್ನು ಈ ಕೆಳಗೆ ನೀಡಲಾಗಿದೆ.

ಜಿಲ್ಲಾ ಪಂಚಾಯತ್ ಇಂಜನೀಯರಿಂಗ್ ವಿಭಾಗದದಿಂದ ಸಾರ್ವಜನಿಕ ಉಪಯೋಗಕ್ಕಾಗಿ ಗ್ರಾಮಗಳಲ್ಲಿ ಅಲ್ಲಲ್ಲಿ ಸಾರ್ವಜನಿಕ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಬಹುತೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆಯಡಿ ನೀರನ್ನು ಕೊಳವೆ/ನಲ್ಲಿ ಮೂಲಕ ಸರಬರಾಜು ಮಾಡಲಾಗುತ್ತಿದ್ದರೂ ಎಷ್ಟೋ ಪರಿಶಿಷ್ಟ ಸಮುದಾಯ ಮತ್ತು ಪರಿಶಿಷ್ಟ ಪಂಗಡಗಳಿಗೆ ಆ ಯೋಜನೆಗಳು ಇಂದಿಗೂ ತಲುಪುತ್ತಿಲ್ಲ. ಬಹುಶಃ ಇದಕ್ಕೆ ಮೇಲ್ಜಾಜಿಗಳ ರಾಜಕಾರಣ ಒಂದು ರೀತಿಯಲ್ಲಿ ಕಾರಣವಾದರೆ ಇನ್ನೊಂದು ರೀತಿಯ ಕಾರಣವೆಂದರೆ ತಳ ಸಮುದಾಯಗಳಿಗೆ ತಮ್ಮ ಮೂಲಭೂತ ಅವಶ್ಯಕತೆಗಳ ಕುರಿತಾಗಿ ಸರಿಯಾದ ತಿಳುವಳಿಕೆ ಇಲ್ಲದೇ ಇರುವುದೂ ಕಾರಣವಾಗಿದೆ. ಎಷ್ಟೋ ಗ್ರಾಮಗಳಲ್ಲಿ ತಳ ಸಮುದಾಯಗಳು ಬಾವಿಕಟ್ಟೆ ಹತ್ತುವಂತಿಲ್ಲ. ಮೇಲ್ಜಾತಿಗಳು ಬಳಸುವ ಕೊಳವೆ ಬಾವಿಗಳನ್ನು ಮುಟ್ಟದಂತಹ ಸ್ಥಿತಿ ಇದೆ. ಇಂದಿಗೂ ಎಷ್ಟೋ ಗ್ರಾಮಗಳಲ್ಲಿ ತಳ ಜಾತಿಗಳ ಕೊಡಗಳಿಗೆ ಮೇಲ್ಜಾತಿಯವರು ಕೃಪೆದೋರಿ ನೀರನ್ನು ಹಾಕಿದರೆ ಮಾತ್ರ ತಳ ಜಾತಿಗಳಿಗೆ ಕುಡಿಯುವ ನೀರು ಲಭ್ಯ, ಇಲ್ಲದಿದ್ದರೆ ಕುಡಿಯುವ ನೀರೇ ಅಂದು ಅ ಸಮುದಾಯಗಳಿಗೆ ಇಲ್ಲ ಎನ್ನುವಂತಹ ಸ್ಥಿತಿ ಇದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಕಿರುನೀರು ಸರಬರಾಜು ಯೋಜನೆಯಡಿ ನೀರು ಪೂರೈಕೆಯಾರೂ ಸಹ ಆ ನೀರು ಕುಡಿಯಲು ಯೋಗ್ಯವಾಗಿರುವುದಿಲ್ಲ. ಕಾರಣ ಅ ನೀರನ್ನು ಶುದ್ಧೀಕರಿಸುವ ಕಾರ್ಯವನ್ನು ಮಾಡುವುದೇ ಇಲ್ಲ. ಅವರ ಅರ್ಥದಲ್ಲಿ ನೀರನ್ನು ಶುದ್ಧೀಕರಿಸುವುದು ಎಂದರೆ

ವರ್ಷದಲ್ಲಿ ಒಂದೆರಡು ಬಾರಿ ಬ್ಲೀಚಿಂಗ್ ಪುಡಿಯನ್ನು ನೀರಿಗೆ ಸೇರಿಸುವುದು. ಇಷ್ಟಾದರೆ ಶುದ್ಧೀಕರಣ ಪೂರ್ಣಗೊಂಡಂತೆ ಎಂದು ಆಡಳಿತ ವ್ಯವಸ್ಥೆ ಭಾವಿಸುತ್ತದೆ.

ಕರ್ನಾಟಕದ ಶೇಕಡ ೮೦ ರಷ್ಟು ಗ್ರಾಮಗಳಲ್ಲಿ ಇಂದು ಫ್ಲೋರೈಡ್‌ಯುಕ್ತ ನೀರಿನ ಸರಬರಾಜಿನಿಂದಾಗಿ ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿರುವುದನ್ನು ನಾವು ಸುದ್ದಿ ಮಾಧ್ಯಮಗಳ ಮೂಲಕ ಅರಿತೇ ಇದ್ದೇವೆ. ಇದಕ್ಕೆ ಬಳ್ಳಾರಿ ಜಿಲ್ಲೆಯ ಗ್ರಾಮಗಳು ಹೊರತಾಗಿಲ್ಲ. ಇಂದು ಬಳ್ಳಾರಿ ಜಿಲ್ಲೆಯ ಬಹುತೇಕ ಎಲ್ಲಾ ತಾಲೂಕುಗಳಲ್ಲಿಯೂ ಫ್ಲೋರೈಡ್‌ಯುಕ್ತ ನೀರು ಕಂಡು ಬರುತ್ತಿದೆ. ಆಶ್ಚರ್ಯವಾಗುವ ವಿಚಾರವೆಂದರೆ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಗ್ರಾಮ ಪಂಚಾಯ್ತಿಗಳಲ್ಲಿ ತಂಬ್ರಹಳ್ಳಿ, ಬಾಚಿಗೊಂಡನಹಳ್ಳಿ, ನಂ ೧೦ ಮುದ್ದಾಪುರ ಮುಂತಾದ ಗ್ರಾಮಗಳು ನೆಲೆಸಿರುವುದು ತುಂಗಾಭದ್ರ ನದಿಗೆ ತೀರಾ ಹತ್ತಿರದಲ್ಲಿ. ಆದರೆ ಈ ಗ್ರಾಮದ ಜನ ಇಂದಿಗೂ ಫ್ಲೋರೈಡ್‌ಯುಕ್ತ ಕೊಳವೆ ಬಾವಿಗಳಿಂದ ಸರಬರಾಜಾಗುವ ನೀರನ್ನೇ ಕುಡಿಯಬೇಕಾದ ಸ್ಥಿತಿ ಇದೆ. ಬಳ್ಳಾರಿ ಜಿಲ್ಲೆಯಲ್ಲಿ ತುಂಗಾಭದ್ರ ನದಿಯಿಂದ ಹತ್ತಾರು ಕಾರ್ಖಾನೆಗಳು ತಮ್ಮ ವೈಯಕ್ತಿಕ ಉಪಯೋಗಕ್ಕಾಗಿ ೬೦-೭೦ ಕಿ.ಮೀ ದೂರದವರೆಗೂ ನೀರನ್ನು ಒಯ್ಯುವುದನ್ನು ಕಾಣುತ್ತೇವೆ. ಆದರೆ ನದಿ ದಂಡೆಯ ಮೇಲೆ ಬದುಕುವ ಗ್ರಾಮೀಣ ಜನರಿಗೆ ಆ ನೀರಿನ ಸೌಲಭ್ಯವಿಲ್ಲವೆಂಬುದು ಸತ್ಯದ ಸಂಗತಿಯಾಗಿದೆ. ಹಿಂದೆ ಫ್ಲೋರೈಡ್‌ಯುಕ್ತ ನೀರಿನಿಂದ ಜನಸಾಮಾನ್ಯರ ಆರೋಗ್ಯದಲ್ಲಾಗುವ ಏರುಪೇರನ್ನು ನಿಯಂತ್ರಿಸುವ ಉದ್ದೇಶದಿಂದ ಫ್ಲೋರೈಡನ್ನು ಸೋಸುವ ಫಿಲ್ಟರ್‌ಗಳನ್ನು ಗ್ರಾಮೀಣ ಜನತೆಗೆ ಸಬ್ಸಿಡಿ ಆಧಾರದಲ್ಲಿ ಜಿಲ್ಲಾ ಪಂಚಾಯಿತಿಯಿಂದ ನೀಡಲಾಗುತ್ತಿತ್ತು. ಇಂತಹ ಫಿಲ್ಟರ್‌ಗಳನ್ನು ಆಂಧ್ರ ಮೂಲದ ಯಾವುದೋ ಒಂದು ಕಂಪನಿಗೆ ಕಾಂಟ್ರಾಕ್ಟ್ ವಹಿಸಲಾಗಿತ್ತು. ಆದರೆ ಸಬ್ಸಿಡಿ ಫಿಲ್ಟರ್ ಟ್ಯಾಂಕ್‌ಗಳಿಂದ ಜನತೆಗೆ ಆದ ಉಪಯೋಗಕ್ಕಿಂತ ಆ ಫಿಲ್ಟರ್‌ಗಳನ್ನು ಸರಬರಾಜು ಮಾಡಿದ ಕಂಪನಿಗೆ ಒಳ್ಳೆಯ ಆರ್ಥಿಕ ಲಾಭವಿತ್ತು. ಅದರಿಂದ ಯೊವೊಬ್ಬ ಗ್ರಾಮೀಣ ಕುಟುಂಬಕ್ಕೂ ಎಳ್ಳುಕಾಳಿನಷ್ಟು ಉಪಯೋಗವಾಗಲಿಲ್ಲ. ಇದರ ಒಟ್ಟು ಅರಾಜಕತೆಯನ್ನು ಕನ್ನಡ ವಿಶ್ವವಿದ್ಯಾಲಯದ ಮೌಲ್ಯಮಾಪನ ವರದಿ ಬಿಚ್ಚಿಟ್ಟ ತರುವಾಯ ಆ ಯೋಜನೆಯನ್ನು ಕೈ ಬಿಡಲಾಯಿತು. ಆದರೆ ಗ್ರಾಮೀಣ ಜನತೆ ಮಾತ್ರ ಇಂದಿಗೂ ಫ್ಲೋರೈಡ್‌ಯುಕ್ತ ನೀರಿನಿಂದ ಮಾತ್ರ ಬಿಡುಗಡೆಗೊಂಡಿಲ್ಲ. ಒಟ್ಟಾರೆಯಾಗಿ ಇಂದು ಬಹುತೇಕ ಬಳ್ಳಾರಿ ಜಿಲ್ಲೆಯ ಎಲ್ಲಾ ಗ್ರಾಮಗಳು ಸರ್ಕಾರದ ನಾನಾ ಯೋಜನೆಗಳ ಮೂಲಕ ನೀರನ್ನು ಕಾಣುವಂತಾಗಿದೆಯಾದರೂ ಅದು ಎಷ್ಟರ ಮಟ್ಟಿಗೆ

ಉಪಯುಕ್ತವಾದ ನೀರು ಎಂಬುದು ಪ್ರಶ್ನೆಯಾಗಿಯೇ ಉಳಿದುಬಿಟ್ಟಿದೆ.

೫.೨.೭.೫. ಪಂಚಾಯತ್‌ರಾಜ್ ವ್ಯವಸ್ಥೆಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಕುಟುಂಬಗಳ ಕುಡಿಯುವ ನೀರಿನ ಸೌಲಭ್ಯದ ವಿವರ

ಬಳ್ಳಾರಿ ಜಿಲ್ಲೆಯ ಗ್ರಾಮ ಪಂಚಾಯಿತಿ ವ್ಯವಸ್ಥೆಯ (ಜನ ಪ್ರತಿನಿಧಿಗಳೇ) ಸದಸ್ಯರೇ ಸಮರ್ಪಕವಾದ ಕುಡಿಯುವ ನೀರಿನ ಸಮಸ್ಯೆಯಿಂದ ಬಳಲುತ್ತಿರುವುದನ್ನು ಕಾಣಬಹುದಾಗಿದೆ.

ಹೊಸಪೇಟೆ ತಾಲೂಕಿನ ರಾಮಸಾಗರವು ಗ್ರಾಮ ಪಂಚಾಯತಿ ಕೇಂದ್ರ ಸ್ಥಳವಾಗಿದ್ದು ಈ ಗ್ರಾಮ ಪಂಚಾಯ್ತಿಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯೆ ತಮ್ಮ ಮನೆಯಲ್ಲಿ ಕುಡಿಯಲು ಸಾರ್ವಜನಿಕ ಕೊಳವೆ ಬಾವಿಯನ್ನು ಆಶ್ರಯಿಸಿರುವುದನ್ನು ತಿಳಿಸುತ್ತಾರೆ. ಈ ಗ್ರಾಮಕ್ಕೆ ತುಂಗಾಭದ್ರ ನದಿಯಿಂದ ಕುಡಿಯುವ ನೀರು ಸರಬರಾಜಾಗುತ್ತಿದೆ. ಒಟ್ಟು ನಾಲ್ಕು ನೀರು ಸಂಗ್ರಹಕ ಟ್ಯಾಂಕ್‌ಗಳಿವೆ. ಆದರೆ ಸಮರ್ಪಕವಾದ ರೀತಿಯಲ್ಲಿ ತಮ್ಮ ಗ್ರಾಮಕ್ಕೆ ಕುಡಿಯುವ ನೀರು ದೊರೆಯುತ್ತಿಲ್ಲ ಎಂಬ ಅಳಲು ಈ ಗ್ರಾಮ ಪಂಚಾಯಿತಿಯ ಸದಸ್ಯೆಯದು. ಅದಕ್ಕೆ ಪರಿಹಾರವೇನಾದರೂ ನಿಮ್ಮ ಅವಧಿಯಲ್ಲಿ ಕಂಡು ಹಿಡಿದಿರ ಎಂದು ಕೇಳಿದರೆ ಉಪಾಧ್ಯಕ್ಷೆಯಾದ ಇವರು ತಾವು ಎಷ್ಟೋ ಸಾರಿ ಮೀಟಿಂಗ್‌ನಲ್ಲಿ ಈ ಸಮಸ್ಯೆ ಕುರಿತು ತಿಳಿಸಿದರೂ ಗ್ರಾಮ ಪಂಚಾಯ್ತಿ ಅಧ್ಯಕ್ಷ ಮತ್ತು ಕಾರ್ಯದರ್ಶಿ ತನ್ನ ಬಾಯನ್ನು ಮುಚ್ಚಿಸಿ ಬಿಡುತ್ತಿದ್ದರು ಎಂದು ತಿಳಿಸುತ್ತಾರೆ.

ನಿಮ್ಮ ಊರಿನಲ್ಲಿ ಕುಡಿಯುವ ನೀರನ್ನು ನಲ್ಲಿ ಮೂಲಕ ಸರಬರಾಜು ಮಾಡಿದರೂ ನೀವೇಕೆ ಕೊಳವೆ ಬಾವಿಯ ನೀರನ್ನು ಬಳಸುತ್ತೀರಿ ಎಂಬ ಪ್ರಶ್ನೆಗೆ ಅವರು ನೀಡುವ ಉತ್ತರ ಈ ರೀತಿಯಾಗಿದೆ.

ಹೊಳೆ ನೀರು ಸರಬರಾಜು ಮಾಡುವುದಕ್ಕೆ ಪೂರ್ವದಲ್ಲಿ ಕೊಳವೆ ಬಾವಿ ನೀರನ್ನು ಸರಬರಾಜು ಮಾಡಲಾಗುತ್ತಿತ್ತು. ನೀರು ತುಂಬಾ ಸಪ್ಪೆ ಇದ್ದವು ಮತ್ತು ಆ ನೀರನ್ನು ಕುಡಿದರೆ ಮೈ. ಕೈ ಶೂಲಿ, ಕಾಲು ನೋವು ಇತ್ಯಾದಿ ಕಾಣಿಸುತ್ತಿದ್ದವು. ಹೀಗಾಗಿ ಸುಡುಗಾಡಿ ಪಕ್ಕದ ಸಿಹಿ ನೀರನ್ನು ಹೊಂದಿರುವ ಕೊಳವೆ ಬಾವಿ ನೀರನ್ನು ತಾವು ಬಳಸುತ್ತಿರುವುದಾಗಿ ತಿಳಿಸುತ್ತಾರೆ. ಆ ನೀರು ಕುಡಿದು ಅಭ್ಯಾಸವಾಗಿರುವುದರಿಂದ ಇಂದು ಕೊಳವೆ ಮೂಲಕ ಹರಿದು ಬರುವ ನಲ್ಲಿ ನೀರನ್ನು ಬಳಸುತ್ತಿಲ್ಲ. ಕೊಳವೆ ಬಾವಿ ನೀರನ್ನು ಉಪಯೋಗಿಸುವುದಕ್ಕೂ ಬೇರೆ ಕಾರಣವಿದ್ದರೆ ತಿಳಿಸಿ ಎಂದರೆ ತಮ್ಮ

ಗ್ರಾಮದಲ್ಲಿ ನೀರನ್ನು ಸಂಗ್ರಹಿಸುವ ಟ್ಯಾಂಕ್‌ಗಳು ತೆರೆದ ಟ್ಯಾಂಕ್‌ಗಳಾಗಿವೆ, ಅದರಲ್ಲಿ ಊರಿನ ಹುಡುಗರು ಈಜಾಡುತ್ತಾರೆ. ನೀರನ್ನು ಶುದ್ಧೀಕರಿಸುವುದಿಲ್ಲ, ಅಂತಹ ನೀರನ್ನು ಕುಡಿಯಲು ಅಸಹ್ಯವಾಗುವುದರಿಂದ ಕೊಳವೆ ಬಾವಿಯ ನೀರನ್ನು ಆಶ್ರಯಿಸಿರುವುದಾಗಿ ತಿಳಿಸುತ್ತಾರೆ.

ತುಂಗಾಭದ್ರ ನದಿಗೆ ಹತ್ತಿರದಲ್ಲಿರುವ ಗ್ರಾಮಗಳಲ್ಲಿ ನಂ.೧೦ ಮುದ್ದಾಪುರ ಗ್ರಾಮವೂ ಒಂದು. ಈ ಗ್ರಾಮದ ಮಧ್ಯಭಾಗದಲ್ಲಿಯೇ ವಿಜಯನಗರ ಕಾಲುವೆ ಹರಿಯುತ್ತದೆ. ಆದರೂ ಈ ಕಾಲುವೆಯ ನೀರನ್ನು ಮನೆ ಬಳಕೆಗಾಗಿ ಮತ್ತು ಕುಡಿಯುವ ನೀರಾಗಿ ಬಳಸುವುದಿಲ್ಲ. ಬದಲಿಗೆ ಗ್ರಾಮ ಪಂಚಾಯ್ತಿಯವರು ಕೊಳವೆ ಬಾವಿಯನ್ನು ಕೊರೆಸಿ ಆ ನೀರನ್ನು ಇಡೀ ಗ್ರಾಮಕ್ಕೆ ಸರಬರಾಜು ಮಾಡುತ್ತಾರೆ. ಹೀಗಾಗಿ ಈ ಗ್ರಾಮ ಪಂಚಾಯ್ತಿ ಸದಸ್ಯೆಯು ಸಾರ್ವಜನಿಕ ಕೊಳವೆ ಬಾವಿಯ ನೀರನ್ನೇ ಕುಡಿಯುವ ನೀರಿಗಾಗಿ ಬಳಸುತ್ತಿರುವುದು ಕಂಡು ಬರುತ್ತದೆ.

ಸಿರಗುಪ್ಪ ತಾಲೂಕಿನ ಉಪ್ಪಾರ ಹೊಸಹಳ್ಳಿಯಲ್ಲಿ ಕುಡಿಯುವ ನೀರಿಗಾಗಿ ಬಹುತೇಕ ಜನ ಕಾಲುವೆ ನೀರನ್ನೇ ಬಳಸುತ್ತಾರಾದರೂ ಆ ಗ್ರಾಮದಲ್ಲಿಯೂ ಕಿರು ನೀರು ಸರಬರಾಜು ಯೋಜನೆಯಡಿ ಕುಡಿಯುವ ನೀರಿಗಾಗಿ ಕೊಳವೆ ಬಾವಿಯನ್ನು ಕೊರೆಸಲಾಗಿದೆ ಮತ್ತು ಆ ನೀರನ್ನೇ ಇಡೀ ಗ್ರಾಮಕ್ಕೆ ಸರಬರಾಜು ಮಾಡಲಾಗುತ್ತಿದೆ. ಆದರೆ ಕಾಲುವೆ ನೀರು ಮತ್ತು ನಲ್ಲಿಯಲ್ಲಿ ಬರುವ ಕೊಳವೆ ಬಾವಿ ನೀರು ಎರಡು ಅಶುದ್ಧವಾಗಿವೆ ಎಂಬ ಕಾರಣವನ್ನೊಡ್ಡಿ ಸಾರ್ವಜನಿಕ ಉಪಯೋಗಕ್ಕಾಗಿ ಊರ ಮುಂದಿನ ಕೊಳವೆ ಬಾವಿಯ ನೀರನ್ನೇ ಬಳಸುವುದಾಗಿ ಗ್ರಾಮ ಪಂಚಾಯಿತಿ ಸದಸ್ಯೆ ತಿಳಿಸುತ್ತಾರೆ. ನೀವೇಕೆ ನಲ್ಲಿ ನೀರನ್ನು ಅಶುದ್ಧವೆನ್ನುತ್ತೀರಿ, ಅವು ಅಶುದ್ದವಾಗಿದ್ದರೆ ಶುದ್ಧೀಕರಿಸಿ ಬಿಡಲು ನೀವು ಗ್ರಾಮ ಪಂಚಾಯಿತಿ ಸದಸ್ಯೆಯಾಗಿ ಆಗ್ರಹಿಸಲಾಗುತ್ತಿಲ್ಲವೆ ಎಂಬ ಪ್ರಶ್ನೆಗೆ ಆ ಸದಸ್ಯೆಯು ನನ್ನ ಮಾತು ಯಾರು ಕೇಳುತ್ತಾರೆ. ನಾನು ಸದಸ್ಯೆಯಾಗಿರುವ ಕಾಲದಿಂದ ಇಂದಿನವರೆಗೂ ಆ ರೀತಿ ಪ್ರಶ್ನೆ ಕೇಳಲು ಸಾಧ್ಯವೇ ಆಗಿಲ್ಲವೆಂದು ತಿಳಿಸುತ್ತಾರೆ.

ಹಗರಿಬೊಮ್ಮನಹಳ್ಳಿಯ ತಂಬ್ರಹಳ್ಳಿಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯೆಯು ತಮ್ಮ ಊರಿನಲ್ಲಿ ಸರಬರಾಜಾಗುವ ನೀರಿನಲ್ಲಿ ಸುಣ್ಣದ ಅಂಶವಿದೆ. ಜೊತೆಗೆ ಕೈಕಾಲು ನೋವು ತರಿಸುವ ಗುಣ ಆ ನೀರಿಗಿದೆ. ಆ ಕಾರಣಕ್ಕಾಗಿ ನಲ್ಲಿ ನೀರನ್ನು ಮನೆ ಬಳಕೆಗೆ ಬಳಸಲಾಗುತ್ತದೆ ಮತ್ತು ಊರಿಂದ ಸ್ವಲ್ಪ ದೂರದಲ್ಲಿರುವ ರಸ್ತೆ ಮಗ್ಗುಲಿನ ಸಾರ್ವಜನಿಕ ಕೊಳವೆ ಬಾವಿ ನೀರನ್ನು

ಬಳಸಲಾಗುತ್ತಿರುವುದಾಗಿ ತಿಳಿಸುತ್ತಾರೆ. ಅಂತದೇ ಕಾರಣಗಳನ್ನು ಕೂಡ್ಲಿಗಿ ತಾಲೂಕಿನ ಇಬ್ಬರು ಗ್ರಾಮ ಪಂಚಾಯಿತಿ ಸದಸ್ಯರು ನೀಡುತಿದ್ದು ಅವರು ಸಹ ಸಾರ್ವಜನಿಕ ಕೊಳವೆ ಬಾವಿಯ ನೀರನ್ನು ಬಳಸುತ್ತಿರುವುದಾಗಿ ತಿಳಿಸುತ್ತಾರೆ.

ಸಿರಗುಪ್ಪ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಒಟ್ಟು ಮೂರು ತಾಲೂಕುಗಳ ತಾಲೂಕು ಪಂಚಾಯಿತಿ ಸದಸ್ಯರು ತಮ್ಮ ಮನೆಗಳಿಗೆ ವೈಯಕ್ತಿಕವಾಗಿ ಕೊಳವೆ ಬಾವಿಗಳನ್ನು ಕೊರೆಸಿದ್ದು ವೈಯಕ್ತಿಕ ಕೊಳವೆ ಬಾವಿಯ ನೀರನ್ನೇ ಮೋಟಾರು ಪಂಪಿನಿಂದ ತಮ್ಮ ಮನೆಗೆ ಸರಬರಾಜು ಮಾಡಿಕೊಳ್ಳುತ್ತಿದ್ದು ಅದನ್ನೇ ಕುಡಿಯಲು ಬಳಸುತ್ತಿರುವುದಾಗಿ ತಿಳಿಸುತ್ತಾರೆ. ಅದರಲ್ಲೂ ಕೂಡ್ಲಿಗಿಯ ಪ್ರಸ್ತುತ ತಾಲೂಕು ಪಂಚಾಯ್ತಿ ಅಧ್ಯಕ್ಷರೂ ಸಹ ಆಗಿರುವ ಸರೋಜ ಎನ್ನುವ ಮಹಿಳೆ ರಾಮದುರ್ಗದ ತಮ್ಮ ಹೊಲದಲ್ಲಿಯೇ ಮನೆ ಕಟ್ಟಿಸಿಕೊಂಡಿದ್ದು ಹೊಲಕ್ಕೆ ನೀರಾವರಿ ಸೌಲಭ್ಯಕ್ಕಾಗಿ ತೋಡಿಸಿದ ಕೊಳವೆ ಬಾವಿ ನೀರನ್ನೇ ತಮ್ಮ ಮನೆಗೂ ಬಳಕೆ ಮಾಡುತ್ತಿರುವುದಾಗಿ ತಿಳಿಸಿದರು. ಹಾಗೂ ಕೂಡ್ಲಿಗಿ ತಾಲೂಕಿನ ಇಬ್ಬರು ಜಿಲ್ಲಾ ಪಂಚಾಯಿತಿ ಸದಸ್ಯರಲ್ಲಿ ಒಬ್ಬರು ತಮ್ಮ ಮನೆಗೆ ವೈಯಕ್ತಿಕ ಕೊಳವೆ ಬಾವಿ ಕೊರಸಿಕೊಂಡಿದ್ದು ಅದರ ನೀರನ್ನು ಕುಡಿಯುವುದಕ್ಕೂ ಬಳಸುತ್ತಿರುವುದಾಗಿ ತಿಳಿಸಿದರು. ಹಾಗೇ ಕೂಡ್ಲಿಗಿ ತಾಲೂಕಿನ ಗ್ರಾಮ ಪಂಚಾಯ್ತಿ ಮಹಿಳೆಯೊಬ್ಬರು ತಮ್ಮ ಮನೆಗೆ ವೈಯಕ್ತಿಕ ಕೊಳವೆ ಬಾವಿ ಇರುವುದಾಗಿ ತಿಳಿಸಿದರು.

ಹೊಸಪೇಟೆ, ಸಿರಗುಪ್ಪ ತಾಲೂಕಿನ ಇಬ್ಬರು ಗ್ರಾಮ ಪಂಚಾಯತ್ ಸದಸ್ಯರು ಮತ್ತು ಹಗರಿಬೊಮ್ಮನಹಳ್ಳಿಯ ಒಬ್ಬ ಗ್ರಾಮ ಪಂಚಾಯಿತಿ ಸದಸ್ಯರು ಒಟ್ಟು ಮೂರು ಜನ ಗ್ರಾಮ ಪಂಚಾಯಿತಿ ಸದಸ್ಯರು ತಮ್ಮ ಊರಿನಲ್ಲಿ ಸರಬರಾಜಾಗುವ ನೀರಿನ ಕೊಳಾಯಿಯಿಂದ ತಮ್ಮ ಮನೆಗಳಿಗೆ ವೈಯಕ್ತಿಕವಾಗಿ ನಲ್ಲಿ ಹಾಕಿಸಿಕೊಂಡಿದ್ದು ಆ ನಲ್ಲಿಯ ನೀರನ್ನು ತಾವು ಬಳಸುವುದಾಗಿ ತಿಳಿಸಿದರು.

ಅದೇ ರೀತಿ ಹೊಸಪೇಟೆ, ಸಿರಗುಪ್ಪ, ಹಗರಿಬೊಮ್ಮನಹಳ್ಳಿಯ ತಾಲೂಕು ಪಂಚಾಯ್ತಿ ಸದಸ್ಯರು ತಮ್ಮ ಗ್ರಾಮಗಳನ್ನು ತೊರೆದು ತಾಲೂಕು ಕೇಂದ್ರಗಳಲ್ಲಿಯೇ ನೆಲಿಸಿದ್ದಾರೆ. ಇವರು ಸಹ ತಾವು ವಾಸಿಸುತ್ತಿರುವ ಮನೆಗಳಿಗೆ ವೈಯಕ್ತಿಕ ನಲ್ಲಿ ಹಾಕಿಸಿಕೊಂಡಿದ್ದು ಆ ನಲ್ಲಿಯ ನೀರನ್ನೇ ಬಳಸುತ್ತಿರುವುದಾಗಿ ತಿಳಿಸಿದರು.

ಹೊಸಪೇಟೆ, ಹಗರಿಬೊಮ್ಮನಹಳ್ಳಿ ಎರಡು ತಾಲೂಕುಗಳಲ್ಲಿ ಮಾತ್ರ ಕೆಲವೊಬ್ಬ ಗ್ರಾಮ ಪಂಚಾಯ್ತಿ ಸದಸ್ಯರು ತೆರೆದ ಬಾವಿಯ ನೀರು ಶುದ್ಧವಾಗಿರುತ್ತವೆ ಎಂಬ ಕಾರಣಕ್ಕೆ ತೆರೆದ ಬಾವಿಯ ನೀರನ್ನು ಬಳಸುತ್ತಿರುವುದಾಗಿ ತಿಳಿಸಿದರು.

೫.೩. ಶೈಕ್ಷಣಿಕ ಸ್ಥಿತಿ-ಗತಿ

ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆಯಲ್ಲಿ ಸಮಾನತೆ ಬರಬೇಕಾದರೆ ಮುಖ್ಯವಾಗಿ ತಳಜಾತಿಗಳು ಶಿಕ್ಷಣವನ್ನು ಪಡೆಯಲೇಬೇಕೆಂದು ಅಂಬೇಡ್ಕರ್‌ರವರು ತಿಳಿಸುತ್ತಾರೆ. ಆ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ಹಿಂದುಳಿದ, ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡಗಳಿಗೆ ಶಿಕ್ಷಣದಲ್ಲಿ ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕೆಂದು ತಿಳಿಸಲಾಗಿದೆ. ಶಿಕ್ಷಣ ಮನುಷ್ಯನ ಆತ್ಮ ಗೌರವವನ್ನು ಹೆಚ್ಚಿಸುತ್ತದೆ ಹಾಗೂ ಅವನು/ಳು ಸ್ವಾಭಿಮಾನದ ಬದುಕನ್ನು ಸಾಗಿಸಲು ಅದು ಆತ್ಮ ಸ್ಥೈರ್ಯವನ್ನು ನೀಡುತ್ತದೆ. ಹೀಗಾಗಿ ಪ್ರತಿಯೊಬ್ಬರಿಗೂ ಕಡ್ಡಾಯ ಶಿಕ್ಷಣದ-ಅವಶ್ಯಕತೆಯನ್ನು ಮನಗಂಡ ಸರ್ಕಾರ ಭಾರತದ ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯ ಶಿಕ್ಷಣ ನೀತಿಯನ್ನು ಅನುಸರಿಸುವಂತೆ ತಿಳಿಸುತ್ತದೆ. ಆದರೆ ಯಾವುದೇ ನೀತಿ ಅಥವಾ ನಿಯಮಗಳು, ಒತ್ತಡಗಳು ಮನುಷ್ಯನಿಗೆ ಆ ಮುಖವಾಗಿ ಮುನ್ನಡೆಸಲು ಸಾಧನವಾಗುವುದಿಲ್ಲ. ಮುಖ್ಯವಾಗಿ ಹಿಂದುಳಿದ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಲು ಹಿಂಜರಿಯುವುದೇಕೆ, ಶಾಲೆಗೆ ಸೇರಿಸಿದರೂ ಆ ಮಕ್ಕಳು ಶಾಲೆಯನ್ನು ಪೂರೈಸಲು ಏಕೆ ಸಾಧ್ಯವಾಗುತ್ತಿಲ್ಲ ಎಂಬುದರ ಆಳಕ್ಕೆ ಇಳಿದು ನೋಡಿದರೆ ಬೇರೆ ಸತ್ಯಗಳೇ ಹೊರಬೀಳುತ್ತವೆ. ಭಾರತೀಯರ ಮೂಲಭೂತ ಸಮಸ್ಯೆಗಳಲ್ಲಿ ಬಡತನವೂ ಒಂದು, ಕೇವಲ ಬಡತನವೊಂದೇ ಶಿಕ್ಷಣಕ್ಕೆ ಅಡ್ಡಿ ಎಂದು ನಾವು ತಿಳಿಯಬಾರದು ಅದರಾಚೆಗೂ ಹಲವಾರು ಸಾಮಾಜಿಕ ಕಾರಣಗಳು ಮಕ್ಕಳು ಶಾಲೆಗೆ ಹೋಗದಂತೆ ತಡೆಯುತ್ತವೆ. ಉದಾಹರಣೆಗೆ ಕರ್ನಾಟಕದಲ್ಲಿ ಅನುಸೂಚಿತ ಪಟ್ಟಿಯಲ್ಲಿರುವ ಪರಿಶಿಷ್ಟ ಪಂಗಡಗಳ ಸಂಖ್ಯೆ ಐವತ್ತಿದೆ ಆದರೆ ಈ ಐವತ್ತು ಸಮುದಾಯಗಳಲ್ಲಿ ನಿಜಕ್ಕೂ ಶಿಕ್ಷಣಕ್ಕೆ ತೆರೆದುಕೊಂಡಿರುವ ಸಮುದಾಯಗಳು ಕೇವಲ ಬೆರಳೆಣಿಕೆಯಷ್ಟಿವೆ. ಈ ಐವತ್ತು ಸಾಮುದಾಯಗಳಲ್ಲಿ ನಲವತ್ತೆಂಟರಷ್ಟು ಪರಿಶಿಷ್ಟ ಪಂಗಡದ ಸಮುದಾಯಗಳಲ್ಲಿ ಶೇಕಡ ನಾಲ್ಕರಷ್ಟು ಶಿಕ್ಷಣ ಪಡೆಯಲು ಸಾಧ್ಯವಾಗಿಲ್ಲವೆಂದರೆ ಆಶ್ಚರ್ಯವಾಗಬಹುದು. ಜನಸಮುದಾಯಗಳ ಮಧ್ಯ ಇದ್ದು ನಾಗರೀಕ ಬದುಕನ್ನು ಕಂಡ ಪರಿಶಿಷ್ಟ ಪಂಗಡದಲ್ಲಿರುವ

ವಾಲ್ಮೀಕಿಯಂತಹ ಸಮುದಾಯಗಳು ಮಾತ್ರ ಇಂದು ಶಿಕ್ಷಣದಲ್ಲಿ ಅಲ್ಪ ಮಟ್ಟಿಗೆ ಮುಂದಿವೆ. ಇಂದು ಸಾರ್ವಾತ್ರಿಕವಾಗಿ ಕರ್ನಾಟಕದ ಶೈಕ್ಷಣಿಕ ಸ್ಥಿತಿಗತಿಗಳನ್ನು ನೋಡುವಾಗ ಸಾಮಾನ್ಯವಾಗಿ ಕರ್ನಾಟಕದ ಒಟ್ಟು ಶೈಕ್ಷಣಿಕ ಪ್ರಗತಿ, ಅದರಲ್ಲಿ ಪರಿಶಿಷ್ಟ ಜಾತಿಗಳ ಶೈಕ್ಷಣಿಕ ಪ್ರಗತಿ ಹಾಗೂ ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಪ್ರಗತಿ, ಹಾಗೂ ಇತರರ ಶೈಕ್ಷಣಿಕ ಪ್ರಗತಿ ಈ ಮಾದರಿಯಲ್ಲಿ ನೋಡುವುದು ವಾಡಿಕೆ. ಅಂದರೆ ಇಂದು ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ ಒಟ್ಟು ಶೈಕ್ಷಣಿಕ ಪ್ರಗತಿ ಎಂಬುದು ಕೇವಲ ಕೆಲವೇ ಸಮುದಾಯಗಳಿಗೆ ಮಾತ್ರ ಸೀಮಿತವಾಗಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಇಂದು ಉದ್ಯೋಗ, ಶಿಕ್ಷಣ ಹಾಗೂ ಇತರ ಸವಲತ್ತುಗಳನ್ನು ಈ ಸಮುದಾಯಗಳು ಮಾತ್ರ ಅಲ್ಪ ಮಟ್ಟಿಗಾದರೂ ಪಡೆಯಲು ಸಾಧ್ಯವಾಗಿದೆ. ಆದರೆ ಇದರಲ್ಲಿಯೇ ಅಲ್ಪ ಸಂಖ್ಯಾತವಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳು ಶಿಕ್ಷಣದಂತಹ ಮೂಲಭೂತ ಸೌಲಭ್ಯವನ್ನು ಪಡೆಯಲು ಸಾವ್ಯವಾಗಿಲ್ಲವೆಂಬುದನ್ನು ತಿಳಿಸಲೇಬೇಕಾದ ಅನಿವಾರ್ಹತೆ ಇದೆ. ಈ ಮಾತನ್ನು ಹೇಳಲು ಮುಖ್ಯ ಕಾರಣವೇನೆಂದರೆ ಅವಕಾಶ ದೊರೆಯುವ ಸಮುದಾಯಗಳೊಂದಿಗೆ ಅವಕಾಶ ವಂಚಿತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ಮೂಲಭೂತ ಸೌಲಭ್ಯಗಳು ದೊರೆಯಬೇಕೆಂದೇ ಇದರ ಆಶಯವಾಗಿದೆ.

ದಲಿತರಲ್ಲಿಯೇ ದಲಿತರೆಂದು ಪರಿಗಣಿತದಾದ ಮಹಿಳೆಯರು ಶೈಕ್ಷಣಿಕ ಪ್ರಗತಿಯಲ್ಲಿ ತುಂಬಾ ಹಿಂದುಳಿದಿದ್ದಾರೆ. ಮುಖ್ಯವಾಗಿ ಮೇಲ್ವರ್ಗಗಳಲ್ಲಿ ಸಾಮಾಜಿಕ ಕಾರಣಗಳಿಗಾಗಿ ಮಹಿಳೆಯರನ್ನು ಮನೆಯಿಂದ ಹೊರಗೆ ವಿದ್ಯಾಭ್ಯಾಸಕ್ಕಾಗಿ ಕಳಿಸುವುದು ತುಂಬಾ ಅಪರೂಪವಾಗಿದೆ. ಹುಡುಗಿಯರು ಹದಿಮೂರು ವರ್ಷದಿಂದ ಹದಿನಾರು ವರ್ಷದೊಳಗೆ ಋತಿಮತಿಯಾಗುವುದು ಪ್ರಕೃತಿ ನಿಯಮ, ಹೀಗೆ ಮೈನೆರೆದ ಮಕ್ಕಳನ್ನು ಶಾಲೆಗೆ, ಅದರಲ್ಲೂ ಊರಿನಾಚೆಗೆ ಇರುವ ಶಾಲೆಗಳಿಗೆ ಕಳಿಸುವುದು (ಸಾಮಾಜಿಕ ಕಾರಣಗಳಿಗಾಗಿ) ಅಪಾಯವೆಂದೇ ಭಾವಿಸುವ ಪಾಲಕರು ಸಾಮಾನ್ಯವಾಗಿ ಉನ್ನತ ಶಿಕ್ಷಣಕ್ಕೆ ಹುಡುಗಿಯರನ್ನು ಕಳಿಸುವುದು ಅಪರೂಪ.

ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ, ಅವಳಿಗೆ ಬಂಡವಾಳ ತೊಡಗಿಸಿ ಓದುಸುವುದಕ್ಕಿಂತ ಅದೇ ಹಣವನ್ನು ವರದಕ್ಷಿಣೆಯಾಗಿ ನೀಡಿ ಮದುವೆ ಮಾಡಿಕೊಟ್ಟರೆ ಪಾಲಕರಾದ ತಮ್ಮ ಜವಬ್ದಾರಿ ಕಳಿಯುತ್ತದೆ ಎಂದೇ ಭಾವಿಸುವ ಪಾಲಕರ ಪ್ರಮಾಣವೇ ಹೆಚ್ಚು. ಹೀಗಾಗಿ ಮಹಿಳೆಯರಿಗೆ ಉನ್ನತ ಶಿಕ್ಷಣ ಕೊಡಿಸುವುದರಲ್ಲಿ ಪಾಲಕರು ಹಿಂಜರಿಯುತ್ತಾರೆ.

✷

ನೀರಾವರಿ ಪ್ರದೇಶವಾಗಿದ್ದರೂ ಶಿಕ್ಷಣದಲ್ಲಿ ಜಿಲ್ಲೆಯಲ್ಲಿಯೇ ಹಿಂದುಳಿದಿರುವ ತಾಲೂಕು ಸಿರುಗುಪ್ಪವಾಗಿದೆ. ಇಲ್ಲಿ ಶಿಕ್ಷಣಕ್ಕಿಂತ ಹೆಚ್ಚಾಗಿ ಪಾಲಕರಿಗೆ ತಮ್ಮ ನಿತ್ಯ ಜೀವನದ ಬದುಕೇ ಮುಖ್ಯವಾಗುತ್ತದೆ. ನೀರಾವರಿ ಪ್ರದೇಶವಾಗಿರುವುದರಿಂದ ಇಲ್ಲಿ ಕೂಲಿ ಕಾರ್ಮಿಕರು ಸಿಗುವುದು ತುಂಬಾ ಕಷ್ಟ ಸಾಧ್ಯದ ಕೆಲಸ. ಅಕಸ್ಮಾತ್ ಕೂಲಿ ಕಾರ್ಮಿಕರು ದೊರೆತರೂ ಅವರ ಕೂಲಿ ಅತೀ ವಿಪರೀತವಾಗಿರುತ್ತದೆ. ಹೀಗಾಗಿ ಕೂಲಿ ಕಾರ್ಮಿಕರ ಕೊರತೆಯನ್ನು ಸರಿದೂಗಿಸಲು ಮನೆಯ ಮಕ್ಕಳನ್ನೇ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಹೆಚ್ಚು. ಎರಡನೇದಾಗಿ ಸರ್ಕಾರಿ ಹುದ್ದೆಯನ್ನು ಗಿಟ್ಟಿಸುವುದಕ್ಕಾಗಿ ವಿದ್ಯಾಭ್ಯಾಸ ನಡೆಸಬೇಕು ಎಂಬ ಮನೋಧರ್ಮ ಭಾರತೀಯರದು. ಆದರೆ ಕನಿಷ್ಟ ಹತ್ತು ಎಕರೆಗಿಂತ ಮೇಲ್ಪಟ್ಟು ಭೂಮಿಯನ್ನು ಹೊಂದಿದ ರೈತರ ಪ್ರಮಾಣವೇ ಈ ತಾಲೂಕಿನಲ್ಲಿ ಹೆಚ್ಚಾಗಿದೆ. ಅಧಿಕ ಭೂಮಿಯನ್ನು ಹೊಂದಿದ ಮೇಲ್ಜಾತಿಗಳು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಅವಶ್ಯಕವೆಂದು ಭಾವಿಸುವುದೇ ಇಲ್ಲ. ಹೀಗಾಗಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವುದಕ್ಕಿಂತ ತಮ್ಮ ತಾತ್ಕಲಿಕ ಅನಿವಾರ್ಯತೆ ಕಳೆದರೆ ಸಾಕು ಎಂಬ ಭಾವನೆ ಇಲ್ಲಿಯ ಮೇಲ್ಜಾತಿಯ ರೈತರದ್ದಾಗಿದ್ದರೆ ಕೆಳಜಾತಿಯ ಕೂಲಿ ಕಾರ್ಮಿಕರು ತಮ್ಮ ಮಕ್ಕಳನ್ನು ಕೂಲಿ ಕೆಲಸಕ್ಕೆ ಹಚ್ಚಿದರೆ ತಮ್ಮ ಕುಟುಂಬಕ್ಕೆ ಹೆಚ್ಚಿನ ಆದಾಯ ದೊರೆಕುತ್ತದೆ ಎಂಬ ಆಶಾಭಾವನೆಯಿಂದಾಗಿ ಮಕ್ಕಳನ್ನು ಶಾಲೆಗೆ ಕಳಿಸುವುದಿಲ್ಲ. ಕಳಿಸಿದರೂ ಅದು ತುಂಬಾ ಅಪರೂಪವೆಂದೇ ಹೇಳಬೇಕು.

ಅಕಸ್ಮಾತ್ ಮಧ್ಯಾಹ್ನದ ಊಟ, ಉಚಿತ ಪಠ್ಯಪುಸ್ತಕ ಇತ್ಯಾದಿ ಆಮಿಷಗಳನ್ನು ಸರ್ಕಾರ ನೀಡಿದರೂ, ಅದು ಕೇವಲ ತಾತ್ಕಲಿಕವೆಂಬ ಭಾವನೆ ಹಿರಿಯರದ್ದು, ಇನ್ನು ಶಾಲೆಯಲ್ಲಿನ ಸ್ಥಿತಿ ಹೀಗಿದೆ, ಸರ್ಕಾರದ ವಿಚಿತ್ರವಾದ ನೀತಿಗಳಿಂದ ಪಾರಾಗಲು ಮತ್ತು ಅಲ್ಪ ಆದಾಯದ ದೃಷ್ಟಿಯಿಂದ ಶಾಲಾ ಶಿಕ್ಷಕರು ಹಾಜರಾಗದ ಗೈರು ಹಾಜರಾದ ಮಕ್ಕಳನ್ನು ಸಹ ಶಾಲೆಗೆ ಕಡ್ಡಾಯವಾಗಿ ಬರುತ್ತಾರೆಂದು ಸುಳ್ಳು ದಾಖಲೆಗಳನ್ನು ನೀಡುವುದೇ ಹೆಚ್ಚು, ಹೀಗಾಗಿ ತಳ ಸಾಮುದಾಯದ ಎಷ್ಟೋ ಮಕ್ಕಳು ಸರ್ಕಾರಿ ದಾಖಾಲೆಗಳ ಪ್ರಕಾರ ಯೋಜನೆಗಳ ಪ್ರಾಯೋಜಿಕತ್ವ ಪಡೆದರೂ ವಾಸ್ತವವಾಗಿ ಆ ಯೋಜನೆಗಳ ಲಾಭದಿಂದ ಅವರು ದೂರವೇ ಉಳಿದಿರುತ್ತಾರೆ. ಈ ಸತ್ಯ ಪ್ರಾಯಶಃ ಕ್ಷೇತ್ರಕಾರ್ಯಕ್ಕೆ ಹೋಗದೇ ಇದ್ದರೆ ತಿಳಿಯುತ್ತಲೇ ಇರಲಿಲ್ಲ. ಕ್ಷೇತ್ರಕಾರ್ಯದಲ್ಲಿ ಗಮನಿಸಿದಂತೆ ಶಾಲೆಗೆ ಹೋಗಬೇಕಾದ ಎಷ್ಟೋ ಮಕ್ಕಳು ಶಾಲೆಯಿಂದ ಹೊರಗುಳಿದುರುವುದನ್ನು ಕಾಣುವಂತಾಯಿತು.

ಇದು ಏಕೆ ಹೀಗೆ ಎಂದು ಪ್ರಶ್ನಿಸಿದರೆ ಬದುಕಿನ ಅನಿವಾರ್ಯತೆಯಂದೇ ಪಾಲಕರು ಉತ್ತರ ಹೇಳಿದರು. ಇನ್ನು ಕೂಡ್ಲಿಗಿಯಂತಹ ಆರ್ಥಿಕವಾಗಿ ತುಂಬಾ ಹಿಂದುಳಿದ ತಾಲೂಕಿನಲ್ಲಿನ ಚಿತ್ರಣ ಇದಕ್ಕಿಂತಲೂ ತುಂಬಾ ಭಿನ್ನವಾದುದಾಗಿದೆ. ಇಲ್ಲಿ ಸಿರಗುಪ್ಪ, ಹೊಸಪೇಟೆಗಳಿಗೆ ಇರವಂತಹ ನೀರಾವರಿ ಹೊಂದಿದ ಕೃಷಿ ಭೂಮಿ ಇಲ್ಲವೆಂದೇ ಹೇಳಬಹುದು. ಸ್ಥಿತಿವಂತರಾದ ಕೆಲವು ಮೇಲ್ಜಾತಿ ಕುಟುಂಬಗಳು ಮಾತ್ರ ನೀರಾವರಿಗಾಗಿ ತೆರೆದ ಬಾವಿ ಅಥವಾ ಕೊಳವೆ ಬಾವಿಗಳನ್ನು ತೋಡಿಸಿಕೊಂಡು ಕೃಷಿಯಲ್ಲಿ ತೊಡಗಿರುವುದನ್ನು ಕಾಣಬಹುದು. ಆದರೆ ಆ ಬಾವಿಗಳ ನೀರಿನ ಪ್ರಮಾಣ ತುಂಬಾ ಅಲ್ಪವೆಂದೇ ಹೇಳಬಹುದು. ಅದರಲ್ಲೂ ವೈಜ್ಞಾನಿಕ ರೀತಿಯ ಹನಿ ನೀರಾವರಿ ಅಥವಾ ತುಂತುರು ನೀರಾವರಿ ಪದ್ಧತಿಯನ್ನು ಇಲ್ಲಿಯ ರೈತರು ಅಳವಡಿಸಿಕೊಂಡಿರುವುದು ಅಪರೂಪವೆಂದೇ ಹೇಳಬಹುದು. ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೫೦ ರಷ್ಟು ಕುಟುಂಬಗಳು ಮಾತ್ರ ಭೂಮಿ ಹೊಂದಿವೆ. ಇದರಲ್ಲಿ ನೀರಾವರಿ ಅಳವಡಿಸಿಕೊಂಡ ರೈತರ ಪ್ರಮಾಣ ಶೇಕಡ ಎರಡರಷ್ಟಿದ್ದರೆ ನೀರಾವರಿ ಅಳವಡಿಸಿಕೊಳ್ಳದ ಮಳೆಯಾಧಾರಿತ ಒಣಬೇಸಾಯವನ್ನೇ ಅನುಸರಿರುತ್ತಿರುವ ರೈತರ ಪ್ರಮಾಣ ಶೇಕಡ ೪೮ರಷ್ಟಿದೆ. ಇನ್ನುಳಿದ ಶೇಕಡ ೫೦ ರಷ್ಟು ಜನ ಕೂಲಿ ಕಾರ್ಮಿಕರಾಗಿ ಉಳಿದಿರುವುದು ಕ್ಷೇತ್ರಕಾರ್ಯದ ಮೂಲಕ ಅರಿಯಲಾಗಿದೆ. ಕೆಲವು ಬಂಡವಾಳಶಾಹಿ ಜನರು ಕೂಡ್ಲಿಗಿ ಸುತ್ತಮುತ್ತ ಸುಲಭ ಬೆಲೆಯಲ್ಲಿ ಭೂಮಿ ದೊರೆಯುತ್ತವೆಂಬ ಒಂದೇ ಕಾರಣಕ್ಕೆ ಭೂಮಿಯನ್ನು ಕೊಳ್ಳುವುದರಲ್ಲಿ ತೊಡಗಿದ್ದಾರೆ.

ಹೀಗಾಗಿ ಅಲ್ಪಮಟ್ಟಿಗಿನ ಭೂಮಿಯನ್ನು ಹೊಂದಿದ್ದ ರೈತರಿಗೆ ಕೃಷಿ ಭೂಮಿ ಇಲ್ಲವಾಗಿ ಹೋಗಿರುವುದು ಕಂಡು ಬರುತ್ತದೆ. ಸಿರಗುಪ್ಪ, ಕೂಡ್ಲಿಗಿ ತಾಲೂಕುಗಳ ಸ್ಥಿತಿ ಈ ರೀತಿಯದ್ದಾಗಿದ್ದರೆ ಹೊಸಪೇಟೆ ಹಾಗೂ ಹಗರಿ ಬೊಮ್ಮನಹಳ್ಳಿ ತಾಲೂಕುಗಳು ಇವುಗಳಿಗಿಂತಲೂ ಭಿನ್ನ ಸಮಸ್ಯೆಗಳಿಂದ ಬಳಲುತ್ತಿರುವುದನ್ನು ಕಾಣಬಹುದಾಗಿದೆ. ಹೊಸಪೇಟೆ ಬಹುತೇಕ ನೀರಾವರಿಯನ್ನು ಹೊಂದಿದ ಪ್ರದೇಶವನ್ನು ಹೆಚ್ಚಾಗಿ ಹೊಂದಿದೆ, ಸಾಕ್ಷರತ ಪ್ರಮಾಣದಲ್ಲಿ ಬಳ್ಳಾರಿ ಜಿಲ್ಲೆಗೆ ಪ್ರಥಮ ಸ್ಥಾನ ಹೊಸಪೇಟೆ ತಾಲೂಕಿಗೆ ಸಲ್ಲುತ್ತದೆ. ಆದರೆ ವಾಸ್ತವದ ಸ್ಥಿತಿ ಏನೆಂದರೆ ಈ ತಾಲೂಕಿನಲ್ಲಿ ಬಂಡವಾಳಶಾಹಿಗಳ ಪ್ರಮಾಣ ಅಂದಾಜು ಶೇಕಡ ಎರಡರಷ್ಟಿದ್ದರೆ ಕೂಲಿ ಕಾರ್ಮಿಕರ ಪ್ರಮಾಣ ಶೇಕಡ ೭೫ರಷ್ಟಿದೆ ಇನ್ನುಳಿದ ಶೇಕಡ ೧೮ರಷ್ಟು ಸಣ್ಣ ಹಿಡುವಳಿದಾರರು ಕಂಡುಬರುತ್ತಾರೆ. ಇವರಲ್ಲದೆ ಇನ್ನುಳಿದ ಶೇಕಡ ಐದರಷ್ಟು ಜನ ಹೊಟ್ಟೆ ಪಾಡಿಗಾಗಿ ಬೇರೆ ಬೇರೆ ಇಲಾಖೆಗಳಲ್ಲಿ

ಕಾರ್ಯನಿರ್ವಹಿಸುವವರು ಇದ್ದಾರೆ. ಶೇಕಡ ೭೫ ರಷ್ಟಿರುವ ಕೂಲಿ ಕಾರ್ಮಿಕರು ತಮ್ಮ ಮಕ್ಕಳನ್ನು ಶಾಲೆಗೆ ದಾಖಲಿಸುತ್ತಾದರೂ ಆ ಮಕ್ಕಳು ಶಾಲೆಗೆ ಸಮರ್ಪಕವಾಗಿ ಹೋಗುವುದಿಲ್ಲ. ಸಾಮಾನ್ಯವಾಗಿ ಶಾಲೆಗೆ ಹೋಗುವ ಕೂಲಿಕಾರ್ಮಿಕರ ಮಕ್ಕಳು ೮-೧೦ ವರ್ಷದವರಾದರೆ ಸಾಕು ಶಾಲೆಯಿಂದ ಹೊರಗುಳಿದುಬಿಡುತ್ತಾರೆ. ಪ್ರಾಯಶಃ ಕೂಲಿಕಾರ್ಮಿಕರು ತಮ್ಮೊಂದಿಗೆ ಕೆಲಸ ನಿರ್ವಹಿಸಲು ತಮ್ಮ ಮಕ್ಕಳನ್ನು ಜೊತೆಗೆ ಸೇರಿಸಿಕೊಂಡು ಬಿಡುತ್ತಾರೆ. ಇನ್ನು ಬಹುತೇಕ ಹುಡುಗಿಯರು ತಮ್ಮ ಮನೆಯ ಸಣ್ಣ ಮಕ್ಕಳನ್ನು ಪಾಲಿಸಲು ಅಥವಾ ಮನೆಕೆಲಸ ನಿರ್ವಹಿಸುವುದಕ್ಕಾಗಿ ಶಾಲೆಯಿಂದ ಹೊರಗುಳಿಯುತ್ತಾರೆ. ಇದು ಕೇವಲ ಹೊಸಪೇಟೆ ತಾಲೂಕೊಂದರ ಸಮಸ್ಯೆಯಲ್ಲ ಬಹುತೇಕ ಎಲ್ಲಾ ತಾಲೂಕುಗಳಲ್ಲಿಯೂ ಈ ರೀತಿಯ ಸಮಸ್ಯೆ ಕಂಡುಬರುತ್ತದೆ.

ಇನ್ನು ಹಗರಿಬೊಮ್ಮನಹಳ್ಳಿ ತಾಲೂಕು ಬಹುತೇಕ ಮಳೆಯಾಧಾರಿತ ಕೃಷಿಯನ್ನೇ ನೆಚ್ಚಿಕೊಂಡಿರುವ ತಾಲೂಕಾಗಿದೆ. ಹೊಳೆಯ ದಂಡೆಯ ಭೂಮಿಗಳಲ್ಲಿ ಕೆಲವು ಮಾತ್ರ ಏತ ನೀರಾವರಿ ಇಲ್ಲವೆ ಪಂಪ್ ಸೆಟ್‌ಗಳಿಂದಾಗಿ ಅಲ್ಪಮಟ್ಟಿಗೆ ನೀರಾವರಿ ಸೌಲಭ್ಯವನ್ನು ಪಡೆದಿವೆಯಾದರೂ ತಾಲೂಕಿನ ಒಳಪ್ರದೇಶದಲ್ಲಿರುವ ಬಹುತೇಕ ಭೂಮಿಗಳು ನೀರಾವರಿ ಸೌಲಭ್ಯದಿಂದ ವಂಚಿತಗೊಂಡಿವೆ. ಬಳ್ಳಾರಿ ಜಿಲ್ಲೆಯ ಇತರ ತಾಲೂಕುಗಳು ಅನುಭವಿಸುವ ಹಲವಾರು ಸಮಸ್ಯೆಗಳನ್ನು ಈ ತಾಲೂಕು ಸಹ ಅನುಭವಿಸುತ್ತಿದೆ. ಆದರೆ ಈ ತಾಲೂಕು ಸಾಕ್ಷರತ ಪ್ರಮಾಣದಲ್ಲಿ ಅಷ್ಟು ಹಿಂದುಳಿದಿಲ್ಲ. ಒಟ್ಟಾರೆಯಾಗಿ ನೋಡಿದರೆ ಬಹುತೇಕ ಮೇಲ್ಜಾತಿಗಳು ಶಿಕ್ಷಣದ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಂಡಿವೆ ಯಾದರೂ, ತಳ ಸಮೂದಾಯಗಳು ಇಂದಿಗೂ ಶಿಕ್ಷಣದ ಪೂರ್ಣ ಲಾಭ ಪಡೆಯುವಲ್ಲಿ ಸೋತಿವೆಯಂದೇ ಹೇಳಬಹುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಬಹುತೇಕ ಪರಿಶಿಷ್ಟ ಪಂಗಡದ ಪುರುಷ ಮಕ್ಕಳು ಇಂದು ಶೇಕಡ ೮೦ ರಷ್ಟು ಶಾಲೆಗೆ ಹೋಗುತ್ತಿವೆಯಾದರೂ ಅದು ಉನ್ನತ ಶಿಕ್ಷಣಕ್ಕೆ ಏರಿದಂತೆಲ್ಲಾ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪ್ರಮಾಣ ಗಣನೀಯವಾಗಿ ಇಳಿಮುಖವಾಗುತ್ತ ಸಾಗುತ್ತದೆ. ಅದರಲ್ಲೂ ಉನ್ನತ ಶಿಕ್ಷಣಕ್ಕೆ ಹೋಗುವ ಪರಿಶಿಷ್ಟ ಪಂಗಡದ ಹೆಣ್ಣು ಮಕ್ಕಳ ಪ್ರಮಾಣವಂತೂ ಶೇಕಡ ೧ರಷ್ಟು ಇಲ್ಲವೆಂದರೆ ಆಶ್ಚರ್ಯವಾಗುತ್ತದೆ. ಕರ್ನಾಟಕ ಮಾನವಾಭಿವೃದ್ಧಿ ವರದಿ ೨೦೦೫ರ ಸಮೀಕ್ಷೆ ಪ್ರಕಾರ "ಪ್ರಾಥಮಿಕ ಶಿಕ್ಷಣದ ಮೊದಲ ಮೂರರಿಂದ ನಾಲ್ಕು ವರ್ಷಗಳವರೆಗೆ ಮಕ್ಕಳು ಶಾಲೆಗೆ ದಾಖಲಾಗುವುದಿಲ್ಲ ಇಲ್ಲವೆ ಹಾಜರಾಗುವುದಿಲ್ಲ. ಇದರಿಂದ ಮುಂದೆ ಮಕ್ಕಳು ಅನಕ್ಷರಸ್ಥರಾಗಿ ಉಳಿದುಬಿಡುತ್ತಾರೆ. ಇದಲ್ಲದೆ ವಿವಿಧ ಹಂತಗಳಲ್ಲಿ

ಶಾಲೆ ಬಿಡುವವರ ಸಂಖ್ಯೆಯೂ ಹೆಚ್ಚಾಗಿದೆ. ಶಿಕ್ಷಣದ ಮೊದಲ ಊರುಗೋಲೇ ಶಾಲಾ ದಾಖಲಾತಿ. ಇಲ್ಲಿ ಪರಿಶಿಷ್ಟ ಪಂಗಡಗಳನ್ನು ಹೊರತು ಪಡಿಸಿ ಇತರ ಸಾಮಾಜಿಕ ಗುಂಪುಗಳ ಸಾಧನೆಯ ಉತ್ತಮವಾಗಿದೆ" (ಕ. ಮಾನವಾಭಿವೃದ್ಧಿ ವರದಿ ೨೦೦೫:೨೫೮). ಅತ್ಯಧಿಕ ಪರಿಶಿಷ್ಟ ಪಂಗಡಗಳನ್ನು ಹೊಂದಿರುವ ಬಳ್ಳಾರಿ, ರಾಯಚೂರು, ಕೊಪ್ಪಳ ಮುಂತಾದ ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡದ ಶೈಕ್ಷಣಿಕ ಪಂಗಡದ ಸರಾಸರಿ ಮಟ್ಟ ಕೆಳಮಟ್ಟದಲ್ಲಿದೆ ರಾಯಚೂರು ಶೇಕಡ ೫.೨೧ ಬಳ್ಳಾರಿ ಶೇಕಡ ೭೬.೪೭ರಷ್ಟಿದೆ. ಇದು ಕೇವಲ ದಾಖಲಾತಿ ಪ್ರಮಾಣ ಮಾತ್ರ, ಆದರೆ ಗಮನಿಸಬೇಕಾದ ಅಂಶವೇನೆಂದರೆ ಪರಿಶಿಷ್ಟ ಪಂಗಡದ ಮಕ್ಕಳು ಅತ್ಯಂತ ಕಡಿಮೆ ಅವಧಿಯನ್ನು ಶಾಲೆಯಲ್ಲಿ ಕಳೆಯುತ್ತಿದ್ದಾರೆ. ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ರಾಜ್ಯಮಟ್ಟದಲ್ಲಿ ಸರಾಸರಿ ಶೇಕಡ ೧.೫೪ರಷ್ಟಿದ್ದರೆ, ಇದು ಪರಿಶಿಷ್ಟ ಪಂಗಡದ ಮಕ್ಕಳಲ್ಲಿ ಶೇಕಡ ೨.೪೨ರಷ್ಟಿದೆ. ಅದರಲ್ಲೂ ಎಲ್ಲಾ ಜಾತಿ ವರ್ಗಗಳಿಗಿಂತಲೂ ಶಾಲೆಯಿಂದ ಹೊರಗುಳಿದ ಬಾಲಕಿಯರಲ್ಲಿ ಪರಿಶಿಷ್ಟ ಪಂಗಡದ ಬಾಲಕಿಯರ ಪ್ರಮಾಣವೇ (ಶೇಕಡ ೨.೬೭) ಅಧಿಕವಾಗಿದೆ.

೫.೩.೧. ಶಾಲೆಯಿಂದ ಹೊರಗುಳಿದ ೭-೧೪ ವಯೋಮಾನದ ಮಕ್ಕಳ ವಿವರ

ಆರ್ಥಿಕ ಹಾಗೂ ಸಾಂಖ್ಯಿಕ ನಿರ್ದೇಶನಾಲಯವು ೨೦೦೪ರಲ್ಲಿ ಪರಿಶಿಷ್ಟ ಪಂಗಡದ ಕುಟುಂಬಗಳ ಕುರಿತು ಮಾದರಿ ಸಮೀಕ್ಷೆಯನ್ನು ಕೈಗೊಂಡಿತ್ತು. ಅದು ೯-೩೫ ವಯೋಮಾನದೊಳಗಿನ ಜನರ ಮಾಹಿತಿಯನ್ನು ಪಡೆದಿದೆ. ಈ ಸಮೀಕ್ಷೆಯು ಹೆಣ್ಣು ಮಕ್ಕಳು ಶಾಲೆಯನ್ನು ಬಿಡಲು ಕೆಲವು ಕಾರಣಗಳನ್ನು ಗುರುತಿಸಿದೆ. ಅವುಗಳಾವುವೆಂದರೆ ಕ್ರಮವಾಗಿ

೧. ಮನೆಯಲ್ಲಿ ಗೃಹಕೃತ್ಯದ ಕೆಲಸಗಳಲ್ಲಿ ತೊಡಗುವುದು.

೨. ಪಾಲಕರಿಗೆ ಮಕ್ಕಳ ಶಿಕ್ಷಣದ ಹೊರೆಯನ್ನು ಭರಿಸಲು ಸಾಧ್ಯವಾಗದೇ ಇರುವುದು.

೩. ಮಕ್ಕಳ ಪಾಲನೆ ಪೊಷಣೆಗಾಗಿ ಶಾಲೆಯನ್ನು ತೋರೆಯುವುದು.

೪. ಹೊರಗೆ ಕೂಲಿ ಕೆಲಸಗಳಲ್ಲಿ ತೊಡಗುವುದು, ಮುಂತಾದವುಗಳಾಗಿವೆ.

ಪ್ರೌಢ ಶಿಕ್ಷಣದಲ್ಲಿಯ ದಾಖಲಾತಿ ಪ್ರಮಾಣವು ಪ್ರಾಥಮಿಕ ಹಂತಕ್ಕಿಂತಲೂ ಕಡಿಮೆಯಾಗಿದೆ. ಹಾಗೇ ಉನ್ನತ ಶಿಕ್ಷಣ ಹಂತದಲ್ಲಿ ಈ ಪ್ರಮಾಣ ಇನ್ನು ಕುಗ್ಗುತ್ತದೆ. ತಾಂತ್ರಿಕ ಶಿಕ್ಷಣದಲ್ಲಂತೂ (ಡಿಪ್ಲೋಮಾ, ಬಿ.ಇ, ಬಿಟೆಕ್, ವೈದ್ಯಕೀಯ ಇತ್ಯಾದಿ) ಪರಿಶಿಷ್ಟ ಪಂಗಡದ ಮಕ್ಕಳ ಪಾಲು

೨೦೦೦ ದಲ್ಲಿ ಶೇಕಡ ೦.೧ರಷ್ಟು ಇದ್ದು ೨೦೦೨-೦೩ರ ಹೊತ್ತಿಗೆ ಅದು ಶೇಕಡ ೧.೭ರಷ್ಟು ಏರಿಕೆ ಕಂಡಿದೆ. ಡಿಪ್ಲೊಮೋ ಕೋರ್ಸ್‌ಗಳಲ್ಲಿ ಪರಿಶಿಷ್ಟ ಪಂಗ್ಗಡಗಳ ವಿದ್ಯಾರ್ಥಿಗಳ ದಾಖಾಲಾತಿಯು ಕನಿಷ್ಟ ಶೇಕಡ ೦.೭ರಷ್ಟು ಕಂಡುಬಂದಿದೆ(ಮಾನವಾಭಿವೃದ್ಧಿ ವರದಿ ೨೦೦೫: ೨೫೯). ಅಂದರೆ ತಾಂತ್ರಿಕ ಶಿಕ್ಷಣವನ್ನು ಪಡೆಯುವಲ್ಲಿ ಪರಿಶಿಷ್ಟ ಪಂಗಡಗಳು ಸೋತಿವೆ ಎಂದೇ ಇದರರ್ಥ.

ಸರ್ಕಾರದ ಹೊಸ ಹೊಸ ಯೋಜನೆಗಳಾದ ವಿದ್ಯಾರ್ಥಿವೇತನ, ಉಚಿತ ವಸತಿ ನಿಲಯಗಳ ಸೌಲಭ್ಯ ಇತ್ಯಾದಿಗಳು ಇಂದು ಪರಿಶಿಷ್ಟ ಪಂಗಡದ ಮಕ್ಕಳಿಗೆ ದೊರೆಯುತ್ತಿವೆಯಾದರೂ ಸಹ ಆ ಸಮುದಾಯಗಳು ನಿರೀಕ್ಷಿತ ಮಟ್ಟದಲ್ಲಿ ಶೈಕ್ಷಣಿಕ ಪ್ರಗತಿಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲ.

ಪಂಚಾಯತರಾಜ್ ಸಂಸ್ಥೆಗಳ ಪರಿಶಿಷ್ಟ ಪಂಗಡದ ಚುನಾಯಿತ ಪ್ರತಿನಿಧಿಗಳ ಶೈಕ್ಷಣಿಕ ಸ್ಥಿತಿಗತಿ

ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಗ್ರಾಮ, ತಾಲೂಕು, ಜಿಲ್ಲಾ ಮಟ್ಟದ ಸಂಸ್ಥೆಗಳಲ್ಲಿ ಆಯ್ಕೆಯಾಗಿರುವ ಸದಸ್ಯರ ಸಾಕ್ಷರತೆಯ ಮಟ್ಟ ಮತ್ತು ಅವರ ಮಕ್ಕಳು ಹೊಂದಿರುವ ಅಥವಾ ಹೊಂದುತ್ತಿರುವ ಶೈಕ್ಷಣಿಕ ಸ್ಥಿತಿಗತಿಗಳನ್ನು ಇಲ್ಲಿ ಗಮನಿಸೋಣ

ಮೊದಲಿಗೆ ಗ್ರಾಮ ಪಂಚಾಯಿತಿಯ ಸದಸ್ಯರ ಸಾಕ್ಷರತೆಯ ಮಟ್ಟವನ್ನೇ ನೋಡೋಣ. ಅಧ್ಯಯನ ವ್ಯಾಪ್ತಿಯಲ್ಲಿ ಬರುವ ಹೊಸಪೇಟೆ, ಸಿರುಗುಪ್ಪ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ ಒಟ್ಟು ನಾಲ್ಕು ತಾಲೂಕುಗಳ ಒಟ್ಟು ೧೬ ಗ್ರಾಮ ಪಂಚಾಯಿತಿಗಳ ನಡುವೆ ಒಟ್ಟು ಮೀಸಲಾತಿ ಅಡಿ ಬರುವ ಪರಿಶಿಷ್ಟ ಪಂಗಡದ ೧೬ ಮಹಿಳೆಯರು ಹಾಗೂ ಸಾಮಾನ್ಯ ಅಭ್ಯರ್ಥಿಗಳಾಗಿ ಜಯಿಸಿ ಸದಸ್ಯರಾದ ೦೩ ಪರಿಶಿಷ್ಟ ಪಂಗಡದ ಮಹಿಳೆಯರನ್ನು ಅವರ ಶೈಕ್ಷಣಿಕ ಮಟ್ಟ ಎಷ್ಟಿದೆ ಎಂಬುದನ್ನು ಅರಿಯಲು ಪ್ರಶ್ನಿಸಿದಾಗ ಅವರು ನೀಡಿದ ಉತ್ತರಗಳ ಮೇಲೆ ಅವರ ಸಾಕ್ಷರತಾ ಪ್ರಮಾಣವನ್ನು ಈ ಕೆಳಗೆ ನೀಡಲಾಗಿದೆ.

ಹೊಸಪೇಟೆ ತಾಲೂಕಿನ ಒಟ್ಟು ೦೫ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಲ್ಲಿ ಕೇವಲ ಶೇಕಡ ಮೂರರಷ್ಟು ಸದಸ್ಯರು ಕಿರಿಯ ಪ್ರಾಥಮಿಕ ಹಂತದಲ್ಲಿಯೇ ಶಾಲೆಯನ್ನು ಮೊಟಕುಗೊಳಿಸಿರುವುದು ಕಂಡು ಬರುತ್ತದೆ. ಅವರಲ್ಲಿ ಕೇವಲ ಎರಡನೇ ತರಗತಿ ಹಂತಕ್ಕೆ ಶಾಲೆಯನ್ನು ತ್ಯಜಿಸಿದವರು ಶೇಕಡ ಇಬ್ಬರು ಮಹಿಳೆಯರಾದರೆ, ಶೇಕಡ ಒಬ್ಬ ಮಹಿಳೆಯು ಮೂರನೇ ತರಗತಿಯವರೆಗೆ ಸಾಗಿರುವುದು ಕಂಡು ಬರುತ್ತದೆ. ಇನ್ನೊಬ್ಬ ಮಹಿಳೆಯು ನಾಲ್ಕನೇ

ತರಗತಿಯ ಹಂತದವರೆಗೆ ಚಲಿಸಿದರೂ ನಾಲ್ಕನೇ ತರಗತಿಯನ್ನು ಸಂಪೂರ್ಣವಾಗಿ ಮುಗಿಸಿಲ್ಲವೆಂದೇ ತಿಳಿಸಿದರು. ಶೇಕಡ ಒಬ್ಬ ಮಹಿಳೆ ಮಾತ್ರ ಸದಸ್ಯರಾದ ತರುವಾಯ ತಮ್ಮ ಮಕ್ಕಳ ಸಹಾಯದಿಂದ ಸಹಿ ಮಾಡುವ ಹಂತಕ್ಕೆ ತಲುಪಿರುವುದಾಗಿ ತಿಳಿಸಿದರು. ಆದರೆ ಇನ್ನೊಬ್ಬ ಮಹಿಳೆ ಸಹಿಯನ್ನು ಮಾಡಲು ಕಲಿಯಲು ಹೋಗಿ ನೊಡಿರುವುದಾಗಿ ತಿಳಿಸುತ್ತ ಇಂದಿಗೂ ಎಡಗೈ ಹೆಬ್ಬಟ್ಟೇ ತಮಗೆ ಆಸರೆಯಾಗಿದೆ ಎಂದು ತಿಳಿಸಿದರು.

ಸಿರುಗುಪ್ಪ ತಾಲೂಕಿನ ಒಟ್ಟು ನಾಲ್ಕು ಗ್ರಾಮ ಪಂಚಾಯಿತಿ ಸದಸ್ಯರ ಪೈಕಿ ಕೆಲವು ಮಹಿಳೆ ಒಂದನೇ ತರಗತಿ ಪೂರೈಸಿ ಎರಡನೇ ತರಗತಿಗೆ ತೆರಳಬೇಕೆನ್ನುವಷ್ಟರಲ್ಲಿಯೇ ತಮ್ಮ ತಂದೆ ಆಂಧ್ರದ ಕಡೆ ಕುಟುಂಬ ಕರೆದುಕೊಂಡು ಹೋಗಿದ್ದರಿಂದ ತಾನು ಮುಂದೆ ಕಲಿಯಲು ಸಾಧ್ಯವಾಗಲಿಲ್ಲವೆಂದು ತಿಳಿದರೆ ಇನ್ನೊಬ್ಬ ಮಹಿಳೆ ಎರಡನೇ ತರಗತಿವರೆಗೆ ವಿದ್ಯಾಭ್ಯಾಸ ಪೂರೈಸಿರುವುದಾಗಿ ತಿಳಿಸಿದ್ದಾರೆ. ಇನ್ನೊಬ್ಬ ಮಹಿಳೆ ಅಕ್ಕಾ ಪಕ್ಕಾದ ಮನೆಯ ಮಕ್ಕಾಳಿಂದ ಸಹಿ ಮಾಡುವುದನ್ನು ಮಾತ್ರ ಕಲಿತಿರುವುದಾಗಿ ತಿಳಿಸುತ್ತಾ ತನಗೆ ಸಹಿಯ ಹೊರತಾಗಿ ಇತರ ಯಾವ ಅಕ್ಷರಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲವೆಂದೇ ಹೇಳುತ್ತಾರೆ. ಕೊನೆಗೆ ಒಬ್ಬ ಮಹಿಳೆ ತನಗೆ ಸಹಿಮಾಡಲು ಸಹ ಸಾಧ್ಯವಾಗುತ್ತಿಲ್ಲವೆಂದೇ ಹೇಳುತ್ತಾರೆ.

ಹಗರಿಬೊಮ್ಮನಹಳ್ಳಿಯ ನಾಲ್ಕು ಸದಸ್ಯರಲ್ಲಿ ಒಬ್ಬ ಮಹಿಳೆ ಎರಡನೇ ತರಗತಿವರೆಗೆ ಓದಿದ್ದರೆ ಇನ್ನೊಬ್ಬ ಮಹಿಳೆ ನಾಲ್ಕನೇ ತರಗತಿವರೆಗೆ ಓದಿರುವುದಾಗಿ ತಿಳಿಸುತ್ತಾರೆ ಮತೊಬ್ಬರು ತಮಗೆ ಕೇವಲ ಸಹಿ ಮಾಡಲು ಮಾತ್ರ ಬರುತ್ತದೆ ಎಂದು ತಿಳಿಸುತ್ತಾರೆ.

ಕೂಡ್ಲಿಗಿಯ ಆರು ಸದಸ್ಯರಲ್ಲಿ ಒಬ್ಬರು ಒಂದನೇ ತರಗತಿವರೆಗೆ ಮಾತ್ರ ಓದಲು ಸಾಧ್ಯವಾಗಿರುವುದಾಗಿ ತಿಳಿಸಿದರೆ ಇನ್ನೊಬ್ಬರು ಮೂರನೇ ತರಗತಿವರೆಗೆ ವ್ಯಾಸಂಗ ಮಾಡಿರುವುದಾಗಿ ತಿಳಿಸಿದರು. ಇನ್ನುಳಿದ ಇಬ್ಬರು ತಮ್ಮ ಮಕ್ಕಳ ಸಹಾಯದಿಂದ ಸಹಿ ಮಾತ್ರ ಮಾಡುವುದನ್ನು ಕಲಿತಿರುವುದಾಗಿ ತಿಳಿಸಿದರು.

ಆದರೆ ಇನ್ನು ಇಬ್ಬರು ಮಹಿಳೆಯರು ಸಹಿ ಮಾಡುವುದನ್ನು ಕಲಿಯಲು ಪ್ರಯತ್ನಿಸಿದರಾದರೂ ಅವರಿಗೆ ಸಹಿ ಮಾಡಲು ಇಂದಿಗೂ ಸಾಧ್ಯವಾಗುತ್ತಿಲ್ಲವೆಂದೇ ತಿಳಿಸಿದರು.

ಇನ್ನು ತಾಲೂಕು ಪಂಚಾಯಿತಿ ಸದಸ್ಯರ ಸಾಕ್ಷರತಾ ಮಟ್ಟವನ್ನು ಗಮನಿಸಿದರೆ ಅವರ ಸ್ಥಿತಿಯೂ ಮೇಲ್ಕಾಣಿಸಿದ ಗ್ರಾಮ ಪಂಚಾಯಿತಿ ಸದಸ್ಯರಿಗಿಂತ ಭಿನ್ನವಾಗಿಲ್ಲವೆಂದೇ ಅನಿಸುತ್ತದೆ.

ಹೊಸಪೇಟೆ ತಾಲೂಕಿನಲ್ಲಿ ಚುನಾಯಿತ ತಾಲೂಕು ಪಂಚಾಯಿತಿ ಸದಸ್ಯರಾದ ಪರಿಶಿಷ್ಟ ಪಂಗಡದ ಒಬ್ಬ ಮಹಿಳೆ ತಾನು ಆರನೇ ತರಗತಿ ಮಟ್ಟಕ್ಕೆ ಮಾತ್ರ ಕಲಿಯಲು ಸಾಧ್ಯವಾಯಿತೆಂದು ತಿಳಿಸಿದರು.

ಸಿರುಗುಪ್ಪ ತಾಲೂಕು ಪಂಚಾಯ್ತಿ ಸದಸ್ಯೆಯಾದ ಪರಿಶಿಷ್ಟ ಪಂಗಡದ ಮಹಿಳೆ ತನ್ನ ಮಕ್ಕಳ ಸಹಾಯದಿಂದ ಸಹಿ ಮಾಡುವುದನ್ನು ಕಲಿತಿರುವುದಾಗಿ ತಿಳಿಸಿದರು.

ಹಗರಿಬೊಮ್ಮನಹಳ್ಳಿಯಲ್ಲಿ ಒಬ್ಬ ಪರಿಶಿಷ್ಟ ಪಂಗಡದ ತಾಲೂಕು ಪಂಚಾಯ್ತಿ ಸದಸ್ಯೆಯಿದ್ದು ಆಕೆ ಎರಡನೇ ತರಗತಿಯವರೆಗೆ ಮಾತ್ರ ಶಾಲೆಯ ಮೆಟ್ಟಿಲೇರಲು ಸಾಧ್ಯವಾಯಿತು ಎಂದು ತಿಳಿಸಿದರು.

ಕೂಡ್ಲಿಗಿ ತಾಲೂಕು ಪಂಚಾಯತಿಯ ಪರಿಶಿಷ್ಟ ಪಂಗಡದ ಸದಸ್ಯರಲ್ಲಿ ಒಬ್ಬ ಮಹಿಳೆ ಎರಡನೇ ತರಗತಿಯ ಹಂತಕ್ಕೆ ಹೋಗಿ ಶಾಲೆಯನ್ನು ತೊರೆದಿರುವುದಾಗಿ ತಿಳಸಿದರೆ ಇನ್ನೊಬ್ಬ ಮಹಿಳೆ ಕೇವಲ ಸಹಿ ಮಾತ್ರಕ್ಕೆ ಸೀಮಿತಳಾಗಿದ್ದಾಳೆ ಇನ್ನುಳಿದ ಒಬ್ಬ ಮಹಿಳೆ ಹೆಬ್ಬಟ್ಟನ್ನೇ ನಂಬಿ ಬದುಕಬೇಕಾದ ಸ್ಥಿತಿ ತನ್ನಾದಾಗಿದೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯ್ತಿಯ ಒಟ್ಟು ಎರಡು ಸದಸ್ಯರಲ್ಲಿ ಒಬ್ಬ ಮಹಿಳೆ ಬಳ್ಳಾರಿ ತಾಲೂಕಿನಿಂದ ವಿಜೇತರಾಗಿ ಜಿಲ್ಲಾ ಪಂಚಾಯ್ತಿಗೆ ಸದಸ್ಯರಾದರೆ ಇನ್ನೊಬ್ಬ ಮಹಿಳೆ ಕೂಡ್ಲಿಗಿ ತಾಲೂಕಿನಿಂದ ಸ್ಪರ್ಧಿಸಿ ಜಿಲ್ಲಾ ಪಂಚಾಯ್ತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಈ ಇಬ್ಬರಲ್ಲಿ ಒಬ್ಬ ಮಹಿಳೆ ಅಂದರೆ ಬಳ್ಳಾರಿ ತಾಲೂಕಿನ ಮಹಿಳೆ ಕೇವಲ ಎರಡನೇ ತರಗತಿಯ ಹಂತಕ್ಕೆ ಶಾಲೆಯನ್ನು ತೊರೆಯಬೇಕಾಯಿತೆಂದು ತಿಳಿಸಿದರೆ ಕೂಡ್ಲಿಗಿ ತಾಲೂಕಿನ ಇನ್ನೊಬ್ಬ ಜಿಲ್ಲಾ ಪಂಚಾಯಿತಿ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯೆ ತಾನು ಯಾವುದೇ ಶಾಲೆಯ ಮೆಟ್ಟಿಲನ್ನು ಹತ್ತಲು ಸಾಧ್ಯವಾಗಲಿಲ್ಲ, ಹೀಗಾಗಿ ತನ್ನ ಮಕ್ಕಳ ಸಹಕಾರರಿಂದ ಕೇವಲ ಸಹಿ ಮಾತ್ರ ಮಾಡುವುದನ್ನು ಕಲಿತಿರುವುದಾಗಿ ತಿಳಿಸಿದರು.

ಒಟ್ಟಾರೆಯಾಗಿ ಕ್ಷೇತ್ರಕಾರ್ಯದಲ್ಲಿ ಗಮನಿಸಿದಂತೆ ಇವರಲ್ಲಿ ಬಹಳಷ್ಟು ಜನರಿಗೆ ಕನ್ನಡವನ್ನು ಶುದ್ಧವಾಗಿ ಓದುವ ಹಾಗೂ ಬರೆಯುವ ಸಾಮರ್ಥ್ಯವು ಕಡಿಮೆಯಂದೇ ಹೇಳಬಹುದು. ವ್ಯವಹಾರಿಕವಾಗಿ ತುಂಬಾ ಜಾಣರಂತೆ ಕಾಣುವ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರು ತುಂಬಾ ಮುಗ್ದರೂ, ಅಮಾಯಕರು ಆಗಿರಿವುದು ಮೇಲ್ನೋಟಕ್ಕೆ ತಿಳಿಯುತ್ತದೆ. ಇವರೆಲ್ಲಾ

ಇಂದು ತಮಗೆ ಶಿಕ್ಷಣ ದೊರೆತಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಹಲಬುತ್ತಾರೆ. ತಾವು ಶಿಕ್ಷಿತರಾಗಿದ್ದರೆ ತಮ್ಮನ್ನು ತುಂಬಾ ನಿರ್ಲಕ್ಷಿಸುವ ಅಧಿಕಾರಿಗಳಿಗೆ ಒಳ್ಳೆಯ ಪಾಠ ಕಲಿಸಬಹುದಾಗಿತ್ತು ಎಂದು ತಿಳಿಸಿದರು. ಅದಕ್ಕಿಂತ ಹೆಚ್ಚಾಗಿ ತಮ್ಮ ಕುಟುಂಬದ ಪುರುಷರು ತಮ್ಮ ಕಾರ್ಯಕ್ಷೇತ್ರದ ಎಷ್ಟೋ ವಿಚಾರಗಳನ್ನು ತಮ್ಮ ಗಮನಕ್ಕೆ ತಾರದೇ ತಾವೇ ನಿರ್ವಹಿಸಿ ಬಿಡುತ್ತಾರೆ ಎಂದು ಸಹ ತಿಳಿಸಿದರು.

ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಮಕ್ಕಳ ಶೈಕ್ಷಣಿಕ ಮಟ್ಟದ ವಿವರ

ಗ್ರಾಮ ಪಂಚಾಯತಿ, ತಾಲೂಕು ಪಂಚಾಯಿತಿ, ಹಾಗೂ ಜಿಲ್ಲಾ ಪಂಚಾಯಿತಿ ಹೀಗೆ ಮೂರು ಸಂಸ್ಥೆಗಳಿಂದ ಒಟ್ಟು ೨೬ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯೆಯರಿಗೆ ಒಟ್ಟು ಎಪ್ಪತ್ತು ಮಕ್ಕಳಿದ್ದು ಅವರೆಲ್ಲಾ ವಿವಿಧ ಹಂತದ ಶಿಕ್ಷಣವನ್ನು ಪಡೆದಿದ್ದಾರೆ ಮತ್ತು ಪಡೆಯುತ್ತಿದ್ದಾರೆ. ಅದರ ವಿವರ ಈ ಕೆಳಗಿನಂತಿದೆ.

ಕೋಷ್ಟಕ ೫.೩.೨. ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಮಕ್ಕಳ ಶೈಕ್ಷಣಿಕ ಮಟ್ಟದ ವಿವರ

ವಿದ್ಯಾಭ್ಯಾಸದಲ್ಲಿ ತೊಡಗಿರುವ ಮಕ್ಕಳು		ಶಿಕ್ಷಣ ವ್ಯವಸ್ಥೆಯಿಂದ ಹೊರಗಿರುವ ಮಕ್ಕಳು	
ಪುರುಷರು	೩೫	ಪುರುಷರು	೦೫
ಮಹಿಳೆಯರು	೨೪	ಮಹಿಳೆಯರು	೦೬
ಒಟ್ಟು	೫೯	ಒಟ್ಟು	೧೧

ಒಟ್ಟು ಎಪ್ಪತ್ತು ಮಕ್ಕಳಲ್ಲಿ ೫೯ ಮಕ್ಕಳು ವಿವಿಧ ಹಂತದ ವಯೋಮಾನದವರಾಗಿದ್ದು ಹಲವು ರೀತಿಯ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇನ್ನುಳಿದ ಒಟ್ಟು ಹನ್ನೊಂದು ಜನರಲ್ಲಿ ಐದು ಜನ ಪುರುಷರು ವಿವಿಧ ಹುದ್ದೆಗಳಲ್ಲಿ ತೊಡಗಿದ್ದಾರೆ. ಇವರಲ್ಲಿ ಇಬ್ಬರು ಕೃಷಿಯನ್ನು ಆಧರಿಸಿ ಜೀವನ ಸಾಗಿಸುತ್ತಿದ್ದರೆ ಇನ್ನುಳಿದ ಒಬ್ಬ ಸೈಕಲ್ ಷಾಪ್ ಇರಿಸಿಕೊಂಡಿದ್ದಾನೆ. ಮತ್ತೊಬ್ಬ ಸಣ್ಣ ಪುಟ್ಟ ಕಾಂಟ್ರಾಕ್ಟ್ ಇತ್ಯಾದಿ ಕೆಲಸಗಳಲ್ಲಿ ನಿರತನಾಗಿದ್ದಾನೆ. ಒಬ್ಬ ಚಿಕ್ಕ ಅಂಗಡಿ ವ್ಯಾಪಾರದಲ್ಲಿ ತೃಪ್ತಿ ಹೊಂದಿದ್ದಾನೆ. ಇನ್ನುಳಿದಂತೆ ಆರು ಜನ ಹೆಣ್ಣುಮಕ್ಕಳು ಮದುವೆಯಾಗಿ ತಮ್ಮ ಗಂಡನ ಮನೆಗೆ ತೆರಳಿದ್ದಾರೆ.

ಗ್ರಾಮ ಪಂಚಾಯತಿಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಮಕ್ಕಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ೨೦ ಮಕ್ಕಳು ಓದುತ್ತಿದ್ದು ಇವರಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವ

ಮಕ್ಕಳು ಒಟ್ಟು ೧೨ ಜನ, ಇಂಗ್ಲೀಷ್ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು ೦೮ ಜನರಿದ್ದಾರೆ. ತಾಲೂಕು ಪಂಚಾಯ್ತಿ ಸದಸ್ಯರ ಒಟ್ಟು ೦೪ ಮಕ್ಕಳು ಪ್ರಾಥಮಿಕ ಶಿಕ್ಷಣದಲ್ಲಿ ತೊಡಗಿದ್ದು ಆ ೦೪ ಮಕ್ಕಳು ಇಂಗ್ಲೀಷ್ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಹಾಗೆ ಮಾಧ್ಯಮಿಕ ಶಿಕ್ಷಣದಲ್ಲಿ ಗ್ರಾಮ ಪಂಚಾಯ್ತಿ ಸದಸ್ಯರ ೧೦ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಅದರಲ್ಲಿ ೦೭ ಮಕ್ಕಳು ಕನ್ನಡ ಮಾಧ್ಯಮದಲ್ಲಿ, ೦೩ ಮಕ್ಕಳು ಇಂಗ್ಲೀಷ್ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿದಾರೆ.

ತಾಲೂಕು ಪಂಚಾಯ್ತಿ ಸದಸ್ಯರ ಒಟ್ಟು ೬ ಮಕ್ಕಳಲ್ಲಿ ಮಾಧ್ಯಮಿಕ ಶಾಲೆಯ ಕನ್ನಡ ಮಾಧ್ಯಮದಲ್ಲಿ ೦೩ ಮಕ್ಕಳು, ಇಂಗ್ಲೀಷ್ ಮಾಧ್ಯಮದಲ್ಲಿ ೦೩ ಮಕ್ಕಳು ಕಲಿಯುತ್ತಿದ್ದಾರೆ.

೫.೩.೩. ಪ್ರಾಥಮಿಕ ಮಾಧ್ಯಮಿಕ ಶಿಕ್ಷಣವನ್ನು ಕನ್ನಡ-ಇಂಗ್ಲೀಷ್ ಮಾಧ್ಯಮಗಳಲ್ಲಿ ವ್ಯಾಸಂಗ ಮಾಡುತ್ತಿರುವವರ ಪ್ರಮಾಣ

ಕನ್ನಡ ಮಾಧ್ಯಮ			ಇಂಗ್ಲೀಷ್ ಮಾಧ್ಯಮ		
ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧೨	೦೮	೨೪	೧೨	೦೮	೨೦

ಗ್ರಾಮ ಪಂಚಾಯ್ತಿ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಒಟ್ಟು ೧೦ ಮಕ್ಕಳು ತಾಲೂಕು ಪಂಚಾಯ್ತಿ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ೦೨ ಜನ ಮಕ್ಕಳು ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇದರಲ್ಲಿ ೦೭ ಮಕ್ಕಳು ಕನ್ನಡ ಮಾಧ್ಯಮದಲ್ಲಿ ಹಾಗೂ ಇನ್ನುಳಿದ ೦೫ ಮಕ್ಕಳು ಇಂಗ್ಲೀಷ್ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಗ್ರಾಮ ಪಂಚಾಯಿತಿ ಸದಸ್ಯರ ಒಟ್ಟು ೦೩ ಮಕ್ಕಳು ಹಾಗೂ ತಾಲೂಕು ಪಂಚಾಯ್ತಿ ಸದಸ್ಯರ ಒಬ್ಬ ಮಗ ಹೀಗೆ ಒಟ್ಟು ೦೪ ಜನ ಪಿ.ಯ.ಸಿ. (೧೦+೨)ಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಪಿ.ಯು.ಸಿ ನಂತರದ ಪದವಿ ತರಗತಿಯಲ್ಲಿ ಗ್ರಾಮ ಪಂಚಾಯ್ತಿ ಸದಸ್ಯರ ಒಬ್ಬ ಮಗ ವ್ಯಾಸಂಗ ಮಾಡುತ್ತಿದ್ದರೆ ಜಿಲ್ಲಾ ಪಂಚಾಯ್ತಿ ಸದಸ್ಯರ ಮಕ್ಕಳಲ್ಲಿ ಒಬ್ಬನು ವ್ಯಾಸಂಗ ಮಾಡುತ್ತಿದ್ದಾನೆ.

ಜಿಲ್ಲಾ ಪಂಚಾಯ್ತಿ ಸದಸ್ಯರ ಮಕ್ಕಳಲ್ಲಿ ಒಬ್ಬ ಮಾತ್ರ ಬಿ.ಇ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವುದು ಕಂಡುಬಂದಿದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇತ್ತೀಚಿಗೆ ಶಾಲೆಗೆ ಹೋಗುತ್ತಿರುವ ಪರಿಶಿಷ್ಠ ಪಂಗಡದ ಮಹಿಳಾ ಸದಸ್ಯರ ಮಕ್ಕಳಲ್ಲಿ ಅದರಲ್ಲೂ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗೆ ಹೋಗುತ್ತಿರುವ ಮಕ್ಕಳಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವವರಲ್ಲಿ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳ ಪ್ರಮಾಣ ಹೆಚ್ಚಾಗಿದೆ.

ವ್ಯಾಸಂಗ ಮಾಡುತ್ತಿರುವ ಒಟ್ಟು ಮಕ್ಕಳಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವವರ ಪ್ರಮಾಣ ಶೇಕಡ ೧೬.೯೪ ಇದ್ದರೆ ಹೆಣ್ಣು ಮಕ್ಕಳ ಪ್ರಮಾಣ ಶೇ ೨೩.೭೨ ರಷ್ಟಿದೆ ಅದೇ ರೀತಿಯಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಳೆಗಳಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವವರಲ್ಲಿ ಗಂಡು ಮಕ್ಕಳ ಪ್ರಮಾಣ ಶೇ ೨೨.೩ ರಷ್ಟಿದ್ದರೆ ಹೆಣ್ಣು ಮಕ್ಕಳ ಪ್ರಮಾಣ ಕೇವಲ ಶೇ ೧೦.೧೬ ರಷ್ಟು ಮಾತ್ರವಿದೆ.

ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳ ಮಧ್ಯ ಈ ರೀತಿ ತಾರತಮ್ಯವೇಕೆ ಎಂದು ಪ್ರಶ್ನಿಸಿದರೆ ಅವರ ತಾಯಂದಿರು ನೀಡುವ ಉತ್ತರ ಈ ಕೆಳಗಿನಂತಿವೆ.

೧. ಕನ್ನಡ ಮಾಧ್ಯಮದಲ್ಲಿ ಕಲಿತರೆ ಅಷ್ಟು ಮರ್ಯಾದೆ ಇರುವುದಿಲ್ಲ. ಹೀಗಾಗಿ ಇಂಗ್ಲೀಷ್ ಮಾಧ್ಯಮ ಶಾಲೆಗೆ ಸೇರಿಸಿದ್ದೇವೆ.

೨. ಇಂಗ್ಲೀಷ್ ಮಾಧ್ಯಮ ಶಾಲೆಗಳಲ್ಲಿ ಕನಿಷ್ಟ ಶಿಸ್ತನ್ನಾದರೂ ಮಕ್ಕಳು ಕಲಿಯುತ್ತಾರೆ.

೩. ಇಂಗ್ಲೀಷ್ ಮಾಧ್ಯಮವೆಂಬುದು ಒಂದು ಗೌರವ, ಪ್ರತಿಷ್ಠೆಯ ವಿಚಾರ, ಆ ಕಾರಣಕ್ಕಾಗಿ ಮಕ್ಕಳನ್ನು ಇಂಗ್ಲೀಷ್ ಮಾಧ್ಯಮದಲ್ಲಿ ಓದಿಸುತ್ತಿದ್ದೇವೆ.

೪. ಇಂದು ಇಂಗ್ಲೀಷ್‌ನಲ್ಲಿ ವ್ಯಾಸಂಗ ಮಾಡಿದರೆ ಜಗತ್ತಿನಲ್ಲಿ ಎಲ್ಲಿ ಬೇಕಾದರೂ ಬದುಕಬಹುದು.

೫. ನಮಗಂತೂ ಆ (ಇಂಗ್ಲೀಷ್ ಕಲಿಯುವ ಪುಣ್ಯ) ಪುಣ್ಯ ಇರಲಿಲ್ಲ, ನಮ್ಮ ಮಕ್ಕಳಿಗಾದರೂ ಅದು ದೊರೆಯಲಿ ಎಂಬ ಆಶಯದಿಂದಾಗಿ ಮಕ್ಕಳನ್ನು ಇಂಗ್ಲೀಷ್ ಮಾಧ್ಯಮ ಶಾಲೆಗೆ ಕಳಿಸುತ್ತಿರುವುದಾಗಿ ತಿಳಿಸಿದರು.

ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಲ್ಲಿ ಕೆಲವರು ತಮ್ಮ ಹೆಣ್ಣು ಮಕ್ಕಳನ್ನು ತಮ್ಮೂರಿನಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳಿಗೆ ಕಳಿಸಿದರೆ ಗಂಡು ಮಕ್ಕಳನ್ನು ಮಾತ್ರ ಇಂಗ್ಲೀಷ್ ಮಾಧ್ಯಮ

ಶಾಲೆಗೆ ಕಳಿಸುತ್ತಿರುವುದು ಕಂಡು ಬಂದಿತು. ಶಿಕ್ಷಣವನ್ನು ಪಡಿಯುತ್ತಿರುವ ಒಟ್ಟು ಮಕ್ಕಳಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಗಂಡು ಮಕ್ಕಳ ಪ್ರಮಾಣ ಶೇ ೧೬.೯೪ರಷ್ಟಿದ್ದರೆ ಹೆಣ್ಣು ಮಕ್ಕಳ ಪ್ರಮಾಣ ಶೇ ೨೩.೭೭ರಷ್ಟಿದೆ. ಅದೇ ರೀತಿ ಇಂಗ್ಲೀಷ್ ಮಾಧ್ಯಮದಲ್ಲಿ ಓದುತ್ತಿರುವ ಗಂಡು ಮಕ್ಕಳ ಪ್ರಮಾಣ ಶೇ ೨೨.೦೩ರಷ್ಟಿದ್ದರೆ ಹೆಣ್ಣು ಮಕ್ಕಳ ಪ್ರಮಾಣ ಶೇ ೧೦.೧೬ರಷ್ಟಿದೆ.

ನೀವೇಕೆ ಹೆಚ್ಚಿನ ಪ್ರಮಾಣದಲ್ಲಿ ಗಂಡು ಮಕ್ಕಳಿಗೆ ಇಂಗ್ಲೀಷ್ ಮಾಧ್ಯಮದಲ್ಲಿ ಓದಿಸುತ್ತಿದ್ದೀರಿ, ಹೆಣ್ಣು ಮಕ್ಕಳನ್ನು ಏಕೆ ಕಡಿಮೆ ಪ್ರಮಾಣದಲ್ಲಿ ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ಕಳಿಸುತ್ತೀರಿ ಎಂಬ ಪ್ರಶ್ನೆಗೆ ಗ್ರಾಮ ಪಂಚಾಯ್ತಿ ಮತ್ತು ತಾಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿ ಸದಸ್ಯರು ನೀಡಿದ ಉತ್ತರಗಳು ಈ ಕೆಳಗಿನಂತಿವೆ.

೧. ನಮಗೆ ಸುಸಜ್ಜಿತವಾದ ಶಾಲೆಗಳಿಗಿರಲಿ, ಸಾಮಾನ್ಯ ಶಾಲೆಗಳಿಗೂ ಹೋಗುವುದಕ್ಕೆ ಸಾಧ್ಯವಾಗಿರಲಿಲ್ಲ ಈಗ ನಾವು ಆರ್ಥಿಕವಾಗಿ ಸ್ವಲ್ಪ ಸುಧಾರಿಸಿದ್ದೇವೆ, ನಮಗೆ ದೊರೆಯದ ಅವಕಾಶಗಳು ನಮ್ಮ ಮಕ್ಕಳಿಗಾದರೂ ದೊರೆಯಲಿ ಎಂಬ ಆಶಯದಿಂದ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ನಮ್ಮ ಮಕ್ಕಳನ್ನು ಕಳಿಸುತ್ತಿದ್ದೇವೆ ಎಂದು ತಿಳಿಸಿದರು.

೨. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ, ಹುಡುಗಿಯರು ಎಂದಿದ್ದರೂ ಒಂದು ದಿನ ಗಂಡನ ಮನೆಗೆ ತೆರಳುವವರೆ, ಅವರಿಗೆ ದುಬಾರಿಯಾದ ಇಂಗ್ಲೀಷ್ ಶಾಲೆಗೆ ಕಳಿಸುವುದಾದರೂ ಹೇಗೆ ಎಂದು ಇನ್ನು ಕೆಲವು ಸದಸ್ಯರು ತಿಳಿಸಿದರು

೩. ನಮಗೆ ಹೆಣ್ಣು ಮಕ್ಕಳಿಗೂ ಇಂಗ್ಲೀಷ್ ಮಾಧ್ಯಮದ ಶಾಲೆಗೆ ಕಳಿಸಬೇಕೆಂಬ ಆಶೆಯೇನೋ ಇದೆ ಆದರೆ ಹುಡುಗಿಯರನ್ನು ಒಬ್ಬಂಟಿಯಾಗಿ ನಮ್ಮ ಹಳ್ಳಿಯಿಂದ ನಗರ ಪ್ರದೇಶಗಳಿಗೆ ಕಳಿಸುವುದು ಸ್ವಲ್ಪ ಕಷ್ಟ, ಆ ಕಾರಣಕ್ಕಾಗಿ ಸ್ಥಳೀಯವಾಗಿರುವ ಕನ್ನಡ ಮಾಧ್ಯಮ ಶಾಲೆಗಳಿಗೆ ಹುಡುಗಿಯರನ್ನು ಕಳಿಸುತ್ತಿರುವುದಾಗಿ ಕೆಲವು ಸದಸ್ಯರು ತಿಳಿಸಿದರು.

೪. ಇನ್ನು ಕೆಲವರು ತಮ್ಮ ಮಕ್ಕಳಲ್ಲಿ ಗಂಡು ಹೆಣ್ಣು ಎಂಬ ಭೇದವಿಲ್ಲ, ಹೀಗಾಗಿ ನಮ್ಮ ಗಂಡು ಮಕ್ಕಳೊಂದಿಗೆ ಹೆಣ್ಣು ಮಕ್ಕಳನ್ನು ಇಂಗ್ಲೀಷ್ ಮಾಧ್ಯಮದ ಶಾಲೆಗೆ ಕಳಿಸುತ್ತಿರುವುದಾಗಿ ಕೆಲವು ಸದಸ್ಯರು ತಿಳಿಸಿದರು.

೫. ತಮ್ಮ ಮಕ್ಕಳಲ್ಲಿ ಇಂಗ್ಲೀಷ್ ಮಾಧ್ಯಮಕ್ಕೆ ಹೋಗುವ ಗಂಡು ಮಕ್ಕಳಿಗಿಂತ ಕನ್ನಡ ಮಾಧ್ಯಮ ಶಾಲೆಗಳಿಗೆ ಹೋಗುತ್ತಿರುವ ಹುಡುಗಿಯರೇ ತುಂಬಾ ಲವಲವಿಕೆಯಿಂದ ಕಲಿಯುತ್ತಿರುವುದಾಗಿ ಕೆಲವು ಸದಸ್ಯರು ಹೇಳುತ್ತಾರೆ.

ಒಟ್ಟಾರೆಯಾಗಿ ಹುಡುಗರಿಗಾದರೆ ಇಂಗ್ಲೀಷ್ ಕಲಿಸಿದರೆ ಮುಂದೆ ಅವರನ್ನು ತಾವು ಇಂಜಿನೀಯರಿಂಗ್, ಮೆಡಿಕಲ್, ಇನ್ನಿತರ ತಾಂತ್ರಿಕ ತರಬೇತಿಗೆ ಕಳಿಸಲು ಸಾಧ್ಯವಾಗುತ್ತದೆ. ಇಂಗ್ಲೀಷ್ ಜ್ಞಾನವಿದ್ದರೆ ತಮ್ಮ ಮಕ್ಕಳು ಯಾವತ್ತೂ ಅವಮಾನಕ್ಕೆ ಒಳಗಾಗುವಂತಿಲ್ಲ ಎಂದು ಕೆಲವು ಸದಸ್ಯರು ತಿಳಿಸಿದರು.

ಏಕೆ ಹೀಗೆ ಹೇಳುತ್ತೀರಿ ಈ ರಾಜ್ಯದಲ್ಲಿ ಮುಖ್ಯ ಹುದ್ದೆಗಳಲ್ಲಿರುವವರೆಲ್ಲಾ ಇಂಗ್ಲೀಷ್ ಮಾಧ್ಯಮದಲ್ಲಿ ಓದಿದವರಲ್ಲ. ಅವರೆಲ್ಲಾ ಕನ್ನಡ ಮಾಧ್ಯಮದಲ್ಲಿಯೇ ಓದಿ ದೊಡ್ಡವರಾದವರು ಎಂದು ಕೇಳಿದರೆ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರು ನೀಡುವ ಉತ್ತರ ಹೀಗಿದೆ.

"ಆಗಿನ ಕಾಲವೇ ಬೇರೆ, ಈಗಿನ ಕಾಲವೇ ಬೇರೆ, ಈಗಿನ ಕಾಲದಲ್ಲಿ ಇಂಗ್ಲೀಷ್ ಇಲ್ಲದಿದ್ದರೆ ನಡೆಯುವುದಿಲ್ಲ. ನಮಗೆ ಓದಲು ಬರುವುದಿಲ್ಲವೆಂದೇ ಆಡಳಿತ ವರ್ಗ ನಮ್ಮನ್ನು ತುಂಬಾ ಕೀಳಾಗಿ ಕಾಣುತ್ತಿದೆ. ಇಂಗ್ಲೀಷ್ ಕಲಿತರೆ ಆ ರೀತಿಯ ಅವಮಾನಕ್ಕೆ ಈಡಾಗುವುದಕ್ಕೆ ಸಾಧ್ಯವಿರುವುದಿಲ್ಲ ಎನ್ನುತ್ತಾರೆ.

ಬಹುತೇಕ ಈ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಿಗೆ ಕಡ್ಡಾಯ ಶಿಕ್ಷಣ ನೀತಿ, ಮಾತೃ ಭಾಷಾ ಶಿಕ್ಷಣ ನೀತಿ ಯಾವುದರ ಅರಿವೂ ಇಲ್ಲ. ಇದರಲ್ಲಿ ಬಹುತೇಕರಿಗೆ ಮಕ್ಕಳನ್ನು ನಗರ ಪ್ರದೇಶದಲ್ಲಿರುವ ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ತಮ್ಮ ಊರಿನಿಂದ ಬಸ್, ಆಟೋ ಮುಂತಾದವುಗಳ ಮೂಲಕ ಶಾಲೆಗಳಿಗೆ ಮಕ್ಕಳನ್ನು ಕಳಿಸುವುದೇ ಒಂದು ಪ್ರತಿಷ್ಠೆಯ ವಿಷಯವಾಗಿರುವಂತೆ ಕಂಡುಬರುತ್ತದೆ.

ಒಟ್ಟಾರೆಯಾಗಿ ನೋಡಿದರೆ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಲ್ಲಿ ಹೆಚ್ಚಿನವರು ಪ್ರಾಥಮಿಕ ಹಂತದಲ್ಲಿಯೇ ಶಾಲೆಯನ್ನು ತೊರೆದವರು, ಅವರಿಗೆ ಓದಲು ಬರೆಯಲು ಸರಿಯಾಗಿ ಬರುವುದಿಲ್ಲ. ಇವರಲ್ಲಿ ಕೆಲವರು ಕೇವಲ ಸಹಿ ಮಾತ್ರ ಮಾಡುವುದನ್ನು ಕಲಿತುಕೊಂಡಿದ್ದಾರೆ, ಇವರಿಗೂ ಓದಲು- ಬರೆಯಲು ಯಾವುದೂ ಬರುವುದಿಲ್ಲ. ಕೇವಲ ಸಹಿ ಮಾಡುವ ಮಾತ್ರಕ್ಕೆ ಅವರೆಲ್ಲಾ ಸಾಕ್ಷರರಾಗಿ ಉಳಿದು ಬಿಡುತ್ತಾರೆ.

ಬಹುತೇಕ ವಿದ್ಯಾಭ್ಯಾಸವನ್ನು ಪ್ರಾಥಮಿಕ ಹಂತದಲ್ಲಿಯೇ ಮೊಟಕುಗೊಳಿಸಿಕೊಂಡ ಮಹಿಳಾ ಸದಸ್ಯರು ಇಂದು ಪುರುಷಶಾಹಿ ವ್ಯವಸ್ಥೆ ಹಾಗೂ ಆಡಳಿತ ವ್ಯವಸ್ಥೆ ಎರಡರಿಂದಲೂ ಮೋಸಕ್ಕೆ ಒಳಗಾಗುತ್ತಲೆ ಇದ್ದಾರೆ. ಇದಕ್ಕೆಲ್ಲಾ ಕಾರಣ ಅವರಿಗೆ ಮೊಟ್ಟಮೊದಲಿಗೆ ವಿದ್ಯಾಭ್ಯಾಸ ಇಲ್ಲದಿರುವುದು. ಎರಡನೆಯದಾಗಿ ಇವರಿಗೆ ಆರ್ಥಿಕ ಸ್ವಾವಲಂಬಿತನ ಇಲ್ಲದಿರುವುದು. ಸಾಮಾನ್ಯವಾಗಿ ಈ ಹೆಣ್ಣು ಮಕ್ಕಳಿಗೆ ಮಗ, ಗಂಡ, ತಂದೆ, ಸಂಗಾತಿ ಪರುಷ ಹೀಗೆ ಎಲ್ಲಾ ಕಡೆಯಿಂದಲೂ ಶೋಷಣೆಗೆ ಒಳಗಾಗುತ್ತಲೇ ಇದ್ದಾರೆ. ಈ ರೀತಿಯ ಶೋಷಣೆ ತಮಗೆ ಸಹಜವೆಂಬಷ್ಟರ ಮಟ್ಟಿಗೆ ಈ ಹೆಣ್ಣು ಮಕ್ಕಳು ಹೊಂದಿಕೊಂಡು ಬಿಟ್ಟಿದ್ದಾರೆ.

ಪಂಚಾಯತ್‌ರಾಜ್ ವ್ಯವಸ್ಥೆ ಪರಿಪೂರ್ಣವಾಗಿ ಯಶಸ್ವಿಯಾಗಲು ಮೊದಲಿಗೆ ಅವರಿಗೆ ಆರ್ಥಿಕ ಸ್ವಾವಲಂಬನೆ ಉಂಟಾಗಬೇಕು. ಅದಕ್ಕೆ ಪೂರಕವಾಗಿ ಶಿಕ್ಷಣವಿರಲೇಬೇಕು. ಹಾಗಾದಾಗ ಮಾತ್ರ ಪಂಚಾಯತ್‌ರಾಜ್ ವ್ಯವಸ್ಥೆ ಯಶಸ್ಸುಗೊಳ್ಳಲು ಸಾಧ್ಯವಾಗುತ್ತದೆ. ಹಾಗೆ ಪಂಚಾಯತ್ ರಾಜ್ ವ್ಯವಸ್ಥೆ ಯಶಸ್ವಿಗೊಳ್ಳಬೇಕಾದರೆ ಮೊದಲಿಗೆ ಪ್ರತಿಯೊಂದು ಹಂತದಲ್ಲಿ ಸಹಜವೆಂಬಷ್ಟು ಒಗ್ಗಿ ಹೋಗಿರುವ ಭ್ರಷ್ಟತೆ ತೊಲಗಬೇಕು ಮತ್ತು ವಿದ್ಯಾವಂತ ಮಹಿಳೆಯರು ಕನಿಷ್ಟ ಸ್ಥಳೀಯ ರಾಜಕೀಯದಲ್ಲಿ ಪಾಲ್ಗೊಳ್ಳಬೇಕು.

ವಿದ್ಯಾಭ್ಯಾಸ ಮಾಡದವರನ್ನು ಚುನಾವಣೆಗೆ ನಿಲ್ಲಿಸದೆ ಕೇವಲ ವಿದ್ಯಾವಂತ ಮಹಿಳೆಯರನ್ನು ಸಾರ್ವಜನಿಕ ಆಡಳಿತದಲ್ಲಿ ತೊಡಗುವಂತೆ ಪ್ರೇರಣೆ ನೀಡಬೇಕು. ಹೀಗಾದಾಗ ಮಾತ್ರ ಪಂಚಾಯತ್ ರಾಜ್ ವ್ಯವಸ್ಥೆ ಗಟ್ಟಿಯಾಗಿ ಈ ನೆಲದಲ್ಲಿ ಕಾಲೂರಲು ಸಾಧ್ಯವಾಗುತ್ತದೆ.

೫.೪. ರಾಜಕೀಯ ಸ್ಥಿತಿ-ಗತಿ

ಪ್ರತಿಯೊಬ್ಬ ಮನುಷ್ಯನಿಗೂ ಅಧಿಕಾರದ ಆಸೆ ಇದ್ದೇ ಇರುತ್ತದೆ. ಆದರೆ ಅವಕಾಶಗಳು ಕೂಡಿ ಬರಬೇಕಷ್ಟೆ. ಅದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುತೇಕವಾಗಿ

ಅಧಿಕಾರವನ್ನು ಹೊಂದುವವರು ಬಂಡವಾಳಶಾಹಿಗಳಾಗಿದ್ದು ಇವರು ಪ್ರಜಾಪ್ರಭುತ್ವದ ದೊಡ್ಡ ಲೋಪವಾಗಿ ಮಾರ್ಪಾಡಾಗಿದ್ದಾರೆ. ಅದರಲ್ಲೂ ಭಾರತದಂತಹ ಜಾತಿ ವ್ಯವಸ್ಥೆಯಿಂದ ಕೂಡಿದ ದೇಶದಲ್ಲಿ ಬಂಡವಾಳಶಾಹಿಗಳಷ್ಟೇ ಪ್ರಬಲವಾದುದು ಜಾತಿಯಾಗಿದೆ. ಜಾತಿ ಮತ್ತು ಹಣ ಈ ಎರಡೇ ಕೊನೆಗೆ ಅಧಿಕಾರ ಪಾಲುಗಾರಿಕೆಯ ನಿರ್ಣಾಯಕ ಶಕ್ತಿಗಳಾಗುತ್ತವೆ. ಹೀಗಾಗಿ ಈ ದೇಶದಲ್ಲಿ ಬಂಡವಾಳ ಶಾಹಿಗಳು ಮತ್ತು ಮೇಲ್ಜಾತಿಗಳು ತಮ್ಮನ್ನು ಮೀರಿಸುವವರು ಯಾರೂ ಇಲ್ಲ ಎನ್ನುವಂತೆ ಮೆರೆದಾಡುತ್ತವೆ. ಪ್ರಾಯಶಃ ಸಂವಿಧಾನದಲ್ಲಿ ತಳವರ್ಗಗಳಿಗಾಗಿ ಮೀಸಲಾತಿ ಕಲ್ಪಸದೇ ಹೋಗಿದ್ದಲ್ಲಿ ತಳ ಸಮುದಾಯಗಳಿಗೆ ಇಂದಿಗೂ ಅಧಿಕಾರವೆಂಬುದು ಕೇವಲ ಮರೀಚಿಕೆಯಾಗಿ ಉಳಿದುಬಿಡುವ ಸಾಧ್ಯತೆಯೇ ಹೆಚ್ಚಾಗಿತ್ತು. ಲೋಹಿಯಾರಂಥವರು ಈ ಕಾರಣಕ್ಕಾಗಿಯೇ ಅಲ್ಪಸಂಖ್ಯಾತ ಜಾತಿಗಳಿಗೂ ರಾಜಕೀಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸಬೇಕೆಂದು ತಿಳಿಸುತ್ತಾರೆ. (ಲೋಹಿಯಾ: ಜಾತಿವಿನಾಶ:೧೯೮೯:೨೪) ತಳ ಸಮುದಾಯಗಳಿಗೆ ಅಧಿಕಾರದ ಗದ್ದುಗೆ ಹಿಡಿಯಲು ಮತ್ತು ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಮೀಸಲಾತಿ ಪರಿಣಾಮಕಾರಿ ವ್ಯವಸ್ಥೆಯಾಗಿದೆ.

ರಾಜಕೀಯವಾಗಿ ಬಲಾಢ್ಯರಾದ ವ್ಯಕ್ತಿಗಳು ಇಂದು ಬಳ್ಳಾರಿಯಲ್ಲಿ ಕಂಡು ಬರುತ್ತಿದ್ದಾರೆ. ಕರ್ನಾಟಕದ ರಾಜಕೀಯ ಕೇಂದ್ರಸ್ಥಾನ ಬಳ್ಳಾರಿ ಎಂಬಂತೆ ಬಿಂಬಿತವಾಗುತ್ತಿದೆ. ಗಣಿ ವ್ಯವಹಾರ ಮತ್ತು ಕರ್ನಾಟಕ ರಾಜಕೀಯಕ್ಕೆ ಪ್ರಸ್ತುತ ನೇರ ಸಂಬಂಧವಿದೆ ಎಂಬುದು ರಾಜಕೀಯ ವಿಶ್ಲೇಷಕರ ವಾದವಾಗಿದೆ. ಬಳ್ಳಾರಿ ಕರ್ನಾಟಕ ಮತ್ತು ಆಂಧ್ರಪ್ರದೇಶದ ಗಡಿಭಾಗದಲ್ಲಿದೆ. ಹೀಗಾಗಿ ಇಲ್ಲಿ ನೆಲೆಸಿರುವ ಆಂಧ್ರದ ಬಂಡವಾಳಶಾಹಿಗಳು ಸ್ಥಳೀಯ ರಾಜಕಾರಣದ ಜೊತೆಗೆ ರಾಜ್ಯ ರಾಜಕಾರಣದಲ್ಲೂ ನೇರವಾಗಿ ಇಲ್ಲವೆ ಪರೋಕ್ಷವಾಗಿ ಮೂಗು ತೂರಿಸುವುದು ಸಹಜ. ಬಳ್ಳಾರಿ, ಕುರುಗೋಡು, ಕಂಪ್ಲಿ ಮುಂತಾದ ಕಡೆ ಆಂಧ್ರದವರೇ ಮುಖ್ಯವಾಗಿ ರಾಜಕೀಯದಲ್ಲಿ ಕಂಡು ಬರುತ್ತಾರೆ. ಅದರಾಚೆಗೆ ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುವ ಲಿಂಗಾಯತ, ಕುರುಬ, ನಾಯಕ ಮುಂತಾದ ಸಮುದಾಯಗಳು ಯಾವುದಾದರೊಂದು ರಾಜಕೀಯ ಪಕ್ಷವನ್ನು ಪ್ರತಿನಿಧಿಸುತ್ತಾರೆ. ಆದರೆ ಬ್ರಾಹ್ಮಣ ವರ್ಗ ಮಾತ್ರ ಗೆದ್ದೆತ್ತಿನ ಬಾಲದ ಕಡೆ ತಾವೆಂಬಂತೆ ತಟಸ್ಥವಾಗಿ ಉಳಿದಂತೆ ತೋರಿಸುತ್ತಲೇ ಒಳಗೊಳಗೇ ರಾಜಕೀಯ ಮಾಡುವುದು ಕಂಡುಬರುತ್ತದೆ.

ಮುಖ್ಯವಾಗಿ ಕರ್ನಾಟಕದಲ್ಲಿ ಹೆಚ್ಚಿನ ಪ್ರಮಾಣದ ಪರಿಶಿಷ್ಟ ಪಂಗಡದ ಎಮ್.ಎಲ್.ಎ ಗಳನ್ನು ನೀಡಿದ ಮೊದಲ ಜಿಲ್ಲೆ ಬಳ್ಳಾರಿ ಎಂದರೆ ತಪ್ಪಾಗಲಾರದು. ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರದಿಂದ ಲೋಕಸಭಾ ಸದಸ್ಯೆಯಾಗಿ ಶಾಂತ ಆಯ್ಕೆಯಾಗಿದ್ದಾರೆ. ಆದೇ ರೀತಿ ಇವರ ಸಹೋದರರಾದ ಶ್ರೀ ರಾಮುಲು ಕ್ಯಾಬಿನೆಟ್ ದರ್ಜೆಯ ಆರೋಗ್ಯ ಸಚಿವರಾಗಿದ್ದಾರೆ. ತರುವಾಯ ಕೂಡ್ಲಿಗಿ ಕ್ಷೇತ್ರದಿಂದ ನಾಗೇಂದ್ರ, ಸಿರಗುಪ್ಪ ಕ್ಷೇತ್ರದಿಂದ ಸೋಮಲಿಂಗಪ್ಪ ಕಂಪ್ಲಿ ಕ್ಷೇತ್ರದಿಂದ ಸುರೇಶಬಾಬು, ಸಂಡೂರು ಕ್ಷೇತ್ರದಿಂದ ತುಕಾರಾಂ, ಹೀಗೆ ಪರಿಶಿಷ್ಟ ಪಂಗಡದ ನಾಯಕ ಸಮುದಾಯದಿಂದ ಒಟ್ಟು ಐದು ಜನ ವಿಧಾನಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಐದು ಎಂ ಎಲ್ ಎ ಮತ್ತು ಒಬ್ಬ ಎಂ. ಪಿ ಒಟ್ಟು ಆರು ಜನ ಪರಿಶಿಷ್ಟ ಪಂಗಡದ (ನಾಯಕ ಸಮುದಾಯ)ದ ಸದಸ್ಯರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಆಯ್ಕೆಯಾಗಿದ್ದಾರೆ. ಮೇಲ್ವರ್ಗದವರೇ ಪ್ರಬಲವಾಗಿರುವ ಜಿಲ್ಲೆಯಲ್ಲಿ ತಳವರ್ಗದ 'ನಾಯಕ' ಸಮುದಾಯದ ಜನ ಗೆಲುವು ಸಾಧಿಸುವುದು ಸಾಮಾನ್ಯ ವಿಚಾರವಲ್ಲ. ಆದರೆ ಇಲ್ಲಿನ ಸ್ಥಳಗಳಿಗೆ ಮೀಸಲಾತಿ ಕಡ್ಡಾಯವಾಗಿದ್ದುದರಿಂದ ಅವರು ಅನಿವಾರ್ಯವಾಗಿ ಗೆಲ್ಲುವಂತಾಯಿತು.

ಬಳ್ಳಾರಿ ಜಿಲ್ಲೆಯಲ್ಲಿ ನಾಯಕ ಸಮುದಾಯದ ಹೊರತಾಗಿ ಹಕ್ಕಿಪಿಕ್ಕಿ, ಮೇಧ, ಡುಂಗ್ರಿಗರಾಸಿಯ ಸಮುದಾಯಗಳು ಇದ್ದರೂ ಅವುಗಳು ತೀರಾ ಅಲ್ಪ ಸಂಖ್ಯಾತ ಪರಿಶಿಷ್ಟ ಪಂಗಡ ಸಮುದಾಯಗಳಾಗಿವೆ. ಹೀಗಾಗಿ ಈ ಸಮುದಾಯಗಳು ಇಂದಿಗೂ ರಾಜಕೀಯ ಪ್ರವೇಶ ಮಾಡಲು ಸಾಧ್ಯವಾಗಿಲ್ಲ. ಬಹುತೇಕ ಪರಿಶಿಷ್ಟ ಪಂಗಡದ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಮತ್ತು ಜಿಲ್ಲಾ ಪಂಚಾಯಿತಿ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಿಗೆ ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡ ಸಮುದಾಯಗಳು ಎಷ್ಟಿವೆ ಎಂದು ಕೇಳಿದರೆ ಅವರು ನೀಡಿದ ಉತ್ತರ ಹೀಗಿದೆ. ಪರಿಶಿಷ್ಟ ಪಂಗಡ ಸಮುದಾಯ ಎಂದರೆ ' ವಾಲ್ಮೀಕಿ' ಅಥವಾ ನಾಯಕ ಸಮುದಾಯ ಮಾತ್ರ ಎಂದು ತಿಳಿಸಿದರು. ಅವರಿಗೆ ಪರಿಶಿಷ್ಟ ಪಂಗಡ ಎಂದು ತಮ್ಮ ಸಮುದಾಯವನ್ನು ಏಕೆ ಗುರುತಿಸಲಾಗುತ್ತದೆ ಎಂಬ ಪ್ರಶ್ನೆಗೂ ಸಮರ್ಪಕವಾದ ಉತ್ತರ ದೊರೆಯಲಿಲ್ಲ. ನಾವು ನಾಯಕರು, ಅದಕ್ಕಾಗಿ ನಮಗೆ ಪರಿಶಿಷ್ಟ ಪಂಗಡ ಎಂದು ಕರೆಯುತ್ತಾರೆ ಎಂದಷ್ಟೇ ತಿಳಿಸಿದರು. ಅದರಾಚೆಗೆ ಏನೂ ಅರಿಯದ ಮುಗ್ಧರವರು.

ಪ್ರಾಯಶಃ ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳ ಮೂಲಭೂತ ಸಮಸ್ಯೆಯೂ ಅದೇ ಆಗಿದೆ. ಕರ್ನಾಟಕದ ಅನುಸೂಚಿತ ಪಟ್ಟಿಯಲ್ಲಿರುವ ಒಟ್ಟು ೫೦ ಪರಿಶಿಷ್ಟ ಪಂಗಡಗಳಲ್ಲಿ ಇನ್ನೂ ೪೯ ಪರಿಶಿಷ್ಟ ಪಂಗಡ ಸಮುದಾಯಗಳು ತೀರಾ ಅಲ್ಪ ಸಂಖ್ಯಾತ ಸಮುದಾಯಗಳಾಗಿವೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂವಿಧಾನ ಬದ್ಧವಾಗಿ ಯಾವ ಯಾವ ಸವಲತ್ತುಗಳನ್ನು ಸರ್ಕಾರ ನೀಡುತ್ತದೆ ಎಂಬುದರ ಕುರಿತಾಗಿ ಅರಿಯಲಾರದಷ್ಟು ಮುಗ್ಧ ಸಮುದಾಯಗಳು ಅವಾಗಿವೆ. ಇಲ್ಲಿ ಚುನಾವಣೆಗೆ ನಿಲ್ಲುವ ವ್ಯಕ್ತಿ ತನ್ನ ಕೋಮಿಗೆ ಸೇರಿದವರ ಜನಸಂಖ್ಯೆ ಆ ಕ್ಷೇತ್ರದಲ್ಲಿ ಎಷ್ಟು ಎಂದು ಸ್ಪಷ್ಟವಾಗಿ ಸೂಚಿಸಬೇಕು. ಆ ವ್ಯಕ್ತಿಗೆ ಚುನಾವಣೆಗೆ ಅಭ್ಯರ್ಥಿಯಾಗಿಸಲು ಆ ಒಂದು ಅಂಶವನ್ನು ಪ್ರತಿಯೊಂದು ಪಕ್ಷಗಳು ಪರಿಗಣಿಸುತ್ತವೆ.

ಒಬ್ಬ ವ್ಯಕ್ತಿ ಚುನಾವಣೆಗೆ ನಿಲ್ಲಲು ಗಮನಿಸುವ ಅತೀ ಮುಖ್ಯ ಅಂಶಗಳು ಈ ಕೆಳಗಿನಂತಿವೆ

೧. ಅಭ್ಯರ್ಥಿ ಯಾವ ಜಾತಿ/ಕೋಮಿಗೆ ಸೇರಿದ್ದಾನೆ. ಮತ್ತು ಅವನು ನಿಲ್ಲುವ ಕ್ಷೇತ್ರದಲ್ಲಿ ಮತ ನೀಡುವವರಲ್ಲಿ ಅಭ್ಯರ್ಥಿಯ ಜಾತಿ/ಕೋಮಿಗೆ ಸೇರಿದ ಒಟ್ಟು ಜನಸಂಖ್ಯೆ ಎಷ್ಟಿದೆ.

೨. ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲುವವನು ಆರ್ಥಿಕವಾಗಿ ಎಷ್ಟು ಸಬಲತೆಯನ್ನು ಹೊಂದಿದ್ದಾನೆ. ಮತ್ತು ಚುನಾವಣೆಯಲ್ಲಿ ಆತ ಹಣ ಎಷ್ಟು ವೆಚ್ಚ ಮಾಡಬಲ್ಲ ಎಂಬುದನ್ನು ಗಮನಿಸಲಾಗುತ್ತದೆ ಮತ್ತು ಆ ವ್ಯಕ್ತಿ ಎಷ್ಟು ಪಾರ್ಟಿಫಂಡ್ ನೀಡಬಲ್ಲ ಎಂಬುದನ್ನು ಗಮನಿಸಲಾಗುತ್ತದೆ.

ಚುನಾವಣೆಗೆ ನಿಲ್ಲುವ ಅಭ್ಯರ್ಥಿ ಆ ಚುನಾವಣೆಗೆ ಸ್ಪರ್ಧಿಸಲು ನೈತಿಕವಾಗಿ ಎಷ್ಟು ಯೋಗ್ಯ ಎಂದು ನೋಡುವುದಿಲ್ಲ.

ಚುನಾವಣೆಗೆ ನಿಲ್ಲುವ ಅಭ್ಯರ್ಥಿ ಜನ ಸಾಮಾನ್ಯರಿಗೆ ನ್ಯಾಯ ಒದಗಿಸಬಲ್ಲಷ್ಟು ಹೊಣೆಗಾರಿಕೆ ಹೊರಬಲ್ಲನೆ ಮತ್ತು ನೈತಿಕ ಯೋಗ್ಯತೆ ಇರುವವನೆ ಎಂಬುದನ್ನು ಗಮನಿಸುವುದಿಲ್ಲ.

ಚುನಾವಣಾ ಅಭ್ಯರ್ಥಿ ಶಿಕ್ಷಣ ಪಡೆದವನೆ ಅಥವಾ ಅಲ್ಲವೆ, ಶಿಕ್ಷಣ ಪಡೆದಿದ್ದರೆ ಅವನು ಎಷ್ಟು ಶಿಕ್ಷಣ ಪಡೆದಿದ್ದಾನೆ ಮುಂತಾಗಿ ಯಾವುದನ್ನೂ ಗಮನಿಸುವುದಿಲ್ಲ.

ಇಂದು ಚುನಾವಣಾ ಸ್ವರೂಪವೇ ಬದಲಾಗುತ್ತಿದೆ. ಜಾತಿ ನೋಡಿ, ಚುನಾವಣೆಗೆ ನಿಂತ ಅಭ್ಯರ್ಥಿಯ ಸಾಮರ್ಥ್ಯ ನೋಡಿ ಮತದಾರ ಮತ ಹಾಕುವುದನ್ನು ಮರತೇ ಬಿಟ್ಟಿದ್ದಾನೆನೋ

ಎನ್ನುವಷ್ಟು ಅಧ್ವಾನದ ಫಲಿತಾಂಶಗಳು ಚುನಾವಣಾ ವಿಚಾರದಲ್ಲಿ ಹೊರಬೀಳುತ್ತವೆ. ಬಹುತೇಕವಾಗಿ ಈ ದೇಶದಲ್ಲಿ ನಡೆಯುವ ಎಲ್ಲಾ ಸ್ವರೂಪದ ಚುನಾವಣೆಗಳು ಚುನಾವಣಾ ನೀತಿಯನ್ನು ಮುರಿದೇ ಚುನಾವಣೆ ನಡೆಸುತ್ತವೆ ಎಂಬುದನ್ನು ಗಮನಿಸಬಹುದಾಗಿದೆ. ಹಣ, ಹೆಂಡ, ಸೀರೆ, ಇತ್ಯಾದಿ ಚಿಕ್ಕ ಪುಟ್ಟ ಆಸೆಗಳನ್ನು ಮತದಾರನಲ್ಲಿ ತುಂಬಿ ಚುನಾವಣೆಯಲ್ಲಿ ಗೆಲ್ಲುವವರ ಪ್ರಮಾಣವೇ ಹೆಚ್ಚು. ಅದಕ್ಕೆ ಪಂಚಾಯತ್‌ರಾಜ್ ವ್ಯವಸ್ಥೆಯೂ ಹೊರತಲ್ಲ.

ಬಳ್ಳಾರಿ ಜಿಲ್ಲೆಯ ನಾಲ್ಕು ತಾಲೂಕುಗಳ ಒಟ್ಟು ೨೭ ಪಂಚಾಯತ್‌ರಾಜ್ ವ್ಯವಸ್ಥೆಯ ಚುನಾಯಿತ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ರಾಜಕೀಯ ಸ್ಥಿತಿ–ಗತಿಗಳ ಕುರಿತು ಈ ಅಧ್ಯಯನದಲ್ಲಿ ಅವಲೋಕಿಸಲಾಗಿದೆ.

ಗ್ರಾಮಪಂಚಾಯತಿ ಚುನಾವಣೆಗಳಲ್ಲಿ ಯಾವುದೇ ರಾಷ್ಟ್ರೀಯ ಅಥವಾ ಪ್ರಾದೇಶಿಕ ಪಕ್ಷಗಳು ಪ್ರವೇಶಿಸುವಂತಿಲ್ಲ. ಹೀಗಾಗಿ ಗ್ರಾಮ ಪಂಚಾಯಿತಿ ಅಭ್ಯರ್ಥಿಗಳಿಗೆ ಯಾವುದೇ ಪಕ್ಷದ ಗುರುತನ್ನು ಚುನಾವಣಾ ಗುರುತಾಗಿ ನೀಡುವುದಿಲ್ಲ. ಅವರಿಗೆ ಚುನಾವಣಾ ಆಯೋಗ ನಿರ್ಧಾರ ಮಾಡಿದ ಯಾವುದಾದರೂ ಒಂದು ಗುರುತನ್ನು ನೀಡಲಾಗುತ್ತದೆ ಅಷ್ಟೇ. ಆದರೆ ಗ್ರಾಮ ಮಟ್ಟದಲ್ಲಿ ಚುನಾವಣೆಗೆ ನಿಂತವರು ವೋಟ್ ಬ್ಯಾಂಕ್‌ಗಳು ಎಂದರಿತ ಪಕ್ಷಗಳು ಅವರನ್ನು ಓಲೈಸಲೆಂದು ತಮ್ಮ ಕಡೆ ಸೆಳೆದುಕೊಳ್ಳಲು ಪ್ರಯತ್ನಿಸುತ್ತವೆ ಹಾಗೂ ಆ ಜನರಿಗೆ ಸರಾಯಿ, ಹಣ ಇತ್ಯಾದಿಗಳನ್ನು ನೀಡಿ ತಮ್ಮ ಪ್ರೀತಿಯನ್ನು ಗಳಿಸಿಕೊಳ್ಳತ್ತವೆ. ಸಂವಿಧಾನಕವಾಗಿ ಪಕ್ಷಾತೀತವಾಗಿ ಜರುಗಬೇಕಾದ ಗ್ರಾಮ ಪಂಚಾಯಿತ ಚನಾವಣೆ ಪಕ್ಷ – ಪಕ್ಷಗಳ ಮಧ್ಯದ ಹಣಾಹಣಿಯಾಗಿ ಏರ್ಪಡುತ್ತದೆ. ಕ್ಷೇತ್ರ ಕಾರ್ಯಕ್ಕೆ ಹೋದಾಗ ಹಿರಿಯ ವ್ಯಕ್ತಿಯೊಬ್ಬ ಈ ಗ್ರಾಮ ಪಂಚಾಯ್ತಿ ಚುನಾವಣೆಗಳು ಬಂದು ಹಳ್ಳಿಗೆ ಹಳ್ಳಿಯನ್ನೇ ಹೊಲಸು ಮಾಡಿ ಬಿಟ್ಟವು. ಮೊದಲಿಗೆ ಇಡೀ ಹಳ್ಳಿ ಅಣ್ಣ ತಮ್ಮಂದಿರಂತೆ ಬದಕುತ್ತಿದ್ದವು. ಈಗ ಕೌರವ ಪಾಂಡವರಂತೆ ವೈರಿಗಳಾಗಿ ಬದುಕುವಂತಾಗಿದೆ. ಈ ಗ್ರಾಮ ಪಂಚಾಯ್ತಿ ವ್ಯವಸ್ಥೆಯೇ ಬೇಕಾಗಿರಲಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆಗ ಗ್ರಾಮ ಪಂಚಾಯ್ತಿಗಳನ್ನು ಹುಟ್ಟು ಹಾಕಿದ ಉದ್ದೇಶ, ರಾಜಕೀಯ ವಿಕೇಂದ್ರಿಕರಣ, ಗ್ರಾಮೀಣಾಭಿವೃದ್ಧಿ

ಮುಂತಾದ ಉದ್ದೇಶಗಳನ್ನು ತಿಳಿಸಿ, ಗ್ರಾಮ ಪಂಚಾಯಿತಿ ಬಂದ ತರುವಾಯ ಊರಿಗೆ ದೊರೆತ ಸವಲತ್ತುಗಳು ಎಷ್ಟೆಲ್ಲಾ ಇವೆ ನೋಡಿ ಎಂದು ತಿಳಿಸಿದಾಗ ಅವರ ಮುಖದಲ್ಲಿ ವ್ಯಂಗದ ನಗೆ ಮಾತ್ರವಿತ್ತು. ಅವರನ್ನು ಏಕೆ ನಗುತ್ತಿದ್ದೀರಿ ಎಂದು ಪ್ರಶ್ನಿಸಿದಾಗ ಅವರು ನೀಡಿದ ಉತ್ತರ ಆಶ್ಚರ್ಯಕರವಾಗಿತ್ತು. " ಸವಲತ್ತುಗಳೇನೋ ಬಂದಿವೆ ನಿಜ. ಆದರೆ ಆ ಸವಲತ್ತುಗಳು ಸಮರ್ಪಕವಾಗಿ ಅನುಷ್ಠಾನಗೊಂಡಿವೆಯೆ? ಆ ಯೋಜನೆಗಳು ಅನುಷ್ಠಾನಗಳ್ಳುವಾಗ ಎಷ್ಟೆಲ್ಲಾ ಭ್ರಷ್ಟತೆ ನಡೆಯಿತು. ಶುದ್ಧವಾಗಿ ನೆಮ್ಮದಿಯಿಂದ ಬದುಕುತ್ತಿದ್ದ ಹಳ್ಳಿಗರಿಗೆ ಹಣದ ಮೇಲೆ ವ್ಯಾಮೋಹ ಬೆಳೆಯುವಂತಾಗಿದೆ. ಹಳ್ಳಿಗರು ಹೆಚ್ಚು ಭ್ರಷ್ಟವಾಗುವಂತಾಗಿದೆ. ಹಳ್ಳಿಗರಿಗೆ ರಾಜಕೀಯ ರುಚಿ ಹತ್ತಿದೆ. ಇಂದು ಹಳ್ಳಿಗಳಲ್ಲಿ ಬಹುಪಾಲು ಜನ ಮೈಗಳ್ಳರಾಗಿ ಮಾರ್ಪಟ್ಟಿದ್ದಾರೆ. ಕುಡಿತ, ಜೂಜುಕೋರುತನ ಹೆಚ್ಚಾಗಿದೆ. ಈ ವ್ಯವಸ್ಥೆ ಹಳ್ಳಿಗರನ್ನು ಯಾವುದೋ ಭ್ರಮಾ ಲೋಕಕ್ಕೆ ಕರೆಕೊಯ್ದಿದೆ. ಮನೆಯಲ್ಲಿ ಹೆಂಗಸರು ಕೂಲಿ ಮಾಡಿ ಕುಟುಂಬ ಸಲುಹಬೇಕಾದ ಸ್ಥಿತಿ ಏರ್ಪಟ್ಟಿದೆ. ಗಂಡಸರು ಕೇವಲ ರಾಜಕೀಯ ಸುದ್ದಿ ಮಾತನಾಡುತ್ತಾ ಸಂಜೆಯಾಗುತ್ತಲೇ ಪಾರ್ಟಿ ಹೆಸರಲ್ಲಿ ಕುಡಿತಕ್ಕೆ ಬಲಿಯಾಗುತ್ತಿದ್ದಾರೆ. ಇಂತಹ ರೀತಿಯ ಅಭಿವೃದ್ಧಿಯಾಗಬೇಕೆಂದಿದ್ದರೆ ಈ ವಿಕೇಂದ್ರೀಕರಣ, ಗ್ರಾಮ ಪಂಚಾಯಿತಿ ಇತ್ಯಾದಿಗಳು ನಮಗೆ ಏಕೆ ಬೇಕಾಗಿತ್ತು. ಗ್ರಾಮೀಣರಾದ ತಮಗೆ ನೆಮ್ಮದಿ ಬೇಕು, ಮೈತುಂಬ ಕೆಲಸಬೇಕು, ಇಂದು ಗ್ರಾಮ ಪಂಚಾಯಿತಿಗಳ ರಾಜಕೀಯದಿಂದ ಇಡೀ ಗ್ರಾಮಗಳ ವಾತಾವರಣವೇ ಹದಗೆಟ್ಟು ಹೋಗಿದೆ". ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ಗಾಂಧೀವಾದಿಗಳಾದ ಇವರು ಗಾಂಧಿಯ ಗ್ರಾಮ ಸ್ವರಾಜ್ಯ ಕನಸಿಗೂ ಇವತ್ತಿನ ಗ್ರಾಮ ಪಂಚಾಯಿತಿ ವ್ಯವಸ್ಥೆಗೂ ಅಜಗಜಾಂತರ ವ್ಯತ್ಯಾಸವಿದೆ ಎಂದು ತಿಳಿಸಿದರು.

ಪಕ್ಷಾತೀತವಾಗಿ ಗೆಲುವನ್ನು ಸಾಧಿಸಿ ಗ್ರಾಮ ಪಂಚಾಯಿತಿಯ ವಿವಿಧ ಹುದ್ದೆಗಳನ್ನು ಅಲಂಕರಿಸಿದ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರನ್ನು ವಿಚಾರಿಸಲಾಗಿ ಅವರೆಲ್ಲಾ ಬಹುತೇಕ ಶೇಕಡ ನೂರರಷ್ಟು ಜನ ಹೊಸದಾಗಿ ರಾಜಕೀಯ ಪ್ರವೇಶ ಮಾಡಿದವರು. ತಮ್ಮ ಸದಸ್ಯತ್ವದ ಕಾಲಾವಧಿ ಮುಗಿದ ತರುವಾಯ ರಾಜಕೀಯದಿಂದ ನಿವೃತ್ತಿಗೊಂಡು ತಮ್ಮ ಪಾಡಿಗೆ ತಾವು ಮನೆ ಕೆಲಸ, ಕೃಷಿ, ಕೂಲಿ ಇತ್ಯಾದಿಗಳಲ್ಲಿ ತೊಡಗಿಸಿಕೊಳ್ಳುವವರು.

ಕೋಷ್ಟಕ ೫.೪.೧. ಪರಿಶಿಷ್ಟ ಪಂಗಡ ಮಹಿಳೆಯರ ರಾಜಕೀಯ ಪ್ರವೇಶದ ವಿವರ ಶೇಕಡವಾರುಗಳಲ್ಲಿ

ವಿವರ	ಮೊದಲ ಬಾರಿಗೆ ಚುನಾವಣೆಗೆ ನಿಂತವರು	ಎರಡನೆ ಬಾರಿಗೆ ಚುನಾವಣೆಗೆ ನಿಂತವರು	ಎರಡಕ್ಕಿಂತ ಹೆಚ್ಚು ಬಾರಿ ಚುನಾವಣೆಗೆ ನಿಂತವರು.
ಗ್ರಾ.ಪಂ.	೭೦	–	–
ತಾ.ಪಂ.	೨೦	–	–
ಜಿ.ಪಂ.	೧೦	–	–

ಇವರು ನಾಮಕಾರ್ಥವಾಗಿ ಚುನಾವಣೆಗೆ ನಿಂತು ನಾಮಕಾರ್ಥವಾಗಿ ಸದಸ್ಯರಾದವರು. ಇವರ ಪರವಾಗಿ ಇವರ ಮನೆ ಗಂಡಸರೇ ಇಡೀ ಅವಧಿಯಲ್ಲಿ ರಾಜಕೀಯ ಮಾಡುತ್ತ ಅಡ್ಡಾಡಿದವರು ಕೇವಲ ಪರಿಶಿಷ್ಟ ಪಂಗಡ ಮಹಿಳಾ ಮೀಸಲಾತಿ ಬಂದಿದೆ ಎಂಬ ಕಾರಣಕ್ಕಾಗಿ ಆ ಅವಕಾಶವನ್ನು ಬಳಸಿಕೊಳ್ಳಲು ಇವರ ಕುಟುಂಬದ ಪುರುಷರು ಇವರನ್ನು ಚುನಾವಣೆಗೆ ಕರೆತಂದರು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಕುಟುಂಬದ ಪುರುಷರು ರಾಜಕೀಯ ಜೀವನಕ್ಕೆ ತಮ್ಮ ಮಹಿಳೆಯರನ್ನು ಕರೆತಂದರೆಂಬುದಕ್ಕಿಂತ ಆ ಮಹಿಳೆಯರ ಹೆಸರಿನಲ್ಲಿ ಪುರುಷರು ರಾಜಕೀಯ ಪ್ರವೇಶ ಮಾಡಿದರು. ಮಹಿಳಾ ಸದಸ್ಯರು ಕೇವಲ ಕುಟುಂಬದ ಒತ್ತಡಕ್ಕೆ ಮಣಿದು ರಾಜಕೀಯ ಪ್ರವೇಶ ಮಾಡಲಿಲ್ಲ. ಆ ರಾಜಕೀಯ ಪ್ರವೇಶದ ಹಿಂದೆ ಮೇಲ್ಜಾತಿಗಳು ಮತ್ತು ಬಂಡವಾಳಶಾಹಿಗಳ ಒತ್ತಡವೂ ಇದೆ ಎಂಬುದನ್ನು ಮರೆಯುವಂತಿಲ್ಲ. ಆ ಮಹಿಳಾ ಮೀಸಲಾತಿಯ ಲಾಭವನ್ನು ನೇರವಾಗಿ ಮಹಿಳಾ ಸದಸ್ಯರು ಪಡೆದಿದ್ದಾರೆನಿಸಿದರೂ ಪರೋಕ್ಷವಾಗಿ ಇಲ್ಲಿ ಅವಕಾಶ ಮತ್ತು ಅಧಿಕಾರದ ಲಾಭ ಪಡೆಯುವವರು ಪುರುಷ ವರ್ಗ ಮತ್ತು ಮೇಲ್ಜಾತಿಗಳು ಹಾಗೂ ಬಂಡವಾಳಶಾಹಿಗಳೇ ಆಗಿರುತ್ತಾರೆ. ಮಹಿಳೆ ಕೇವಲ ನೆಪಮಾತ್ರದ ಸದಸ್ಯೆಯಾಗುತ್ತಾಳೆ. ಕ್ಷೇತ್ರಕಾರ್ಯದಲ್ಲಿ ಗಮನಿಸಿದ ಪ್ರತಿ ಸದಸ್ಯೆಯೂ ಇದೇ ಮಾದರಿಯವರಾಗಿದ್ದಾರೆ.

೫.೪.೧. ಪರಿಶಿಷ್ಟ ಪಂಗಡ ಮಹಿಳೆಯರ ರಾಜಕೀಯ ಪ್ರವೇಶದ ವಿವರ

ಚುನಾವಣೆಗೆ ಸ್ಪರ್ಧಿಸಿದ ಪರಿಶಿಷ್ಟ ಪಂಗಡದ ಮಹಿಳೆಯರು, ಅದರಲ್ಲೂ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪಂಚಾಯತ್ ರಾಜ್ ಪರಿಶಿಷ್ಟ ಪಂಗಡದ ೨೭ ಮಹಿಳಾ ಸದಸ್ಯರೆಲ್ಲಿ ಬಹುತೇಕ ಮಹಿಳೆಯರು ಮೊದಲ ಬಾರಿಗೆ ರಾಜಕೀಯ ಪ್ರವೇಶ ಮಾಡಿದವರಾಗಿದ್ದಾರೆ.

ನೀವೇಕೆ ರಾಜಕೀಯ ಪ್ರವೇಶ ಮಾಡಲು ಆಪೇಕ್ಷಿಸಿದಿರಿ ಎಂಬ ಪ್ರಶ್ನೆಗೆ ಅವರಲ್ಲಿ ಬಹುಪಾಲು ಜನ ನೀಡಿದ ಉತ್ತರ ಒಂದೇ ಪ್ರಕಾರದ್ದಾಗಿತ್ತು. ಅದು ಯಾವುದೆಂದರೆ "ನಮ್ಮ ಮನೆ ಗಂಡು ಮಕ್ಕಳು ಎಲೆಕ್ಷನ್ ನಿಲ್ರಿ ಅಂದ್ರು, ನಾವು ನಿಂತ್ವಿ

ಎಲೆಕ್ಷನ್ ನಿಲ್ಲುವುದೆಂದರೆ ಏನು? ಹೇಗೆ ನಿಂತಿರಿ ಎಂಬ ಪ್ರಶ್ನೆಗೆ 'ನಮಗೇನೂ ಗೊತ್ತಿಲ್ಲ. ಮೊದ್ಲು ನಮ್ದು ಜಾತಿ ಸರ್ಟಿಫಿಕೇಟ್ ಮಾಡಿಸಿದ್ರು, ಆಮೇಲೆ ಎಲೆಕ್ಷನ್ ಫಾರ್ಮ ತುಂಬಿಸಿ ನಮ್ಮ ಕೂಡ ಸಹಿ ಮಾಡಿಸಿದ್ರು, ಮುಂದಿನ ಕೆಲಸನೆಲ್ಲಾ ನಮ್ಮ ಮನೆ ಗಂಡಸರು ಮಾಡಿದ್ರು, ಆಮೇಲೆ ಏನೇನು ಮಾಡಿದ್ರೋ ಅವರಿಗೆ ಗೊತ್ತು, ಆ ಮೇಲೆ ಎಲೆಕ್ಷನ್ ನಿಂದ್ರಾಕ ಅವಕಾಶ ಆತು ಅಂತ ಗೊತ್ತಾದ ಮ್ಯಾಗ ಪ್ರಚಾರಕ್ಕೆ ಹೋದ್ವಿ, ನಮಗೇನೂ ಗೋತ್ತಿಲ್ಲ" ಎಂಬ ಅಮಾಯಕವಾದ ಉತ್ತರವೇ ಅವರಿಂದ ದೊರೆತದ್ದು.

೫.೪.೨. ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸುವ ವಿವರ

ಅಮಾಯಕರಾದ ರಾಜಕೀಯ ಒಳಸುಳಿಗಳ ಪರಿಚಯವೇ ಇಲ್ಲದ ಗ್ರಾಮೀಣ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ತಾವು ಯಾವ ಪಕ್ಷದಿಂದ ಗೆದ್ದಿದ್ದೇವೆ ಎಂಬ ಸ್ಪಷ್ಟ ಚಿತ್ರಣವೂ ಇಲ್ಲವಾಗಿದೆ. ಸಂವಿಧಾನದ ವಿಧಿಗಳನ್ವಯ ಗ್ರಾಮ ಪಂಚಾಯತಿ ಮಟ್ಟದಲ್ಲಿ ಯಾವುದೇ ಪಕ್ಷದ ಅಡಿಯಲ್ಲಿ ಚುನಾವಣೆಗಳು ನಡೆಯಬಾರದೆಂದಿದೆ. ಆ ಪ್ರಕಾರ ಯಾವುದೇ ಪಕ್ಷದ ಚಿನ್ಹೆಯನ್ನು ಗ್ರಾಮ ಪಂಚಾಯಿತಿ ಮಟ್ಟದ ಚುನಾವಣೆಗೆ ನೀಡುವುದಿಲ್ಲ. ಚುನಾವಣಾಧಿಕಾರಿ ಪ್ರಾದೇಶಿಕ, ರಾಜ್ಯ, ರಾಷ್ಟ್ರ ಮಟ್ಟದ ರಾಜಕೀಯ ಪಕ್ಷಗಳ ಚಿನ್ಹೆಗಳ ಹೊರತಾದ ಚಿನ್ಹೆಗಳನ್ನು ಗ್ರಾಮ ಪಂಚಾಯಿತಿ ಅಭ್ಯರ್ಥಿಗಳಿಗೆ ಆಯ್ಕೆ ಮಾಡಿ ಕೊಡುತ್ತಾನೆ. ಇದರ ಉದ್ದೇಶ ಗ್ರಾಮ ಮಟ್ಟದಲ್ಲಿ ರಾಜಕೀಯ ಪಕ್ಷಗಳ ಹೆಸರಿನಲ್ಲಿ ಘರ್ಷಣೆಗಳಾಗಬಾರದು ಎಂಬುದೇ ಆಗಿದೆ. ಆದರೆ ಬಹುತೇಕವಾಗಿ ಇಂದು ಗ್ರಾಮ ಪಂಚಾಯಿತಿ ಚುನಾವಣೆಗಳು ರಾಜಕೀಯ ಪಕ್ಷಗಳ ಹಿನ್ನೆಲೆಯಲ್ಲಿಯೇ ನಡೆಯುತ್ತವೆ. ಇದಕ್ಕೆ ರಾಜ್ಯ ಮಟ್ಟದ ರಾಜಕಾರಣಿಗಳ ಕುಮ್ಮಕ್ಕೂ ಇರುತ್ತದೆ ಎನಿಸುತ್ತದೆ. ಯಾವುದೇ ಪಕ್ಷದ ಅಭ್ಯರ್ಥಿಯಾಗಿರದ ಗ್ರಾಮ ಪಂಚಾಯಿತಿ ಸದಸ್ಯರಲ್ಲಿ ಕೆಲವರು ತಾವು ಬಿ.ಜೆ.ಪಿ ಪಕ್ಷದವರೆಂದೂ ಇನ್ನೂ ಕೆಲವರು ಕಾಂಗ್ರೇಸ್ ಪಕ್ಷದವರೆಂದೂ ಇನ್ನು ಕೆಲವರು ಜೆ.ಡಿ.ಎಸ್. ಇತ್ಯಾದಿ ಪಕ್ಷಗಳ ಹೆಸರಿನ ಅಡಿಯಲ್ಲಿ ಪ್ರಚಾರ ಕಾರ್ಯ ನಡೆಸುತ್ತಾರಂತೆ. ನೀವು ಯಾವ ಪಕ್ಷದಿಂದ ಗೆದ್ದಿದ್ದೀರಿ

ಎಂದು ಗ್ರಾಮ ಪಂಚಾಯತಿ ಪರಿಶಿಷ್ಟ ಪಂಗಡದ ಹತ್ತೊಂಭತ್ತು ಮಹಿಳಾ ಸದಸ್ಯರನ್ನು ಕೇಳಲಾಗಿ ಅವರು ನೀಡಿದ ಉತ್ತರ ಮಾತ್ರ ಒಂದು ರಾಜಕೀಯ ಪಕ್ಷದ ಹೆಸರಾಗಿರದೆ ಆ ಪಕ್ಷದ ಒಬ್ಬ ಮುಖಂಡನ ಹೆಸರಾಗಿತ್ತು.

ಕೋಷ್ಟಕ ೫.೪.೨. ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ ವಿವರ (ಶೇಕಡವಾರುಗಳಲ್ಲಿ)

	ಬಿ.ಜೆ.ಪಿ ಪಕ್ಷದ ಸ್ಥಳೀಯ ರಾಜ್ಯಮಟ್ಟದ ವ್ಯಕ್ತಿಯ ಹೆಸರನ್ನು ಹೇಳಿದವರು	ಪಕ್ಷದ ಹೆಸರನ್ನೂ ಹೇಳದವರು
ಗ್ರಾ.ಪಂ. ಸದಸ್ಯರು	೭೦	೩೦

ನೀವು ಯಾವುದೇ ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಅಥವಾ ಒಂದು ರಾಜಕೀಯ ಪಕ್ಷದ ಹೆಸರಿನಲ್ಲಿ ಚುನಾವಣೆ ನಡೆಸಬಾರದು ಎಂದಿದೆಯಲ್ಲ ಎಂಬ ಪ್ರಶ್ನೆಗೆ ಮಹಿಳಾ ಸದಸ್ಯರು "ನಮಗೆ ಅದೆಲ್ಲಾ ಗೊತ್ತಿಲ್ಲಾರಿ, ನಮ್ಮನೆ ಗಂಡಸರಿಗೆ ಗೊತ್ತು ಎಂಬ ಉತ್ತರವನ್ನು ನೀಡಿದರು. ಇನ್ನೂ ಕೆಲವರು ನಾವು ಗೆಲ್ಲೋದಕ್ಕೆ ಅಣ್ಣಾ ಬಹಳ ಸಹಾಯ ಮಾಡಿದರು, ಬಳ್ಳಾರಿಯಿಂದ ಬಾಟ್ಲಿ, ಸೀರೆ, ರೊಕ್ಕ ಎಲ್ಲಾ ಕಳಿಸಿದ್ದ ಅದನ್ನು ಕೊಟ್ಟೇ ನಾವು ಎಲೆಕ್ಷನ್ ಗೆದ್ವಿ, ಇಲ್ದಿದ್ರೆ ಎಲೆಕ್ಷನ್ ಗೆಲ್ಲೋದು ನಮ್ಮ ಯೋಗ್ಯತೆಯೇ ಎಂದು ಆ ಸದಸ್ಯರು ತಿಳಿಸಿದರು. ಅವರಲ್ಲಿ ಕೆಲವರು ದೇವರ ದಯೆ ಇದ್ದುದರಿಂದ ಎಲೆಕ್ಷನ್ ಗೆದ್ದೆವು ಎಂದು ತಿಳಿಸಿದರು. ಒಟ್ಟಾರೆಯಾಗಿ ಗ್ರಾಮ ಪಂಚಾಯಿತಿ ಚುನಾವಣೆ ಪದ್ದತಿಯ ಕುರಿತು ಯಾವುದೇ ಸ್ಪಷ್ಟವಾದ ಚಿತ್ರಣ ಆ ಮಹಿಳಾ ಆಭ್ಯರ್ಥಿಗಳಿಗೆ ಇಲ್ಲದಿರುವುದು ಕಂಡು ಬಂದಿತು.

ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗೆ ಸ್ಪರ್ಧಿಸಿ ಸದಸ್ಯರಾದವರು ಗ್ರಾಮ ಪಂಚಾಯಿತಿ ಸದಸ್ಯರಿಗಿಂತ ಯಾವ ರೀತಿಯಲ್ಲಿಯೂ ಭಿನ್ನವಾಗಿರಲಿಲ್ಲ. ಅವರು ಸಹ ಅಮಾಯಕರೇ ಆಗಿದ್ದರು. ಬಹುತೇಕ ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರು ಬಿ.ಜೆ.ಪಿ. ಪಕ್ಷದ ಮೂಲಕ ಚುನಾವಣೆಗೆ ನಿಂತವರೇ ಆಗಿದ್ದಾರೆ.

ನೀವೇಕೆ ಬಿ.ಜೆ.ಪಿ. ಪಕ್ಷವನ್ನೇ ಆಯ್ಕೆ ಮಾಡಿಕೊಂಡಿರಿ, ಬೇರೆ ಬೇರೆ ಪಕ್ಷಗಳು ಕರ್ನಾಟಕದಲ್ಲಿವೆ ಅವುಗಳ ಮೂಲಕ ಏಕೆ ಸ್ಪರ್ಧಿಸಲಿಲ್ಲ. ಎಂಬ ಪ್ರಶ್ನೆಗೆ ಮಹಿಳಾ ಅಭ್ಯರ್ಥಿಗಳು ನೀಡಿದ ಉತ್ತರ "ಮನೆಯಲ್ಲಿ ಗಂಡಸರು ಹೇಳಿದಂತೆ ಮಾಡಿದ್ದೇವೆ. ನಮಗೇನೂ ಗೂತ್ತಿಲ್ಲ" ಎಂಬುದಾಗಿತ್ತು.

೫.೪.೩. ಚುನಾವಣೆ ಸ್ವರೂಪ

ಚುನಾವಣೆಯೆಂಬುದು ಒಂದು ರೀತಿಯ ವಿಚಿತ್ರವಾದ ಸ್ಪರ್ಧೆ ಇದರಲ್ಲಿ ಸೋಲು ಗೆಲವನ್ನು ನೀಡುವವನು ಕೇವಲ ಮತದಾರನಾಗಿರುತ್ತಾನೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಪ್ರತಿಸ್ಫರ್ಧಿಗಳು ಇದ್ದೇ ಇರುತ್ತಾರೆ. ಯಾವುದೇ ಒಂದು ಮೀಸಲು ಕ್ಷೇತ್ರವೆಂದರೆ ಆ ಕ್ಷೇತ್ರ ಯಾವ ಮೀಸಲಾತಿಯನ್ನು ಹೊಂದಿದೆ ಪರಿಶಿಷ್ಟ ಜಾತಿಯ ಮೀಸಲಾತಿಯಾದರೆ ಸಾಮಾನ್ಯವಾಗಿ ಪರಿಶಿಷ್ಟ ಜಾತಿಗಳ ಅನುಸೂಚಿತ ಪಟ್ಟಿಯಲ್ಲಿ ಬರುವ ಮಾದಿಗ– ಹೊಲೆಯದಂತಹ ಅಸ್ಪೃಶ್ಯ ಜಾತಿಗಳನ್ನು ದ್ವೇಷಿಸುವ ಮೇಲ್ಜಾತಿ ಜನರು ಸಾಮಾನ್ಯವಾಗಿ ಪರಿಶಿಷ್ಟ ಜಾತಿಯಲ್ಲಿಯೇ ಬರುವ ಕೊರವ, ಬೋವಿ, ಮುಂತಾದ ಸ್ಪರ್ಷಿತ ಸಮುದಾಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತವೆ. ಅದೇ ರೀತಿ ಕನಾಟಕದಲ್ಲಿಯ ಒಟ್ಟು ೫೦ ಪರಿಶಿಷ್ಟ ಪಂಗಡದ ಸಮುದಾಯಗಳಿಗೆ ಸಂಬಂಧಿಸಿದಂತೆ ನೋಡಿದರೆ ನಾಯಕ ಸಮುದಾಯಕ್ಕೆ ರಾಜಕೀಯವಾಗಿ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲಾಗುತ್ತದೆ.

೫.೪.೪. ಚುನಾವಣೆಯಲ್ಲಿ ಎಷ್ಟು ಜನ ಅಭ್ಯರ್ಥಿಗಳೊಂದಿಗೆ ಸ್ಪರ್ಧಿಸಿ ಗೆಲವನ್ನು ಸಾಧಿಸಿದರು ಎಂಬ ವಿವರ

ಪರಿಶಿಷ್ಟ ಪಂಗಡದ ಮಹಿಳೆಯರಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾದವರಲ್ಲಿ ಇಬ್ಬರು ತಮ್ಮದೇ ಸಮುದಾಯದ ಬೇರೊಬ್ಬ ಮಹಿಳಾ ಅಭ್ಯರ್ಥಿಯೊಂದಿಗೆ ಸೆಣಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಬಿ.ಜೆ.ಪಿ. ನಾಯಕರ ಪ್ರಭಾವ ಹೆಚ್ಚಿರುವುದರಿಂದ ತಮ್ಮ ಎದುರಿಗೆ ಸ್ಪರ್ಧಿಯಾಗಿ ನಿಂತಿದ್ದ ವ್ಯಕ್ತಿಗಳೊಂದಿಗೆ ಪಕ್ಷದ ವರಿಷ್ಠರು ಮಾತನಾಡಿ ಎದುರಾಳಿಯನ್ನು ಕೇವಲ ಡಮ್ಮಿ ಅಭ್ಯರ್ಥಿಯಾಗಿ ಉಳಿಸಿ ಬಿಜೆಪಿ ಪಕ್ಷಕ್ಕೆ ಸೇರಿದ ವ್ಯಕ್ತಿಗಳನ್ನು ಗೆಲ್ಲಿಸಿದುದಾಗಿ ವ್ಯಕ್ತಿಗಳು ತಿಳಿಸಿದರು.

ಗ್ರಾಮ ಪಂಚಾಯತಿಯ ಚುನಾವಣೆಗೆ ನಿಂತ ಅಭ್ಯರ್ಥಿಗಳಲ್ಲಿ ಎರಡು ಜನ ಒಬ್ಬೊಬ್ಬ ಅಭ್ಯರ್ಥಿಗಳೊಂದಿಗೆ ಸೆಣಸಾಡಿ ಗೆಲುವನ್ನು ಸಾಧಿಸಿದರೆ, ಮೂರು ಜನ ಸದಸ್ಯರು ತಮ್ಮ ವಾರ್ಡಿನಲ್ಲಿ ನಿಂತ ಇತರ ಇಬ್ಬರೊಂದಿಗೆ (ತ್ರಿಕೋನ ಸ್ಪರ್ಧೆ) ಸೆಣಸಾಟಿ ಗೆಲುವನ್ನು ಸಾಧಿಸಿದ್ದಾರೆ. ಇನ್ನುಳಿದ ಹತ್ತು ಜನ ಅಭ್ಯರ್ಥಿಗಳು ತಮ್ಮ ಕ್ಷೇತ್ರದಲ್ಲಿ ಇಬ್ಬರಿಗಿಂತಲೂ ಹೆಚ್ಚಿನ ಅಭ್ಯರ್ಥಿಗಳೊಂದಿಗೆ ಸ್ಪರ್ಧಿಸಿ ಗೆಲುವನ್ನು ಸಾಧಿಸಿದ್ದಾರೆ. ಕೇವಲ ನಾಲ್ಕು ಜನ ಅಭ್ಯರ್ಥಿಗಳು ಮಾತ್ರ ಯಾವ ಪ್ರತಿಸ್ಫರ್ಧಿಗಳೂ ಇಲ್ಲದೆ ಅವಿರೋಧವಾಗಿ ಗೆಲುವನ್ನು ಸಾಧಿಸಿ ಸದಸ್ಯರಾಗಿ ಉಳಿದಿರುವುದು ತಿಳಿದು ಬಂದಿತು.

೫.೪.೪. ಚುನಾವಣೆಯಲ್ಲಿ ಎಷ್ಟು ಜನ ಅಭ್ಯರ್ಥಿಗಳೊಂದಿಗೆ ಸ್ಪರ್ಧಿಸಿ ಗೆಲವನ್ನು ಸಾಧಿಸಿದರು ಎಂಬ ವಿವರ

ವಿವರ	ಒಬ್ಬ ಪ್ರತಿಸ್ಪರ್ಧಿಯಿಂದ ಸ್ಪರ್ಧಿಸಿ ಗೆದ್ದವರು	ಇಬ್ಬರು ಪ್ರತಿಸ್ಪರ್ಧಿ ಯೊಂದಿಗೆ ಸ್ಪರ್ಧಿಸಿ ಗೆದ್ದವರು	ಇಬ್ಬರಿಗಿಂತಲೂ ಹೆಚ್ಚು ಜನರೊಂದಿಗೆ ಸ್ಪರ್ಧಿಸಿದವರು	ಅವಿರೋಧವಾಗಿ ಆಯ್ಕೆಯಾದವರು
ಗ್ರಾ.ಪಂ	೨	೩	೧೦	೪
ತಾ.ಪಂ	–	–	೬	–
ಜಿ.ಪಂ	–	–	೨	–

ತಾಲೂಕು ಪಂಚಾಯಿತಿ ಅಭ್ಯರ್ಥಿಗಳಲ್ಲಿ ಒಟ್ಟು ಪರಿಶಿಷ್ಟ ಪಂಗಡದ ಶೇಕಡ ಆರು ಜನ ಮಹಿಳೆಯರಿದ್ದು ಅವರೆಲ್ಲಾ ಬಿ.ಜೆ.ಪಿ. ಅಭ್ಯರ್ಥಿಗಳಾಗಿ ಸೆಣಸಾಟಿ ಜಯಗಳಿಸಿಕೊಂಡಿರುವುದು ಕಂಡುಬರುತ್ತದೆ. ಇದರಲ್ಲಿ ನಾಲ್ಕು ಜನರು ಪರಿಶಿಷ್ಟ ಪಂಗಡದ ಮಹಿಳಾ ಕ್ಷೇತ್ರದಿಂದ ಮೀಸಲಾತಿಯನ್ವಯ ಗೆದ್ದಿದ್ದರೆ. ಇನ್ನುಳಿದ ಇಬ್ಬರು ಸಾಮಾನ್ಯ ಅಭ್ಯರ್ಥಿ ಸ್ಥಾನಕ್ಕೆ ನಿಂತು ಗೆಲುವನ್ನು ಸಾಧಿಸಿದ್ದಾರೆ. ಈ ಆರು ಜನ ಅಭ್ಯರ್ಥಿಗಳು ಜೆ.ಡಿ.ಎಸ್. ಕಾಂಗ್ರೇಸ್ ಬಹುಜನ ಸಮಾಜ ಪಕ್ಷ, ಪಕ್ಷೇತರ ಅಭ್ಯರ್ಥಿ ಹೀಗೆ ಭಿನ್ನ ಭಿನ್ನ ಪಕ್ಷದ ಅಭ್ಯರ್ಥಿಗಳ ವಿರುದ್ಧ ಬಿ.ಜೆ.ಪಿ ಪಕ್ಷದಡಿಯಲ್ಲಿ ನಿಂತು ಗೆದ್ದಿದ್ದಾರೆ.

ಜಿಲ್ಲಾ ಪಂಚಾಯಿತಿಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರುಗಳು ಸಹ ಬಿ.ಜೆ.ಪಿ. ಪಕ್ಷದ ಮೂಲಕವೇ ಸ್ಪರ್ಧಿಸಿ ಗೆದ್ದಿದ್ದಾರೆ. ಈ ಎಲ್ಲಾ ಅಭ್ಯರ್ಥಿಗಳ ಗೆಲುವಿನ ಹಿಂದೆಯೂ ಹಣ, ಹೆಂಡ ಮುಂತಾದ ಆಮಿಷಗಳು ತುಂಬಾ ಕೆಲಸ ಮಾಡಿವೆ.

೫.೪.೫. ಚುನಾವಣೆಗಾಗಿ ವೆಚ್ಚ ಮಾಡಿದ ಮೊತ್ತದ ವಿವರ

ಪಂಚಾಯತ್ ರಾಜ್ ವ್ಯವಸ್ಥೆಯ ಬಳ್ಳಾರಿ ಜಿಲ್ಲೆಯ ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಮೂರು ಸಂಸ್ಥೆಗಳ ಪರಿಶಿಷ್ಟ ಪಂಗಡದ ಮಹಿಳೆಯರನ್ನು ನೀವು ಚುನಾವಣೆಗಾಗಿ ಎಷ್ಟು ಹಣವನ್ನು ವೆಚ್ಚ ಮಾಡಿರಬಹುದು ಎಂಬ ಪ್ರಶ್ನೆಗೆ ಮೊದಲಿಗೆ ಮಹಿಳೆಯರಿಂದ ಬಂದ ಉತ್ತರ 'ನಮಗೇನೂ ಗೊತ್ತಿಲ್ಲ, ನಮ್ಮ ಮನೆ ಗಂಡಸರನ್ನು ಕೇಳಬೇಕು, ಆದರೆ ಅವರಿಗೆ ಮನವೊಲಿಸಿದ ತರುವಾಯ ಆರು ಜನ ಮಹಿಳೆಯರು ತಮ್ಮ ಮನೆಯ

ಗಂಡಸರು ಗ್ರಾಮಪಂಚಾಯತಿ ಚುನಾವಣೆಗಾಗಿ ತಮ್ಮ ವಾರ್ಡಿನಲ್ಲಿ ಸುಮಾರು ಹತ್ತು ಸಾವಿರ ರೂಪಾಯಿಗಳ ಒಳಗೆ ಖರ್ಚಾಗಿರಬಹುದು ಎಂದು ತಿಳಿಸಿದರು.

ಕೋಷ್ಟಕ ೫.೪.೫. ಚುನಾವಣೆಗಾಗಿ ವೆಚ್ಚ ಮಾಡಿದ ಮೊತ್ತದ ವಿವರ

	೧೦,೦೦೦ ದ ಒಳಗೆ	೫೦,೦೦೦ ದ ಒಳಗೆ	೧,೦೦,೦೦೦ ದ ಒಳಗೆ	೩,೦೦,೦೦೦ ದ ಒಳಗೆ	೫,೦೦,೦೦೦ ದ ಒಳಗೆ	೧೦,೦೦,೦೦೦ ದ ಒಳಗೆ	ಗೊತ್ತಿಲ್ಲ
ಗ್ರಾ.ಪಂ	೬	೯	೨	–	–	–	೨
ತಾ.ಪಂ	–	–	೨	೩	–	–	೧
ಜಿ.ಪಂ	–	–	–		೧	–	೧

ಮತದಾನದ ಪೂರ್ವದಲ್ಲಿ ಮತದಾರರಿಗೆ ಏನೇನು ಕೊಡಲಾಯಿತು ಎಂಬ ಪ್ರಶ್ನೆಗೆ ವಾರ್ಡಿನಲ್ಲಿ ಕೆಲವು ಮನೆಗಳನ್ನು ಬಿಟ್ಟು ಇನ್ನುಳಿದ ಎಲ್ಲ ಮನೆಗಳಿಗೆ ಒಂದೊಂದು ಕುಬುಸದ ಬಟ್ಟೆ, ಮನೆಗೆ ಒಂದೊಂದು ವಿಸ್ಕಿ ಬಾಟಲಿ ಹಂಚಲಾಯಿತು ಎಂದು ಕೆಲವರು ತಿಳಿಸಿದರೆ, ಇನ್ನೂ ಕೆಲವರು ತಮ್ಮ ಗುರುತು ಬಲ್ಬ್ ಆಗಿದ್ದುದರಿಂದ ಪ್ರತಿಯೊಂದು ಮನೆಗೂ ಬಲ್ಬನ್ನೂ ಹಂಚಲಾಯಿತು ಎಂದು ತಿಳಿಸಿದರು, ಗುಲಾಬಿ ಗುರುತಿನವರು ಮಹಿಳೆಯರಿಗೆ ಗುಲಾಬಿ ಮತ್ತು ಅಲ್ಪ ಸ್ವಲ್ಪ ಹಣ, ಪುರುಷರಿಗೆ ವಿಸ್ಕಿ ಬಾಟಲಿಯೊಂದಿಗೆ ಹಣ, ಬಾಡೂಟ ಇತ್ಯಾದಿ ಕೊಡಲಾಯಿತು ಎಂದು ತಿಳಿಸಿದರು. ಪ್ರತಿಯೊಬ್ಬರಿಂದಲೂ ಬೇರೆ ಬೇರೆ ರೀತಿಯ ಉತ್ತರಗಳು ದೊರೆತವು. ಹಣದ ವಿಚಾರಕ್ಕೆ ಬಂಗಾಗ ಮಾತ್ರ ಯಾರೂ ಸರಿಯಾದ ರೀತಿಯಲ್ಲಿ ಮಾಹಿತಿ ನೀಡಲಿಲ್ಲ. ಚುನಾವಣೆಯ ಖರ್ಚು ವೆಚ್ಚದ ಪ್ರತಿಯೊಂದು ವಿಚಾರವೂ ತಮ್ಮ ಮನೆಯ ಗಂಡಸರಿಗೆ ಗೊತ್ತು ಎಂಬ ಉತ್ತರವೇ ದೊರೆಯುತ್ತಿತ್ತು. ಮಹಿಳಾ ಸದಸ್ಯರ ಮನೆಯ ಗಂಡಸರನ್ನು ಈ ವಿಚಾರವಾಗಿ ಕೇಳಲಾಗಿ ಸಾಲ ಮಾಡಿ ಚುನಾವಣೆಗಾಗಿ ಹಣ ಹೊಂದಿಸಿಕೊಂಡಿರುದಾಗಿ ತಿಳಿಸಿದರು. ಆದರೆ ಎಷ್ಟು ಹಣ ಎಂಬುದನ್ನು ಮಾತ್ರ ಬಾಯಿ ಬಿಡಲು ಹಿಂಜರಿದರು.

ನೀರಾವರಿ ಪ್ರದೇಶದ ಒಂಭತ್ತು ಜನ ಗ್ರಾಮ ಪಂಚಾಯಿತಿ ಸದಸ್ಯರಲ್ಲಿ ಒಂಭತ್ತು ಜನರು ಸುಮಾರು ಐವತ್ತು ಸಾವಿರ ಖರ್ಚಾಗಿರಬಹುದು ಎಂದು ತಿಳಿಸಿದರೆ ಇಬ್ಬರು ಸದಸ್ಯರು ತಾವು ಚುನಾವಣೆಗೆ ನಿಂತ ವಾರ್ಡ್‌ವೊಂದಕ್ಕೆ ಒಂದು ಲಕ್ಷದಷ್ಟು ಹಣವನ್ನು ಚುನಾವಣಾ ಸಂದರ್ಭದಲ್ಲಿ ಖರ್ಚು ಮಾಡಿರಬಹುದು ಎಂದು ತಿಳಿಸಿದರು. ಇಬ್ಬರು ಸದಸ್ಯರು ಮಾತ್ರ ನಮಗೆ ಏನೂ

ಗೊತ್ತಿಲ್ಲ. ಎಂಬ ಉತ್ತರವನ್ನು ನೀಡಿದರು. ಅವರ ಮನೆ ಗಂಡಸರು ತಾವು ಯಾವುದೇ ರೀತಿಯಲ್ಲಿ ಹಣವನ್ನು ಖರ್ಚು ಮಾಡಿಲ್ಲ, ತಮ್ಮ ಮೇಲಿನ ಅಭಿಮಾನಕ್ಕೆ ತಮಗೆ ಮತದಾರರು ಮತವನ್ನು ಹಾಕಿದ್ದಾರೆ ಎಂದು ತಿಳಿಸಿದರು.

ತಾಲೂಕು ಪಂಚಾಯಿತಿಯ ಇಬ್ಬರು ಅಭ್ಯರ್ಥಿಗಳು ಸುಮಾರು ಒಂದು ಲಕ್ಷದವರೆಗೆ ತಮ್ಮ ಕ್ಷೇತ್ರದಲ್ಲಿ ಖರ್ಚು ಮಾಡಿರುವುದಾಗಿ ತಿಳಿಸಿದರು. ಮೂರು ಜನ ಸದಸ್ಯರು ಕನಿಷ್ಟ ತಮ್ಮ ಕ್ಷೇತ್ರದಲ್ಲಿ ಮೂರು ಲಕ್ಷ ರೂಪಾಯಿ ಖರ್ಚಾಗಿರಬಹುದೆಂದು ತಿಳಿಸಿದರು. ಒಬ್ಬ ಮಹಿಳಾ ಸಮಸ್ಯೆ ತನಗೇನೂ ಗೊತ್ತಿಲ್ಲ ಎಂಬ ಉತ್ತರವನ್ನು ನೀಡಿದರು.

ಇದರಲ್ಲಿ ತಾಲೂಕು ಪಂಚಾಯಿತಿ ಅಧ್ಯಕ್ಷರಾದ ಒಬ್ಬ ಮಹಿಳೆಯ ಗಂಡ ತಮ್ಮ ಪೂರ್ವಜರೆಲ್ಲಾ ರಾಜಕಾರಣಿಗಳು, ಅಧ್ಯಕ್ಷೆಯ ಮಾವ (ಗಂಡನ ತಂದೆ) ಹಿಂದೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದರು. ಕಳೆದ ನಾಲ್ಕು ಐದು ವರ್ಷಗಳ ಹಿಂದೆ ತಮ್ಮ ತಂದೆಯ ಕೊಲೆಯಾದ ತರುವಾಯ ಚುನಾವಣೆಯ ತಂಟೆಗೆ ಹೋಗಿರಲಿಲ್ಲ, ತಮ್ಮ ತಂದೆಯ ಅಭಿಮಾನಿಗಳೇ ತಮ್ಮ ಹೆಂಡತಿ ಚುನಾವಣೆಗೆ ನಿಲ್ಲುವಂತೆ ಪ್ರೇರೆಪಿಸಿದರು, ಆದ್ದರಿಂದ ತಮ್ಮ ಹೆಂಡತಿಯನ್ನು ಚುನಾವಣೆಗೆ ನಿಲ್ಲಿಸಿದುದಾಗಿ ತಿಳಿಸಿದರು. ಆ ಮಹಿಳೆ ಚುನಾವಣಾ ಅಭ್ಯರ್ಥಿಯಾಗಿ ನಿಂತಾಗ ಮಹಿಳಾ ಅಭ್ಯರ್ಥಿಯ ಮೈಮೇಲಿನ ಬಂಗಾರದ ಆಭರಣಗಳನ್ನು ಐದು ಸಾವಿರ ರೂಪಾಯಿಗೆ ಅಡ ಇಟ್ಟು ಡೆಪೋಜಿಟ್ ಹಣ ಸಲ್ಲಿಸಿದುದಾಗಿ ನೆನೆಪಿಸಿಕೊಂಡರು. ಅವರೇ ತಮ್ಮ ಹೆಂಡತಿಯ ಚುನಾವಣೆಗಾಗಿ ಸುಮಾರು ಮೂರು ಲಕ್ಷದಷ್ಟು ಹಣ ಖರ್ಚು ಮಾಡಲಾಯಿತು ಎಂದು ತಿಳಿಸಿದರು.

ನಿಮ್ಮ ಹೆಂಡತಿಯ ಆಭರಣಗಳನ್ನು ಅಡ ಇಟ್ಟು ಚುನಾವಣಾ ಡೆಪೋಜಿಟ್ ಕಟ್ಟಿದುದಾಗಿ ತಿಳಿಸಿದ ನೀವು ಮೂರು ಲಕ್ಷ ರೂಪಾಯಿ ಎಲ್ಲಿಂದ ತಂದಿರಿ ಎಂದರೆ ರಾಜ್ಯ ರಾಜಕಾರಣದಲ್ಲಿ ಹೆಸರುವಾಸಿಯಾದ ರಾಜಕಾರಣಿ ತಮಗೆ ಹಣ ಮತ್ತು ಸರಾಯಿ, ಸೀರೆ ಮುಂತಾದವುಗಳನ್ನು ಕಳಿಸಿಕೊಟ್ಟರು, ಅವರಿಂದಾಗಿ ತಾವು ಗೆಲ್ಲಲು ಸಾಧ್ಯವಾಯಿತು ಇಲ್ಲದಿದ್ದರೆ ತಮಗೆ ಸೋಲೆ ಅನಿವಾರ್ಯ ವಾಗುತ್ತಿತ್ತು ಎಂದು ತಿಳಿಸಿದರು. ಇನ್ನುಳಿದ ಮೂರು ಜನ ಮಹಿಳಾ ಸದಸ್ಯರ ಮನೆಯವರೂ ಇದೇ ರೀತಿಯ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರೆ, ಒಬ್ಬ ಸದಸ್ಯರು ತಮಗೇನೂ ಗೊತ್ತಿಲ್ಲ, ಮನೆಯವರ ಒತ್ತಾಯಕ್ಕೆ ಚುನಾವಣೆಗೆ ನಿಂತಿದ್ದುದಾಗಿ ತಿಳಿಸಿದರು.

ಜಿಲ್ಲಾ ಪಂಚಾಯಿತಿಯ ಇಬ್ಬರು ಅಭ್ಯರ್ಥಿಗಳಲ್ಲಿ ಒಬ್ಬ ಅಭ್ಯರ್ಥಿ ಸುಮಾರು ಐದು ಲಕ್ಷ ರೂಪಾಯಿ ಖರ್ಚಾಗಿರಬಹುದು, ಪಕ್ಷದ ವರಿಷ್ಠರು ಕೈಹಿಡಿದುದರಿಂದ ತಮಗೆ ಚುನಾವಣೆ ಮಾಡಲು ಸ್ವಲ್ಪ ಸಹಾಯವಾಯಿತು ಎಂದು ತಿಳಿಸಿದರೆ ಮತ್ತೊಬ್ಬ ಮಹಿಳೆ ತಮಗೇನೂ ಗೊತ್ತಿಲ್ಲವೆಂಬ ಉತ್ತರವನ್ನೇ ನೀಡಿದರು.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿನ ಸಭೆಗಳ ಕುರಿತಾಗಿ ಮಹಿಳಾ ಸದಸ್ಯರಿಗಿರುವ ತಿಳುವಳಿಕೆ

ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಈ ಮೂರು ಹಂತಗಳಲ್ಲಿಯೂ ಹಲವಾರು ಸಭೆಗಳು ನಡೆಯುತ್ತವೆ. ಅದರಲ್ಲೂ ಸಾರ್ವಜನಿಕ ಸಭೆಗಳ ಕುರಿತು ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗಿಂತ ಗ್ರಾಮ ಪಂಚಾಯಿತಿಗಳ ಪಾತ್ರ ಹಿರಿದಾದುದಾಗಿದೆ. ಏಕೆಂದರೆ ಗ್ರಾಮ ಮಟ್ಟದಲ್ಲಿಯ ಜವಾಬ್ದಾರಿಗಳು ಮತ್ತು ಮೂಲಭೂತ ಸೌಕರ್ಯಗಳ ಕುರಿತು ಮಾಡಬೇಕಾದ ಕಾರ್ಯಗಳೇ ಮುಖ್ಯ ಎಂದು ಅರಿತಿರುವ ಸರ್ಕಾರ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಜವಾಬ್ದಾರಿಗಳನ್ನು ವಹಿಸಿದೆ. ಸಾಮಾನ್ಯವಾಗಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಜನಸಾಮಾನ್ಯರ ಮಧ್ಯ ಹೋಗಿ ಅವರ ಸಮಸ್ಯೆಗಳು ಯಾವುವು ಎಂಬುದನ್ನು ಜನಗಳೊಂದಿಗೆ ಚರ್ಚಿಸಿ ಅವರ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯವನ್ನು ಗ್ರಾಮ ಪಂಚಾಯತಿಯ ಸದಸ್ಯರು ಮಾಡಬೇಕು ಎಂಬುದೇ ಅದರ ಆಶಯ. ಹಾಗೆ ಗ್ರಾಮ ಪಂಚಾಯಿತಿಯ ಕಾರ್ಯ ಯೋಜನೆಗಳೇನು, ಅದು ಎಷ್ಟು ಯೋಜನೆಗಳನ್ನು ಪೂರೈಸಿದೆ, ಭವಿಷ್ಯದಲ್ಲಿ ಯಾವ ಯೋಜನೆಗಳನ್ನು ಪೂರೈಸಬೇಕಾಗಿದೆ, ಯಾವ ಯೋಜನೆಗೆ ಎಷ್ಟು ಹಣ ಮಂಜೂರಾಗಿದೆ, ಯಾವ ಯೋಜನೆಯಡಿ ಹಣ ಬಿಡುಗಡೆಯಾಗಿದೆ ಮುಂತಾದ ಪ್ರತಿಯೊಂದು ವಿವರವೂ ಸಾರ್ವಜನಿಕರಿಗೆ ತಿಳಿಯಬೇಕು ಮತ್ತು ಪಾರದರ್ಶಕವಾಗಿರಬೇಕು. ಪ್ರತಿಯೊಬ್ಬ ವ್ಯಕ್ತಿಯನ್ನೂ ಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದೇ ವಿಕೇಂದ್ರಿಕರಣದ ಉದ್ದೇಶ.

ಆದರೆ ಎಷ್ಟೋ ಸಭೆಗಳ ಕುರಿತು ಜನಸಾಮಾನ್ಯರಿಗೆ ಇರಲಿ ಗ್ರಾಮ ಪಂಚಾಯತ್ ಸದಸ್ಯರಿಗೆ ಅರಿವಿರುವುದಿಲ್ಲ. ವರ್ಷಕ್ಕೊಮ್ಮೆಯಾದರೂ ಗ್ರಾಮ ಸಭೆ ನಡೆಸಬೇಕು ಹಾಗೂ ವಾರ್ಡ್ ಸಭೆಗಳನ್ನು ನಡೆಸಬೇಕು ಎಂದಿದ್ದರೂ ಎಷ್ಟೊ ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳನ್ನು ನಡೆಸುವುದೇ ಇಲ್ಲ. ಸಾಮಾನ್ಯವಾಗಿ ಗ್ರಾಮ ಸಭೆಗೆ ಸ್ಥಳೀಯ ಅಧಿಕಾರಿಗಳೊಂದಿಗೆ

ತಾಲೂಕು ಮಟ್ಟದ ಅಧಿಕಾರಿಗಳು ಬರಬೇಕೆಂದಿದ್ದರೂ ಬೆರಳೆಣಿಕೆಯಷ್ಟು ಅಧಿಕಾರಿಗಳು ಮಾತ್ರ ಬಂದಿರುತ್ತಾರೆ. ಎಷ್ಟೋ ಬಾರಿ ಗ್ರಾಮ ಪಂಚಾಯಿತಿ ಸದಸ್ಯರೇ ಗ್ರಾಮ ಸಭೆಗಳಿಗೆ ಹೋಗುವುದಿಲ್ಲ. ಸಾರ್ವಜನಿಕರಿಗೆ ಒಮ್ಮೊಮ್ಮೆ ಗ್ರಾಮ ಸಭೆ ಎಲ್ಲಿ ನಡೆಯಿತು ಎಂಬುದೇ ತಿಳಿಯುವುದಿಲ್ಲ.

ಅಧ್ಯಯನದ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳ ಕುರಿತು ಕೇಳಿದಾಗ ಹಲವಾರು ರೀತಿಯ ಪ್ರತಿಕ್ರಿಯೆಗಳು ಗ್ರಾಮ ಪಂಚಾಯತ್ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಿಂದ ದೊರೆತವು. ಆ ಸಭೆಗಳ ಕುರಿತು ಸದಸ್ಯರ ಪ್ರತಿಕ್ರಿಯೆಗಳನ್ನು ಗಮನಿಸಿದಾಗ ಕಂಡು ಬಂದ ತತ್ವಗಳು ಈ ಕೆಳಗಿನಂತಿವೆ.

೫.೪.೬. ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳ ಕುರಿತು ಸದಸ್ಯರಿಗಿರುವ ತಿಳುವಳಿಕೆಗಳ ವಿವರ

ಒಟ್ಟು ನಾಲ್ಕು ತಾಲೂಕುಗಳ ಮಧ್ಯ ಆಯ್ಕೆಯಾದ ಹತ್ತೊಂಭತ್ತು ಜನ ಪರಿಶಿಷ್ಟ ಪಂಗಡದ ಮಹಿಳೆಯರಲ್ಲಿ ಬಹುತೇಕ ಯಾರಿಗೂ ಸರಿಯಾದ ರೀತಿಯಲ್ಲಿ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳ ಕುರಿತು ಮಾಹಿತಿಯಾಗಲೀ, ಆ ಸಭೆಗಳು ಏಕೆ ಮಾಡಲಾಗುತ್ತದೆ ಎಂಬ ಉದ್ದೇಶಗಳಾಗಲೀ ಯಾವುದೂ ಗೊತ್ತಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿತು. ಯಾವುದೇ ಗ್ರಾಮ ಸಭೆ ಅಥವಾ ವಾರ್ಡ್ ಸಭೆಗಳಿಗೆ ಆಯಾ ಗ್ರಾಮ ಪಂಚಾಯತ್ ಅಧ್ಯಕ್ಷರು, ಕಾರ್ಯದರ್ಶಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಸದಸ್ಯರು ಮತ್ತು ಸಾರ್ವಜನಿಕರು ಪಾಲ್ಗೊಳ್ಳಬೇಕು.

ಆದರೆ ಗ್ರಾಮ ಸಭೆ/ವಾರ್ಡ್ ಸಭೆಗಳಿಗೆ ಹಾಜರಾಗದೇ ಇರುವವರಲ್ಲಿ ಹೊಸಪೇಟೆ, ಕೂಡ್ಲಿಗಿಯಿಂದ ತಲಾ ಇಬ್ಬರು ಇನ್ನುಳಿದ ಸಿರಗುಪ್ಪ ಹಗರಿಬೊಮ್ಮನಹಳ್ಳಿಯ ತಾಲೂಕುಗಳಿಂದ ತಲಾ ಒಬ್ಬೊಬ್ಬ ಸದಸ್ಯರು ಕಂಡುಬಂದರು.

ನೀವೇಕೆ ಗ್ರಾಮ ಸಭೆಗಳಿಗೆ ಹಾಜರಾಗಲಿಲ್ಲ ಎಂದು ಪ್ರಶ್ನಿಸಿದರೆ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳಲ್ಲಿ ಮಾತನಾಡುವುದಕ್ಕೆ ಸೆಕ್ರೆಟರಿ ಮತ್ತು ಅಧ್ಯಕ್ಷರಿರುತ್ತಾರೆ. ನಮ್ಮದೇನೂ ಕೆಲಸವಿರುವುದಿಲ್ಲ. ನಮಗೇನೂ ತಿಳಿಯುವುದಿಲ್ಲ. ಅಕಸ್ಮಾತ್ ಏನಾದರೂ ಸಮಸ್ಯೆಗಳಿದ್ದರೆ ನಮ್ಮ ಮನೆಯ ಗಂಡಸರೇ ಪರಿಹರಿಸುತ್ತಾರೆ. ನಾವು ಆ ಸಭೆಗಳಿಗೆ ಹೋಗುವ ಅವಶ್ಯಕತೆ ಇರದೇ ಇರವುದರಿಂದ ಆ ಸಭೆಗಳಿಗೆ ಹಾಜರಾಗುವುದಿಲ್ಲ. ಮೀಟಿಂಗ್ ನಂತರ ಯಾರಾದರೂ ಬಂದು ನಮ್ಮ ಸಹಿಯನ್ನು ಪುಸ್ತಕದಲ್ಲಿ ಪಡೆಯುತ್ತಾರೆ. ಮತ್ತೆ ನಾವೇಕೆ ಮನೆ ಕೆಲಸ ಬಿಟ್ಟು ಆ ಸಭೆಗಳಿಗೆ ಹಾಜರಾಜಬೇಕು

ಎಂದು ಹೋಗಲಿಲ್ಲ ಎಂದು ತಿಳಿಸಿದರು. ಅವರ ದೃಷ್ಟಿಯಲ್ಲಿ ಸಭೆಯನ್ನು ಪ್ರತಿನಿಧಿಸಲು ತಮ್ಮ ಮನೆಯ ಗಂಡಸರು ಇರುವುದರಿಂದ ತಮ್ಮದೇನೂ ಕೆಲಸವಿಲ್ಲವೆಂದೇ ಅವರು ತಿಳಿದಂತಿತ್ತು.

ಹಗರಿಬೊಮ್ಮನಹಳ್ಳಿ ತಾಲೂಕಿನ ಒಬ್ಬೇ ಒಬ್ಬ ಮಹಿಳೆ ವಾರ್ಡ್ ಸಭೆ ಮತ್ತು ಗ್ರಾಮ ಸಭೆಯಲ್ಲಿ ಹಾಜರಾಗಿದ್ದುದಾಗಿ ತಿಳಿಸಿದಳು. ಅವರ ದೃಷ್ಟಿಯಲ್ಲಿ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳೇ ನಿಷ್ಪ್ರಯೋಜಕ, ಆ ರೀತಿಯ ಸಭೆಗಳಿಂದ ಯಾವ ಉಪಯೋಗವೂ ಇಲ್ಲ. ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಿಗೆ ಜನಸಾಮಾನ್ಯರ್‍ಯಾರೂ ಹಾಜರಾಗುವುದಿಲ್ಲ, ಸಾಮಾನ್ಯವಾಗಿ ಜನರು ಬದುಕಿಗೆ (ಕೂಲಿ) ಹೋದ ಮದ್ಯಾಹ್ನದ ಸಂದರ್ಭದಲ್ಲಿ ಸಭೆ ನಡೆಸುವುದರಿಂದ ಜನರಾರೂ ಬರುವುದಿಲ್ಲ. ಸುಮ್ಮನೆ ಕಾಟಾಚಾರದ ಸಭೆಯೊಂದನ್ನು ಮಾಡಿ ಅಧಿಕಾರಿಗಳು ಕೈ ತೊಳೆದುಕೊಳ್ಳುತ್ತಾರೆ. ಅದನ್ನು ಜನರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಗ್ರಾಮ ಪಂಚಾಯಿತಿಯವರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಈ ರೀತಿ ಸಭೆ ಮಾಡುವುದಕ್ಕಿಂತ ಸಭೆ ಮಾಡದೆ ಇದ್ದರೇ ಒಳ್ಳೆಯದೇನೊ ಎಂಬ ಅಭಿಪ್ರಾಯವನ್ನು ಆ ಸದಸ್ಯೆ ತಿಳಿಸಿದರು. ಎಲ್ಲಾ ತಾಲೂಕಿನ ಮಧ್ಯೆ ಏಳು ಜನ ಸದಸ್ಯರಿಗೆ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳ ಮಧ್ಯ ಇರುವ ವ್ಯತ್ಯಾಸವೇ ತಿಳಿದಿರಲಿಲ್ಲ. ಗ್ರಾಮ ಸಭಾ ಸದಸ್ಯರ ಕರ್ತವ್ಯಗಳ ಕುರಿತು ತರಬೇತಿ ಶಿಬಿರವೊಂದು ನಡೆಯುತ್ತದೆ. ಅದರಲ್ಲಿ ನಿಮಗೆ ಸಭೆಗಳ ಕುರಿತು, ನಿಮ್ಮ ಕರ್ತವ್ಯಗಳ ಕುರಿತು ತಿಳಿಸಿರಲಿಲ್ಲವೆ ಎಂಬ ಪ್ರಶ್ನೆಗೆ ಆ ಮಹಿಳೆಯರು ನೀಡಿದ ಉತ್ತರ ಹೀಗಿತ್ತು "ತರಬೇತಿ ಕಾರ್ಯಕ್ರಮ ತಾಲೂಕು ಪಂಚಾಯಿತಿಯಲ್ಲಿ ನೀಡಿದರು. ಆದರೆ ತಾವು ತರಬೇತಿಯ ಪ್ರಾರಂಭದ ದಿನ ಹಾಜರಾದವರು ಮರಳಿ ತರಬೇತಿಗೆ ಹಾಜರಾಗಲಿಲ್ಲ. ಬಹುತೇಕ ಯಾವ ಮಹಿಳಾ ಸದಸ್ಯರೂ ತರಬೇತಿಗೆ ಸರಿಯಾಗಿ ಹೋಗಿಲ್ಲವೆಂದೇ ತಿಳಿಸಿದರು. ಇನ್ನೂ ನಾಲ್ಕು ಜನ ಸದಸ್ಯರು (ಹೊಸಪೇಟೆ-೧, ಹಗರಿ ಬೊಮ್ಮನಹಳ್ಳಿ-೧, ಕೂಡ್ಲಿಗಿ-೨) ಯಾವ ಸಭೆಯ ಕುರಿತೂ ತಮಗೆ ತಿಳುವಳಿಕೆ ಇಲ್ಲವೆಂದೇ ತಿಳಿಸಿದರು. ಕ್ಷೇತ್ರಕಾರ್ಯದಲ್ಲಿ ಯಾವುದೇ ಪ್ರಶ್ನೆ ಕೇಳಿದರೂ ನಮ್ಮ ಮನೆ ಗಂಡಸರಿಗೆ ಗೊತ್ತು ಎಂಬ ಉತ್ತರ ಮಾತ್ರ ಅವರದಾಗಿತ್ತು. ಪ್ರಾಯಶಃ ಪುರುಷಶಾಹಿ ಹಿಡಿತದ ಪ್ರಭಾವದೊಂದಿಗೆ ಮಹಿಳಾ ಸದಸ್ಯರಿಗೆ ಶಿಕ್ಷಣದ ಕೊರತೆಯೂ ಇಲ್ಲಿ ಅವರ ಪಾಲ್ಗೊಳ್ಳುವಿಕೆಯ ಅಸಮಾರ್ಥ್ಯಕ್ಕೆ ಕಾರಣವಾಗಿರಬೇಕೆನಿಸುತ್ತದೆ.

ಕಾರ್ಯಕಾರಿ ಸಭೆಗಳಲ್ಲಿ ಪಾಲ್ಗೊಳ್ಳುವುದು

ಪ್ರತಿಯೊಬ್ಬ ಚುನಾಯಿತ ಪ್ರತಿನಿಧಿಯೂ ತಮ್ಮ ಸಂಸ್ಥೆಯ ಪ್ರತಿಯೊಂದು ಕಾರ್ಯಕಾರಿ ಸಭೆಗೆ ಹಾಜರಗಲೇಬೇಕು. ಆದರೆ ಪಂಚಾಯತ್ ರಾಜ್ ವ್ಯವಸ್ಥೆಯ ಬಹುಪಾಲು ಮಹಿಳಾ ಪ್ರತಿನಿಧಿಗಳು ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯಕಾರಿ ಸಭೆಗಳಿಗೆ ಹಾಜರಾಗುವುದಿಲ್ಲ. ಪ್ರಾಯಶಃ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಲ್ಲಿ ಇವರು ಪಾಲ್ಗೊಳ್ಳದೇ ಇರಲು ಯಾವ ಕಾರಣಗಳಿವೆಯೋ ಅವೇ ಕಾರಣಗಳು ಮಹಿಳೆಯರು ಕಾರ್ಯಕಾರಿ ಸಭೆಗಳಿಗೆ ಹಾಜರಾಗದಂತಹ ಅಡ್ಡಗೋಡೆಗಳಾಗಿವೆ. ಮುಖ್ಯವಾಗಿ ಗ್ರಾಮ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ವ್ಯವಸ್ಥೆಯಲ್ಲಿ ಇವರ ಪಾಲ್ಗೊಳ್ಳುವಿಕೆಯ ಕೊರತೆ ಎದ್ದು ಕಾಣುತ್ತದೆ. ಅದರಲ್ಲೂ ತಳ ಸಮುದಾಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಹಿಳಾ ಸದಸ್ಯರ ಪಾಲ್ಗೊಳ್ಳುವಿಕೆಯ ಪರಿ ಮಾತ್ರ ತುಂಬಾ ಶೋಚನೀಯವಾಗಿದೆ.

೫.೪.೭. ಕಾರ್ಯಕಾರಿ ಸಭೆಗೆ ಹಾಜರಾಗುವ ಕುರಿತ ವಿವರ

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಒಟ್ಟು ಪಂಚಾಯತ್‌ರಾಜ್ ವ್ಯವಸ್ಥೆಯ ಒಟ್ಟು ಇಪ್ಪತ್ತೇಳು ಮಹಿಳಾ ಸದಸ್ಯರನ್ನು ಈ ಕುರಿತು ವಿಚಾರಿಸಿದಾಗ ಕಂಡು ಬಂದ ಅಂಶಗಳು ಈ ಕೆಳಗಿನಂತಿವೆ.

ನೀವು ಪಂಚಾಯತ್ ರಾಜ್ ಸಂಸ್ಥೆಯ ಪ್ರತಿ ಸಾರ್ವತ್ರಿಕ ಸಭೆಗೆ ಹಾಜರಾಗುತ್ತೀರಾ ಎಂಬ ಪ್ರಶ್ನೆಗೆ ಗ್ರಾಮ ಪಂಚಾಯಿತಿಯ ಮೂವರು ಸದಸ್ಯರು, ತಾಲೂಕು ಪಂಚಾಯಿತಿಯ ಇಬ್ಬರು ಸದಸ್ಯರು ಹಾಗೂ ಜಿಲ್ಲಾ ಪಂಚಾಯಿತಿಯ ಇಬ್ಬರು ಸದಸ್ಯರು ತಾವು ಪ್ರತಿಯೊಂದು ಸಭೆಗೂ ಹಾಜರಾಗುವುದಾಗಿ ತಿಳಿಸಿದರು. ಆದರೆ ಇವರ ಪಾಲ್ಗೊಳ್ಳುವಿಕೆ, ಕೇವಲ ನಾಮ ಮಾತ್ರಕ್ಕೆ ಹಾಜರಾಗುವಿಕೆ ಯಾಗಿರುತ್ತದೆಂಬುದು ವಿಶೇಷ. ಯಾವುದೇ ಚರ್ಚೆಯಲ್ಲಿ ಪಾಲ್ಗೊಳ್ಳದೆ ಸುಮ್ಮನೆ ಕುಳಿತು ಎದ್ದು ಬರುವ ಇವರು ಕೇಳುವ ಒಂದೇ ಒಂದು ಬೇಡಿಕೆಯೆಂದರೆ ನಮ್ಮ ಮನೆಯವರಿಗೂ ಯಾವುದಾದರೂ ಕೆಲಸದ ಕಾಂಟ್ರಾಕ್ಟ್ ಕೊಡಿ ಎಂಬುದಾಗಿರುತ್ತದೆ, ಅದರಾಚೆಗೆ ಇವರು ಯಾವುದೇ ಪ್ರಶ್ನೆಯನ್ನು ಕೇಳುವುದಿಲ್ಲ. ಎಂಬುದು ಆಶ್ಚರ್ಯಕರ ವಿಚಾರ.

ಇನ್ನೂ ಕೆಲವರು ತಾವು ಕೆಲವೊಮ್ಮೆ ಮಾತ್ರ ಸಾರ್ವತ್ರಿಕ ಸಭೆಗಳಿಗೆ ಹಾಜರಾಗುವುದಾಗಿ ತಾವು ಹಾಜರಾಗದೇ ಇದ್ದ ಸಂದರ್ಭದಲ್ಲಿ ಮನೆಗಳಿಗೆ ಸಭಾ ನಡುವಳಿ ಪುಸ್ತಕಗಳನ್ನು ತಂದು

ಸಹಿ ಮಾಡಿಸಿಕೊಂಡು ಹೋಗುವುದಾಗಿ ತಿಳಿಸಿದರು. ನೀವೇಕೆ ಎಲ್ಲಾ ಸಭೆಗಳಿಗೂ ಹಾಜರಾಗುವುದಿಲ್ಲ ಎಂಬ ಪ್ರಶ್ನೆಗೆ ನಮ್ಮ ಮನೆ ಗಂಡಸರು ಪ್ರತಿ ಸಭೆಗೂ ಹಾಜರಾಗುತ್ತರೆ ಅವರು ಹೋದ ಮೇಲೆ ನಮ್ಮ ಕೆಲಸ ಏನಿರುತ್ತದೆ ಎಂಬುದು ಅವರ ಮರುಪ್ರಶ್ನೆ ಇನ್ನೂ ಕೆಲವರು ತಾವು ಸಾರ್ವತ್ರಿಕ ಸಭೆಗೆ ಹಾಜರಾಗುವುದಾದರೂ ಸ್ವಲ್ಪ ಹೊತ್ತು ಕುಳಿತು ಸಹಿ ಮಾಡಿ ಬಂದು ಬಿಡುತ್ತೇವೆ ಸಭೆಯಲ್ಲಿ ಚರ್ಚಿಸುವುದೂ ಇತ್ಯಾದಿ ತಮ್ಮ ಗಂಡಂದಿರೇ ಮಾಡುತ್ತಾರೆ ಎಂದು ತಿಳಿಸಿದರೆ ಗ್ರಾಮ ಪಂಚಾಯಿತಿ ೬ ಜನ ತಾಲೂಕು ಪಂಚಾಯಿತಿ ಒಬ್ಬರು

ಇನ್ನೂ ಕೆಲವರು ಅಂದರೆ ಗ್ರಾಮ ಪಂಚಾಯತಿಯ ನಾಲ್ಕು ಜನ ಮಹಿಳೆಯರು ಮತ್ತು ತಾಲೂಕು ಪಂಚಾಯಿತಿಯ ಒಬ್ಬರು ತಾವು ಯಾವ ಸಭೆಗಳಿಗೂ ಹಾಜರಾಗುವುದಿಲ್ಲ, ಪ್ರತಿಯೊಂದು ಸಭೆಗೂ ನಮ್ಮ ಗಂಡಸರೇ ಹೋಗುತ್ತಾರೆ, ಮನೆಗೆ ಪುಸ್ತಕ ತಂದು ಸಭೆಗೆ ಹಾಜರಾದಂತೆ ಸಹಿ ಮಾಡಿಸಿಕೊಂಡು ಹೋಗುತ್ತಾರೆ ಎಂದು ತಿಳಿಸಿದರು. ಆಶ್ಚರ್ಯದ ವಿಚಾರವೆಂದರೆ ಹೊಸಪೇಟೆ ತಾಲೂಕು ಪಂಚಾಯಿತಿ ಸದಸ್ಯೆ ತಾಲೂಕು ಪಂಚಾಯಿತಿಗೆ ಬರುವುದಿಲ್ಲವಂತೆ, ಅಲ್ಲಿಯ ಬಹುತೇಕ ಸಿಬ್ಬಂದಿ ಅವರ ಗಂಡನೇ ತಾಲೂಕು ಪಂಚಾಯಿತಿ ಸದಸ್ಯನೆಂದು ಭಾವಿಸಿದೆ, ಜನರು ಸಹ ಅದೇ ನಂಬಿಕೆಯಲ್ಲಿದ್ದಾರೆ. ತಾಲೂಕು ಪಂಚಾಯತಿಯ ಪ್ರತಿಯೊಂದು ಸಭೆಯ ಯಾವುದೇ ಚರ್ಚೆಯಲ್ಲಿ ಪಾಲ್ಗೊಳ್ಳುವುದು ಸದಸ್ಯೆಯ ಪತಿಯೇ ಆಗಿದ್ದಾನೆ ಎಂಬ ವಿವರಗಳು ತಿಳಿದು ಬಂದವು.

ಈ ರೀತಿಯ ಪಾಲ್ಗೊಳ್ಳುವಿಕೆ ಮಹಿಳೆಯ ಅಸಾಯಕತೆಯನ್ನು ತೋರಿಸುತ್ತದೆ. ನಿಮ್ಮ ಈ ರೀತಿಯ ಪಾಲ್ಗೊಳ್ಳುವಿಕೆ ನಿಮ್ಮ ಸಮುದಾಯಕ್ಕೆ ಮತ್ತು ಮೀಸಲಾತಿಗೆ ಮಾಡಿದ ಅನ್ಯಾಯವಾಗುವುದಿಲ್ಲವೆ ಎಂದರೆ ಅವರು 'ಮತ್ತೆ ನಾವೇನು ಮಾಡಬಹುದು' ಎಂಬ ಅಸಾಯಕ ಉತ್ತರವನ್ನು ನೀಡುತ್ತಾರೆ.

೫.೪.೮. ಯೋಜನೆಗಳ ಕುರಿತು ವಿವರ

ಪ್ರತಿ ವರ್ಷವೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಗ್ರಾಮೀಣಾಭಿವೃದ್ಧಿಗಾಗಿಯೇ ಇಂತಿಷ್ಟು ಎಂದು ಬಜೆಟ್‌ನಲ್ಲಿ ಹಣವನ್ನು ಕಾಯ್ದಿರಿಸಿರುತ್ತದೆ. ನಾನಾ ಯೋಜನೆಗಳಲ್ಲಿ ಅಂದರೆ ಪ್ಲಾನ್ ನಂ.೧, ಪ್ಲಾನ್ ನಂ.೨, ಪ್ಲಾನ್ ನಂ.೧೦, ಪ್ಲಾನ್ ನಂ.೧೧, ಪ್ಲಾನ್ ನಂ.೧೨ ಹೀಗೆ ಬೇರೆ ಬೇರೆ ಯೋಜನೆಗಳಲ್ಲಿ ಇಂಥದಕ್ಕೆ ಇಂತಿಷ್ಟು ಹಣವೆಂದು ಕಾಯ್ದಿರಿಸಿ ಆಯಾ ಸಂಸ್ಥೆಗಳಿಗೆ ಕೇಂದ್ರ

ಹಾಗೂ ರಾಜ್ಯ ಸರ್ಕಾರಗಳು ಹಣ ಬಿಡುಗಡೆ ಮಾಡುತ್ತವೆ. ಮೊದಲಿಗೆ ಜಿಲ್ಲಾ ಪಂಚಾಯಿತಿಯಿಂದ ತಾಲೂಕು ಪಂಚಾಯಿತಿಗೆ, ತಾಲೂಕು ಪಂಚಾಯಿತಿಯಿಂದ ಗ್ರಾಮ ಪಂಚಾಯಿತಿಗೆ ಅನುದಾನ ಬಿಡುಗಡೆಯಾಗುತ್ತಿತ್ತು. ಈ ರೀತಿ ಅನುದಾನ ಬಿಡುಗಡೆಯಾಗುವಾಗ ಮಧ್ಯದಲ್ಲಿ ಸೋರಿಕೆ ಹೆಚ್ಚಾಗುತ್ತದೆ ಎಂಬುದನ್ನು ಅರಿತ ಸರ್ಕಾರ ನೇರವಾಗಿ ಇಂದು ಗ್ರಾಮ ಪಂಚಾಯಿತಿಗಳಿಗೆ ಅನುದಾನಗಳನ್ನು ಬಿಡುಗಡೆ ಮಾಡುತ್ತದೆ. ಅದನ್ನು ಶಿಫಾರಸ್ಸು ಮಾಡುವ ಕೆಲಸ ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳು ಮಾಡುತ್ತವೆ. ಆ ಯೋಜನೆಗಳು ಯಾವುವು, ಯಾವ ಪ್ಲಾನ್‌ನಲ್ಲಿ ಎಷ್ಟು ಹಣ ಬಿಡುಗಡೆಯಾಗುತ್ತದೆ, ಅದನ್ನು ಯಾವುದಕ್ಕೆ ನಿರ್ಧಿಷ್ಟವಾಗಿ ಉಪಯೋಗಿಸಬೇಕು ಎಂಬುದರ ಅರಿವು ಪ್ರತಿಯೊಬ್ಬ ಪಂಚಾಯತ್‌ರಾಜ್ ಸಂಸ್ಥೆಯ ಸದಸ್ಯರಿಗೆ ಇರಬೇಕಾಗಿರುತ್ತದೆ. ಆದರೆ ಬಹುಪಾಲು ಸದಸ್ಯರಿಗೆ ಆ ಅನುದಾನ ಯೋಜನೆಗಳು ಯಾವುವು ಇವೆ, ಯಾವ ಅನುದಾನ ಯೋಜನೆಯಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ಮುಂತಾದ ಯಾವ ವಿಚಾರವು ಗೊತ್ತಿಲ್ಲ. ಇದು ಕೇವಲ ಗ್ರಾಮ ಪಂಚಾಯಿತಿ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಸಮಸ್ಯೆ ಮಾತ್ರವಾಗಿರದೆ ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರ ಸಮಸ್ಯೆಯೂ ಆಗಿದೆ.

೫.೪.೯. ಪಂಚಾಯತ್‌ರಾಜ್ ವ್ಯವಸ್ಥೆಯ ಉಪಸಮಿತಿಗಳ ಕುರಿತಾಗಿ ಸದಸ್ಯರಿಗಿರುವ ತಿಳುವಳಿಕೆಯ ವಿವರ

ಚುನಾಯಿತ ಪ್ರತಿ ಸದಸ್ಯರು ಪಂಚಾಯತ್‌ರಾಜ್ ಸಂಸ್ಥೆಯ ಉಪಸಮಿತಿಗಳಿಗೆ ಸದಸ್ಯರು, ಅಧ್ಯಕ್ಷರು ಇತ್ಯಾದಿ ಸ್ಥಾನಗಳಲ್ಲಿದ್ದು ಕಾರ್ಯ ನಿರ್ವಹಿಸಬೇಕಾಗುತ್ತದೆ. ಇದರಲ್ಲಿ ಸಾಮಾನ್ಯವಾಗಿ ಗ್ರಾಮ ಪಂಚಾಯತ್ ಸಂಸ್ಥೆಯ ಅಧ್ಯಕ್ಷರು ಕೆಲವು ಅಧಿಕಾರಗಳನ್ನು ತಮ್ಮಲ್ಲಿ ಇರಿಸಿಕೊಂಡರೆ ಉಪಾಧ್ಯಕ್ಷರಿಗೆ ಕೆಲವು ಉಪಸಮಿತಿ ಅಧಿಕಾರಗಳನ್ನು ಬಿಟ್ಟು ಕೊಡುತ್ತಾರೆ. ಇನ್ನು ಕೆಲವು ಸದಸ್ಯರಿಗೆ ಬೇರೆ ಬೇರೆ ಉಪಸಮಿತಿಗಳ ಉಸ್ತುವಾರಿಗೆ ಬಿಡುತ್ತಾರೆ. ಇದೇ ರೀತಿಯ ವ್ಯವಸ್ಥೆ ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲೂ ಇದೆ.

ಮುಖ್ಯವಾಗಿ ಶಿಕ್ಷಣ, ಅರೋಗ್ಯ ಮತ್ತು ನೈರ್ಮಲ್ಯೀಕರಣ, ನ್ಯಾಯ ಪಂಚಾಯತಿಯಂತಹ ಉಪ ಸಮಿತಿಗಳಿವೆ. ಈ ಸಮಿತಿಗಳಲ್ಲಿ ಅರೋಗ್ಯ, ನೈರ್ಮಲ್ಯೀಕರಣ ಮತ್ತು ನ್ಯಾಯ ಪಂಚಾಯತಿ

ಸಮಿತಿಗಳಿಗೆ ಸಂಸ್ಥೆಯ ಅಧ್ಯಕ್ಷರೇ ಅಧ್ಯಕ್ಷರಾಗಿದ್ದರೆ, ಶಿಕ್ಷಣ ಸಮಿತಿಗೆ ಉಪಾಧ್ಯಕ್ಷರು ಅಧ್ಯಕ್ಷರಾಗಿರುತ್ತಾರೆ. ಇನ್ನುಳಿದ ಸದಸ್ಯರು ಆ ಸಮಿತಿಗಳ ಸದಸ್ಯರಾಗಿ ಪಾಲ್ಗೊಳ್ಳುತ್ತಾರೆ. ಆದರೆ ಎಷ್ಟೋ ಜನರಿಗೆ ತಾವು ಯಾವ ಸಮಿತಿಯ ಸದಸ್ಯರಾಗಿದ್ದೇವೆ, ಯಾವ ಸಮಿತಿಯ ಸದಸ್ಯರಾಗಿಲ್ಲ ಎಂಬುದರ ಕುರಿತು ತಿಳುವಳಿಕೆಯೆ ಇರುವುದಿಲ್ಲ. ತಿಳುವಳಿಕೆ ಇದ್ದರೂ ತಮ್ಮ ಕರ್ತವ್ಯಗಳನ್ನು ಪೂರೈಸುವಲ್ಲಿ ಅವರು ಸೋತಿರುತ್ತಾರೆ. ಉದಾಹರಣೆಗೆ ಕೂಡ್ಲಿಗಿ ತಾಲೂಕು ಪಂಚಾಯಿತಿ ಅಧ್ಯಕ್ಷೆ ಪರಿಶಿಷ್ಟ ಪಂಗಡದ ಮಹಿಳಾ ಮೀಸಲಾತಿ ಅಡಿ ಆಯ್ಕೆಯಾದವರು. ಇವರು ಆ ತಾಲೂಕಿನ ಶಿಕ್ಷಣ ಸಮಿತಿ ಅಧ್ಯಕ್ಷರು ಹೌದು, ಆದರೆ ಅವರಿಗೆ ತಮ್ಮ ಸಮಿತಿಗೆ ಸಂಬಂಧಿಸಿದ ಕಾರ್ಯಗಳೇನು ಎಂಬ ಕುರಿತು ಪರಿಪೂರ್ಣವಾದ ಜ್ಞಾನವಿದ್ದರೂ ಅದನ್ನು ನಿರ್ವಹಿಸುವಲ್ಲಿ ಸೋಲುಂಟಾಗುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ಕಾರಣವೇನು ಎಂದರೆ ಸರ್ಕಾರಿ ಅಧಿಕಾರಿಗಳು ತಮಗಿಂತ ತುಂಬಾ ಬಲಿಷ್ಟರು, ನಾವೇನಾದರೂ ಅವರಿಗೆ ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ತಿಳಿಸಿದರೆ ಮೇಲಿನಿಂದ, ಅಂದರೆ ತಮ್ಮ ಪಕ್ಷದ ಮಂತ್ರಿಗಳಿಂದ ಒತ್ತಡಗಳನ್ನು ಹಾಕಿಸುತ್ತಾರೆ. ಅವರು ಭ್ರಷ್ಟರೆಂದು ಗೊತ್ತಿದ್ದೂ ಸಹ ಏನೂ ಮಾಡದ ಅಸಾಹಾಯಕ ಸ್ಥಿತಿ ನಮ್ಮದಾಗಿದೆ ಎಂದು ತಿಳಿಸುತ್ತಾರೆ. ತಮ್ಮ ಅವಧಿಯಲ್ಲಿ ಕೂಡ್ಲಿಗಿ ತಾಲೂಕಿನ ಅಭಿವೃದ್ದಿಯನ್ನು ಚನ್ನಾಗಿ ಮಾಡಬೇಕು ಮತ್ತು ರಾಜಕೀಯದಲ್ಲಿ ಮುಂದುವರೆಯಬೇಕೆಂಬ ಆಸೆ ತಮಗಿರುವುದಾಗಿ ತಿಳಿಸುವ ಅವರು ತಮ್ಮ ಸುತ್ತಲಿನ ಪರಿಸರ ಮತ್ತು ಮಹಿಳೆಯಾಗಿ ತಮ್ಮ ಮಿತಿಗಳ ಕಾರಣಗಳಿಂದಾಗಿ ತಮಗೆ ಪೂರ್ಣವಾಗಿ ತಾಲೂಕಿನ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬ ಅಳಲು ಅವರದು. ಇನ್ನೂ ಕೆಲವರು ಮೇಲಿನ ರೀತಿಯ ಅಭಿಪ್ರಾಯವನ್ನೇ ವ್ಯಕ್ತಪಡಿಸಿದರು. ಆದರೆ ಬಹುಪಾಲು ಮಹಿಳಾ ಸದಸ್ಯರಿಗೆ ಉಪ ಸಮಿತಿಗಳಲ್ಲಿ ತಮ್ಮ ಪಾಲು ಏನು ಎಂಬುದರ ಪೂರ್ಣ ಚಿತ್ರಣ ಇಂದಿಗೂ ದೊರೆತಿಲ್ಲವೆಂಬುದು ಮಾತ್ರ ಕ್ಷೇತ್ರಕಾರ್ಯದ ಮೂಲಕ ಅರಿವಿಗೆ ಬಂದಿತು.

□□□

ಅಧ್ಯಾಯ ಆರು

ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಪರಿಶಿಷ್ಟ ವರ್ಗದ ಸದಸ್ಯರ ಪಾಲ್ಗೊಳ್ಳುವಿಕೆ: ನೇರ ಹಾಗೂ ಪರೋಕ್ಷ ಪರಿಣಾಮಗಳು

ಅಧ್ಯಾಯ ೬

ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಪರಿಶಿಷ್ಟ ವರ್ಗದ ಸದಸ್ಯರ ಪಾಲ್ಗೊಳ್ಳುವಿಕೆ: ನೇರ ಹಾಗೂ ಪರೋಕ್ಷ ಪರಿಣಾಮಗಳು

ಭಾರತ ಪ್ರಜಾಪ್ರಭುತ್ವವಾದೀ ರಾಷ್ಟ್ರ.. ಇಲ್ಲಿ ಹುಟ್ಟಿರುವ ಪ್ರತಿಯೊಬ್ಬರಿಗೂ ಈ ರಾಷ್ಟ್ರದ ಮೇಲೆ ಸಮಾನವಾದ ಹಕ್ಕಿದೆ. ಇದು ಭಾರತದ ಸಂವಿಧಾನದ ಆಶಯವೂ ಆಗಿದೆ. ಇಲ್ಲಿಯ ಪ್ರತಿಯೊಬ್ಬ ಪ್ರಜೆಯೂ ಸರ್ವಾಂಗೀಣ ಅಭಿವೃದ್ಧಿ ಹೊಂದಬೇಕು ಮತ್ತು ಮನುಷ್ಯ ಮನುಷ್ಯರ ನಡುವಿನ ಕಂದಕಗಳನ್ನು ಮುಚ್ಚುವುದನ್ನೇ ಉದ್ದೇಶವಾಗಿರಿಸಿಕೊಂಡಿರುವ ಸರ್ಕಾರವು ಅದನ್ನು ಸಕ್ರಿಯವಾಗಿ ಜಾರಿಗೆ ತರಲು ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಅಸ್ತ್ರವಾಗಿ ಬಳಸಿಕೊಂಡಿದೆ. ಪಂಚಾಯತ್‌ರಾಜ್ ವ್ಯವಸ್ಥೆ ಈ ನಿಟ್ಟಿನಲ್ಲಿ ಸಂಪೂರ್ಣವಾಗಿ ಪ್ರತಿಫಲವನ್ನು ಕೊಡದೇ ಹೋದರೂ ಪ್ರಾಯಶಃ ಅಲ್ಪಮಟ್ಟಿಗಾದರೂ ಜನತೆಯನ್ನು ತಲುಪಲು ಮತ್ತು ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳಲು ಸಾಫಲ್ಯವಾಗಿದೆ ಎಂದೆನಿಸುತ್ತದೆ.

"ಭಾರತದಲ್ಲಿ ಅಧಿಕಾರವನ್ನು ಸಮಾಜದ ಅಂಚಿನ ಅಡಿಯಲ್ಲಿ ಅಥವಾ ಬುಡಕ್ಕೆ ಒಯ್ಯುವ ದಿಸೆಯಲ್ಲಿ ೧೯೮೦-೯೦ರ ದಶಕಗಳಲ್ಲಿ ನಡೆದಂತಹ ಕ್ರಾಂತಿಕಾರಕ ಪ್ರಯತ್ನಗಳು ಇಂದು ಇತಿಹಾಸದ ಪುಟಗಳಲ್ಲಿ ಸೇರಿ ಹೋಗಿವೆ. ಈ ಬಗೆಯ ಕ್ರಾಂತಿಕಾರಕ ಪ್ರಯತ್ನಗಳು ಇಂದು ಇತಿಹಾಸದ ಪುಟಗಳಲ್ಲಿ ಸೇರಿಹೋಗಿವೆ. ಈ ಬಗೆಯ ಕ್ರಾಂತಿಕಾರಕ ಬದಲಾವಣೆಗೆ ಹಿಂದೆ

ಭಾರತದ ಪ್ರಧಾನಿಯಾಗಿದ್ದ ದಿವಂಗತ ರಾಜೀವ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷ ನೀಡಿದ ಕಾಣಿಕೆ ಅಮೂಲ್ಯವಾದುದಾಗಿದೆ. ಆ ಪ್ರಯತ್ನಗಳ ಫಲವಾಗಿ ಸಂವಿಧಾನದ ೭೩, ೭೪ನೇ ತಿದ್ದುಪಡಿಗಳು ನಡೆದವು ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಂವಿಧಾನಾತ್ಮಕವಾಗಿ ಮನ್ನಣೆ ದೊರೆತದ್ದು ಸಾಮಾನ್ಯವಾದ ವಿಚಾರವೇನಲ್ಲ.

ಸಾಮಾಜಿಕವಾಗಿ ಏಣಿಶ್ರೇಣಿಗಳನ್ನು ಒಳಗೊಂಡಿರುವ ನಮ್ಮ ಗ್ರಾಮೀಣ ಸಮುದಾಯಗಳಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ಜಮೀನ್ದಾರಿ ಪಾಳೆಯಗಾರಿಕೆಯ ಅಡಿಯಾಳಾಗಿ ಬಿಡುವ ಅಪಾಯವನ್ನು ಕುರಿತಂತೆ ಬಹಳ ಹಿಂದೆಯೇ ಅಂಬೇಡ್ಕರರವರು ಅಭಿಪ್ರಾಯ ಪಟ್ಟಿದ್ದರು. ಇಂದು ಪಂಚಾಯತ್‌ರಾಜ್ ಸಂಸ್ಥೆಗಳು ಅಂತಹ ಅಪಾಯದ ಹಂತವನ್ನು ದಾಟಿ ಬಂದಿರುವ ಬಗ್ಗೆ ನಿದರ್ಶನಗಳು ಸಿಗುತ್ತವೆ. ಪಂಚಾಯತ್‌ರಾಜ್ ಸಂಸ್ಥೆಗಳ ಮೂಲಕ ಗ್ರಾಮೀಣ ಮಟ್ಟದಲ್ಲಿ ಜಮೀನ್ದಾರಿ ಪಾಳೆಯಗಾರಿಕೆಯನ್ನು ಮಟ್ಟ ಹಾಕಬಹುದೆಂಬ ಸಂಗತಿಯನ್ನು ಕೇರಳ ಮಾದರಿಯು ನಮಗೆ ತೋರಿಸಿಕೊಡುತ್ತದೆ. ಜಮೀನ್ದಾರಿ ಪದ್ಧತಿಗಳನ್ನು ಬಗ್ಗುಬಡಿಯುವ ಸಾಧನಗಳಾಗಿ ಪಂಚಾಯತ್‌ರಾಜ್ ಸಂಸ್ಥೆಗಳು ಇಂದು ಒಂದು ಬಗೆಯ ದಲಿತೀಕರಣಕ್ಕೆ ಮತ್ತು ಮಹಿಳೀಕರಣಕ್ಕೆ ಒಳಗಾಗಿವೆ. ಅಲ್ಲಿ ಹಿಂದುಳಿದ ವರ್ಗಗಳಿಗೆ ತಮ್ಮ ವಾರ್ಷಿಕ ಬಜೆಟ್ಟಿನಲ್ಲಿ ಇಂತಿಷ್ಟು ಹಣ ನೀಡಬೇಕೆಂಬ ನಿಯಮವೂ ಇದೆ. ಈ ಸಂಸ್ಥೆಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿಯ ಸೂತ್ರ ಅಳವಡಿಸಲಾಗಿದೆ. ಈ ಎಲ್ಲಾ ಬಗೆಯ ಸವಲತ್ತುಗಳಿಂದ ಅಂಚಿನಲ್ಲಿರುವ ತಳ ಸಮುದಾಯಗಳಿಗೆ ಎಷ್ಟರಮಟ್ಟಿಗೆ ಅಧಿಕಾರ ದೊರೆಕಿದೆ, ಅದರ ಫಲಗಳು ಎಷ್ಟರಮಟ್ಟಿಗೆ ಪ್ರಾಪ್ತವಾಗಿವೆ ಎಂಬುದು ಬೇರೆಯೇ ಪ್ರಶ್ನೆ (ಟಿ.ಆರ್.ಚಂದ್ರಶೇಖರ: ೨೦೦೩; ೮೩) ಆದರೆ ಮೀಸಲಾತಿ ನೀತಿಯಿಂದಾಗಿ ಅಧಿಕಾರವನ್ನು ಅನುಭವಿಸುವ ಮತ್ತು ಅದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಷ್ಟರ ಮಟ್ಟಿಗಾದರೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಅವಕಾಶ ದೊರೆತಿರುವುದು ಶ್ಲಾಘನೀಯ ವಿಚಾರ. ಅದರಲ್ಲಿಯೂ ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾಗಿಯೇ ಉಳಿದಿರುವ ಮಹಿಳೆಯರಿಗೆ ಇಂದು ಅಧಿಕಾರದ ಗದ್ದುಗೆ ಏರಲು ಅವಕಾಶ ದೊರಕಿದಂತಾಗಿದೆ.

೬.೧. ಪರಿಶಿಷ್ಟ ವರ್ಗದ ಮಹಿಳೆಯರ ಪಾಲ್ಗೊಳ್ಳುವಿಕೆ

ಸಮಾನತೆ ತತ್ವದಡಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಯ ಉಗಮ ಉಪಯುಕ್ತವಾಗಿ ಬಳಕೆಯಾಗುತ್ತಿದೆ. ಹಿಂದೆ ಕೇವಲ ಮೇಲ್ಜಾತಿ ಮತ್ತು ಬಂಡವಾಳಶಾಹಿಗಳಿಗೆ ಮಾತ್ರ ಸೀಮಿತವಾಗಿದ್ದ

ಅಧಿಕಾರದ ಗದ್ದುಗೆಯು ಇಂದು ಮೀಸಲಾತಿಯ ಪರಿಣಾಮವಾಗಿ ತಳಸಮುದಾಯಗಳಿಗೆಲ್ಲಾ ದೊರೆಯುತ್ತಿರುವುದು ಸಂವಿಧಾನಿಕ ವ್ಯವಸ್ಥೆಯ ಹಿರಿಮೆ ಎಂದೇ ತಿಳಿಯಬಹುದು. ಆದರೆ ಪೂರ್ವದಿಂದಲೂ ಸಾಮಾಜಿಕ ಬದುಕಿನಲ್ಲಿ ತನ್ನ ಕಬಂಧಬಾಹುವಿನ ಹಿಡಿತವನ್ನು ಹೊಂದಿದ ಯಜಮಾನಶಾಹಿ ಮತ್ತು ಊಳಿಗಮಾನ್ಯಶಾಹಿ ಹಾಗೂ ಬಂಡವಾಳಶಾಹಿಯಂತಹ ಅನಿಷ್ಟಗಳು ಇಂದಿಗೂ ಸಾಮಾಜಿಕ ಬದುಕಿನ ಮೇಲೆ ತಮ್ಮ ಕರಿನೆರಳನ್ನು ಚೆಲ್ಲುತ್ತಲೇ ಸಾಗಿವೆ. ಅಂಥವುಗಳ ಕರಿನೆರಳು ಸಹ ಸಾಮಾನ್ಯ ಜನರ ಬಳಿ ಸುಳಿಯದಂತೆ ನಿಯಂತ್ರಿಸುತ್ತಿರುವ ಶಕ್ತಿ ಮಾತ್ರ ಮೀಸಲಾತಿ ಎಂದರೆ ಸುಳ್ಳಾಗಲಾರದು. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇಂತಹ ಯಜಮಾನಶಾಹಿಯಂತಹ ಶಕ್ತಿಗಳು ಇಂದು ಭೌತಿಕವಾಗಿ ತಳಸಮುದಾಯಗಳಿಂದ ದೂರ ಸರಿದಂತೆ ತೋರಿದರೂ ಸಹ ಆಂತರಿಕವಾಗಿ ಇವು ತಳಸಮುದಾಯಗಳ ಮೇಲೆ ಸವಾರಿ ಮಾಡುತ್ತಲೇ ಇವೆ. ಪ್ರಭುತ್ವವನ್ನೇ ತಮ್ಮ ಹಿಡಿತದಲ್ಲಿರಿಸಿಕೊಂಡಿರುವ ಈ ಶಕ್ತಿಗಳು ದಲಿತ ಸಮುದಾಯಕ್ಕೆ ಅದರಲ್ಲೂ ಮಹಿಳೆಯರಿಗೆ ಸಾಂಪ್ರದಾಯಿಕ ದಾಸ್ಯದಡಿಯಲ್ಲಿ ಇಂದಿಗೂ ತಮ್ಮ ಗುಲಾಮರಾಗಿ ಮಾಡಿಕೊಳ್ಳುವಂತಹ ಕುತಂತ್ರ ಅನೂಚಾನವಾಗಿ ನಡೆಯುತ್ತಲೇ ಇದೆ ಎಂಬುದನ್ನು ಗಮನಿಸಬಹುದು.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಸಾಮಾಜಿಕ ಜೀವನದಿಂದ ದೂರವುಳಿದು ಸದಾ ಶೋಷಣೆ, ದಬ್ಬಾಳಿಕೆ, ಅನ್ಯಾಯ, ಅತ್ಯಾಚಾರಗಳಿಗೆ ಬಲಿಯಾಗಿರುವ ದಲಿತ ಹಾಗೂ ಬುಡಕಟ್ಟು ಮಹಿಳೆಯರ ಸ್ಥಿತಿಯಂತೂ ಅತ್ಯಂತ ನಿರಾಶಾದಾಯಕವಾಗಿದೆ. ಜಾತಿ ಹಾಗೂ ಲಿಂಗ ತಾರತಮ್ಯಗಳಿಂದಾಗಿ ಮಹಿಳೆ ತೀರಾ ನಿರ್ಲಕ್ಷ್ಯಕ್ಕೆ ಬಲಿಯಾಗುತ್ತಲೇ ಬಂದಿದ್ದಾಳೆ. ಇಂತಹ ಮಹಿಳೆಯ ವರ್ತಮಾನದ ರಾಜಕೀಯ ಸ್ಥಿತಿಯನ್ನು, ಆಕೆಯ ಒತ್ತಡ, ತಲ್ಲಣಗಳನ್ನು ಅರಿಯುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ರಾಜಕಾರಣವೆಂಬುದು ಕೇವಲ ಮೇಲ್ವರ್ಗ ಅದರಲ್ಲೂ ಪುರುಷಶಾಹಿಯಾಗಿಯೇ ಉಳಿದಿರುವುದನ್ನು ಕಾಣಬಹುದು. ರಾಜಕಾರಣದಲ್ಲಿ ಮಹಿಳೆಯ ಸಹಭಾಗಿತ್ವ ಇರುವುದಾದರೂ ಅದು ಕೇವಲ ಪುರುಷವರ್ಗದ ನಿರ್ದೇಶನದಂತೆ ಮಾತ್ರ ನಡೆಯುತ್ತದೆ. ಪೂರ್ವಗ್ರಹಗಳೇ ಅವಳ ಸಕ್ರಿಯ ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ವಿವಿಧ ಬಗೆಯಲ್ಲಿ ತೊಡಕಾಗಿ ಪರಿಣಮಿಸಿದೆ. ಅಖಂಡ ಸಾಮಾಜಿಕ ವ್ಯವಸ್ಥೆಯ ಅಧಿಪತಿಯಾಗಿರುವ ಪುರುಷನು ತನ್ನ ಉಳಿವಿಗಾಗಿಯೇ ಧರ್ಮ,

ಕಾನೂನು, ಶಾಸ್ತ್ರಗಳನ್ನು ತುಂಬಾ ಜಾಣತನದಿಂದ ಬಳಸಿಕೊಂಡಿರುವುದನ್ನು ಇತಿಹಾಸದುದ್ದಕ್ಕೂ ಗಮನಿಸಬಹುದಾಗಿದೆ. ಆ ಕಾರಣದಿಂದಲೇ ಮಹಿಳೆ ಗೃಹಬಂಧಿಯಾಗಿರುವುದು. ಅಡುಗೆಯ ಮನೆಯೇ ಅವಳಿಗೆ ಸೂಕ್ತ ಜಾಗ, ಅದರಾಚೆಗೆ ಅವಳು ಯಾವುದೇ ಲೋಕದ ಕಲ್ಪನೆಯನ್ನು ಮಾಡಿಕೊಳ್ಳಬಾರದೆಂಬ ನಿಯಮಗಳು ಜಾರಿಯಲ್ಲಿರುವವು. ಹೀಗೆ ಮೂಲೆಗುಂಪಾದ ಮಹಿಳಾ ಸಮುದಾಯದಿಂದ ಮಾನವ ಸಂಪನ್ಮೂಲದಲ್ಲಿ ತುಂಬಾ ದೊಡ್ಡ ನಷ್ಟವಾಗಿರುವುದನ್ನು ಅರ್ಥಶಾಸ್ತ್ರಜ್ಞರೇ ಒಪ್ಪಿಕೊಳ್ಳುತ್ತಾರೆ. ವ್ಯವಸ್ಥೆಯಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಭಾಗವಹಿಸುವಿಕೆಯಲ್ಲಿ ಮಹಿಳೆಯನ್ನು ಹೊರಗಿಟ್ಟು ನೋಡಲು ಸಾಧ್ಯವೇ ಇಲ್ಲ.

ಆದ್ದರಿಂದಲೇ ಅಭಿವೃದ್ಧಿಯ ಗತಿಶೀಲತೆಯನ್ನು ನಾವು ಒಂದು ವಿಮರ್ಶಾತ್ಮಕವಾದ ನೆಲೆಗಟ್ಟಿನಲ್ಲಿ ಲಿಂಗ ನಿರಪೇಕ್ಷೆ, ಲಿಂಗ ಸಮಾನತೆ ತತ್ವದಡಿಯಲ್ಲಿ ಪರಿಭಾವಿಸಿಕೊಳ್ಳಬೇಕಾಗಿದೆ. ಅಭಿವೃದ್ಧಿಯ ಫಲಗಳು ಲಿಂಗಬೇಧವೆನಿಸದೆ ಎಲ್ಲರಿಗೂ ಒದಗುತ್ತವೆ ಎಂಬ ನಂಬಿಕೆಯೂ ಅಭಿವೃದ್ಧಿಯ ಸಾಂಪ್ರದಾಯಿಕ ಸಂಕಥನದಲ್ಲಿ ಗಟ್ಟಿಯಾಗಿ ನೆಲೆಯೂರಿದೆ (ಚಂದ್ರಶೇಖರ, ೨೦೦೬, ೯೬) ಇಂತಹ ನಂಬಿಕೆಗಳೇ ವ್ಯಾಪಕವಾಗಿ ನೆಲೆಯೂರಿರುವುದರಿಂದ ಅಭಿವೃದ್ಧಿಗೆ ಸಂಬಂಧಿಸಿದ ನೀತಿ ನಿರೂಪಣೆಗಳು ಸಹ ಲಿಂಗ ನಿರಪೇಕ್ಷ ನೆಲೆಯಲ್ಲಿಯೇ ರೂಪು ತಾಳುತ್ತಲೇ ಬಂದಿವೆ.

ಪ್ರಸ್ತುತ ಪರಿಶಿಷ್ಟ ವರ್ಗದ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಹಾಗೂ ಸಬಲೀಕರಣದ ಹಿನ್ನೆಲೆಯಲ್ಲಿ ಸಮಸ್ತ ಬುಡಕಟ್ಟು ಮಹಿಳೆಯರ ಸಮುದಾಯ ಚಟುವಟಿಕೆಯನ್ನು ಅರಿಯಲು ಇಲ್ಲಿ ಪ್ರಯತ್ನಿಸಲಾಗಿದೆ. ಶೋಷಣೆ, ತಿರಸ್ಕಾರ ಮುಂತಾದ ಅವಮಾನಗಳನ್ನು ಸಾಮಾಜಿಕ ಜೀವನದಲ್ಲಿ ಅನುಭವಿಸಬೇಕಾದ ಅನಿವಾರ್ಯತೆಗಳನ್ನು ಅರಿಯುವುದರೊಂದಿಗೆ ಅವರ ರಾಜಕೀಯ ಪಾಲ್ಗೊಳ್ಳುವಿಕೆಯ ಸ್ವರೂಪವನ್ನು ಅರಿಯುವುದು ಇಂದಿನ ತುರ್ತಾಗಿದೆ. "ವೈಚಾರಿಕತೆಯ ನಡುಗೆಯಲ್ಲಿ ತಳಸಮುದಾಯಗಳ ಮಹಿಳೆಯರನ್ನು ಮೂರನೇ ದರ್ಜೆಯ ಪ್ರಜೆಯಾಗಿ ತೂಗುವ ಇತರ ಮುಂದುವರೆದ ಸಮುದಾಯದ ಮಹಿಳೆಯರು ತಮ್ಮಲ್ಲಿಯ ಏಣಿ ಶ್ರೇಣಿಗಳನ್ನು ಅರಿಯಬೇಕಾಗಿದೆ.

ತಳ ಸಮುದಾಯದ ಮಹಿಳೆಯರಿಗೆ ಸಂವಿಧಾನಿಕವಾಗಿ ಸ್ವಾತಂತ್ರ್ಯ, ಸಮಾನ ಅಧಿಕಾರ, ಅವಕಾಶಗಳನ್ನು ಕೊಟ್ಟಿದ್ದೇವೆ ಎಂದೇ ಬಹಿರಂಗವಾಗಿ ತೋರಿಸುತ್ತಾ ಬರಲಾಗುತ್ತಿದೆ. ವಾಸ್ತವವಾಗಿ ಇದಕ್ಕೆ ವ್ಯತಿರಿಕ್ತವಾದ ಪರಿಸ್ಥಿತಿ ಪ್ರಸ್ತುತ ಸಂದರ್ಭದಲ್ಲಿಯೂ ಇದೆ ಎಂಬುದನ್ನು ಬಹುತೇಕ

ಪರಿಶಿಷ್ಟ ಪಂಗಡದ ಮಹಿಳೆಯರ ರಾಜಕೀಯ, ಸಾಮಾಜಿಕ ಜೀವನದ ಮೂಲಕ ಅರಿಯಬಹುದಾಗಿದೆ." ಕಾಗದದ ಮೇಲೆ ಕಾನೂನಿದ್ದರೆ ಸಮಾಜದ ಒಳಗೆ ಮನುವಿನ ಧೋರಣೆ ಜೀವಂತವಾಗಿದೆ (ಬಾಬುರಾವ್ ಮುಡಬಿ, ೨೦೦೬, ೨೦೦) ಇಂತಹ ವಿಷಮ ಪರಿಸ್ಥಿತಿಯಲ್ಲಿ ತಳಸಮುದಾಯದ ಮಹಿಳೆಯರು ಅದರಲ್ಲೂ ಬುಡಕಟ್ಟು ಮಹಿಳೆಯರು ಸಂವಿಧಾನಿಕವಾಗಿ ರಾಜಕೀಯ ಅಧಿಕಾರವನ್ನು ಸಮಾನತೆಯ ನೆಲೆಯಲ್ಲಿ ಪಡೆದಿದ್ದರೂ ಸಹ ಅದನ್ನು ಚಲಾಯಿಸುವಿಕೆಯಲ್ಲಿ ಆಕೆ ಅನುಭವಿಸುತ್ತಿರುವ ತೊಡಕುಗಳ ಕುರಿತು ಇಲ್ಲಿ ನೋಡಲಾಗಿದೆ.

೬.೨. ಪಾಲ್ಗೊಳ್ಳುವಿಕೆಯ ಸ್ವರೂಪ

ಪಾಲ್ಗೊಳ್ಳುವಿಕೆ ಎಂಬುದು ಸಾಮಾಜಿಕವಾಗಿ ಸಮಗ್ರ ಬದುಕನ್ನು ಅವರು ನಿರ್ವಹಿಸುವ ಕಾರ್ಯ, ಸಮಸ್ಯೆ, ಸವಾಲುಗಳನ್ನು ಅದು ಒಳಗೊಂಡಿರುತ್ತದೆ. ಸಾಮಾಜಿಕ ಜೀವನದಲ್ಲಿ ವ್ಯಕ್ತಿಗಳು ಅಳವಡಿಸಿಕೊಂಡಿರುವಂತಹ ಹಲವಾರು ಮಹತ್ವದ ಮೌಲ್ಯಗಳು ಇದರ ಮೂಲಕವೇ ಕಾಣಬಹುದಾಗಿದೆ. ಅಲ್ಲದೆ ವ್ಯವಸ್ಥೆಯಲ್ಲಿನ ವೈಪರೀತ್ಯಗಳನ್ನು, ಲಿಂಗಸಂಬಂಧಿ ಆಯಾಮಗಳನ್ನು ಅರಿಯುವುದು ಸಹ ಪ್ರತಿನಿಧೀಕರಣದಲ್ಲಿ ಬರುತ್ತದೆ. ಇಲ್ಲಿ ಸಮುದಾಯಗಳನ್ನು ಅರಿಯುವುದು ಸಹ ಪ್ರತಿನಿಧೀಕರಣ ಒಳಗೊಂಡಿದೆ" (ರಾಮು, ಸುಂದರಪ್ಪ ಕಲಾಲ್; ೨೦೧೦, ೧೦೨) ರಾಜಕೀಯದಲ್ಲಿ ಬುಡಕಟ್ಟು ಮಹಿಳೆಯರ ಪಾಲ್ಗೊಳ್ಳುವಿಕೆ ಎನ್ನುವಾಗ ರಾಜಕೀಯ ಸಂಸ್ಥೆಯಲ್ಲಿನ ಹಲವು ಮಜಲುಗಳನ್ನು ಗಮನಿಸುವುದೇ ಆಗಿರುತ್ತದೆ.

ಉದಾಹರಣೆಗೆ ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ಒಬ್ಬ ಮಹಿಳೆ ರಾಷ್ಟ್ರಪತಿಯಾದಳು ಎಂದಾಕ್ಷಣ ಇಡೀ ಮಹಿಳಾ ಸಮುದಾಯವೇ ಅಲ್ಲಿರುವುದಿಲ್ಲ ಎಂಬುದನ್ನು ಗಮನಿಸಬೇಕು. ಮುಖ್ಯವಾಗಿ ರಾಷ್ಟ್ರಪತಿಯಾದ ಮಹಿಳೆ ಯಾವ ಜಾತಿ, ವರ್ಗ, ಸಮುದಾಯಕ್ಕೆ ಸೇರಿದವಳು ಎಂಬುದೂ ಇಲ್ಲಿ ಮುಖ್ಯವಾಗುತ್ತದೆ. ಇಡೀ ರಾಷ್ಟ್ರವನ್ನು ಪ್ರತಿನಿಧಿಸುವ ಮಹಿಳಾ ರಾಷ್ಟ್ರಪತಿ ಇಡೀ ಮಹಿಳಾ ಸಮುದಾಯವನ್ನು ಪ್ರತಿನಿಧಿಸಲಾರಳು. ಈ ರೀತಿಯ ವೈರುಧ್ಯಗಳ ನಡುವೆ ರಾಜಕೀಯ ಕ್ಷೇತ್ರದಲ್ಲಿನ ಮಹಿಳೆಯರ ಸಹಭಾಗಿತ್ವದ ಕುರಿತ ಸಾಫಲ್ಯ, ವೈಫಲ್ಯಗಳನ್ನು ಅರ್ಥಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಅನಾದಿ ಕಾಲದಿಂದಲೂ ಮಹಿಳೆ ತುಳಿತಕ್ಕೆ ಒಳಗಾಗಿರುವುದಕ್ಕೆ ಹಲವಾರು ನಿದರ್ಶನಗಳು ಕಂಡುಬರುತ್ತವೆ. ಇಂದಿಗೂ ಅದರಲ್ಲಿ ಅಂತಹ ವ್ಯತ್ಯಾಸಗಳೇನೂ ಕಂಡುಬರುವುದಿಲ್ಲ.

ಪುರುಷಶಾಹಿ ಹಿಡಿತದಿಂದ ಪಾರಾಗುವುದು ಅಷ್ಟು ಸುಲಭ ಸಾಧ್ಯದ ವಿಷಯವಲ್ಲ. ಇಂತಹ ಪುರುಷಶಾಹಿ ಹಿಡಿತದಲ್ಲಿ ಮಹಿಳೆಗೆ ರಾಜಕೀಯವು ಹತ್ತಿರದಲ್ಲಿರುವಂತೆ ಕಂಡರೂ ಅದು ಅವಳಿಂದ ಅನತಿ ದೂರದಲ್ಲಿಯೇ ಇರುತ್ತದೆ. ಸಾಮಾಜಿಕ ಕ್ಷೇತ್ರದ ಅತ್ಯುನ್ನತ ಸಂಸ್ಥೆಯಾಗಿರುವ ರಾಜಕೀಯ ಕ್ಷೇತ್ರದಲ್ಲಿ ಮಹಿಳಾ ರಾಜಕೀಯ ಪರಿಭಾಷೆಯನ್ನು ಅರಿಯುವ ಪ್ರಯತ್ನ ಸದ್ಯದ ತುರ್ತಾಗಿದೆ. ಮಹಿಳೆಯ ಸಾಮಾಜಿಕ ಜೀವನದಲ್ಲಿ ಬೀಡುಬಿಟ್ಟಿರುವ ಕೆಲವು ಸಾಮಾನ್ಯೀಕರಿಸಿದ ಸಂಗತಿಗಳು ಸದಾ ಅವಳನ್ನು ನಿಯಂತ್ರಿಸುತ್ತಲೇ ಇರುತ್ತವೆ. ವಾಸ್ತವವಾಗಿ ಸಮಾಜ ನಿಂತಿರುವುದೇ ಇಂತಹ ಮೌಲ್ಯಗಳ ಮೇಲೆ ಎಂದರೆ ತಪ್ಪಾಗಲಾರದು.

ಬುಡಕಟ್ಟು ಮಹಿಳೆ ದಲಿತ ಮಹಿಳೆಯಂತೆ ಸಮಾಜದ ಅತ್ಯಂತ ಕಟ್ಟಕಡೆಯ ಮಹಿಳೆಯಾಗಿ ನಿಲ್ಲುತ್ತಾಳೆ. ವೈಯಕ್ತಿಕ ಬದುಕಿನಲ್ಲಿ ಅಂತಹ ನಿರ್ಬಂಧಗಳು ಆಕೆಗಿಲ್ಲ ಎಂದು ಮೇಲ್ನೋಟಕ್ಕೆ ಎನಿಸಿದರೂ ಸಾಮಾಜಿಕ ಜೀವನದಲ್ಲಿ ಪ್ರತಿಯೊಂದು ಬಗೆಯಲ್ಲಿಯೂ ಅವಳು ನಿಯಂತ್ರಣ, ತುಳಿತ, ಅಲಕ್ಷ್ಯ, ತಿರಸ್ಕಾರಗಳಿಗೆ ಒಳಗಾಗುತ್ತಲೇ ಬಂದಿದ್ದಾಳೆ. ಸಾಮಾಜಿಕ ವ್ಯವಸ್ಥೆಯ ನಿಯಂತ್ರಕ ಶಕ್ತಿಗಳಾಗಿರುವ ಊಳಿಗಮಾನ್ಯಶಾಹಿ, ಪುರೋಹಿತಶಾಹಿ, ಹಾಗೂ ಬಂಡವಾಳಶಾಹಿ ಮತ್ತು ಯಜಮಾನ್ಯಶಾಹಿಗಳಂತಹ ಪ್ರಭುತ್ವಗಳು ಅವಳ ರಾಜಕಾರಣದ ಕುರಿತು ಹೊಂದಿರಬಹುದಾದ ಆಲೋಚನೆ ಕ್ರಮ ಯಾವುದು ಎಂಬ ಪ್ರಶ್ನೆ ಎದುರಾಗುತ್ತದೆ. ರಾಜಕೀಯವಾಗಿ ಮೇಲ್ವರ್ಗದ ಮಹಿಳೆಯ ಪಾಲ್ಗೊಳ್ಳುವಿಕೆಗೂ ಮತ್ತು ತಳವರ್ಗದ ಮಹಿಳೆಯರ ಪಾಲ್ಗೊಳ್ಳುವಿಕೆಯ ನಡುವೆ ಇರುವ ಅಂತರ ಯಾವ ಬಗೆಯದು ಎಂಬುದನ್ನು ಈ ಮೂಲಕ ಅರಿಯಬಹುದು.

ಮಹಿಳೆಗೆ ರಾಜಕೀಯ ಹೊಸದೇನಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಗಾಂಧೀಜಿಯವರ ಕರೆಗೆ ಓಗೊಟ್ಟು ಎಷ್ಟೋ ಮಹಿಳೆಯರು ಸ್ವಾತಂತ್ರ್ಯ ಹೋರಾಟಕ್ಕೆ ಮುನ್ನುಗಿದ್ದರು. ಅದಕ್ಕೂ ಪೂರ್ವದಲ್ಲಿ ಝಾನ್ಸಿರಾಣಿ, ಕಿತ್ತೂರುರಾಣಿ ಚನ್ನಮ್ಮನಂಥವರು ರಾಜಕೀಯ ವ್ಯವಸ್ಥೆಯ ಮುಖ್ಯ ಸ್ಥಾನದಲ್ಲಿ ನಿಂತು ಆಡಳಿತ ನಡೆಸಿದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆದರೆ ಸ್ವಾತಂತ್ರ್ಯ ನಂತರದ ಭಾರತದ ರಾಜಕೀಯ ಸ್ಥಿತಿ-ಗತಿಗಳೇ ಭಿನ್ನವಾದವುಗಳಾಗಿವೆ.

ಸ್ವಾತಂತ್ರ್ಯಾನಂತರ ನಡೆದ ರಾಜಕೀಯ ಸ್ಥಿತ್ಯಂತರಗಳು, ರಾಜಕೀಯ ಅನಿಶ್ಚಿತತೆ, ಸ್ವಾರ್ಥಗಳಿಂದಾಗಿ ಮಹಿಳೆ ಹಿಂದೂಡಲ್ಪಟ್ಟಳು. ಪುರುಷಶಾಹಿ ಸ್ವಾರ್ಥ ಇಲ್ಲಿ ತನ್ನ ಕಬಂಧ ಬಾಹುವನ್ನು ಚಾಚಿತು. ಹೆಣ್ಣು ರಾಜಕೀಯದಲ್ಲಿದ್ದೂ ಇಲ್ಲದಂತಹ ಸ್ಥಿತಿ ನಿರ್ಮಾಣಗೊಂಡಿತು. ಇಲ್ಲಿ ಮಹಿಳೆ ಅದರಲ್ಲೂ

ತಳವರ್ಗದ ಮಹಿಳೆಯರು ಕೇವಲ ಮೀಸಲಾತಿ ಕಾರಣಕ್ಕಾಗಿ ರಾಜಕೀಯ ಸ್ಥಾನಗಳನ್ನು ಗಿಟ್ಟಿಸಿಕೊಳ್ಳಬಲ್ಲವರಾದರೇ ಹೊರತು ಅದನ್ನು ಚಲಾಯಿಸುವ ಶಕ್ತಿಯನ್ನು ಅವರು ಪಡೆಯಲೇ ಇಲ್ಲ. ಇದಕ್ಕೆ ಉತ್ತಮ ನಿದರ್ಶನವೆಂದರೆ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಸಕ್ರೀಯವಾಗಿ ಪಾಲ್ಗೊಂಡ ಬುಡಕಟ್ಟು ಹಾಗೂ ಇತರ ತಳಸಮುದಾಯದ ಮಹಿಳೆಯರೇ ಉತ್ತಮ ಉದಾಹರಣೆ.

೬.೩. ಗ್ರಾಮ ಪಂಚಾಯಿತಿಯಲ್ಲಿ ಬುಡಕಟ್ಟು ಮಹಿಳೆಯರ ಪಾಲ್ಗೊಳ್ಳುವಿಕೆ

ಪಂಚಾಯತ್‌ರಾಜ್ ವ್ಯವಸ್ಥೆಯು ವಿಕೇಂದ್ರೀಕರಣದ ತಳಹದಿಯ ಮೇಲೆ ರಚನೆಗೊಂಡ ವ್ಯವಸ್ಥೆಯಾಗಿದೆ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪುರುಷನಿಗಿರುವಷ್ಟೇ ಸಮಾನ ಹಕ್ಕು ಮಹಿಳೆಗೂ ಇದೆ. ಜಾತ್ಯಾತೀತ ರಾಷ್ಟ್ರವಾದ ಭಾರತದಲ್ಲಿ ಮೇಲ್ಜಾತಿಗಿರುವಷ್ಟೇ ಹಕ್ಕು ತಳಜಾತಿಗಳಿಗೂ ಇದೆ. ಪ್ರಜಾಪ್ರಭುತ್ವದ ಆಧಾರಸ್ತಂಭವೇ ಸಮಾನತೆ. ಪ್ರಜಾಪ್ರಭುತ್ವದಲ್ಲಿ ಸಮಾನತೆಯ ನಿರಾಕರಣೆ ಎಂದರೆ ಅದು ಕ್ರಾಂತಿಗೆ ಎಡೆಮಾಡಿಕೊಡುತ್ತದೆ ಎಂಬ ಅರಿಸ್ಟಾಟಲನ ಮಾತು ಇಲ್ಲಿ ತುಂಬಾ ಔಚಿತ್ಯಪೂರ್ಣವಾದುದಾಗಿದೆ. ಆದುದರಿಂದಲೇ ಇಂದಿನ ಎಲ್ಲಾ ಜನತಂತ್ರ ರಾಷ್ಟ್ರಗಳು ಪ್ರತಿಯೊಬ್ಬ ಪ್ರಜೆಗೂ ರಾಜಕೀಯ ಹಕ್ಕುಗಳನ್ನು ನೀಡಿರುವುದು. ಚುನಾವಣೆಗೆ ಸ್ಪರ್ಧಿಸುವುದು, ಮತ ಚಲಾಯಿಸುವುದು, ಸರ್ಕಾರದ ಪ್ರತಿಯೊಂದು ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಹಾಗೂ ಆಡಳಿತ ಮತ್ತು ನ್ಯಾಯಾಂಗದಂತಹ ಸ್ಥಾನಗಳಿಗೆ ನೇಮಕಗೊಳ್ಳಬಹುದಾದ ಹಕ್ಕುಗಳನ್ನು ರಾಜಕೀಯ ಹಕ್ಕುಗಳೆಂದು ಪರಿಭಾವಿಸಬಹುದಾಗಿದೆ. ಈ ಹಕ್ಕುಗಳನ್ನು ಪಡೆಯಲು ರಾಷ್ಟ್ರದ ಪ್ರತಿಯೊಬ್ಬ ಪ್ರಜೆಗೂ ಸರಿಸಮಾನವಾದ ಹಕ್ಕಿದೆ ಎಂಬುದನ್ನು ಸಂವಿಧಾನ ತಿಳಿಸುತ್ತದೆ.

ಬುಡಕಟ್ಟು ಮಹಿಳೆ ಕೇವಲ ತಾನಾಯಿತು. ತನ್ನ ಕುಟುಂಬವಾಯಿತು, ತಾನು ನಂಬಿದ ಕಾಡಾಯಿತು ಎಂದೇ ಜೀವನ ಸಾಗಿಸಿದವಳು. ಅವಳಿಗೆ ರಾಜಕೀಯ ಮತ್ತು ರಾಜಕಾರಣ ಎಂಬ ಪರಿಭಾಷೆಗಳೇ ತುಂಬಾ ಹೊಸದಾದವುಗಳು. ಸ್ವಾತಂತ್ರ್ಯ ಸಂಗ್ರಾಮ ಎಂಬ ಪರಿಭಾಷೆಯೇ ಅವಳಿಗೆ ಅರ್ಥವಾಗಿಲ್ಲವೆನಿಸುತ್ತದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಮಹಿಳೆ ಎಂದರೆ ಅದು ಕೇವಲ ಮೇಲ್ಜಾತಿ/ ಮೇಲ್ವರ್ಗದ ಮಹಿಳೆ ಎಂದೇ ಅರ್ಥೈಸಿಕೊಳ್ಳಬೇಕಾಗಿದೆ. ಮಹಿಳೆ ಎನ್ನುವವಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡ ಉದಾಹರಣೆಗಳಿದ್ದರೂ ಅದು ಬೆರಳೆಣಿಕೆಯಷ್ಟು ಮಾತ್ರ. ಏಕೆಂದರೆ ಮಹಿಳೆಯರು ನೇರವಾಗಿ ಭಾಗವಹಿಸುವಿಕೆಯನ್ನು ಪುರುಷಪ್ರಧಾನ

ಸಮಾಜ ನಿರಾಕರಿಸುತ್ತದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಅಂದು ಸ್ವಾತಂತ್ರ್ಯ ಸಂಗ್ರಾಮದ ಕೇಂದ್ರ ಬಿಂದು ಹಾಗೂ ನಾಯಕರಾಗಿದ್ದ ಮಹಾತ್ಮ ಗಾಂಧಿಯವರು ಸಹ ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಕುರಿತಾಗಿ ಇತ್ಯಾತ್ಮಕವಾದ ಭಾವನೆಯನ್ನೇ ಹೊಂದಿದ್ದರು. ಸ್ವಾತಂತ್ರ್ಯ ಹೋರಾಟದ ತಾತ್ವಿಕತೆಯನ್ನು ಅವರು ರೂಪಿಸಿಕೊಳ್ಳಲು ಮಹಿಳೆಯ ಸ್ತ್ರೀಯಾತ್ಮಕ ಪಾತ್ರದ ಆದರ್ಶವನ್ನೇ ಯಶಸ್ವಿಯಾಗಿ ಬಳಸಿಕೊಂಡರು. ಅಹಿಂಸೆಯು ಸತ್ಯಾಗ್ರಹದ ಪ್ರಬಲ ಅಸ್ತ್ರವೆಂದು ತಿಳಿಸುತ್ತಿದ್ದ ಗಾಂಧಿಯವರು ಅಹಿಂಸೆ ಎಂದರೆ ಕೊನೆ ಇಲ್ಲದ ತ್ಯಾಗ, ಕಷ್ಟ ಸಹಿಷ್ಣುತೆ, ಪ್ರೇಮ ಎಂದೇ ಪರಿಭಾವಿಸಿಕೊಂಡಿದ್ದರು. ಈ ಬಗೆಯ ಇತ್ಯಾತ್ಮಕವಾದ ಹೆಣ್ಣಿನ ಕುರಿತಾದ ಧೋರಣೆಗಳನ್ನು ಹೊಂದಿದ ಗಾಂಧಿಯವರು ಪುರುಷಶಾಹಿ ಆಲೋಚನಾ ಕ್ರಮಕ್ಕೆ ಹೊರತಾದವರಾಗಿರಲಿಲ್ಲ. ಈ ರೀತಿಯ ಪುರುಷಶಾಹಿ ಧೋರಣೆಗಳಿಂದಾಗಿ ಮಹಿಳೆಯು ರಾಜಕೀಯವಾಗಿ ಗೌಣವಾಗಿಯೇ ಉಳಿಯಬೇಕಾದ ಸ್ಥಿತಿ ನಿರ್ಮಾಣವಾಯಿತು.

ಇಂಡಿಯಾದ ಸದ್ಯದ ಪರಿಸ್ಥಿತಿಯಲ್ಲಿ ರಾಜಕೀಯ ಪಕ್ಷಗಳು ತಮ್ಮ ಪಕ್ಷ ಭೇದ ಮರೆತು ಮಹಿಳಾ ರಾಜಕಾರಣ, ರಾಜಕೀಯ ಸಮಾನತೆ, ಮೀಸಲಾತಿ ಕುರಿತಾಗಿ ತುಂಬಾ ಉದಾರವಾದಿ ಎಂಬಂಥೆ ವರ್ತಿಸುತ್ತವೆಯಾದರೂ, ತಳ ಸಮುದಾಯದ ಮಹಿಳೆಯರ ಕುರಿತಾಗಿ ಯಾವೊಂದು ಪಕ್ಷವೂ ಚಿಂತಿಸದಿರುವುದನ್ನು ನೋಡಿದರೆ ಪುರುಷ ರಾಜಕಾರಣಿಗಳ ಮತ್ತು ಬಂಡವಾಳಶಾಹಿಗಳ ಧೋರಣೆಯಲ್ಲಿ ಅಡಗಿರಬಹುದಾದ ಅಂತರಂಗದ ಮನಸ್ಸು ಏನಿದ್ದಿತು ಎಂಬುದನ್ನು ಸುಲಭವಾಗಿ ಅರಿಯಬಹುದಾಗಿದೆ. ಸಂವಿಧಾನವಾಗಿ ಸಮಾನತೆಯ ತತ್ವ ಸಾರುವ ರಾಷ್ಟ್ರದಲ್ಲಿ ಅಂಚಿನ ಸಮುದಾಯಗಳ ಮಹಿಳೆಗೆ ಒದಗಿರಬಹುದಾದ ದುಸ್ಥಿತಿ ಇದು. ತಳ ಸಮುದಾಯದ ಮಹಿಳೆಗೆ ಮೀಸಲಾತಿ ಅಡಿಯಲ್ಲಿ ಸಕ್ರಿಯವಾಗಿ ರಾಜಕೀಯದಲ್ಲಿ ಪಾಲ್ಗೊಳ್ಳುವ ಅವಕಾಶವಿದೆಯಾದರು ಅಲ್ಲಿ ಅವಳನ್ನು ಕೇವಲ ಓಟ್‌ಬ್ಯಾಂಕ್ ಆಗಿ ನೋಡುವ ವ್ಯವಸ್ಥಿತವಾದ ರಾಜಕೀಯ ಸಂಚಿದೆ. ಕೆಲವು ಪಕ್ಷಗಳಲ್ಲಿ ರಾಜಕೀಯವಾಗಿ ಬುಡಕಟ್ಟು ಮಹಿಳೆ ಸಬಲಳು ಎಂಬಂತೆ ತೋರಿಬರುವುದಾದರೂ ಅದು ತುಂಬಾ ಹುಸಿಯಾದುದು ಎಂಬುದನ್ನು ಅರಿಯದಷ್ಟು ಮುಗ್ಧತೆ ಬುಡಕಟ್ಟು ಮಹಿಳೆಯರಲ್ಲಿರುವುದನ್ನು ಕಾಣಬಹುದಾಗಿದೆ.

ಪುರುಷಶಾಹಿಯ ಪ್ರಮುಖ ಆಶಯವೆಂದರೆ ತನ್ನ ಅಧೀನದಲ್ಲಿರುವ ಅಧಿಕಾರವನ್ನು ನಿರಂತರವಾಗಿ ಮುನ್ನಡೆಸುತ್ತಾ ಅಧಿಕಾರದಲ್ಲಿರುವವರನ್ನು ನಿರಂತರವಾಗಿ ನಿಯಂತ್ರಿಸುವುದೇ ಆಗಿರುತ್ತದೆ. ಈ

ಪುರುಷಶಾಹಿ ಎಂಬುದು ಎಲ್ಲಾ ಕಡೆಯೂ ಏಕ ಸ್ವರೂಪದಲ್ಲಿರುವುದಿಲ್ಲ. ಇದು ಜಾತಿ, ಧರ್ಮ, ಪ್ರದೇಶ, ಮುಂತಾದವುಗಳ ಮೇಲೆ ಬೇರೆ ಬೇರೆ ರೀತಿಯಾಗಿ ತನ್ನ ಪ್ರಭಾವವನ್ನು ನೇರವಾಗಿ ಇಲ್ಲವೆ ಪರೋಕ್ಷವಾಗಿ ವ್ಯಕ್ತಪಡಿಸುತ್ತಲೇ ಇರುತ್ತದೆ. ಪುರುಷಶಾಹಿ ವ್ಯವಸ್ಥೆಯಲ್ಲಿ ಪುರುಷರು ತುಳಿಯುವವರಾದರೆ ಮಹಿಳೆಯರು ತುಳಿಸಿಕೊಳ್ಳುವವರಾಗಿರುತ್ತಾರೆ. ಅಧಿಕಾರದಲ್ಲಿ ಯಾರೇ ಇರಲಿ ಅದನ್ನು ನಿಯಂತ್ರಿಸುವ ಶಕ್ತಿ ಮಾತ್ರ ಪುರುಷಶಾಹಿಯಾಗಿರುತ್ತದೆ.

ಭಾರತೀಯ ಸಮಾಜದಲ್ಲಿ ಜಾತಿ ಎಂಬುದು ಸಮಾಜದ ಅತ್ಯಂತ ಪ್ರಭಾವಶಾಲಿ ನಿಯಂತ್ರಕ ಶಕ್ತಿಯಾಗಿದೆ. ಜಾತಿ ವ್ಯವಸ್ಥೆಯ ಏಣಿ ಶ್ರೇಣಿಗಳೇ ಇಡೀ ವ್ಯವಸ್ಥೆಯಲ್ಲಿ ಕಂಡುಬರುತ್ತದೆ. ಈ ಜಾತಿ ವ್ಯವಸ್ಥಿತಯೊಂದಿಗೆ ಊಳಿಗಮಾನ್ಯ ವ್ಯವಸ್ಥೆ, ಯಜಮಾನಶಾಹಿ ಮತ್ತು ಬಂಡವಾಳಶಾಹಿ ವ್ಯವಸ್ಥೆಗಳೂ ಕೈಜೋಡಿಸಿ ತಳ ಸಮುದಾಯದ ಜನಗಳನ್ನು ತಮ್ಮ ಇಷ್ಟಕ್ಕನುಸಾರವಾಗಿ ಬಳಸಿಕೊಳ್ಳುವುದನ್ನು ಕಾಣಬಹುದಾಗಿದೆ. ಮೀಸಲಾತಿಯ ಕಾರಣ ಅಧಿಕಾರವನ್ನು ತಳಸಮುದಾಯದ ಬುಡಕಟ್ಟು ಮಹಿಳೆಯರು ಪಡೆಯುವವರಾದರೂ ಅದನ್ನು ಸ್ವಾತಂತ್ರ್ಯವಾಗಿ ಚಲಾಯಿಸದ ಅಸಹಾಯಕ ಸ್ಥಿತಿಯಲ್ಲಿ ತಳ ಸಮುದಾಯದ ಮಹಿಳೆಯರು ಇರುವುದನ್ನು ಕಾಣಬಹುದಾಗಿದೆ. ಭಯ, ಮತ್ತು ಅವಮಾನಗಳ ಅಂಜಿಕೆಯಲ್ಲಿಯೇ ತನ್ನ ಅಧಿಕಾರಾವಧಿಯನ್ನು ಪೂರ್ಣಗೊಳಿಸಿಕೊಳ್ಳಬೇಕಾದ ಅಸಹಾಯಕ ಸ್ಥಿತಿಯಲ್ಲಿ ತಳಸಮುದಾಯದ ಮಹಿಳೆ ಕಾಲ ಕಳೆಯಬೇಕಾಗುತ್ತದೆ.

೧೯೯೩ರ ಪಂಚಾಯತ್‌ರಾಜ್ ಕಾಯ್ದೆಯನ್ವಯ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಮಾತ್ರವಲ್ಲದೆ ಗ್ರಾಮೀಣ ಮಟ್ಟದಲ್ಲೂ ಮಹಿಳೆ ರಾಜಕೀಯ ಪ್ರವೇಶಿಸುವಂತಾಯಿತು. ಇದಕ್ಕೆ ಜೊತೆಯಾಗಿ ಮಹಿಳಾ ಮೀಸಲಾತಿ ಕಾಯ್ದೆ ಸಹಕರಿಸಿತು. ಹೀಗಾಗಿ ಪ್ರತಿ ಗ್ರಾಮದಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಅನಿವಾರ್ಯವಾಗಿದೆಯಂಬಂತೆ ರಾಜಕೀಯ ಪ್ರವೇಶಿಸುವಂತಾಯಿತು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ತಳ ಸಮುದಾಯದ ಮಹಿಳೆಯರು ಭೌತಿಕವಾಗಿ ರಾಜಕೀಯ ಸ್ಥಾನಗಳನ್ನು ಪಡೆದವರಾದರೇ ಹೊರತು ರಾಜಕೀಯ ಅಧಿಕಾರ ಚಲಾಯಿಸುವಲ್ಲಿ ಪರಾಧೀನತೆಯನ್ನು ಹೊಂದಿದರು. ಯಾಕೆಂದರೆ ಪುರುಷಶಾಹಿ ವ್ಯವಸ್ಥೆ ಅದರಲ್ಲೂ ಮೇಲ್ಜಾತಿಗಳು ತಳ ಸಮುದಾಯದ ಮಹಿಳೆಯರನ್ನು, ಅವರ ಅಧಿಕಾರ ಚಲಾವಣೆಯನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿರುವುದನ್ನು ಕಾಣಬಹುದಾಗಿದೆ.

✷

ಒಟ್ಟಾರೆಯಾಗಿ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರು ಪಂಚಾಯತ್‌ರಾಜ್ ವ್ಯವಸ್ಥೆಯ ಮುಖ್ಯ ಅಂಗವಾದ ಗ್ರಾಮ ಪಂಚಾಯಿತಿಗಳಲ್ಲಿ ಯಾವ ರೀತಿ ಪಾಲ್ಗೊಳ್ಳುತ್ತಾರೆ ಮತ್ತು ಅದರಿಂದ ಉಂಟಾಗಬಹುದಾದ ಪರಿಣಾಮಗಳನ್ನು ಈ ಕೆಳಗಿನಂತೆ ಗುರುತಿಸಲು ಪ್ರಯತ್ನಿಸಲಾಗಿದೆ.

ಸಾಮಾನ್ಯವಾಗಿ ರಾಜಕೀಯ ಕ್ಷೇತ್ರದಲ್ಲಿ ಮುನ್ನುಗ್ಗುವ ಮಹಿಳೆಯರಲ್ಲಿ ಅದರಲ್ಲೂ ತಳ ಸಮುದಾಯದ ಮಹಿಳೆಯರಲ್ಲಿ ಕಂಡುಬರುವ ಅಂಶವೆಂದರೆ ಮಧ್ಯವಯಸ್ಕ ಮಹಿಳೆಯರೇ ಹೆಚ್ಚಾಗಿ ರಾಜಕೀಯ ರಂಗಕ್ಕೆ ಪ್ರವೇಶ ಪಡೆಯುತ್ತಾರೆ. ಪ್ರಾಯಶಃ ಹರಯದ ಹೆಣ್ಣಿಗೆ ಕೌಟುಂಬಿಕ ಹಾಗೂ ಸಾಮಾಜಿಕವಾದ ಕೆಲವು ನಿರ್ಬಂಧಗಳು ಇರುತ್ತವೆ. ಮುಖ್ಯವಾಗಿ ಲೈಂಗಿಕ ಅಪವಿತ್ರತೆ ಎಲ್ಲಿ ಉಂಟಾಗುತ್ತದೋ ಎಂಬ ಭಯವೂ ಸಹ ಹರಯದ ಮಹಿಳೆಯರು ರಾಜಕೀಯ ರಂಗಕ್ಕೆ ಬಾರದಂತೆ ತಡೆಯುವಲ್ಲಿ ಕಾರಣವಾಗಿರಬಹುದಾದ ಅಂಶಗಳಲ್ಲಿ ಒಂದೆನಿಸುತ್ತದೆ. ಯಾಕೆಂದರೆ ಬಹುತೇಕವಾಗಿ ರಾಜಕೀಯ ರಂಗದಲ್ಲಿ ವಿಜೃಂಭಿಸುವ ಪುರುಷವರ್ಗದ ಕುರಿತು ಸಾಮಾಜಿಕವಾಗಿ ಸದಾಭಿಪ್ರಾಯ ಇರದೇ ಇರುವುದೇ ಇದಕ್ಕೆ ಕಾರಣವಿರಬಹುದು ಹಾಗೂ ತಮ್ಮ ಮನೆಯ ಹೆಣ್ಣು ಮತ್ತೊಬ್ಬನ ಸ್ವತ್ತಾದೀತೆಂಬ ಪುರುಷಶಾಹಿ ಸ್ವಾರ್ಥವೂ ಇದಕ್ಕೆ ಕಾರಣವಾಗಿರಬಹುದು. ಹೀಗಾಗಿ ಯೌವ್ವನ ಕಳೆದು ಮಧ್ಯ ವಯಸ್ಸಿಗೆ ಬಂದ ಹೆಣ್ಣನ್ನು ತಮ್ಮ ಕಣ್ಗಾವಲಿನ ನೆರಳಿನಲ್ಲಿಯೇ ರಾಜಕೀಯ ರಂಗಕ್ಕೆ ಪ್ರವೇಶಿಸುವಂತೆ ಕುಟುಂಬದ ಪುರುಷರು ಆಸಕ್ತಿ ತೋರಿಸುವುದನ್ನು ಕಾಣಬಹುದು. ಯಾಕೆಂದರೆ ಪರಿಶಿಷ್ಟ ಪಂಗಡದ ಯಾವೊಬ್ಬ ಮಹಿಳೆಯೂ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸ್ವ-ಹಿತಾಸಕ್ತಿಯಿಂದ ರಾಜಕೀಯಕ್ಕೆ ಪ್ರವೇಶ ಪಡೆದಿಲ್ಲ. ಬಹುತೇಕ ಮಹಿಳೆಯರಿಗೆ ರಾಜಕೀಯ ರಂಗವೇ ಹೊಸತು. ಅವರನ್ನು ರಾಜಕೀಯ ರಂಗಕ್ಕೆ ನೂಕಲ್ಪಟ್ಟ ಕೈಗಳೇ ಅವರ ಅಧಿಕಾರದ ಸೂತ್ರವನ್ನು ಚಲಾಯಿಸುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ.

ರಾಜಕೀಯದಲ್ಲಿ (ಪಂಚಾಯತ್ ರಾಜ್‌ವ್ಯವಸ್ಥೆಯಲ್ಲಿ) ಮಹಿಳೆಯರು, ಅದರಲ್ಲೂ ಪರಿಶಿಷ್ಟ ಪಂಗಡದ ಮಹಿಳೆಯರು ಪಾಲ್ಗೊಳ್ಳಲು ಜಾತಿ ಎಷ್ಟು ಮುಖ್ಯ ಕಾರಣವಾಗಿದೆಯೋ, ಅವರು ಸಕ್ರಿಯ ರಾಜಕೀಯದಿಂದ ದೂರವುಳಿಯಲು ಸಹ ಜಾತಿಯೇ ಕಾರಣವಾಗಿದೆ. ಭಾರತದ ರಾಜಕೀಯ ನಿಂತಿರುವುದೇ ಜಾತಿ ವ್ಯವಸ್ಥೆಯ ಮೇಲೆ. ಉದಾಹರಣೆಗೆ ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಪಂಗಡಗಳ ಅನುಸೂಚಿತ ಪಟ್ಟಿಯಲ್ಲಿರುವ ಒಟ್ಟು ಸಮುದಾಯಗಳು ಐವತ್ತು, ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡಗಳು ಒಟ್ಟು ನಾಲ್ಕು ಅವು ಕ್ರಮವಾಗಿ ವಾಲ್ಮೀಕಿ, ಹಕ್ಕಿ ಪಿಕ್ಕಿ, ಡುಂಗ್ರಿ

ಗರಾಸಿಯ, ಮೇಧಾ ಸಮುದಾಯಗಳಾಗಿವೆ. ವಾಲ್ಮೀಕಿ ಸಮುದಾಯದ ಹೊರತಾಗಿ ಮೂರು ಸಮುದಾಯಗಳು ಜನಸಂಖ್ಯಾ ದೃಷ್ಟಿಯಿಂದ ತುಂಬಾ ಅಲ್ಪ ಸಂಖ್ಯಾತವಾಗಿವೆ ಮತ್ತು ಅವುಗಳಿಗೆ ರಾಜಕೀಯ ಇಚ್ಛಾ ಶಕ್ತಿ ಇಲ್ಲವೆಂದೇ ಹೇಳಬಹುದು. ಜನಸಂಖ್ಯೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ವಾಲ್ಮೀಕಿ ಸಮುದಾಯವಾಗಿದೆ. ಹೀಗಾಗಿ ಮೇಲ್ವರ್ಗದ ಜನ ತಮ್ಮೊಂದಿಗೆ ವಾಲ್ಮೀಕಿ ಸಮುದಾಯದವರೂ ಸಹ ಚುನಾವಣೆಗೆ ನಿಲ್ಲುವಂತೆ ಪ್ರೇರೇಪಿಸುತ್ತಾರೆ. ಅದರಲ್ಲೂ ನಾಲ್ಕು ಗೋಡೆಗಳ ಮಧ್ಯ ಇರುವ ವಾಲ್ಮೀಕಿ ಸಮುದಾಯದ ಹೆಣ್ಣನ್ನು ಚುನಾವಣೆ ರಂಗಕ್ಕೆ ನೂಕುವುದಲ್ಲದೆ ಅವಳ ಗೆಲುವಿನ ಅಥವಾ ಸದಸ್ಯತ್ವದ ಕಾಲಾವಧಿಯ ಸಂಪೂರ್ಣ ಲಾಭವನ್ನು ಸಹ ಮೇಲ್ವರ್ಗದವರೇ ಮಾಡಿಕೊಳ್ಳುವ ಅಪಾಯವೇ ಹೆಚ್ಚು. ಉದಾಹರಣೆಗೆ ಕಳೆದ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ ಜಿಲ್ಲಾ ಪಂಚಾಯತಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದ ಒಬ್ಬ ಮಹಿಳೆಯ ಅಧಿಕಾರವನ್ನು ಸಂಪೂರ್ಣವಾಗಿ ದುರುಪಯೋಗ ಪಡಿಸಿಕೊಂಡವನು ಮೇಲ್ಜಾತಿಯ ವ್ಯಕ್ತಿಯೇ ಆಗಿದ್ದುದು ಕಂಡುಬಂದಿತು. ಕೇವಲ ಆತ ಅವಳ ಅಧ್ಯಕ್ಷಗಿರಿಯ ಅಧಿಕಾರವನ್ನು ಮಾತ್ರ ದುರುಪಯೋಗ ಪಡಿಸಿಕೊಳ್ಳಲಿಲ್ಲ, ಅವಳನ್ನು ಲೈಂಗಿಕವಾಗಿಯೂ ದುರುಪಯೋಗ ಪಡಿಸಿಕೊಂಡಿರುವುದು ತಿಳಿದುಬಂದಿತು. ಅವಳನ್ನು ಲೈಂಗಿಕವಾಗಿ ಬಳಸಿಕೊಳ್ಳುವ ಮೂಲಕ ಅವಳ ಸಂಸಾರ ಒಡೆದುಹೋಗಲು ಈ ಮೇಲ್ಜಾತಿಯ ವ್ಯಕ್ತಿಯೇ ಕಾರಣವಾದುದು ಸತ್ಯ. ಬಹುತೇಕವಾಗಿ ಪರಿಶಿಷ್ಟ ಪಂಗಡದ ಜನ ತಮ್ಮವರಲ್ಲಿ ಒಬ್ಬ ಹೆಣ್ಣುಮಗಳು ಜಿಲ್ಲಾ ಪಂಚಾಯಿತಿ ಅಧ್ಯಕ್ಷಳಾದಳು ಎಂದು ಸಂಭ್ರಮಪಟ್ಟರೆ ಹೊರತು ಅವಳು ಬಿದ್ದ ಹಳ್ಳದಿಂದ ಮೇಲೆತ್ತುವ ಕನಿಷ್ಟ ಪ್ರಯತ್ನವನ್ನು ಮಾಡಲಿಲ್ಲ. ಇದು ಪರಿಶಿಷ್ಟ ಪಂಗಡದ ಮಹಿಳೆಯರ ರಾಜಕೀಯ ಬದುಕಿನ ಒಂದು ಉದಾಹರಣೆಯಷ್ಟೆ. ಇಂಥ ಎಷ್ಟೋ ಉದಾಹರಣೆಗಳು ಕರ್ನಾಟಕದಾದ್ಯಂತ ಮಾತ್ರವಲ್ಲ, ಭಾರತದಾದ್ಯಂತವೂ ಕಂಡುಬರುತ್ತವೆ.

ಅಕಸ್ಮಾತ್ ಅವಳು ರಾಜಕೀಯ ಬದುಕಿನಲ್ಲಿ ಮೇಲ್ಜಾತಿಯ ಪುರುಷಶಾಹಿಯನ್ನು ಧಿಕ್ಕರಿಸಿದ್ದರೆ ತನ್ನನ್ನು ಅಮುಕಿ ಹಾಕಿಬಿಡಬಹುದೆಂಬ ಹೆದರಿಕೆಯೂ ತನಗಿದ್ದುದಾಗಿ ಪರಿಶಿಷ್ಟ ಪಂಗಡದ ಮಹಿಳೆ ತಿಳಿಸಿದಳು.

ಪರಿಶಿಷ್ಟ ಪಂಗಡದ ಮಹಿಳೆ ಮುಖ್ಯವಾಗಿ ಎಲ್ಲಿ ತನಗೆ ಅಪಹಾಸ್ಯವಾಗುತ್ತದೋ ಇಲ್ಲವೇ ಮೇಲ್ಜಾತಿಗಳ ಬಹಿಷ್ಕಾರಕ್ಕೆ ತಾನು ಈಡಾಗಬೇಕಾಗುತ್ತದೋ ಎಂಬ ಭಯದಿಂದಾಗಿಯೇ ಮುಕ್ತವಾಗಿ ರಾಜಕೀಯದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದೇ ಇರುವ ಕಾರಣಗಳಲ್ಲಿ ಒಂದು ಎಂದು ಭಾವಿಸಲಾಗಿದೆ.

✷

ಭಾರತೀಯ ಸಮಾಜದಲ್ಲಿ ಪುರುಷಶಾಹಿ ಎಲ್ಲಾ ರಂಗದಲ್ಲಿಯೂ ತನ್ನ ಹಿಡಿತವನ್ನು ಸಾಧಿಸಿದೆ. ಅದರಲ್ಲೂ ರಾಜಕೀಯ ರಂಗದಂತಹ ಬಲಿಷ್ಠ ರಂಗದಲ್ಲಿ ಮೇಲ್ಜಾತಿಗಳ ಹಿಡಿತದಷ್ಟೇ ಮುಖ್ಯವಾಗಿ ಹಿಡಿತ ಸಾಧಿಸಿರುವುದು ಪುರುಷಶಾಹಿ ಎಂದರೆ ತಪ್ಪಾಗಲಾರದು. ಪರಿಶಿಷ್ಟ ಪಂಗಡದ ಮಹಿಳೆಯರು ರಾಜಕೀಯವಾಗಿ ಪಾಲ್ಗೊಳ್ಳಲು ಒಂದು ಕಡೆಯಿಂದ ಮೇಲ್ಜಾತಿಗಳು ಅಡಚಣೆ ಉಂಟು ಮಾಡಿದರೆ ಮತ್ತೊಂದು ಕಡೆಯಿಂದ ಪುರುಷಶಾಹಿಯ ಕಾಲ್ತೊಡಕು ಇದ್ದೇ ಇದೆ. ಪುರುಷಶಾಹಿ ಎಂಬುದು ಕೇವಲ ಇಂಥಾದ್ದೇ ಆಕಾರದಲ್ಲಿರಬೇಕೆಂದು ನಿಯಮವೇನೂ ಇಲ್ಲ. ಅದು ಗಂಡನ ರೂಪದಲ್ಲಿ, ಅಣ್ಣ, ಅಪ್ಪ, ತಮ್ಮ, ಕೊನೆಗೆ ಮಗನ ರೂಪದಲ್ಲಿಯೂ ಪ್ರಕಟವಾಗುವ ಸಾಧ್ಯತೆ ಇರುತ್ತದೆ. ಇದರಲ್ಲಿ ಯಾರೂ ಅಡ್ಡಿ ಬಾರದೆ ಇದ್ದರೂ ಅಧಿಕಾರವರ್ಗದಲ್ಲಿರುವ ಪುರುಷರು ಅವಳ ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ಅಡ್ಡಿ ಉಂಟು ಮಾಡುವ ಸಾಧ್ಯತೆ ಇದೆ. "ಪಂಚಾಯತಿಯ ಚುನಾಯಿತ ಮಹಿಳೆಯರ ಗಂಡಂದಿರಿಗೆ ಪಂಚಾಯತ್‌ನ ಕಾರ್ಯಕಾರಿ ಸಭೆಗಳಲ್ಲಿ ಪಾಲ್ಗೊಳ್ಳುವ ಅವಕಾಶವಿಲ್ಲ ಎಂದು ಸ್ಥಳೀಯ ಕಾರ್ಯದರ್ಶಿಗಳು ಪ್ರಕಟಿಸಿದಾಗ ಸ್ವತಃ ಮಹಿಳೆಯರೆಲ್ಲರೂ ಸೇರಿ ಕಾರ್ಯದರ್ಶಿಯ ಮೇಲೆ ಹಕ್ಕುಚ್ಯುತಿಯನ್ನು ಮಂಡಿಸಿದ ಉದಾಹರಣೆ ಪಕ್ಕದ ಕೊಪ್ಪಳ ಜಿಲ್ಲೆಯ ಕಾರಟಗಿ ಎಂಬ ಗ್ರಾಮದಲ್ಲಿ ನಡೆದಿದೆ (ರಾಮು ೧೨೪) ಅಂದರೆ ಇಲ್ಲಿ ಗಮನಿಸಬೇಕಾದ ಮುಖ್ಯಾಂಶವೆಂದರೆ ಮಹಿಳೆಯರು ತಮ್ಮಷ್ಟಕ್ಕೆ ತಾವೇ ಅಧಿಕಾರವನ್ನು ಚಲಾಯಿಸಲೂ ಸಹ ಪುರುಷಶಾಹಿಯ ನೆರವು ಅಗತ್ಯ ಎಂಬುದನ್ನು ಮಹಿಳೆಯರು ನೇರವಾಗಿಯೇ ಪ್ರಕಟಿಸಿದ್ದಾರೆ.

ಪರಿಶಿಷ್ಟ ಪಂಗಡದ ಮಹಿಳೆಯರಿಗೆ ತಮ್ಮ ಅಧಿಕಾರದ ಮಿತಿಗಳು ಯಾವುವು, ತಮ್ಮ ಕರ್ತವ್ಯಗಳೇನು, ತಮ್ಮ ಕಾರ್ಯವ್ಯಾಪ್ತಿ ಎಷ್ಟು ಎಂಬುದರ ಕುರಿತು ಸರಿಯಾದ ತಿಳುವಳಿಕೆ ಇರದೇ ಇರುವುದು.

ಯಾರೇ ಒಬ್ಬ ಚುನಾಯಿತ ಸದಸ್ಯ ಮೊಟ್ಟ ಮೊದಲಿಗೆ ಅರಿಯಬೇಕಾದ ಮುಖ್ಯ ವಿಚಾರವೆಂದರೆ ಚುನಾಯಿತ ಸದಸ್ಯನಾಗಿ ತನ್ನ ಜವಾಬ್ದಾರಿಗಳೇನು ಎಂಬುದನ್ನು ಅರಿಯಬೇಕಾಗಿರುವುದು. ಅಕಸ್ಮಾತ್ ಚುನಾಯಿತ ಸದಸ್ಯನು ತನ್ನ ಜವಾಬ್ದಾರಿಯನ್ನು ಅರಿಯದೇ ಹೋದರೆ ಅವನ ಕಾಲಾವಧಿಯ ರಾಜಕೀಯ ಜೀವನದ ಪಾಲ್ಗೊಳ್ಳುವಿಕೆಯೇ ನಿರರ್ಥಕವಾಗಿ ಹೋಗಿಬಿಡುತ್ತದೆ. ಯಾರದೋ ಒತ್ತಾಯಕ್ಕೆ, ಒತ್ತಡಕ್ಕೆ ಒಳಗಾಗಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ. ಸ್ಪರ್ಧಿಸಿ ಚುನಾಯಿತರಾದ ತರುವಾಯ ತಮ್ಮ ಜವಾಬ್ದಾರಿಗಳನ್ನು ಅರಿಯದೆ ಪರತಂತ್ರಲಾಗಿ ಬಿಡುತ್ತಾರೆ. ಯಾಕೆಂದರೆ

ಅವರಿಗೆ ತನ್ನ ಕರ್ತವ್ಯಗಳ ಅರಿವೇ ಇರುವುದಿಲ್ಲ. ಈ ಕಾರಣಕ್ಕಾಗಿಯೇ ಸರ್ಕಾರವು ಪ್ರತಿ ಪಂಚಾಯತ್‌ರಾಜ್ ಸದಸ್ಯರಿಗೆ ಚುನಾಯಿತಗೊಂಡ ಪ್ರಾರಂಭದ ದಿಸೆಯಲ್ಲಿಯೇ ತಾಲೂಕುಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಅಬ್ದುಲ್ ನಜೀರ್‌ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ತರಬೇತಿ ಕೊಡಿಸುತ್ತಿದೆ. ಆದರೆ ಸರ್ಕಾರದ ಇತರ ಯೋಜನೆಗಳಂತೆ ಈ ತರಬೇತಿಯೂ ಸಹ ಬಹುತೇಕ ನಿರರ್ಥಕ. ಯಾಕೆಂದರೆ ಕಾಟಚಾರಕ್ಕೆ ಎಂಬಂತೆ ತರಬೇತಿಗೆ ಹಾಜರಾಗುವ ಬಹುತೇಕ ಸದಸ್ಯರು ತರಬೇತಿ ಕೊಠಡಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದಿಲ್ಲ. ನೆಪಕ್ಕೆಂಬಂತೆ ತರಬೇತಿಗೆ ಹೋಗುವ ಸದಸ್ಯರು ತರಬೇತಿಗೆ ಹಾಜರಾದಂತೆ ಮಾಡಿ ತರುವಾಯ ತಮ್ಮ ನಿತ್ಯದ ಜರೂರು ಕೆಲಸಗಳಿಗೆ ಹೊರಟು ಹೋಗುತ್ತಾರೆ. ಹೀಗಾಗಿ ತರಬೇತಿಯಲ್ಲಿ ಏನು ಕಲಿಯಬೇಕೋ ಅದನ್ನ ಕಲಿಯಲು ಸದಸ್ಯರಿಗೆ ಸಾಧ್ಯವಾಗುವುದಿಲ್ಲ. ಅಕಸ್ಮಾತ್ ಪರಿಶಿಷ್ಟ ಪಂಗಡದ ಮಹಿಳೆಯರು ತರಬೇತಿಯೊಳಗೆ ಸಂಪೂರ್ಣವಾಗಿ ತೊಡಗಿಸಿಕೊಂಡರೂ ಸಹ ಅವರ ಶಿಕ್ಷಣದ ಕೊರತೆಯಿಂದಾಗಿ ತರಬೇತಿಯ ತಳಬುಡವೇ ಅವರಿಗೆ ಅರ್ಥವಾಗುವುದಿಲ್ಲ. ಮುಖ್ಯವಾಗಿ ತರಬೇತಿಯಲ್ಲಿ ಕೊನೆಯ ದಿನ 'ನೀವು ತರಬೇತಿಯಲ್ಲಿ ಏನೇನು ಕಲಿತಿರಿ' ಎಂದು ಕೇಳಿದರೆ, 'ನಮಗೇನು ಗೊತ್ತು ಸ್ವಾಮಿ, ಅವರೆಲ್ಲ ಏನೋ ಹೇಳಿದರು, ನಾವು ಕೇಳಿದಿವಿ, ಅವ್ರೆಲ್ಲಾ ಹೇಳಿದಂಗೆ ನಾವು ನಡೆದುಕೊಳ್ಳಲು ಸಾಧ್ಯವಾಗುತ್ತದೆಯಾ?' ಎಂದು ಮರಳಿ ಪ್ರಶ್ನೆ ಮಾಡುತ್ತಾರೆ.

ಪಂಚಾಯತ್‌ರಾಜ್ ಮೀಸಲಾತಿ ಸಿಗುತ್ತದೆ ಎಂಬುದೊಂದೇ ಕಾರಣಕ್ಕೆ ಅಧಿಕಾರ ಗ್ರಹಣ ಮಾಡಿಕೊಳ್ಳುತ್ತಿರುವ ತಳಸಮುದಾಯದ ಮಹಿಳೆ ಗ್ರಾಮೀಣ ಅಭಿವೃದ್ಧಿಯ ಕಾರ್ಯಗಳಲ್ಲಿ ಸಕ್ರಿಯವಾಗಿ ಮತ್ತು ಯಶಸ್ವಿಯಾಗಿ ಪಾಲ್ಗೊಳ್ಳಲು ಸಾಧ್ಯವಾಗುವುದಿಲ್ಲ. ತನ್ನ ಅಧಿಕಾರ ಮತ್ತು ವ್ಯಾಪ್ತಿಗಳ ಕುರಿತಾಗಿ ಸಾಮಾನ್ಯ ಜ್ಞಾನವೇ ಆ ಮಹಿಳೆಗೆ ಇರದಿರುವುದರಿಂದ ಸಾಮಾನ್ಯವಾಗಿ ಅವಳು ಅಧಿಕಾರವನ್ನು ಸದುಪಯೋಗ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತಿಲ್ಲ. ನಾಮಮಾತ್ರಕ್ಕೆ ಪಂಚಾಯಿತಿ ಸದಸ್ಯೆ, ಅಧ್ಯಕ್ಷೆ, ಉಪಾಧ್ಯಕ್ಷೆಗಳಂತಹ ಸ್ಥಾನಗಳಲ್ಲಿ ಮುಂದುವರೆಯಬೇಕಾಗುತ್ತದೆ. ಪರಿಶಿಷ್ಟ ಬುಡಕಟ್ಟು ಮಹಿಳೆಯರ ಈ ರೀತಿಯ ಸಮಸ್ಯೆಯಿಂದ ಏನನ್ನು ನಿರೀಕ್ಷಿಸಲು ಸಾಧ್ಯವೇ ಇಲ್ಲ. ಇದರ ಹಿಂದೆ ಆಂತರಿಕವಾಗಿ ಹಲವಾರು ಕಾರಣಗಳೂ ಇವೆ. ಆದರೆ ಪರಿಶಿಷ್ಟ ಪಂಗಡದ ಮಹಿಳೆ ಅಭಿವೃದ್ಧಿಯ ಒಂದು ಘಟಕ ಎಂದು ಪರಿಭಾವಿಸಲು ಅವಳಿಗೆ ಇಂತಹ ಅಂಶಗಳ ಅರಿವಿರಲೇಬೇಕಾಗುತ್ತದೆ. ಈ ನಿಟ್ಟಿನಲ್ಲಿ ಹಲವು

ಪ್ರಯತ್ನಗಳು ನಡೆದಂತೆ ಮೇಲ್ನೋಟಕ್ಕೆ ಕಾಣುವುದಾದರೂ ಅವೆಲ್ಲವೂ ತೋರಿಕೆಯವು ಎಂಬುದು ಮಾತ್ರ ಸತ್ಯ.

ಸ್ಥಳೀಯ ಸಂಸ್ಥೆಗಳಾಗಿರುವ ಪಂಚಾಯಿತಿಯಲ್ಲಿ ಇಂದಿಗೂ ಸಾಮಾಜಿಕ ಜೀವನದಲ್ಲಿ ಜೀವಂತವಾಗಿರುವ ಜಾತಿ ಪದ್ಧತಿಯಂತಹ ಅನಿಷ್ಠ ಪದ್ಧತಿಯಿಂದಾಗಿ ದಲಿತ ಹಾಗೂ ಬುಡಕಟ್ಟು ಮಹಿಳೆಯರು ತಮ್ಮ ಅಧಿಕಾರವಧಿಯಲ್ಲಿ ನೇರವಾಗಿ ಪಾಲ್ಗೊಳ್ಳಲು ತುಂಬಾ ಹಿಂಜರಿಯುತ್ತಾರೆ. ತಮ್ಮ ಅಧಿಕಾರ ಮೀರಿ ಅಹಂನಿಂದ ವರ್ತಿಸಲು ಮೇಲ್ವರ್ಗಗಳಿಗೆ ಸಾರ್ವಜನಿಕವಾಗಿಲ್ಲದಿದ್ದರೂ ಜಾತಿಯ ಕಾರಣದಿಂದ ಅವಕಾಶವಿದೆ. (ರಾಮು ಸುಂದರಪ್ಪ ಕಲಾಲ್ ೧೩೨) ಆದರೆ ಈ ರೀತಿ ವರ್ತಿಸುವುದು ಮುಖ್ಯವಾಗಿ ಪರಿಶಿಷ್ಟ ಮಹಿಳೆಗೆ ಕಲ್ಪನೆಗಳೂ ನಿಲುಕದ ವಿಚಾರ. ಪರಿಶಿಷ್ಟ ಜಾತಿ ಮತ್ತು ಪಂಗಡದ ಮಹಿಳೆಯರು ನಿರಂತರವಾಗಿ ಕುಟುಂಬದಿಂದ ಹಿಡಿದು ಇಡೀ ಸಮಾಜದಲ್ಲಿಯೇ ಹತ್ತು ಹಲವು ಶೋಷಣೆ, ದೌರ್ಜನ್ಯ, ದಬ್ಬಾಳಿಕೆಗಳಿಂದ ಜರ್ಜಿತವಾಗಿದ್ದಾಳೆ. ಸಾಮಾಜಿಕ ಜೀವನದಲ್ಲಿ ಅತ್ಯಂತ ತಳಮಟ್ಟದಲ್ಲಿರುವ ದಲಿತ ಹಾಗೂ ಪರಿಶಿಷ್ಟ ಪಂಗಡದ ಮಹಿಳೆಯರು ಜಾತಿಯ ಕೀಳಿರಿಮೆಯಿಂದಲೇ ಅಧಿಕಾರವನ್ನು ಧೈರ್ಯವಾಗಿ ಚಲಾಯಿಸಲು ಸಾಧ್ಯವಾಗುತ್ತಿಲ್ಲ ಎಂಬ ಅಂಶ ಮೇಲ್ನೋಟಕ್ಕೆ ಕಂಡುಬರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ನಾಲ್ಕು ತಾಲೂಕಿನ ಪಂಚಾಯತ್‌ರಾಜ್ ವ್ಯವಸ್ಥೆಯ ಪ್ರತಿ ಪರಿಶಿಷ್ಟ ಪಂಗಡದ ಸದಸ್ಯೆಯರೂ ಇದೇ ಕೀಳಿರಿಮೆ ಭಾವನೆಯಿಂದ ಬಳಲುತ್ತಿರುವುದು ಕಂಡುಬರುತ್ತದೆ. ಮೇಲ್ನೋಟಕ್ಕೆ ತುಂಬಾ ಧೈರ್ಯಶಾಲಿಗಳು, ತಾವು ಅದೃಷ್ಟವಂತರಾದುದರಿಂದ ಸದಸ್ಯರಾಗಿದ್ದೇವೆ ಎಂಬ ಭಾವನೆ ಮುಖದ ಮೇಲೆ ಪ್ರಕಟಿಸಿದರೂ ಅವರ ಅಂತರಾಳಕ್ಕೆ ಹತ್ತಿರವಾದಂತೆಲ್ಲಾ ತಮ್ಮ ಆತಂಕ, ನೋವು, ಜಾತಿಯೆಂಬ ಅನಿಷ್ಟ ತಮ್ಮನ್ನು ನಿರಂತರವಾಗಿ ಕಾಡುತ್ತಿರುವುದಾಗಿ ತಿಳಿಸುತ್ತಾರೆ. ಈ ರೀತಿಯ ಭಾವನೆಯನ್ನು ಶೇಕಡ ೮೦ರಷ್ಟು ಪರಿಶಿಷ್ಟ ಪಂಗಡದ ಮಹಿಳೆಯರು ಪ್ರಕಟಿಸಿದುದನ್ನು ಕ್ಷೇತ್ರಕಾರ್ಯದಲ್ಲಿ ನೋಡಲಾಯಿತು.

ರಾಜಕೀಯ ಬದುಕಿನಲ್ಲಿ ಮೀಸಲಾತಿ ಅತೀ ಮುಖ್ಯವೆಂದು ಬಹುತೇಕ ತಳ ಸಮುದಾಯಗಳು ಅಪೇಕ್ಷೆ ಪಡುತ್ತದೆ. ಆದರೆ ಜಿಲ್ಲೆಯ ನಾಲ್ಕು ತಾಲೂಕುಗಳನ್ನೊಳಗೊಂಡಂತೆ ಬಹುತೇಕ ಪರಿಶಿಷ್ಟ ಪಂಗಡದ ಮಹಿಳೆಯರು ಮೀಸಲಾತಿ ಎಂಬುದು ಇರಲೇಬಾರದು, ಮೀಸಲಾತಿಯ ಕಾರಣಕ್ಕಾಗಿಯೇ ತಮಗೆ ಅಧಿಕಾರದ ಗದ್ದುಗೆ ದೊರೆತಿದೆಯಾದರೂ ತಾವು ಅಧಿಕಾರವನ್ನು ಚಲಾಯಿಸಲು ಸಾಧ್ಯವಾಗದ

ಸ್ಥಿತಿಗೆ ಮೀಸಲಾತಿಯೇ ಕಾರಣವೆಂದು ತಿಳಿಸುತ್ತಾರೆ. ಮೇಲ್ಜಾತಿಯವರು ಮೀಸಲಾತಿಯ ಕಾರಣಕ್ಕಾಗಿಯೇ ತಮ್ಮನ್ನು ಅನಿವಾರ್ಯವಾಗಿ ಒಪ್ಪಿಕೊಂಡಿದ್ದಾರಾಗಲಿ ಯಾವುದೇ ಪ್ರೀತಿ ವಿಶ್ವಾಸಗಳಿಂದ ತಮ್ಮನ್ನು ಒಪ್ಪಿ ಗೆಲ್ಲಿಸಿಲ್ಲ ಎಂಬ ನೋವು ಅವರಿಗಿದೆ.

ಈ ರೀತಿ ತುಂಬಾ ಸೂಕ್ಷ್ಮ ಮನಸ್ಥಿತಿಯ ಪರಿಶಿಷ್ಟ ಪಂಗಡದ ಮಹಿಳೆಯರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಬಳ್ಳಾರಿಯ ನಾಲ್ಕು ತಾಲೂಕುಗಳಲ್ಲಿ ಕಂಡು ಬಂದರು. ಇಂಥವರ ಪ್ರಮಾಣವು ಹೊಸಪೇಟೆ ತಾಲೂಕಿನಲ್ಲಿ ಶೇ.೪೧.೬೨, ಸಿರುಗುಪ್ಪದಲ್ಲಿ ಶೇ.೪೨.೩೪ರಷ್ಟಿದ್ದರೆ ಕೂಡ್ಲಿಗಿಯಲ್ಲಿ ಶೇ.೫೪.೩೨ ಹಾಗೂ ಹಗರಿಬೊಮ್ಮನಹಳ್ಳಿ ಶೇ.೫೩.೪೨ರಷ್ಟು ಪ್ರಮಾಣದಲ್ಲಿ ಕಂಡುಬಂದರು. ಆದರೆ ಇವರ ಹೊರತಾಗಿ ಮೀಸಲಾತಿಯಡಿ ಚುನಾಯಿತರಾದ ಇತರ ಪರಿಶಿಷ್ಟ ಪಂಗಡದ ಸದಸ್ಯೆಯರು ತಮಗೆ ಮೀಸಲಾತಿಯಿಂದ ತುಂಬಾ ಅನುಕೂಲವಾಗಿದೆ. ಮೀಸಲಾತಿ ಎಂಬುದು ಇರದೇ ಇದ್ದರೆ ತಾವು ಚುನಾವಣೆಗೆ ನಿಲ್ಲುವುದೇ ಕಷ್ಟವಾಗುತ್ತಿತ್ತು. ತಾವು ರಾಜಕೀಯವಾಗಿ ಮುಂದುವರೆಯಲು ಮತ್ತು ಅಧಿಕಾರದ ಗದ್ದುಗೆ ಹಿಡಿಯಲು ಮೀಸಲಾತಿ ಅತ್ಯಗತ್ಯವೆಂದೇ ಹೇಳಿದರು. ಮುಖ್ಯವಾಗಿ ಬಹುತೇಕ ಇವರ ಕುಟುಂಬದ ಪುರುಷರು ರಾಜಕೀಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡವರಾಗಿದ್ದು ಪರೋಕ್ಷವಾಗಿ ಇವರು ರಾಜಕೀಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳಲು ಆತುರರಾಗಿರುವುದು ಕಂಡುಬಂದಿತು.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೊದಲಿನ ಸಲಕ್ಕೆ ಪ್ರವೇಶ ಪಡೆದ ತಳ ಸಮುದಾಯದ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರು ತಾವು ಈ ವ್ಯವಸ್ಥೆಯಲ್ಲಿ ಕಂಡುಂಡ ಎಲ್ಲಾ ಬಗೆಯ ಸಾಮಾಜಿಕ, ಆರ್ಥಿಕ, ರಾಜಕೀಯ ಅಂಶಗಳಿಂದ ರಾಜಕೀಯವೆಂಬ ಪೆಡಂಭೂತದ ಸಹವಾಸವೇ ತಮಗೆ ಬೇಡ ಎನ್ನುತ್ತಿದ್ದಾರೆ. ಏಕೆಂದರೆ ತಳಸಮುದಾಯದ ಇವರಿಗೆ ರಾಜಕೀಯ ಸ್ಥಾನ ದೊರೆತಿದೆಯಾದರೂ ಅವರ ಬದಲಿಗೆ ಗ್ರಾಮದ ಹಿರಿಯರು, ಮೇಲ್ಜಾತಿ ಮುಖಂಡರು, ತಮ್ಮ ಕುಟುಂಬದ ಪುರುಷ ವರ್ಗಗಳೇ ಅಧಿಕಾರದ ಮುಖ್ಯ ಸೂತ್ರದಾರಿಗಳಾಗಿ ತಮ್ಮನ್ನು ಕೇವಲ ಪಗಡೆಗಳಂತೆ ಚಲಾಯಿಸುತ್ತಿರುವುದನ್ನು ಕಂಡ ಪರಿಶಿಷ್ಟ ಪಂಗಡದ ಮಹಿಳೆಯರು ತುಂಬಾ ನೋವಿನಿಂದಲೇ ಮೇಲಿನ ಮಾತುಗಳನ್ನು ತಿಳಿಸುತ್ತಾರೆ.

ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಪರಿಶಿಷ್ಟ ಪಂಗಡದ ಮಹಿಳೆಯರ ಪಾಲ್ಗೊಳ್ಳುವಿಕೆಯ ಕುರಿತಾಗಿ ಕಂಡುಬಂದ ಕೆಲವು ವಾಸ್ತವ ಅಂಶಗಳು ಈ ಕೆಳಗಿನಂತಿವೆ.

೧. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸಿರುವ ಚುನಾಯಿತ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಅವರ ಅಧಿಕಾರ, ಕಾರ್ಯಗಳ ಬಗ್ಗೆ ಅರಿವಿರದೇ ಇರುವವರ ಪ್ರಮಾಣ ಅಧಿಕವಾಗಿದೆ.

೨. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಚುನಾಯಿತರಾದ ಪರಿಶಿಷ್ಟ ಪಂಗಡದ ಮಹಿಳೆಯರಲ್ಲಿ ಬಹುಪಾಲು ಜನರಿಗೆ ಅಂದರೆ ಶೇಕಡ ೯೫ರಷ್ಟು ಮಹಿಳೆಯರಿಗೆ ಅಕ್ಷರ ಜ್ಞಾನದ ಅರಿವೇ ಇಲ್ಲವಾಗಿದೆ. ಹೀಗಾಗಿ ಪ್ರಸಕ್ತ ಪಂಚಾಯತ್‌ರಾಜ್ ವ್ಯವಸ್ಥೆಯ ಅಂತರಾಳವನ್ನು ತಿಳಿದುಕೊಳ್ಳುವಲ್ಲಿ ಮತ್ತು ಸಕ್ರಿಯವಾಗಿ ಪಾಲ್ಗೊಳ್ಳುವಲ್ಲಿ ಅವರು ಬಹುತೇಕ ಸೋತಿದ್ದಾರೆ.

೩. ಜಾತಿಯ ಕಾರಣಕ್ಕಾಗಿ ತಮಗೆ ಅವಮಾನವಾಗಬಹುದೆಂಬ ಭಯ ಅವರನ್ನು ನಿರಂತರವಾಗಿ ಕಾಡುತ್ತಿದೆ. ಹೀಗಾಗಿ ಅವರು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಕಷ್ಟಸಾಧ್ಯವಾಗುತ್ತಿದೆ. ಅವರು ಜಾತಿ ಕಾರಣಕ್ಕೆ ಅಪಹಾಸ್ಯಕ್ಕೆ ಒಳಗಾಗಿ ಬಿಡುತ್ತೇವೋ ಎಂಬ ಭಯದಿಂದ ಆ ವ್ಯವಸ್ಥೆಯಿಂದ ದೂರವಿರಲು ಹೆಚ್ಚೆಚ್ಚು ಪ್ರಯತ್ನಿಸುತ್ತಾರೆ.

೪. ಬಹುತೇಕವಾಗಿ ಮೇಲ್ಜಾತಿಯ ಮಹಿಳೆಯರ ಮೇಲೂ ಸಹ ಪುರುಷಶಾಹಿಯ ಹಿಡಿತ ಇದ್ದೇ ಇರುತ್ತದೆ. ಆದರೆ ಮೇಲ್ಜಾತಿಯ ಮಹಿಳೆಯರು ಕನಿಷ್ಠ ಮಟ್ಟದಲ್ಲಾದರೂ ಶಿಕ್ಷಣವನ್ನು ಪಡೆದಿರುತ್ತಾರೆ. ಹೀಗಾಗಿ ಪುರುಷಶಾಹಿಯ ಹಿಡಿತದಲ್ಲೂ ಸಹ ತಮ್ಮ ಕರ್ತವ್ಯಗಳ ಕುರಿತಾಗಿ ಅಲ್ಪಮಟ್ಟಿಗಾದರೂ ತಿಳಿದುಕೊಳ್ಳುವ ಜ್ಞಾನ ಮೇಲ್ಜಾತಿಯ ಮಹಿಳೆಯರಿಗಿದೆ. ಆದರೆ ಆ ಸೌಲಭ್ಯ ಕೆಳಸಮುದಾಯಗಳಿಗೆ ಅದರಲ್ಲೂ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಇಲ್ಲವೆಂದೇ ಹೇಳಬಹುದು. ಯಾಕೆಂದರೆ ಅಕ್ಷರ ಜ್ಞಾನದ ಕೊರತೆಯೊಂದಿಗೆ ಜಾತಿಯ ಕಾರಣಕ್ಕಾಗಿಯೂ ಅವರು ಅಪಹಾಸ್ಯ, ಅವಮಾನಗಳಿಗೆ ಒಳಗಾಗುತ್ತಲಿದ್ದಾರೆ. ಹೀಗಾಗಿ ಅವರು ಜಾತಿ ಕಾರಣಕ್ಕಾಗಿ ಅವಮಾನಕ್ಕೊಳಗಾಗದೇ ಪಂಚಾಯತ್‌ರಾಜ್ ವ್ಯವಸ್ಥೆಯ ರಾಜಕಾರಣದಿಂದ ದೂರವುಳಿಯಲು ಹೆಚ್ಚು ಅಪೇಕ್ಷಿಸುತ್ತಾರೆ.

೫. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಪರಿಶಿಷ್ಟ ಪಂಗಡದ ಮಹಿಳೆಯರ ಪಾಲ್ಗೊಳ್ಳುವಿಕೆಯಲ್ಲಿ ಉಂಟಾದ ಪರಿಣಾಮಗಳನ್ನು ಕುರಿತು ಒಳಹೊಕ್ಕು ನೋಡಿದಾಗ ಅವರು ಸಕ್ರಿಯ ರಾಜಕೀಯ ಅಧಿಕಾರದಲ್ಲಿ ಪರಿಶಿಷ್ಟ ಪಂಗಡದ ಮಹಿಳೆಯರ ಪಾಲ್ಗೊಳ್ಳುವಿಕೆಯ ಪ್ರಮಾಣಕ್ಕಿಂತ ಅವರ ಗಂಡಂದಿರೋ, ಪಾಲಕರೋ, ಅಥವಾ ಮೇಲ್ಜಾತಿಯ ಸಂಗಾತಿಯೋ ಒಟ್ಟಾರೆಯಾಗಿ ಪುರುಷಶಾಹಿಯೇ ಅಧಿಕಾರವನ್ನು ಚಲಾಯಿಸುತ್ತದೆ ಮತ್ತು ಅಧಿಕಾರದ ಚಲಾವಣೆಯಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಇಲ್ಲಿ ಪರಿಶಿಷ್ಟ ಮಹಿಳೆ ಸದಸ್ಯೆ, ಅಧ್ಯಕ್ಷೆ, ಉಪಾಧ್ಯಕ್ಷೆ ಹೀಗೆ ಯಾವುದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದಂತೆ ಮೇಲ್ನೋಟಕ್ಕೆ ಕಂಡುಬರುವುದಾದರೂ ಅಲ್ಲಿ ಅವರು ನಾಮಮಾತ್ರದವರಾಗಿ ಉಳಿದುಬಿಡುತ್ತಾರೆ. ಆ ಮಹಿಳೆಯರ ಬದಲಿಗೆ ಅಧಿಕಾರ ಚಲಾಯಿಸುವವರೇ ಬೇರೆಯಾಗಿರುತ್ತಾರೆ ಎಂಬುದು ಕಂಡುಬಂದಿತು.

೬. ಗ್ರಾಮ ಸಭೆಗಳಂತಹ ಸಾರ್ವಜನಿಕ ಸಂಪರ್ಕ ಸಭೆಗಳಲ್ಲಿ ಮಹಿಳೆಯರಿಗೆ ಶೇಕಡ ೩೦ರಷ್ಟು ಮೀಸಲು ಕಡ್ಡಾಯವಾಗಿದೆ. ಹೀಗಿದ್ದರೂ ಸಹ ಗ್ರಾಮ ಸಭೆಗಳ ಮಹತ್ವವನ್ನು ಅರಿಯದ ಪರಿಶಿಷ್ಟ ಪಂಗಡದ ಮಹಿಳೆಯರ ಪ್ರಮಾಣವು ಅತ್ಯಧಿಕವಾಗಿದೆ.

ಈ ರೀತಿಯ ಗ್ರಾಮಸಭೆಗಳಲ್ಲಿ ಗ್ರಾಮದ ಬಹುತೇಕ ಸದಸ್ಯರು ಉಪಸ್ಥಿತರಿರುತ್ತಾರೆ. ಅವರ ಕುಂದುಕೊರತೆಗಳ ಕುರಿತು ಕೇಳುವುದು ಮತ್ತು ಅವರ ಅಹವಾಲು ಅರ್ಜಿಗಳನ್ನು ಸಾರ್ವಜನಿಕವಾಗಿ ಸ್ವೀಕರಿಸಬೇಕಾದ ಅನಿವಾರ್ಯತೆ ಪಂಚಾಯತ್ ಸದಸ್ಯರದಾಗಿರುತ್ತದೆ. ಇಲ್ಲಿ ಸಾರ್ವಜನಿಕವಾಗಿ ತಮ್ಮನ್ನು ಇಡೀ ಸಭೆ ಪ್ರದರ್ಶನಕ್ಕೆ ಇಟ್ಟಿದೆಯೇನೋ ಎನ್ನುವಂತೆ ಮುಜುಗರ ಪಡುವ ಪರಿಶಿಷ್ಟ ಪಂಗಡದ ಮಹಿಳೆಯರು ಕೀಳರಿಮೆಯ ಕಾರಣಕ್ಕಾಗಿಯೇ ಗ್ರಾಮಸಭೆಗಳಲ್ಲಿ ಪಾಲ್ಗೊಳ್ಳಲು ಹಿಂಜರಿಯುತ್ತಾರೆ. ಹೀಗಾಗಿ ಬಹುತೇಕ ಪರಿಶಿಷ್ಟ ಪಂಗಡದ ಮಹಿಳೆಯರು ಗ್ರಾಮ ಸಭೆಗೆ ಹಾಜರಾಗದೆ ಗೈರು ಹಾಜರಾಗುವುದೇ ಹೆಚ್ಚು ಎಂಬುದು ಕ್ಷೇತ್ರ ಕಾರ್ಯದ ಮೂಲಕ ಕಾಣಲಾಯಿತು.

೭. ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಮೀಸಲಾತಿ ಕಾರಣಕ್ಕಾಗಿ ಅಧಿಕಾರವನ್ನು ದಕ್ಕಿಸಿಕೊಂಡಿರುವ ಪರಿಶಿಷ್ಟ ಪಂಗಡದ ಮಹಿಳೆಯರು ಸ್ವತಂತ್ರವಾಗಿ, ನಿರ್ಭಯದಿಂದ ಅಧಿಕಾರ ಚಲಾಯಿಸಲು ಹಿಂಜರಿಯುತ್ತಾರೆ ಹಾಗೂ ಹೆದರಿ ಅಧಿಕಾರವನ್ನು

ಚಲಾಯಿಸುವ ಪ್ರಕ್ರಿಯೆಯಿಂದ ದೂರವಾಗಿಯೇ ಉಳಿದುಬಿಡುತ್ತಾರೆ. ಈ ಸಮಯದ ಸದುಪಯೋಗವನ್ನು ಮೇಲ್ಜಾತಿಯ ಪುರುಷಶಾಹಿ ತುಂಬಾ ಚಾಣಾಕ್ಷತನದಿಂದ ಪಡೆದುಕೊಳ್ಳುತ್ತದೆ.

೮. ಪಂಚಾಯತ್ ರಾಜ್ ಸಂಸ್ಥೆಗಳು ಸಂವಿಧಾನದ ವಿಧಿಗಳಿಗನುಗುಣವಾಗಿಯೇ ರಚನೆಗೊಂಡಿರುವುದು. ಆದರೆ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಅಧ್ಯಕ್ಷೆ, ಉಪಾಧ್ಯಕ್ಷೆಯಂತಹ ಉನ್ನತ ಸ್ಥಾನಗಳಲ್ಲಿದ್ದರೂ ಎಷ್ಟೋ ಸಾರ್ವಜನಿಕ ಸ್ಥಳದಲ್ಲಿ ಅವರು ಅಸಾಹಯಕರಾಗಿ ಹೊರಗೇ ಉಳಿದುಕೊಳ್ಳಬೇಕಾದ ಅನಿವಾರ್ಯತೆಯೇ ಹೆಚ್ಚು. ಎಷ್ಟೇ ಅಧಿಕಾರವನ್ನು ಹೊಂದಿದ್ದರೂ ಕೂಡ ಜಾತಿ ಅಲ್ಲಿ ಒಂದು ಅಡಚಣೆಯಾಗಿ ಬಂದು ಬಿಡುತ್ತದೆ. ಜಾತಿಯ ಕಾರಣಗಳು ಅವಳನ್ನು ಸಾರ್ವಜನಿಕ ಪ್ರವೇಶವನ್ನು ನಿರಾಕರಿಸುತ್ತದೆ. ಇಂತಹ ಮಹಿಳೆಯರ ಪ್ರಮಾಣ ಹೊಸಪೇಟೆ, ಕೂಡ್ಲಿಗಿಗಳಲ್ಲಿ ಕ್ರಮವಾಗಿ ಶೇ.೩೪.೬೪ರಷ್ಟಿದ್ದರೆ ಸಿರುಗುಪ್ಪ ಮತ್ತು ಹಗರಿಬೊಮ್ಮನಹಳ್ಳಿಯಲ್ಲಿ ಶೇ.೪೮.೬೧ರಷ್ಟಿದೆ.

೯. ಜಾತಿಯ ಕಾರಣದಿಂದಲೇ ತಮ್ಮ ಅಧಿಕಾರವನ್ನು ಮೊಟಕುಗೊಳಿಸಲಾಗುತ್ತಿದೆ ಎಂಬ ಅಂಶವನ್ನು ಪರಿಶಿಷ್ಟ ಪಂಗಡದ ಮಹಿಳೆಯರು ಒಪ್ಪುತ್ತಾರೆ. ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಜಾತಿ ಒಂದು ತಡೆಗೋಡೆಯಾಗಿದೆ ಎಂಬುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಯಿತು.

೧೦. ಜಾತಿ ತಾರತಮ್ಯ ಮತ್ತು ಲಿಂಗ ತಾರತಮ್ಯಗಳಿಂದಾಗಿ ಅಧಿಕಾರದಿಂದ ವಂಚಿತರಾಗಿರುವ, ಅಧಿಕಾರವಿದ್ದರೂ ಚಲಾಯಿಸದ ಅಸಾಹಾಯಕತೆಗೆ ದೂಡಲ್ಪಟ್ಟ ಮಹಿಳೆಯರು ತಮ್ಮ ಅಧಿಕಾರವು ನಿರುಪಯುಕ್ತವಾಗುತ್ತಿದೆ. ಮೀಸಲಾತಿ ಎಂಬುದು ಕೇವಲ ನೆಪಮಾತ್ರಕ್ಕೆ ಇದೆ, ಅಧಿಕಾರ ಚಲಾಯಿಸಲು ಅನುವು ಮಾಡಿಕೊಡದ ಮೀಸಲಾಯಿತಿಯಿಂದ ತಮಗಾದ ಲಾಭವೇನು ಎಂದು ಪ್ರಶ್ನಿಸುವ ಪರಿಶಿಷ್ಟ ಪಂಗಡದ ಮಹಿಳೆಯರು ಪ್ರಸ್ತುತ ರಾಜಕೀಯ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗದ ಮೀಸಲಾತಿಯು ಚಲಾವಣೆಯಿರದ ನಾಣ್ಯದಂತಾಗಿದೆ, ಅಂತಹ

ಮೀಸಲಾತಿಯೇ ತಮಗೆ ಬೇಡವೆಂದು ತಿಳಿಸುತ್ತಾರೆ.

೧೧. ಮಹಿಳಾ ರಾಜಕೀಯ ಸಬಲೀಕರಣದಲ್ಲಿ ಪಾಲುದಾರರಾಗಿರುವ ಈಗಾಗಲೇ ಅಧಿಕಾರದ ಗದ್ದುಗೆ ಏರಿರುವ ಪರಿಶಿಷ್ಟ ಪಂಗಡದ ಮಹಿಳೆಯರನ್ನು ಮುಂದಿನಬಾರಿ ಮತ್ತೆ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸ್ಪರ್ಧಿಸುತ್ತೀರಾ? ಎಂದು ಪ್ರಶ್ನಿಸಿದಾಗ ತುಂಬಾ ನಿರಾಶಾದಾಯಕವಾಗಿಯೇ ಅವರು ಪ್ರತಿಕ್ರಿಯಿಸಿದರು. ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಪಾಲ್ಗೊಂಡ ಇವರು ಪ್ರಸ್ತುತ ರಾಜಕೀಯದಲ್ಲಿ ತುಂಬಾ ನಿರಾಶದಾಯಕವಾದ ಮನಸ್ಸನ್ನು ಹೊಂದಿರುವುದು ವ್ಯಕ್ತವಾಗುತ್ತಿತ್ತು. ಹೀಗಾಗಿಯೇ ಪರಿಶಿಷ್ಟ ಪಂಗಡದ ಮಹಿಳೆಯರಲ್ಲಿ ಬಹುತೇಕರು ಈ ರಾಜಕೀಯ ಸಹವಾಸವೇ ಬೇಡ ಎಂಬ ಅಭಿಪ್ರಾಯವನ್ನು ಹೊರಚಲ್ಲಿದರು. ಆದರೆ ಇನ್ನೂ ಕೆಲವರು ಈ ರಾಜಕೀಯ ದೊಂಬರಾಟದಲ್ಲಿ ತಾವು ಈಗಾಗಲೇ ಸಿಲುಕಿಬಿಟ್ಟಿದ್ದೇವೆ. ಇದರಿಂದ ಪಾರಾಗುವುದೇ ಕಷ್ಟಸಾಧ್ಯದ ಕೆಲಸ. ರಾಜಕೀಯ ಪಾಲ್ಗೊಳ್ಳುವಿಕೆಯಲ್ಲಿ ಎಂಥದೇ ಅಡೆತಡೆಗಳು ಬಂದರೂ ಸರಿಯೆ, ಅನಿವಾರ್ಯವಾಗಿ ತಾವು ಮುಂದಿನ ಬಾರಿಯೂ ಅದೇ ಕ್ಷೇತ್ರದಲ್ಲಿ ಪಾಲ್ಗೊಂಡು ಯಶಕಾಣಲು ಪ್ರಯತ್ನಿಸಬೇಕು ಎಂಬ ಆಶಾಭಾವನೆ ವ್ಯಕ್ತಪಡಿಸಿದುದು ಆಶ್ಚರ್ಯವುಂಟು ಮಾಡಿತು.

ಒಟ್ಟಾರೆಯಾಗಿ ಗಮನಿಸಿದಾಗ ಪಂಚಾಯಿತಿಯಲ್ಲಿ ರಾಜಕೀಯವಾಗಿ ಅಧಿಕಾರ ಹಿಡಿದು ಕಾರ್ಯನಿರ್ವಹಿಸುವ ಪರಿಶಿಷ್ಟ ಪಂಗಡದ ಮಹಿಳೆಯರ ಅಧಿಕಾರದ ಸ್ವರೂಪವನ್ನು ಅರಿಯಬೇಕಾಗಿದೆ. ಜಾತಿಯ ಮೀಸಲಾತಿ ಕಾರಣದಿಂದಾಗಿ ಅಧಿಕಾರವನ್ನು ಪಡೆದಿರುವ ಈ ಮಹಿಳೆಯರು ಯಾವುದೋ ಪ್ರಭಾವಿ ಜಾತಿಯವರ ಇಲ್ಲವೆ ಬಂಡವಾಳಶಾಹಿ ಪುರುಷರ ಒತ್ತಡಕ್ಕೆ ಮಣಿದು ರಾಜಕೀಯ ಪ್ರವೇಶಿಸುತ್ತಾ ಬಂದಿರುವ ಪರಿಶಿಷ್ಟ ಪಂಗಡದ ಮಹಿಳೆ ಯಾವುದೇ ಕೆಲಸವನ್ನು ಸ್ವ-ಇಚ್ಛೆಯಿಂದ ಚಲಾಯಿಸಲಾರಳು. ಅವಳನ್ನು ರಾಜಕೀಯ ವ್ಯವಸ್ಥೆಗೆ ಕರೆತಂದ ಸಮೂಹವೇ ಅಂದರೆ ಬಂಡವಾಳಶಾಹಿ ಮತ್ತು ಮೇಲ್ಜಾತಿಯವರೇ ಅವಳನ್ನು ನಿರಂತರವಾಗಿ ನಿಯಂತ್ರಿಸುತ್ತಾರೆ. ಇದು ಕೇವಲ ಗ್ರಾಮ ಪಂಚಾಯ್ತಿ ಮಟ್ಟದ ರಾಜಕೀಯಕ್ಕೆ ಮಾತ್ರ ಸೀಮಿತವಾಗಿಲ್ಲ. ತಾಲೂಕು, ಜಿಲ್ಲಾ ಅಷ್ಟೇಕೆ ರಾಜ್ಯ, ರಾಷ್ಟ್ರ ಮಟ್ಟದ ರಾಜಕೀಯ ವ್ಯವಸ್ಥೆಯಲ್ಲಿಯೂ ಪರಿಶಿಷ್ಟ ಪಂಗಡ ಮತ್ತು ತಳಸಮುದಾಯದ ಮಹಿಳೆಯರನ್ನು ನಿಯಂತ್ರಿಸುತ್ತಿರುವುದು ಅದೇ ಶಕ್ತಿಗಳು ಎಂಬುದನ್ನು ಅರಿಯಬಹುದಾಗಿದೆ.

□□□

ಅಧ್ಯಾಯ ಏಳು

ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಮೇಲಿನ ಚಿತ್ತಡಗಳು

ಅಧ್ಯಾಯ ೭

ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಮೇಲಿನ ಒತ್ತಡಗಳು

ಗ್ರಾಮೀಣ ಜನರಿಗೆ ಅಧಿಕಾರವನ್ನು ನೀಡಿ ಅವರನ್ನು ಗ್ರಾಮಮಟ್ಟದಲ್ಲಿಯೇ ಅಭಿವೃದ್ಧಿಗೊಳಿಸಿ ಮುಖ್ಯವಾಹಿನಿಗೆ ತರುವ ಚಿಂತನೆ ವಿಕೇಂದ್ರಿಕರಣ ನೀತಿಯಲ್ಲಿದೆ. ಆದರೆ ವಿಕೇಂದ್ರಿಕರಣ ನೀತಿಯ ಅಡಿಯಲ್ಲಿ ಬರುವ ಪಂಚಾಯತ್‌ರಾಜ್ ವ್ಯವಸ್ಥೆಯು ಗ್ರಾಮೀಣ ಜನರಿಗೆ ಪರಿಚಯವಾದ ತರುವಾಯ ಗ್ರಾಮಗಳು ಮೇಲ್ನೋಟಕ್ಕೆ ಹೆಚ್ಚು ಕ್ರಿಯಾಶೀಲಗೊಂಡಂತೆ ಕಂಡುಬಂದರೂ ಅವುಗಳ ಆಳಕ್ಕೆ ಇಳಿದು ನೋಡಿದರೆ ಅವು ಹೆಚ್ಚು ಗೊಂದಲಗಳಿಗೆ ದಾರಿ ಮಾಡಿಕೊಟ್ಟಿವೆ ಎನಿಸುತ್ತದೆ. ಪಂಚಾಯತ್‌ರಾಜ್ ವ್ಯವಸ್ಥೆಯ ಪ್ರವೇಶದಿಂದಾಗಿ ಗ್ರಾಮೀಣ ಜನರ ಸೌಹಾರ್ಧಯುತ ಬದುಕು ನಾಶವಾಗಿದೆಯೇನೋ ಎನಿಸುತ್ತದೆ. ರಾಜಕೀಯದಿಂದಾಗಿ ಹಳ್ಳಿಗಳು ಹೆಚ್ಚು ಕಲುಷಿತಗೊಳ್ಳುತ್ತವೆ.

ರಾಜಕೀಯ ಆಡಳಿತ ವಿಕೇಂದ್ರಿಕರಣದಿಂದಾಗಿ ಸಹಾಯಕವಾಗಿದೆ. ಆದರೆ ಜಾತಿನಿಷ್ಠ ಮತ್ತು ಧರ್ಮನಿಷ್ಠ ಅಂಶಗಳನ್ನು ಮೈಗೂಡಿಸಿಕೊಂಡಿರುವ ಸಾಮಾಜಿಕ ವ್ಯವಸ್ಥೆ ವಿಕೇಂದ್ರೀಕರಣ ನೀತಿಗೆ ತೀರಾ ತದ್ವಿರುದ್ಧವಾಗಿದೆ.

ಹಿಂದಿನಿಂದಲೂ ತಳಸಮುದಾಯಗಳಿಗೆ ಗ್ರಾಮಮಟ್ಟದಲ್ಲಿ ಯಾವ ರೀತಿಯ ಸ್ಥಾನಮಾನಗಳಿದ್ದವೋ ಅದೇ ಸ್ಥಾನಮಾನಗಳು ಇಂದಿಗೂ ಮುಂದುವರೆದಿವೆ. ತಳಸಮುದಾಯಗಳು ತಮಗೆ ನಿಷ್ಠವಾಗಿ ಬದುಕನ್ನು ಸಾಗಿಸಬೇಕೆಂದೇ ಇಂದಿಗೂ ಬಲಿಷ್ಠ ಜಾತಿಗಳು ಬಯಸುತ್ತವೆ.

ಕೇವಲ ಮೇಲ್ಜಾತಿಯ ಕೈಯಲ್ಲಿಯೇ ಅಧಿಕಾರದ ಗದ್ದುಗೆ ಇರಬೇಕು. ತಮಗೆ ಸಮಾನಾಂತರ ಹುದ್ದೆಗಳಲ್ಲಿ ಕೆಳಜಾತಿಗಳು ಬರಬಾರದು ಎಂದು ಪೂರ್ವಾಗ್ರಹಿತ ಮೇಲ್ಜಾತಿಗಳು ಬಯಸುತ್ತವೆ.

ಮೀಸಲಾತಿಯ ಮೂಲಕ ತಳಸಮುದಾಯಗಳಿಗೆ ಒದಗಿಸಿಕೊಡಲಾದ ಸಮಾನ ಹಕ್ಕು ಮತ್ತು ಅವಕಾಶಗಳನ್ನು ಮೇಲ್ವರ್ಗಗಳು ತಮ್ಮ ಹಿಡಿತದಲ್ಲಿರಿಸಿಕೊಂಡು ತಳಸಮುದಾಯಗಳಿಗೆ ರಾಜಕೀಯ ಹಿನ್ನೆಡೆ ಉಂಟುಮಾಡುತ್ತವೆ. ಸಂವಿಧಾನಿಕವಾಗಿ ತಳಸಮುದಾಯಗಳು ರಾಜಕೀಯ ಪ್ರವೇಶವಕಾಶ ಪಡೆದಿವೆಯೆಂಬುದು ಕೇವಲ ಹುಂಬತನದ ವಿಚಾರವೆಂದೇ ಹೇಳಬಹುದು. ರಾಜಕೀಯ ಸ್ಥಾನ ಸಿಕ್ಕ ತರುವಾಯ ತಳಸಮುದಾಯಗಳೆಲ್ಲಾ ಸಾಮಾಜಿಕವಾಗಿ ಸಬಲಗೊಂಡಿವೆಯೆಂಬುದು ಕೇವಲ ಹುಸಿ ಸತ್ಯವಾಗಿದೆ. ಹಿಂದೆ ಭಾರತದ ಉಪಪ್ರಧಾನಿಯಾಗಿದ್ದ ಜಗಜೀವನರಾಮ್‌ರಂತಹ ಧುರೀಣರು ಕೇವಲ ಒಂದು ವಿಗ್ರಹವನ್ನು ಸ್ಪರ್ಷಿಸಿದ್ದರು ಎನ್ನುವ ಕಾರಣಕ್ಕೆ ಆ ವಿಗ್ರಹವನ್ನು ಮತ್ತು ಅವರು ನಿಂತ ಸ್ಥಳವನ್ನು ಸಾರ್ವಜನಿಕವಾಗಿ ಅಭಿಷೇಕ ಮಾಡಿ ಶುದ್ಧಿಗೊಳಿಸಿದ ಪಟ್ಟಭದ್ರ ಜಾತಿ ವ್ಯವಸ್ಥೆಯನ್ನು ಹೊಂದಿದ ನಾಡಿದು.

ತಳಸಮುದಾಯಗಳಿಗೆ ಸರ್ಕಾರವು ಸಂವಿಧಾನಾತ್ಮಕ ಹಕ್ಕನ್ನು ನೀಡಿತೇ ಹೊರತು ಅದನ್ನು ಪೂರ್ಣವಾಗಿ ಸಾರ್ವತ್ರಿಕವಾಗಿ ಜಾರಿಗೆ ತರುವಲ್ಲಿ ಸೋತಿತು. ಅಧಿಕಾರ ವಿಕೇಂದ್ರೀಕರಣ ತತ್ವದಡಿ ಮೀಸಲಾತಿಯವನ್ನು ಬಳಸಿಕೊಂಡು ಅಧಿಕಾರ ಪಡೆದ ತಳಸಮುದಾಯದ ಪರಿಶಿಷ್ಟ ಪಂಗಡದ ಮಹಿಳೆ ಗ್ರಾಮ, ತಾಲೂಕು, ಜಿಲ್ಲಾ ಮಟ್ಟದಲ್ಲಿ ಮೇಲ್ವರ್ಗಗಳ ಕೈಗೆ ಸಿಕ್ಕು ಅಧಿಕಾರವಿದ್ದೂ ಅಧಿಕಾರವನ್ನು ಚಲಾಯಿಸದ ಅಸಹಾಯಕ ಸ್ಥಿತಿಗೆ ದೂಡಲ್ಪಟ್ಟಿದ್ದಾಳೆ. ಜಿಲ್ಲಾ ಪಂಚಾಯ್ತಿಯಲ್ಲಿ ಕೇವಲ ಬಂಡವಾಳಶಾಹಿಗಳು ಮತ್ತು ಟಿಕೇಟು ನೀಡಿದ ಪಕ್ಷಗಳ ವರಿಷ್ಠರಿಗೆ ತಲೆಬಾಗಿ ನಡೆಯುವ ಸ್ಥಿತಿ ಬಂದೊದಗಿದೆ.

ಮೇಲ್ಜಾತಿ ಮತ್ತು ಬಂಡವಾಳಶಾಹಿಗಳು ತಳಸಮುದಾಯಗಳ ಮೇಲೆ ತೋರುವ ಹಕ್ಕುದಾರಿಕೆ ಕೇವಲ ನಿನ್ನೆ ಮೊನ್ನೆಯದಲ್ಲ. ಇದು ತಲತಲಾಂತರದಿಂದ ರೂಢಿಯಲ್ಲಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾಯಿತರಾದ ತಳಸಮುದಾಯದ ಮಹಿಳೆಯರು ತೋರುಗಾಣಿಕೆಗೆ ಅಧಿಕಾರ ಚಲಾಯಿಸುವವರಂತೆ ವರ್ತಿಸಿದರೂ ಅದು ಕೇವಲ ಸರ್ಕಸ್ಸಿನ ಪ್ರಾಣಿಯಂತೆ ವರ್ತಿಸುತ್ತಾರೆ ಎಂಬುದನ್ನು ಮನಗಂಡವರಾಗಿದ್ದಾರೆ.

✷

ಜಿಲ್ಲಾ ಪಂಚಾಯಿತಿಗಳು ನಗರ ಕೇಂದ್ರಿತವಾಗಿರುವುದರಿಂದ ಅಲ್ಲಿ ಜಾತಿಯತೆಗೆ ಅವಕಾಶವಿಲ್ಲ ಎಂದು ಮೇಲ್ನೋಟಕ್ಕೆ ತೋರಿದರೂ ಆಂತರ್ಯದಲ್ಲಿ ಜಾತಿಯ ಸಂರಚನೆಗಳು ನಿರಂತರವಾಗಿ ಕ್ರಿಯಾಶೀಲವಾಗಿರುತ್ತವೆ.

ಜಿಲ್ಲಾ ಪಂಚಾಯತಿಯ ಮುಖ್ಯ ಹುದ್ದೆಯಲ್ಲಿದ್ದಾಗ್ಯೂ ಅವರು ಮೇಲ್ಜಾತಿಗಳ ಪ್ರಭಾವದ ಅಡಿಯಲ್ಲಿಯೇ ಅಧಿಕಾರವನ್ನು ಚಲಾಯಿಸಬೇಕಾಗಿರುತ್ತದೆ. ಯಾಕೆಂದರೆ ರಾಜಕೀಯದ ಸಮಸ್ತ ಒಡೆಯರು, ಸಂಸ್ಥಾಪಕರು ಅದರ ನಿಯಂತ್ರಕರು ಮೇಲ್ವರ್ಗದವರೇ ಆಗಿರುವುದರಿಂದ ಅವರಿಗೆ ಹೇಗೆ ಬೇಕೋ ಹಾಗೆ ತಳಸಮುದಾಯದ ಮಹಿಳೆಯನ್ನು ಬಳಸಿಕೊಳ್ಳಲಾಗುತ್ತದೆ. ಬಹುತೇಕ ಈ ಎಲ್ಲಾ ಕಾರ್ಯಗಳು ನಡೆಯುವುದು ಪಕ್ಷದ ಹೆಸರಿನಲ್ಲಾಗಿರುತ್ತದೆ. ಒಂದುವೇಳೆ ಪರಿಶಿಷ್ಟ ಪಂಗಡದಂತಹ ತಳಸಮುದಾಯದ ಮಹಿಳೆ ಈ ವ್ಯವಸ್ಥೆಗೆ ವಿರುದ್ಧವಾಗಿ ನಡೆದುಕೊಂಡರೆ ಅವಳಿಗೆ ಪಕ್ಷದಿಂದ ಉಚ್ಚಾಟನೆ ಅಥವಾ ಅಧಿಕಾರ ಹಸ್ತಾಂತರ ಮಾಡಿಕೊಳ್ಳುವ ಮೂಲಕ ಅವಳನ್ನು ಮೂಲೆಗುಂಪು ಮಾಡಲು ಮೇಲ್ಜಾತಿಗಳು ಹಿಂಜರಿಯುವುದಿಲ್ಲ ಎಂಬುದನ್ನು ಪರಿಶಿಷ್ಟ ಪಂಗಡದ ಮಹಿಳೆಯೊಬ್ಬರು ತಮ್ಮ ಅನುಭವ ಇದಾಗಿದೆ ಎಂದು ತಿಳಿಸಿದರು. ಮೇಲ್ಜಾತಿಗಳ ಹಿಡಿತದಿಂದ ಪಾರಾಗಲು ಪ್ರಯತ್ನಿಸಿದಷ್ಟೂ ಅವುಗಳ ಕದಂಬ ಬಾಹುಗಳು ತನ್ನನ್ನು ಹಿಡಿದು ಅಮುಕುತ್ತಿದ್ದ ಅನುಭವ ತನನಾಗುತ್ತಿತ್ತು ಎಂದು ಅವರು ಅಭಿಪ್ರಾಯಪಟ್ಟರು

ಪರಿಶಿಷ್ಟ ಪಂಗಡ ಮಹಿಳೆ ಮೇಲ್ಜಾತಿಗಳ ವಿರುದ್ಧ ತಿರುಗಿಬಿದ್ದಾಗ ಅವಳ ವಿರುದ್ಧ ಮತ್ತೊಬ್ಬ ಪರಿಶಿಷ್ಟ ಪಂಗಡದ ಮಹಿಳೆಯನ್ನು ಎತ್ತಿಕಟ್ಟುವ ತಂತ್ರವನ್ನು ಮೇಲ್ಜಾತಿಗಳು ಮಾಡುತ್ತವೆ. ಸ್ವಜಾತಿ ಜನರೇ ತಳಸಮುದಾಯಗಳ ಸದಸ್ಯರ ವಿರೋಧಿಗಳಾಗುವ ಅಪಾಯ ತರುವಾಯ ಗೊತ್ತಾಗುತ್ತದೆ.. ಇಂತಹ ಕುತಂತ್ರಗಳ ಹಿಂದೆ ಮೇಲ್ಜಾತಿಗಳ ಕೈವಾಡವಿರುವುದು ತರುವಾಯ ತಿಳಿಯುತ್ತದೆ. ಅಂದರೆ ಇಲ್ಲಿ ಬಂಡವಾಳಶಾಹಿ ಮತ್ತು ಮೇಲ್ಜಾತಿಗಳಿಂದ ಕೂಡಿದ ಪಕ್ಷಗಳು ಜಾತಿಯ ಹೆಸರಿನಲ್ಲಿ ತಳಸಮುದಾಯಗಳನ್ನು ನಿಯಂತ್ರಿಸುತ್ತವೆ. ಅಲ್ಲದೆ ಸ್ಥಾಪಿತ ಪ್ರಭುತ್ವಗಳು ಅವಳನ್ನು ಕೇವಲ ಜಾತಿ ಮತ್ತು ಲಿಂಗದ ಹಿನ್ನೆಲೆಯಲ್ಲಿ ತನಗೆ ಇಷ್ಟವಾದಂತೆ ಬಳಸಿಕೊಳ್ಳುತ್ತದೆ. ಅಕಸ್ಮಾತ್ ಇದರ ವಿರುದ್ಧ ತಳಸಮುದಾಯದ ಮಹಿಳೆ ದನಿ ಎತ್ತಿದರೆ ಅವಳ ಬದಲಿಗೆ ಬೇರೆ ಜನರನ್ನು ಅಧಿಕಾರಕ್ಕೆ ತರುವುದು ಮೇಲ್ಜಾತಿಗಳಿಗೆ ತುಂಬಾ ಸುಲಭದ ಕೆಲಸವಾಗಿದೆ.

೭.೧. ರಾಜ್ಯ ಹಾಗೂ ಸ್ಥಾನಿಕ ಸಂಸ್ಥೆಗಳಲ್ಲಿ ಅಧಿಕಾರ ಹಂಚಿಕೆಯ ಸಮಸ್ಯೆ

ಸ್ಥಾನಿಕ ಸರ್ಕಾರಗಳು ಅಥವಾ ಪಂಚಾಯತ್‌ರಾಜ್ ಸಂಸ್ಥೆಗಳು ಹೆಚ್ಚಿನ ಅಧಿಕಾರವನ್ನು ಪಡೆದಿದೆ. ಅವುಗಳಿಗೆ ಬೆಂಬಲವಾಗಿ ರಾಜ್ಯ ಸರ್ಕಾರ ಕಾರ್ಯ ನಿರ್ವಹಿಸುತ್ತದೆ.

ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬೆಂಗಾವಲಾಗಿ ರಾಜ್ಯ/ಕೇಂದ್ರ ಸರ್ಕಾರಗಳು ಶಾಸನಾತ್ಮಕ ಅಧಿಕಾರಗಳನ್ನು ನೀಡಿದರೂ ಅವುಗಳ ಪಾಲನೆಯಲ್ಲಿ ಎಲ್ಲಿಯವರೆಗೆ ಪಾರದರ್ಶಕತೆ ಬರುವುದಿಲ್ಲವೋ ಅಲ್ಲಿಯವರೆಗೆ ತಳಸಮುದಾಯಗಳು ಅದರಲ್ಲೂ ತಳಸಮುದಾಯದ ಮಹಿಳೆಯರು ಯಾವ ರಕ್ಷಣೆಯೂ ಇಲ್ಲದೆ ಯಥಾಸ್ಥಿತಿಯಲ್ಲಿ ಬದುಕಬೇಕಾದ ಪರಿಸರ ನಿರ್ಮಾಣವಾಗುತ್ತದೆ. ಅವಿದ್ಯಾವಂತ ತಳಸಮುದಾಯದ ಮಹಿಳೆಯ ಅಧಿಕಾರವು ಎಷ್ಟೋ ಬಾರಿ ಸರ್ಕಾರಿ ಅಧಿಕಾರಿಗಳು / ಕಾರ್ಯದರ್ಶಿಗಳಿಗೆ ವರವಾಗಿ ಪರಿಣಮಿಸಿರಬಹುದು. ಏಕೆಂದರೆ ಅವಳ ಅನಕ್ಷರತೆ ಮತ್ತು ಅವಳಿಗಿರುವ ಅಧಿಕಾರದ ತಿಳುವಳಿಕೆಯ ಕೊರತೆಯನ್ನು ಅಸ್ತ್ರವಾಗಿಸಿಕೊಂಡು ಅವಳನ್ನು ತಮ್ಮ ಅಡಿಯಾಳಾಗಿಸಿಕೊಂಡು ತಮ್ಮ ಸ್ವಾರ್ಥದ ಬೇಳೆ ಬೇಯಿಸಿಕೊಂಡವರೂ ಉಂಟು.

ತಳಸಮುದಾಯದ ಮಹಿಳೆಗೆ ಅಧಿಕಾರದಲ್ಲಿ ಸಹಾಯ ಮಾಡುವ ನೆಪದಲ್ಲಿ ಅವಳ ಅಧಿಕಾರವನ್ನು ತಾವೇ ದುರುಪಯೋಗಿಸಿಕೊಳ್ಳುವ ಅಧಿಕಾರಿಗಳೂ ಉಂಟು. ಮೂಲತಃ ತಾನು ಕೆಳಜಾತಿಯವಳು ಎಂಬ ಕೀಳರಿಮೆಯನ್ನು ಹೊಂದಿದ ಅವಿದ್ಯಾವಂತ ಮಹಿಳೆಗೆ ತನ್ನ ಅಧಿಕಾರ ಯಾವ ಬಗೆಯದು, ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದೇ ಗೊತ್ತಿರುವುದಿಲ್ಲ. ಹಾಗೇ ತಮ್ಮ ಸಂಸ್ಥೆಗೆ ಬರುವ ಅನುದಾನಗಳು ಯಾವ ಬಗೆಯವು, ಅನುದಾನಗಳ ಸ್ವರೂಪ ಹೇಗಿರುತ್ತದೆ ಎಂಬುದನ್ನು ಅರಿಯದ ಆ ಮಹಿಳೆಗೆ ಅವಳ ಮುಗ್ಧತೆಯ ಕಾರಣದಿಂದಲೇ ಅಧಿಕಾರಗಳು ಅವಳನ್ನು ಅಡ್ಡದಾರಿಗೆ ಎಳೆದು ಅವಳ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ.

೭.೨. ಪರಿಶಿಷ್ಟ ಪಂಗಡದ ಮಹಿಳೆಯ ಪರಾಧೀನತೆ ಮತ್ತು ಅವಳ ಅಧಿಕಾರ ಚಲಾವಣೆಯಲ್ಲಿ ಗಂಡಿನ ಪಾತ್ರ

ಮಹಿಳಾ ಅಧ್ಯಯನದಲ್ಲಿ ಪರಾಧೀನತೆಯ ಪರಿಕಲ್ಪನೆಯನ್ನು ತುಂಬಾ ಯೋಜನಾಬದ್ಧವಾಗಿ ಬಳಸಲಾಗುತ್ತದೆ. ಎಲ್ಲಾ ವಿಷಯಗಳಲ್ಲೂ ಮಹಿಳೆಯರು ಪುರುಷನನ್ನೇ ಅವಲಂಬಿಸಿ ಬದುಕಬೇಕೆಂಬ ಪರಿಪಾಠ ಲಿಂಗ ನಿರಪೇಕ್ಷೆಯಿಂದ ಕೂಡಿರುವಂಥದಲ್ಲ. ಆದ್ದರಿಂದಲೇ ಇದನ್ನು ವಿಶಾಲಾರ್ಥದಲ್ಲಿ

ಪರಿಭಾವಿಸಿಕೊಳ್ಳುವ ಅಗತ್ಯವಿದೆ. (ರಾಮು.ಎಸ್.ಕಲಾಲ್: ೨೦೦೯:೧೮೪) ಮಹಿಳೆಯರ ಪರಾಧೀನತೆ, ಪುರುಷ ಪ್ರಧಾನ ಕುಟುಂಬ ವ್ಯವಸ್ಥೆ, ಪುರುಷ ಪ್ರಧಾನ ಸಮಾಜ ವ್ಯವಸ್ಥೆ, ಆರ್ಥಿಕ ಸ್ಥಿತಿಗಳ ನೇರ ಪರಿಣಾಮಗಳು ಮಹಿಳೆಯ ಮೇಲಾಗುತ್ತವೆ. ಮಹಿಳಾ ಪರಾಧೀನತೆ ಎಂಬುದು ಸರ್ವಕಾಲದಲ್ಲೂ ಸರ್ವವ್ಯಾಪಿಯಾಗಿ ತನ್ನ ಅಸ್ತಿತ್ವವನ್ನೂ ಉಳಿಸಿಕೊಂಡಿದೆ ಎಂಬುದು ಸ್ತ್ರೀವಾದಿಗಳ ನಿಲುವಾಗಿದೆ. ಜೆ.ಎಸ್.ಮಿಲ್‌ರವರು ಎರಡು ಲಿಂಗಗಳ ನಡುವಿನ ಸಂಬಂಧದಲ್ಲಿ ಒಂದು ಲಿಂಗದವರು ಮತ್ತೊಂದು ಲಿಂಗದ ಜನರಿಗೆ ಶಾಸನಾತ್ಮಕವಾಗಿ ಪರಾಧೀನವಾಗುವುದು ಸ್ವಯಂ ತಪ್ಪು ಅದು ಮಾನವ ಪ್ರಗತಿಗೆ ಕಂಟಕವಾಗಿದೆ. ಆದ್ದರಿಂದ ಅದನ್ನು ಪರಿಪೂರ್ಣವಾಗಿ ಸಮಾನತೆಯ ಸೂತ್ರದ ಮೂಲಕ ಸ್ಥಳಾಂತರಿಸಬೇಕು, ಅದು ಯಾವುದೇ ವಿಶೇಷ ಹಕ್ಕನ್ನು ಪ್ರತಿಷ್ಠಾಪಿಸಬಾರದು, ಮತ್ತು ಇನ್ನೊಂದೆಡೆ ಅಸಮಾರ್ಥ್ಯವನ್ನು ಹೊಂದಬಾರದು (ಉದ್ಧೃತ: ಹೆಗಡೆ: ೨೦೦೮:೨೬) ಎಂದು ತಿಳಿಸುತ್ತಾರೆ.

ಭಾರತದ ಪಿತೃಪ್ರಧಾನ ವ್ಯವಸ್ಥೆಯು ಮನೆಯೊಳಗಿನ ಹಾಗೂ ಮನೆಯ ಹೊರಗಿನ ಕೆಲಸಗಳನ್ನು ಲಿಂಗಾಧಾರದ ಮೇಲೆ ವಿಭಜಿಸಲಾಗಿದೆ. ಈ ಬಗೆಯ ಸಿದ್ಧ ಮಾದರಿಯ ಪ್ರತಿಮೆಗಳನ್ನು ಸೃಷ್ಟಿಸಿ ವ್ಯವಸ್ಥಿತವಾಗಿ ಒಬ್ಬರ ಕಾರ್ಯದಲ್ಲಿ ಮತ್ತೊಬ್ಬರು ಪ್ರವೇಶಮಾಡದಂತೆ ತಡೆಯಲಾಯಿತು. ಮಹಿಳೆ ಮನೆಯ ಒಳಗಿನ ಕಾರ್ಯದ ಜೊತೆಗೆ ಹೊರಗಿನ ಕಾರ್ಯದಲ್ಲಿ ಅಕಸ್ಮಾತ್ ತೊಡಗಿದರೂ ಅದಕ್ಕೆ ಅಂತಹ ಮಹತ್ವವನ್ನು ನೀಡುವುದಿಲ್ಲ. ಏಕೆಂದರೆ ಸಮಾಜವನ್ನು ಮುನ್ನಡೆಸುವ ಗಂಭೀರವಾದ ಕಾರ್ಯಚಟುವಟಿಕೆಗಳು ಇಂದಿಗೂ ಪುರುಷನಿಗೆ ಮೀಸಲಾಗಿವೆ. (ರಾಮು ಸುಂದರಪ್ಪ ಕಲಾಲ್:೨೦೦೯:೧೮೫) ಈ ನೆಲೆಯೊಳಗೆ ತಳಸಮುದಾಯದ ಮಹಿಳೆಗೆ ಅಧಿಕಾರ ನಿರ್ವಹಣೆಯಲ್ಲಿ ಅವಳ ಗಂಡ ಹಾಗೂ ಇತರ ಪುರುಷರ ಕೈವಾಡಗಳ ಬಗ್ಗೆ ಅರಿಯಬೇಕಾದ ಅಗತ್ಯವಿದೆ. ಒಂದು ಸಂಸ್ಥೆ ಅಥವಾ ರಾಜಕೀಯ ಉನ್ನತ ಸ್ಥಾನದಲ್ಲಿದ್ದಾಗಲೂ ಮಹಿಳೆಯು ಗಂಡ ಅಥವಾ ಅವನ ಪ್ರತಿನಿಧಿ ಅಥವಾ ಪುರುಷ ಮುಖಂಡನ ಒಪ್ಪಿಗೆಯ ಆಧಾರದಲ್ಲಿಯೇ ಅವಳು ಮುನ್ನಡೆಯಬೇಕು. ಕೂಡ್ಲಿಗಿ ತಾಲೂಕು ಪಂಚಾಯಿತಿ ಅಧ್ಯಕ್ಷರನ್ನು ಸಂದರ್ಶಿಸುವಾಗ ಪ್ರತಿಯೊಂದು ಪ್ರಶ್ನೆಗೂ ಉತ್ತರ ನೀಡುವಾಗ ಆ ಮಹಿಳೆ ಗಂಡನ ಮುಖವನ್ನು ನೋಡುತ್ತಿದ್ದಳು. ಅಲ್ಲಿಯೂ ಸಹ ಆ ಮಹಿಳೆ ನೀಡಿದ ಉತ್ತರಕ್ಕಿಂತ ಆಕೆಯ ಗಂಡ ನೀಡಿದ ಉತ್ತರಗಳೇ ಅಧಿಕವಾಗಿದ್ದವು. ಅಷ್ಟೊಂದು

ಪರಾಧೀನತೆಯ ಸ್ಥಿತಿ ಅವಳಲ್ಲಿತ್ತು. ಇನ್ನು ಕೆಲವು ಸದಸ್ಯರಂತೂ ತಮ್ಮ ಮನೆಯ ಪುರುಷ ಬರುವವರೆಗೂ ಯಾವುದೇ ಉತ್ತರ ನೀಡಲು ನಿರಾಕರಿಸಿದರು. ಅಂದರೆ ಅವಳ ಪ್ರತಿಯೊಂದು ರಾಜಕೀಯ ಚಟುವಟಿಕೆಯೂ ಒಬ್ಬ ಪುರುಷರ ಅಧೀನದಲ್ಲಿಯೇ ನಡೆಯುತ್ತದೆ ಎಂಬುದು ಈ ಮೂಲಕ ಗೋಚರಿಸಿತು. ಪುರುಷನ ಹೊರತುಪಡಿಸಿ ತಮ್ಮಿಂದ ಮನೆಯ ಹೊರ ಚಟುವಟಿಕೆಗಳಾದ ರಾಜಕೀಯ ಮಾಡುವುದು ಕಷ್ಟದ ಕೆಲಸವೆಂದು ಮಹಿಳೆ ಒಪ್ಪಿಕೊಳ್ಳುತ್ತಾಳೆ. ಪಂಚಾಯಿತಿಯಲ್ಲಿ ಉನ್ನತ ಹುದ್ದೆ ಹೊಂದಿದ್ದರೂ ಅವಳು ಸ್ವತಂತ್ರವಾಗಿ ಮತ್ತು ನಿರ್ಭಯವಾಗಿ ಸ್ವಹಿತಾಸಕ್ತಿಗೆ ಪೂರಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಪಂಚಾಯಿತಿಯಲ್ಲಿ ಅವಳು ಎಷ್ಟೇ ಉನ್ನತ ಸ್ಥಾನ ಪಡೆದಿದ್ದರೂ ಅದನ್ನು ಚಲಾಯಿಸುವಲ್ಲಿ ಎಡವುತ್ತಾಳೆ ಮತ್ತು ಅದಕ್ಕೆ ಆಸರೆಯಾಗಿ ಪುರುಷರನ್ನೇ ಅವಲಂಬಿಸಿದ್ದಾಳೆ.

೭.೩. ರಾಜಕೀಯ ಪಕ್ಷಗಳ ನಿಯಂತ್ರಣಗಳು

ಬಹುದಿನಗಳಿಂದ ಅಧಿಕಾರವನ್ನು ತಮ್ಮಲ್ಲಿಯೇ ಉಳಿಸಿಕೊಳ್ಳುವ ಹಂಬಲದಿಂದ ರಾಜಕಾರಣದಲ್ಲಿ ಸಕ್ರಿಯವಾಗಿ ಇರುವ ಹಿರಿಯ ರಾಜಕಾರಣಿಗಳು ಹೊಸದಾಗಿ ರಾಜಕೀಯದಲ್ಲಿ ಸ್ಥಾನ ಪಡೆಯುವ ಕಿರಿಯರಿಗೆ ತಡೆಗೋಡೆಯಂತೆ ಕಾರ್ಯನಿರ್ವಹಿಸುತ್ತಾರೆ. ಪ್ರತಿಯೊಂದು ರಾಜಕೀಯ ಆಡಳಿತದ ಕಾರ್ಯಗಳು ತಮ್ಮ ಕಣ್ಣಳತೆಯಲ್ಲಿಯೇ ನಡೆಯಬೇಕು ಮತ್ತು ಪ್ರತಿಯೊಂದು ಚಟುವಟಿಕೆಗಳಿಗೆ ಕಿರಿಯರು ತಮ್ಮೊಪ್ಪಿಗೆಯನ್ನು ಪಡೆಯಬೇಕೆಂದು ಆಪೇಕ್ಷಿಸುತ್ತಾರೆ. ಇನ್ನು ತಳಸಮುದಾಯಗಳಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಹಿಳಾ ರಾಜಕಾರಣಿಗಳ ವಿಚಾರದಲ್ಲಂತೂ ಹಿರಿಯ ರಾಜಕಾರಣಿಗಳು ತುಂಬಾ ದರ್ಪದಿಂದಲೇ ವ್ಯವಹರಿಸುತ್ತಾರೆ. ಕಿರಿಯ ತಳಸಮುದಾಯದ ಮಹಿಳೆಗೆ ರಾಜಕೀಯ ಸ್ಥಾನ ದೊರೆತಿರುವುದಕ್ಕೆ ತಮ್ಮ ಕೃಪೆಯೇ ಕಾರಣ ಎಂಬ ಅಹಂಕಾರ ಹಿರಿಯ ರಾಜಕಾರಣಿಗಳದು. ತಳಸಮುದಾಯದ ಮಹಿಳೆಯನ್ನು ಎಲ್ಲಾ ಬಗೆಯ ಅಧಿಕಾರ ಹಂತದಲ್ಲಿಯೂ ತುಳಿಯುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ರಾಜಕೀಯವಾಗಿ ಅಧಿಕಾರದಲ್ಲಿರುವ ತಳ ಸಮುದಾಯದ ಮಹಿಳೆಯನ್ನು ಸ್ವೇಚ್ಛೆಯಾಗಿ ಆಡಳಿತ ನಡೆಸಲು ಬಿಟ್ಟರೆ ತಮ್ಮನ್ನೆಲ್ಲಾ ಅವಳು ನಿರ್ಲಕ್ಷಿಸಿಬಿಡುತ್ತಾಳೋ ಎಂಬ ಆತಂಕ ಹಿರಿಯ ರಾಜಕಾರಣಿಗಳದಾಗಿದೆ.

ಹೀಗಾಗಿ ಹಿರಿಯ ರಾಜಕಾರಣಿಗಳು ಪಕ್ಷದ ಹೆಸರಿನಲ್ಲಿ ತಳಸಮುದಾಯದ ಮಹಿಳೆಯರನ್ನು ನಿಯಂತ್ರಿಸುವ ಕಾರ್ಯಗಳನ್ನು ಮಾಡುತ್ತಾರೆ. ಅಕಸ್ಮಾತ್ ತಳಸಮುದಾಯದ ಮಹಿಳೆ ಹಿರಿಯ

ರಾಜಕಾರಣಿಗಳ ಪ್ರವೇಶವನ್ನು ನಿರಾಕರಿಸಿದರೆ ಅವಳ ಅಧಿಕಾರ ತೊಲಗುವಂತೆ ಕುತಂತ್ರ ಮಾಡುವುದು, ಇಲ್ಲವೆ ಪಕ್ಷದಿಂದ ಉಚ್ಚಾಟಿಸುವ ಮೂಲಕ ಅವಳ ರಾಜಕೀಯ ಭವಿಷ್ಯವನ್ನು ಚಿವುಟಿ ಹಾಕುವುದಕ್ಕೂ ಅವರು ಹಿಂಜರಿಯರು. ಪಕ್ಷದ ತತ್ವ ಸಿದ್ಧಾಂತಗಳ ಹೆಸರಿನಲ್ಲಿ ತಳಸಮುದಾಯದ ಮಹಿಳೆಯರನ್ನು ಶೋಷಣೆ ಮಾಡಿ ಅವರ ಅಧಿಕಾರದ ಲಾಭವನ್ನು ಹಿರಿಯ ರಾಜಕಾರಣಿಗಳು ಪಡೆದ ಉದಾಹರಣೆಗಳಿಗೂ ಕಂಡುಬರುತ್ತವೆ.

೭.೪. ಅಧಿಕಾರಶಾಹಿಯ ಪ್ರಭುತ್ವ

ಪ್ರಜಾಪ್ರಭುತ್ವವಾದಿ ರಾಷ್ಟ್ರವೆಂದು ಕರೆಸಿಕೊಳ್ಳುತ್ತಿರುವ ಭಾರತದ ಆಡಳಿತದ ನಿಯಂತ್ರಕಗಳು ಎಂದರೆ ಸಂವಿಧಾನದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳಲ್ಲ, ಅವುಗಳ ಅಡಿಯಲ್ಲಿ ಸೇವೆಸಲ್ಲಿಸುತ್ತಿರುವ ನೌಕರರು ಎಂದು ಹೇಳಿದರೆ ತಪ್ಪಾಗಲಾರರು. ಯಾರೇ ಒಬ್ಬ ಸರ್ಕಾರಿ ಅಧಿಕಾರಿಯನ್ನು ಹೋಗಿ ಕೇಳಿದರೆ ಅವರು ನೀಡುವ ಉತ್ತರ ಈ ರೀತಿ ಇರುತ್ತದೆ 'ರಾಜಕಾರಣಿಗಳೇನ್ರಿ ಐದು ವರ್ಷದೋರು, ನಾವು ಅರವತ್ತು ವರ್ಷ ದೇಶ ಆಳ್ತೀವಿ' ಎಂಬಂತಹ ಠೇಂಕಾರದ ಮಾತುಗಳೇ ಬಹುತೇಕ ನೌಕರಶಾಹಿ ಅಧಿಕಾರಗಳಿಂದ ಕೇಳಿ ಬರುತ್ತದೆ.

ಪ್ರಾಯಶಃ ಇದಕ್ಕೆ ಮುಖ್ಯ ಕಾರಣ ಸ್ವಾರ್ಥಪರ ಚಿಂತನೆ, ಆಲೋಚನಾ ಶಕ್ತಿ ಕಡಿಮೆ ಇರುವ ಬಹುತೇಕ ರಾಜಕಾರಣಿಗಳು ತಮ್ಮ ಕೆಳಗೆ ಕಾರ್ಯನಿರ್ವಹಿಸುವ ಅಧಿಕಾರಗಳ ಮಾರ್ಗದರ್ಶದಲ್ಲಿಯೇ ಆಡಳಿತ ನಡೆಸುವುದೆ ಇದಕ್ಕೆ ಕಾರಣವಾಗಿದೆ. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವ ವಿಕೇಂದ್ರೀಕರಣವಾಗಿದೆಯೇ ಹೊರತು ಆಡಳಿತದ ವಿಕೇಂದ್ರೀಕರಣ ಸಾಧ್ಯವಾಗಿಲ್ಲ.

ಕೆಳಹಂತದ ಅಧಿಕಾರ ಸ್ಥಾನದಲ್ಲಿರುವ ಪಂಚಾಯತಿಗಳಲ್ಲಿ ಚುನಾಯಿತ ಪ್ರತಿನಿಧಿಗಳ ಅಧಿಕಾರಕ್ಕಿಂತಲೂ ನೌಕರಶಾಹಿ ಆಳ್ವಿಕೆಯೇ ಅಧಿಕವಾಗಿದೆ ಎಂದರೆ ತಪ್ಪಾಗಲಾರರು. ಅಲ್ಲದೆ ನೌಕರಶಾಹಿ ಎಂಬುದು ಒತ್ತಡದ ಗುಂಪಾಗಿ ಕಾರ್ಯನಿರ್ವಹಿಸುತ್ತದೆ. ಪಂಚಾಯಿತಿಗೆ ಬರುವ ರಾಜಕಾರಣಿಗಳಿಗೆ ಪಂಚಾಯಿತಿ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಯಾವುದೇ ಬಗೆಯ ಅರಿವು ಇರುವುದಿಲ್ಲವಾದುದರಿಂದ ಸಹಜವಾಗಿ ಅಲ್ಲಿಯ ಕಾರ್ಯದರ್ಶಿ, ಪಿ.ಡಿ.ಓ. ರಂಥವರನ್ನೇ ಅವಲಂಬಿಸಬೇಕಾದ ಸ್ಥಿತಿ ಇದೆ. ಆಡಳಿತದ ಉದ್ದಕ್ಕೂ ಅಧಿಕಾರಿಗಳು ಒಂದೇ ಕಡೆ ಕೇಂದ್ರೀಕೃತ

ಆಗಿರುವುದರಿಂದ ಅಲ್ಲಿಯ ಎಲ್ಲಾ ಒಳಾಡಳಿತದ ಕುರಿತು ಪರಿಪಕ್ವವಾದ ಮಾಹಿತಿಯನ್ನೇ ತಮ್ಮ ಅಧೀನ ಮಾಡಿಕೊಂಡಿರುತ್ತಾರೆ. ಅಲ್ಲದೆ ಚುನಾಯಿತ ಸದಸ್ಯರ ಮೇಲೆ ನಿಯಂತ್ರಣವನ್ನು ಸಾಧಿಸಿರುತ್ತಾರೆ. ಹೀಗಾಗಿ ಅಧಿಕಾರ ದರ್ಪ ಇವರಲ್ಲಿ ಮನೆ ಮಾಡಿಕೊಂಡಿರುತ್ತದೆ. ಇಂತಹ ಅಧಿಕಾರಿಗಳಿಗೆ ಪರೋಕ್ಷವಾಗಿ ಜಾತಿಯ ಬೆಂಬಲವೂ ಇರುತ್ತದೆ. ಹೀಗಾಗಿ ಚುನಾಯಿತರಾಗಿ ಬರುವ ತಳಸಮುದಾಯದ ಮಹಿಳೆಯರು ತಮಗೆ ಗೊತ್ತಿರದ ಕಾರ್ಯವನ್ನು ಅರಿಯುವ ನೆಪದಲ್ಲಿ ತಮಗೆ ತಿಳಿಯದಂತೆಯೇ ನೌಕರಶಾಹಿಗಳ ಹಿಡಿತಕ್ಕೆ ಸಿಲುಕಿ ಬಿಡುತ್ತಾರೆ. ಅಧಿಕಾರಿಗಳು ತಾವು ಭ್ರಷ್ಟರಾಗುವುದಲ್ಲದೆ ಅವಳಿಗೆ ಹಣದ ಆಮಿಷವೊಡ್ಡಿ ಅವಳನ್ನು ಭ್ರಷ್ಟತೆಯ ಕೂಪಕ್ಕೆ ನೂಕುತ್ತಾರೆ. ಹೀಗೆ ಒಮ್ಮೆ ತಪ್ಪಿತಸ್ಥಳಾದ ರಾಜಕಾರಣಿ ಮಹಿಳೆ ಅನಿವಾರ್ಯವಾಗಿ ತನ್ನ ಇಷ್ಟಾನಿಷ್ಟಗಳನ್ನು ಲೆಕ್ಕಿಸದೆ ನೌಕರಶಾಹಿ ಹೇಳಿದಂತೆ ಕಾರ್ಯನಿರ್ವಹಿಸಬೇಕಾದ ಅಸಹಾಯಕ ಸ್ಥಿತಿಗೆ ದೂಡಲ್ಪಡುತ್ತಾಳೆ. ಅಂತಹ ಎಲ್ಲಾ ಒತ್ತಡಗಳನ್ನು ಮೀರಲಾರದ ಸ್ಥಿತಿ ತಳಸಮುದಾಯದ ಮಹಿಳೆಯರದ್ದಾಗಿರುತ್ತದೆ.

ಮೇಲಿನ ಎಲ್ಲಾ ವಿಚಾರಗಳನ್ನು ನೋಡಿದಾಗ ಕಂಡುಬರುವ ಅಂಶಗಳು ಈ ರೀತಿ ಇವೆ.

* ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಪರಿಶಿಷ್ಟ ಪಂಗಡದ ಮಹಿಳೆಯ ವಿಷಯದಲ್ಲಿ ಅತ್ಯಧಿಕ ತಾರತಮ್ಯ, ಶೋಷಣೆಗಳು ಕಂಡುಬರುತ್ತವೆ.
* ಗ್ರಾಮೀಣ ಮಟ್ಟದಲ್ಲಿರುವಂತೆ ಅಸ್ಪೃಶ್ಯತೆಯ ಪ್ರಭಾವವು ಜಿಲ್ಲಾಮಟ್ಟದ ಜಿಲ್ಲಾ ಪಂಚಾಯಿತಿಗಳಲ್ಲಿ ಮೇಲ್ನೋಟಕ್ಕೆ ಕಾಣುವುದಿಲ್ಲ. ಆದರೆ ಜಿಲ್ಲಾ ಪಂಚಾಯಿತಿಗಳಲ್ಲೂ ಜಾತಿಯ ವಿಚಾರದಲ್ಲಿ ಅಂತಹ ವ್ಯತ್ಯಾಸಗಳೇನೂ ಕಾಣುವುದಿಲ್ಲ.
* ಚುನಾಯಿತ ಮಹಿಳಾ ಸದಸ್ಯೆ ತನ್ನ ಅಧಿಕಾರವಧಿಯ ಪ್ರಾರಂಭದಿಂದ ಕೊನೆಯವರೆಗೂ ನೌಕರಶಾಹಿಯ ಕಪಿಮುಷ್ಟಿಯಲ್ಲಿಯೇ ತನ್ನ ಅಧಿಕಾರವನ್ನು ಕೊಟ್ಟು ತನ್ನ ನಿಜವಾದ ಅಧಿಕಾರದಿಂದ ದೂರವುಳಿಯುವ ಸ್ಥಿತಿ ಉಂಟಾಗಿದೆ. ಸಹಾಯ ಮಾಡುವ ನೆಪದಲ್ಲಿ ನೌಕರಶಾಹಿ ಪರಿಶಿಷ್ಟ ಪಂಗಡದ ಮಹಿಳೆಯರನ್ನು ಶೋಷಣೆ ಮಾಡುತ್ತಾರೆ.
* ಗ್ರಾಮೀಣ ವಲಯದಲ್ಲೇ ಸ್ಥಾಪಿತ ಪಟ್ಟಭದ್ರ ವ್ಯವಸ್ಥೆ ತಳಸಮುದಾಯದ ಮಹಿಳೆಯರನ್ನು ನಿಯಂತ್ರಿಸುತ್ತವೆ. ಮೇಲ್ಜಾತಿ ಮತ್ತು ಬಂಡವಾಳಶಾಹಿಗಳು ತಳಸಮುದಾಯದ

ಮಹಿಳೆಯರನ್ನು ನಿಯಂತ್ರಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

* ಪಂಚಾಯತ್‌ರಾಜ್ ವ್ಯವಸ್ಥೆಯ ಕುರಿತು ತಳಸಮುದಾಯದ ಮಹಿಳೆಯರು ಇತ್ಯಾತ್ಮಕ ನಿಲುವು ಹೊಂದಿರುವುದು ಕಂಡು ಬರುತ್ತದೆ.

❑❑❑

ಸಮಾರೋಪ

ಸಮಾರೋಪ

ಪಂಚಾಯತ್‌ರಾಜ್ ವ್ಯವಸ್ಥೆಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಸ್ಥಿತಿ ಗತಿಗಳನ್ನು ಅರಿಯುವ ಪ್ರಯತ್ನ ಪ್ರಸ್ತುತ ಅಧ್ಯಯನದ್ದು, ರಾಜಕೀಯ ಎಂಬ ಶಕ್ತ ವಲಯದಲ್ಲಿ ಪರಿಶಿಷ್ಟ ಪಂಗಡದ ಮಹಿಳೆಗೆ ಸಿಕ್ಕಿರುವ ಸ್ಥಾನ ಮಾನಗಳು, ಅದರಿಂದ ಅವಳಿಗೆ ಆಗಿರುವ ಅನುಕೂಲ ಅನಾನುಕೂಲಗಳನ್ನು ಕುರಿತಂತೆ ಇಡೀ ಅಧ್ಯಯನದುದ್ದಕ್ಕೂ ಸಾದರ ಪಡಿಸಲಾಗಿದೆ. ಕರ್ನಾಟಕದಾದ್ಯಂತ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡುವುದು ಅಸಾಧ್ಯದ ಕೆಲಸವೆಂಬ ಕಾರಣಕ್ಕೆ ಬಳ್ಳಾರಿ ಜಿಲ್ಲೆಯನ್ನು ಅದರಲ್ಲೂ ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡದ ಮಹಿಳೆಯರನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಈ ಅಧ್ಯಯನದಲ್ಲಿ ಪರಿಶಿಷ್ಟ ಮಹಿಳೆಯನ್ನು ವಿವಿಧ ಆಯಾಮಗಳಲ್ಲಿ ನೋಡಲಾಗಿದೆ.

ಸಾಮಾಜಿಕ ಜೀವನದಲ್ಲಿ ತೀರಾ ನಿಕೃಷ್ಟ ಸ್ಥಿತಿಯಲ್ಲಿರುವ ತಳಸಮುದಾಯದ (ಪರಿಶಿಷ್ಟ ಪಂಗಡ) ಮಹಿಳೆಗೆ ನೀಡಲಾಗಿರುವ ಮೀಸಲಾತಿಯನ್ನು ಮೇಲ್ವರ್ಗಗಳು ಹೇಗೆ ಉಪಯೋಗಿಸಿ ಕೊಳ್ಳಬಲ್ಲವು ಎಂಬುದನ್ನು ತೋರಿಸುವ ಪ್ರಯತ್ನ ಈ ಅಧ್ಯಯನದಲ್ಲಿ ಮಾಡಲಾಗಿದೆ. ಅದರೊಂದಿಗೆ ಕರ್ನಾಟಕದಲ್ಲಿ ಅನುಸೂಚಿತ ಪರಿಶಿಷ್ಟ ಪಂಗಡಗಳು ಐವತ್ತಿದ್ದರೂ ಕೇವಲ ಒಂದು ಸಮುದಾಯ ಹೇಗೆ ಮೀಸಲಾತಿ ಉಪಯೋಗವನ್ನು ಪಡೆಯುತ್ತಿದೆ. ಅದರ ಹಿಂದಿರುವ ಕಾರಣಗಳು ಯಾವುವು ಇರಬಹುದು ಎಂಬುದರ ಕುರಿತು ದೃಷ್ಟಿ ಹರಿಸಲಾಗಿದೆ.

✷

ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿರುವ ಪರಿಶಿಷ್ಟ ಪಂಗಡದ ಮಹಿಳೆಗೆ ವೈಯಕ್ತಿಕವಾಗಿ ರಾಜಕೀಯದ ಅಭಿಲಾಷೆ ಇರದಿದ್ದರೂ ಅವಳನ್ನು ಪುರುಷಶಾಹಿ ರಾಜಕೀಯಕ್ಕೆ ಎಳೆದು ತಂದಿದೆ. ಅವಳ ರಾಜಕೀಯ ಸ್ಥಿತಿ ಬಹುತೇಕ ಕೀಳರಿಮೆಯಿಂದಲೇ ಕೂಡಿರುತ್ತದೆ.

ಪರಿಶಿಷ್ಟ ಪಂಗಡದ ಮಹಿಳೆಯು ಕೇವಲ ರಾಜಕೀಯ ಅಧಿಕಾರದ ಸ್ಥಾನವನ್ನು ಅಲಂಕರಿಸಿದ್ದರೂ ಕೂಡ ಅದನ್ನು ಚಲಾಯಿಸುವಲ್ಲಿ ಗೊಂದಲಕ್ಕೆ ಒಳಗಾಗಿದ್ದಾಳೆ ಮತ್ತು ಸೋತಿದ್ದಾಳೆ. ತಳಸಮುದಾಯದ ಮಹಿಳೆಯು ತನಗೆ ದೊರೆತಿರುವ ಅಧಿಕಾರವನ್ನೆಲ್ಲಾ ಸ್ಥಾಪಿತ ಪ್ರಭುತ್ವಗಳಿಗೆ ಸಲ್ಲಿಸಿ ತಾನು ಮಾತ್ರ ಅಧಿಕಾರ ಹೀನತೆಯಿಂದ ಬಳಸುವಂತಹ ಸ್ಥಿತಿ ನಿರ್ಮಾಣವಾಗಿದೆ. ಇದರಿಂದಾಗಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅವಳ ಅಧಿಕಾರದ ಸ್ವರೂಪವು ಕೇವಲ ತೋರಿಕೆಯಿಂದ ಕಂಡುಬರುತ್ತದೆ.

ತಳಸಮುದಾಯದ ಮಹಿಳೆಯರ ಸ್ಥಿತಿಯನ್ನು ಅರಿಯಲು ಎಲ್ಲಾ ತಳಸಮುದಾಯದ ಮಹಿಳೆಯರನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡುವ ಅವಶ್ಯಕತೆ ಇಲ್ಲ. ಆ ವಲಯದಲ್ಲಿರುವ ಕೆಲವು ಮಹಿಳೆಯರನ್ನು ಅಧ್ಯಯನ ಮಾಡುವುದರಿಂದ ತಳಸಮುದಾಯದ ಮಹಿಳೆಯರ ಜೀವನ ಸ್ವರೂಪದ ಸಮಗ್ರ ಮಾಹಿತಿ ದೊರೆಯಬಲ್ಲದು. ಈ ಆಶಯದಿಂದಲೇ ಬಳ್ಳಾರಿ ಜಿಲ್ಲೆಯ ಪಂಚಾಯತ್‌ರಾಜ್ ವ್ಯವಸ್ಥೆಯ ಎಲ್ಲಾ ಸಂಸ್ಥೆಗಳನ್ನು ಅಧ್ಯಯನಕ್ಕೆ ಒಳಪಡಿಸದೆ ಕೇವಲ ಕೆಲವೇ ಕೆಲವು ಸಂಸ್ಥೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. (ಹದಿನಾರು ಗ್ರಾಮ ಪಂಚಾಯಿತಿ, ನಾಲ್ಕು ತಾಲೂಕು ಪಂಚಾಯಿತಿ, ಒಂದು ಜಿಲ್ಲಾ ಪಂಚಾಯಿತಿ) ಮತ್ತು ಅವುಗಳ ಪರಿಶಿಷ್ಟ ಪಂಗಡದ ಸದಸ್ಯರಿಂದ ಮಾಹಿತಿಯನ್ನು ಸಂಗ್ರಹಿಸಿ ಅದನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ಈ ವಿಶ್ಲೇಷಣೆಗೆ ಆಕರವಾಗಿ ವಿವಿಧ ಮೂಲದ ಮಾಹಿತಿಗಳನ್ನು ಸಹ ಬಳಸಿಕೊಳ್ಳಲಾಗಿದೆ.

ಒಟ್ಟಾರೆಯಾಗಿ ಈ ಅಧ್ಯಯನದಲ್ಲಿ ಪರಿಶಿಷ್ಟ ಪಂಗಡದ ಮಹಿಳೆಯರ ರಾಜಕೀಯ ಸ್ಥಿತಿಗತಿಯೊಂದಿಗೆ ಅವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಅರಿಯಲು ಸಾಧ್ಯವಾಗಿದೆ.

ಸ್ವಾತಂತ್ರ್ಯಾನಂತರ ಭಾರತದಲ್ಲಿ ಕಂಡುಬಂದ ಉದಾರೀಕರಣ, ನಗರೀಕರಣ, ಜಾಗತೀಕರಣದಂತಹ ಚಿಂತನೆಗಳಿಂದ ಭಾರತೀಯರ ಸಾಮಾಜಿಕ ಬದುಕಿನಲ್ಲಿ ಹಲವಾರು ಬದಲಾವಣೆಗಳಾಗಿವೆ ಯೆಂಬುದೇನೋ ಸರಿ, ಆದರೆ ಪರಿಶಿಷ್ಟ ಪಂಗಡಗಳನ್ನು ಇವು ಬದಲಿಸುವ ಬದಲಾಗಿ ಅವುಗಳನ್ನು

ಮತ್ತಷ್ಟು ತಳಕ್ಕೆ ನೂಕಿವೆ. ಹೀಗಾಗಿ ಇಂದು ಭಾರತದ ಬಹುತೇಕ ಪರಿಶಿಷ್ಟ ಪಂಗಡಗಳು ಮತ್ತು ಕುಶಲಕರ್ಮಿ ಸಮುದಾಯಗಳು ಹೆಚ್ಚು ಶೋಷಣೆಗೆ ಒಳಗಾಗುತ್ತ ಸಾಗಿವೆ. ಈ ಸಮುದಾಯಗಳಲ್ಲಿ ಹುಟ್ಟಿದ ಮಹಿಳೆಯರ ಸ್ಥಿತಿಯಂತೂ ಇನ್ನೂ ಚಿಂತನಾಮಯವಾಗಿದೆ. ಮೇಲ್ನೋಟಕ್ಕೆ ಸಂವಿಧಾನಿಕವಾಗಿ ತಳಸಮುದಾಯಗಳಿಗೆ ಮೀಸಲಾತಿಯನ್ನು ನೀಡಲಾಗಿದೆಯಾದರೂ ಅದು ಕೇವಲ ತೋರುಗಾಣಿಕೆಯ ಮೀಸಲಾತಿಯಂತೆ ತೋರುತ್ತದೆ. ಮೀಸಲಾತಿ ಪಡೆದ ಪರಿಶಿಷ್ಟ ಮಹಿಳೆ ಆಳುವ ವರ್ಗಗಳಡಿಯಲ್ಲಿ ಸಿಕ್ಕು ನಲುಗುವಂತಾಗಿದೆ. ರಾಜಕಾರಣದ ಮುಖಾಂತರ ಸಬಲಳಾಗಿ ಆತ್ಮಸ್ಥೈರ್ಯವನ್ನು ಪಡೆಯಬೇಕಾಗಿದ್ದ ತಳಸಮುದಾಯದ ಮಹಿಳೆ ಶೋಷಣೆಗೆ ಒಳಗಾಗುತ್ತಿದ್ದಾಳೆ. ಬಂಡವಾಳಶಾಹಿ ಮತ್ತು ಮೇಲ್ಜಾತಿಗಳ ಹಿಡಿತದಲ್ಲಿರುವ ರಾಜಕೀಯ ವಲಯದಲ್ಲಿ ತಳಸಮುದಾಯದ ಮಹಿಳೆಗೆ ಅಸ್ತಿತ್ವ ಇಲ್ಲವಾಗಿದೆ. ಸಾಮಾಜಿಕ ವಲಯದಲ್ಲಿ ಅತ್ಯಂತ ದುರ್ಬಲಳಾದ ಪರಿಶಿಷ್ಟ ಪಂಗಡದ ಮಹಿಳೆಯು ತನ್ನ ಅಧಿಕಾರ ಮಿತಿಯಲ್ಲಿ ಯಾವುದೇ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆಯೆಂಬುದನ್ನು ಈ ಅಧ್ಯಾಯದ ಪ್ರತಿ ಅಧ್ಯಾಯಗಳ ಮೂಲಕ ಗುರುತಿಸಲಾಗಿದೆ. ಇಲ್ಲಿ ಒಟ್ಟು ಏಳು ಅಧ್ಯಾಯಗಳಲ್ಲಿ ಈ ಅಧ್ಯಯನವು ತೆರೆದುಕೊಂಡಿದೆ. ಜೊತೆಗೆ ಅವಕ್ಕೆ ಪೂರಕವಾಗಿ ಉಲ್ಲೇಖದಲ್ಲಿ ಕೋಷ್ಟಕಗಳು, ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ವಿವರಗಳು, ಪರಿಶಿಷ್ಟ ಪಂಗಡ ಆಯೋಗದ ವರದಿ ಮತ್ತು ಪರಾಮಾರ್ಶನ ಗ್ರಂಥಗಳ ವಿವರಗಳನ್ನು ನೀಡಲಾಗಿದೆ.

ಅಧ್ಯಯನದ ಫಲಿತಗಳು

ಪ್ರಸ್ತುತ ಅಧ್ಯಯನದ ವಿಶ್ಲೇಷಣೆಯಲ್ಲಿ ಕಂಡುಕೊಂಡ ಫಲಿತಗಳನ್ನು ಇಲ್ಲಿ ನೋಡಲಾಗಿದೆ.

* ಪಂಚಾಯತ್ ಸಂಸ್ಥೆಗಳ ಮೂಲಕ ಪರಿಶಿಷ್ಟ ಪಂಗಡದ ಮಹಿಳಾ ರಾಜಕೀಯ ಸಬಲೀಕರಣವಾಗುವ ಬದಲು ಅಧಿಕಾರ ನಡೆಸಲು ಸಾಧ್ಯವಾಗದ ಸ್ಥಿತಿಯನ್ನು ಅವಳು ಜಾತಿ ಹಾಗೂ ಲಿಂಗದ ಕಾರಣದಿಂದಲೇ ಅನುಭವಿಸುವಂತಾಗಿದೆ.
* ಪಂಚಾಯತ್‌ರಾಜ್ ಸಂಸ್ಥೆಗಳು ಸೈದ್ಧಾಂತಿಕವಾಗಿ, ಶಾಸನಾತ್ಮಕವಾಗಿ, ಆಡಳಿತಾತ್ಮಕವಾಗಿ ರೂಪುಗೊಂಡಿದ್ದರೂ ಕೂಡ ಅವುಗಳ ಆಚರಣೆಯ ಮಟ್ಟದಲ್ಲಿ ಇಂದಿಗೂ ಸಮಾಜದಲ್ಲಿನ ಸ್ಥಾಪಿತ ಪ್ರಭುತ್ವಗಳೇ ತಮ್ಮ ಆಳ್ವಿಕೆ ನಡೆಸುತ್ತಿವೆ. ತಳಸಮುದಾಯದ

ಮಹಿಳೆಯನ್ನು ತಮ್ಮ ಸ್ವಹಿತಾಸಕ್ತಿಗಾಗಿ ಚುನಾವಣೆಗೆ ನಿಲ್ಲಿಸುವ ಮತ್ತು ಗೆಲ್ಲಿಸುವ ಮೂಲಕ ಮೇಲ್ಜಾತಿಗಳು ರಾಜಕೀಯವಾಗಿ ತಮ್ಮ ಹಿಡಿತವನ್ನು ಮತ್ತಷ್ಟು ಬಿಗಿಗೊಳಿಸಿಕೊಳ್ಳುತ್ತಿವೆ ಮತ್ತು ತಳಸಮುದಾಯದ ಮಹಿಳೆಯರನ್ನು ರಾಜಕೀಯ ಅಧಿಕಾರದಲ್ಲಿ ಅತಂತ್ರ ಸ್ಥಿತಿಗೆ ತಳ್ಳುತ್ತಿವೆ.

* ಪರಿಶಿಷ್ಟ ಪಂಗಡದ ಮಹಿಳೆಯ ಚುನಾವಣೆಯಿಂದ ಹಿಡಿದು ಅವಳ ಆಡಳಿತ ನಿರ್ವಹಣೆವರೆಗಿನ ಪ್ರತಿಯೊಂದು ವಿಷಯಗಳನ್ನು ಪ್ರಬಲ ಜಾತಿಗಳು ಮತ್ತು ಬಂಡವಾಳಶಾಹಿಗಳೇ ನಿಯಂತ್ರಿಸುತ್ತಾರೆ.

* ತಳಸಮುದಾಯದ ಪರಿಶಿಷ್ಟ ಪಂಗಡದ ಮಹಿಳೆಯು ಮೇಲ್ವರ್ಗಗಳನ್ನು ಎದುರು ಹಾಕಿಕೊಂಡು ಸ್ವಂತ ನಿರ್ಧಾರ, ಸ್ವ-ಹಿತ ಕಾಪಾಡಿಕೊಳ್ಳುವಲ್ಲಿ ಆತಂಕ ಪಡುವ ಸ್ಥಿತಿ ಏರ್ಪಟ್ಟಿದೆ ಮತ್ತು ಬಹುತೇಕ ಆ ವಿಷಯದಲ್ಲಿ ಅವಳು ಸೋತಿದ್ದಾಳೆ.

* ಗ್ರಾಮ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳ ಸಭೆಗಳಲ್ಲಿ ಪರಿಶಿಷ್ಟ ಪಂಗಡದ ಮಹಿಳೆಯರು ಸಮರ್ಪಕವಾಗಿ ಹಾಜರಾಗದೆ ಅವಳ ಪರವಾಗಿ ಅವಳ ಪುರುಷ ಸಂಬಂಧಿಗಳು ಹಾಜರಾಗುವುದು ಕಂಡುಬರುತ್ತದೆ.

* ಗ್ರಾಮ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿಗಳಲ್ಲಿ ಪರಿಶಿಷ್ಟ ಪಂಗಡದ ಮಹಿಳೆಯರು ಸಭೆಗೆ ಹಾಜರಾದರೂ ಸಭೆಯಲ್ಲಿ ಮುಕ್ತವಾಗಿ ಭಾಗವಹಿಸಲು, ಮಾತನಾಡಲೂ ಇಂದಿಗೂ ಹಿಂದೇಟು ಹಾಕುತ್ತಿದ್ದಾರೆ.

ಪರಿಶಿಷ್ಟ ಪಂಗಡದ ಮಹಿಳೆಗೆ ಪಂಚಾಯತ್ ರಾಜ್ ವ್ಯವಸ್ಥೆಯ ಆಡಳಿತದ ಕುರಿತು ಸಂಪೂರ್ಣ ತಿಳುವಳಿಕೆ ಇರುವುದಿಲ್ಲ.

* ಪಂಚಾಯಿತಿಗಳಿಗೆ ಬರುವ ಅನುದಾನಗಳ ಕುರಿತಾದ ತಿಳುವಳಿಕೆ ಈ ಸದಸ್ಯರಿಗೆ ಇಲ್ಲವಾಗಿದೆ.

* ಸಂವಿಧಾನಬದ್ಧವಾಗಿ ಸಿಕ್ಕ ಮೀಸಲಾತಿಯಿಂದ ಯಾವ ಪ್ರಯೋಜನವೂ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ವ್ಯವಸ್ಥಿತವಾಗಿ ದೊರಕುತ್ತಿಲ್ಲ. ಅದೇನಿದ್ದರೂ ಮೇಲ್ವರ್ಗಗಳಿಗೆ ಪರೋಕ್ಷವಾಗಿ ನೀಡಲಾಗುವ ಮತ್ತೊಂದು ಅವಕಾಶ ಎಂಬಂತೆ ತೋರುತ್ತದೆ.

* ಮೇಲ್ವರ್ಗದ ಮಹಿಳೆಗೆ ಅವಳ ಗಂಡ ಅಥವಾ ಕುಟುಂಬ ವರ್ಗದ ಪುರುಷರು ನಿಯಂತ್ರಕರಾಗಿರುತ್ತಾರೆ. ಆದರೆ ತಳಸಮುದಾಯದ ಮಹಿಳೆಯರಿಗೆ ಅವರ ಕುಟುಂಬ ವರ್ಗದ ಪುರುಷರೊಂದಿಗೆ ಇತರ ಮೇಲ್ಜಾತಿ ಪುರುಷರೂ ಸಹ ನಿಯಂತ್ರಕರಾಗಿರುತ್ತಾರೆ. ಪರಿಶಿಷ್ಟ ಪಂಗಡದ ಮಹಿಳೆ ಅಧಿಕಾರದಲ್ಲಿದ್ದರೂ ಅವಳು ಮುಕ್ತವಾಗಿ ವ್ಯವಹರಿಸಲು ಸಾಧ್ಯವಾಗುತ್ತಿಲ್ಲ ಮತ್ತು ಅವಳು ಸಾರ್ವಜನಿಕ ಸ್ಥಳಗಳಿಗೆ ಮುಕ್ತವಾಗಿ ಸಂಚರಿಸಲು ಸಾಧ್ಯವಾಗದ ಸ್ಥಿತಿಯಲ್ಲಿದ್ದಾಳೆ.
* ಪರಿಶಿಷ್ಟ ಪಂಗಡದ ಮಹಿಳೆಯರಲ್ಲಿ ಕೇವಲ ಬೇಡ ನಾಯಕ ಸಮುದಾಯದ ಮಹಿಳೆಯರು ಮೀಸಲಾತಿಯಡಿಯಲ್ಲಿ ಚುನಾಯಿತರಾಗಿರುವುದು ಕಂಡುಬರುತ್ತದೆ.
* ಅಧಿಕಾರವಿದ್ದೂ ಅಧಿಕಾರಹೀನತೆ ಅನುಭವಿಸುತ್ತಿರುವ ಸಮುದಾಯಗಳಲ್ಲಿ ಮುಖ್ಯವಾಗಿ ಪರಿಶಿಷ್ಟ ಪಂಗಡದ ನಾಯಕ ಮತ್ತು ಪರಿಶಿಷ್ಟ ಜಾತಿಯ ಹೊಲೆ, ಮಾದಿಗ, ಕೊರಮ, ಮುಂತಾದ ತಳಸಮುದಾಯಗಳೇ ಪ್ರಮುಖವಾಗಿ ಕಂಡುಬರುತ್ತವೆ.
* ಪರಿಶಿಷ್ಟ ಪಂಗಡದ ಮಹಿಳೆಯು ಮೀಸಲಾತಿ ಅಡಿಯಲ್ಲಿ ಸ್ಪರ್ಧಿಸಿ ಚುನಾಯಿತರಾದ ತರುವಾಯ ತಮ್ಮ ಸಮುದಾಯಗಳ ಒಳಿತಿಗಿಂತಲೂ ಮೇಲ್ವರ್ಗಗಳ ಸಲುವಾಗಿ ಮತ್ತು ಅವುಗಳ ಒತ್ತಾಸೆಗೆ ಕಾರ್ಯ ನಿರ್ವಹಿಸಿದಂತೆ ಕಂಡುಬರುತ್ತಿದೆ.
* ಪರಿಶಿಷ್ಟ ಪಂಗಡದ ಮಹಿಳೆ ಸ್ವ ಇಚ್ಛೆಗಿಂತಲೂ ಒತ್ತಾಯಪೂರ್ವಕವಾಗಿ ರಾಜಕೀಯ ಪ್ರವೇಶವನ್ನು ಮಾಡುತ್ತಿರುವುದು ಕಂಡುಬರುತ್ತದೆ.
* ಗ್ರಾಮ ಮತ್ತು ತಾಲೂಕು ಪಂಚಾಯಿತಿಗೆ ಸಂಬಂಧಿಸಿದಂತೆ ಪರಿಶಿಷ್ಟ ಪಂಗಡದ ಮಹಿಳೆಯರನ್ನು ಅಧಿಕಾರಿ ವರ್ಗವು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವುದು ಕಂಡು ಬರುತ್ತದೆ.
* ಪಂಚಾಯತ್‌ರಾಜ್ ವ್ಯವಸ್ಥೆಯ ಅನುದಾನಗಳ ಕುರಿತ ಪೂರ್ಣ ಮಾಹಿತಿಯು ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಿಗೆ ಇರುವುದಿಲ್ಲ. ಅದರ ಕುರಿತು ಅಧಿಕಾರಿಗಳು ಅವರಿಗೆ ತಿಳಿಸುವ ಪ್ರಯತ್ನ ಮಾಡದಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ತಳಸಮುದಾಯದ ಪರಿಶಿಷ್ಟ ಪಂಗಡದ ಮಹಿಳೆಯರು ಅಧಿಕಾರವಿದ್ದೂ ಅಧಿಕಾರವಿಲ್ಲದಂತಹ ಅಸಾಹಾಯಕ ಸ್ಥಿತಿಯಲ್ಲಿರುವುದು ಗೋಚರಿಸುತ್ತದೆ.

ಚುನಾಯಿತ ಪರಿಶಿಷ್ಟ ಪಂಗಡದ ಸದಸ್ಯರನ್ನು ಸಂದರ್ಶಿಸಿ ಮಾಹಿತಿಗಳನ್ನು ಕೂಡಿಹಾಕಿ ಅವುಗಳನ್ನು ವಿಶ್ಲೇಷಣೆಗೊಳಪಡಿಸಿ ಮೇಲಿನ ಫಲಿತಗಳನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಕೇವಲ ತಳಸಮುದಾಯಕ್ಕೆ ಸೇರಿದವಳು ಎಂಬ ಕಾರ್ಣಕ್ಕೆ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರು ಅನುಭವಿಸುವ ಯಾತನೆ, ಶೋಷಣೆ, ಅಧಿಕಾರ ಹೀನತೆಯನ್ನು ಯಥಾವತ್ತಾಗಿ ಇಲ್ಲಿ ದಾಖಲಿಸಲು ಪ್ರಯತ್ನಿಸಲಾಗಿದೆ.

ಪ್ರಸ್ತುತ ಬಂಡವಾಳಶಾಹಿ ವ್ಯವಸ್ಥೆ ಮತ್ತು ಅಧಿಕಾರಶಾಹಿ ವ್ಯವಸ್ಥೆಗಳೊಂದಿಗೆ ಜಾತಿ ವ್ಯವಸ್ಥೆಯು ಸೇರಿ ಸರ್ಕಾರ ಮತ್ತು ಸಮಾಜವನ್ನು ನಿಯಂತ್ರಿಸುತ್ತಿವೆ. ಇಂತಹ ಸ್ಥಾಪಿತ ಪ್ರಭುತ್ವಗಳಡಿಯಲ್ಲಿ ಸಿಲುಕಿದ ಪರಿಶಿಷ್ಟ ಪಂಗಡದ ಮಹಿಳೆಯರ ರಾಜಕೀಯ ಅಸ್ತಿತ್ವ ಕೇವಲ ತೋರಿಕೆಯ ಅಸ್ತಿತ್ವವಾಗಿ ಕಂಡುಬರುತ್ತದೆ. ಪುರುಷಶಾಹಿ ವ್ಯವಸ್ಥೆಯ ಕಬಂಧಬಾಹು ತಳಸಮುದಾಯದ ಮಹಿಳೆಯರನ್ನು ಹೇಗೆ ಹಿಡಿತದಲ್ಲಿರಿಸಿಕೊಂಡಿದೆ ಎಂಬುದು ಸಹ ಈ ಅಧ್ಯಯನದ ಮೂಲಕ ಅರಿಯಬಹುದಾಗಿದೆ.

ಅಧ್ಯಯನದ ಮುಂದಿನ ಸಾಧ್ಯತೆಗಳು

* ಅಧ್ಯಯನದ ಮಿತಿ ಹಾಗೂ ಕಾಲಾವಧಿಯು ಮಿತಿಯಿಂದಾಗಿ ಪಂಚಾಯತ್‌ರಾಜ್ ವ್ಯವಸ್ಥೆಯು ಕುರಿತು ಅಮೂಲಾಗ್ರವಾಗಿ ನೋಡಲು ಸಾಧ್ಯವಾಗಿಲ್ಲ. ಕೇವಲ ಪರಿಶಿಷ್ಟ ಪಂಗಡದ ಮಹಿಳೆಯರನ್ನೇ ದೃಷ್ಟಿಯಲ್ಲಿರಿಸಿಕೊಂಡು ಇಲ್ಲಿ ಅಧ್ಯಯನ ಮಾಡಲಾಗಿದೆ. ಹೀಗಾಗಿ ಈ ಅಧ್ಯಯನವು ಅಷ್ಟಕ್ಕೆ ಮಾತ್ರ ಸೀಮಿತವಾಗಿಸಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ಅಮೂಲಾಗ್ರವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗುವುದು.
* ಪರಿಶಿಷ್ಟ ಪಂಗಡದ ಮಹಿಳೆಯರ ಕುರಿತು ರಾಜ್ಯಶಾಸ್ತ್ರೀಯ ನೆಲೆಗಟ್ಟಿನ ಆಯಾಮದಲ್ಲಿ ಮಾತ್ರ ಅಧ್ಯಯನ ಮಾಡಲು ಸಾಧ್ಯವಾಗಿದೆ. ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರನ್ನು ಆರ್ಥಿಕ, ಸಾಮಾಜಿಕ, ಮನಶಾಸ್ತ್ರೀಯ, ಶೈಕ್ಷಣಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬಹುದಾಗಿದೆ.
* ರಾಜಕೀಯ ಸಹಭಾಗಿತ್ವದಲ್ಲಿ ಪರಿಶಿಷ್ಟ ಪಂಗಡದ ಮಹಿಳೆಯ ಸ್ಥಿತಿ ಕೇವಲ ಗಾಣದೆತ್ತಿನ ಸ್ಥಿತಿಯಾಗಿದೆ. ಅವಳನ್ನು ಈ ಹಿನ್ನೆಲೆಯಲ್ಲಿ ಹಾಗೂ ರಾಜಕೀಯ

ಸಹಭಾಗಿತ್ವದ ಅಂತರ್ ಸಂಬಂಧಗಳು ಕುರಿತು ಅಧ್ಯಯನ ಮಾಡಬಹುದಾಗಿದೆ.

* ಪ್ರಸ್ತುತ ಅಧ್ಯಯನ ವ್ಯಾಪ್ತಿಯು ಬಳ್ಳಾರಿ ಜಿಲ್ಲೆಗೆ ಸೀಮಿತಗೊಂಡಿದೆ. ಇಲ್ಲಿಯ ಪರಿಶಿಷ್ಟ ಪಂಗಡದ ಮಹಿಳೆಯರ ಸ್ಥಿತಿ ಗತಿಗೂ ಇನ್ನುಳಿದ ಪ್ರದೇಶಗಳ ಪರಿಶಿಷ್ಟ ಪಂಗಡದ ಮಹಿಳೆಯರ ಸ್ಥಿತಿಗತಿಗಳ ಕುರಿತು ತೌಲನಿಕವಾಗಿ ಅಧ್ಯಯನ ಮಾಡಬಹುದಾಗಿದೆ.

ಒಟ್ಟಾರೆಯಾಗಿ ಬಳ್ಳಾರಿ ಜಿಲ್ಲೆಯ ಪಂಚಾಯತ್‌ರಾಜ್ ವ್ಯವಸ್ಥೆಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಕುರಿತು ಅಧ್ಯಯನ ಮಾಡಲಾಗಿ ಕಂಡು ಬಂದ ಫಲಿತಗಳು ಮತ್ತು ಮುಂದೆ ಅಧ್ಯಯನ ನಡೆಸಲು ಇರಬಹುದಾದ ಸಾಧ್ಯತೆಗಳ ಕುರಿತು ಇಲ್ಲಿ ವಿವರಿಸಲಾಗಿದೆ. ಅಧ್ಯಯನ ಮಿತಿ ಹಾಗೂ ಕಾಲಮಿತಿಗಳಿಂದಾಗಿ ಪ್ರಸ್ತುತ ಅಧ್ಯಯನವನ್ನು ಬಳ್ಳಾರಿ ಜಿಲ್ಲೆಯ ನಾಲ್ಕು ತಾಲೂಕುಗಳಿಗೆ ಮಾತ್ರ ಸೀಮಿತಗೊಳಿಸಲಾಯಿತು ಮತ್ತು ಆ ತಾಲೂಕುಗಳಲ್ಲಿ ಪ್ರತಿಯೊಂದು ತಾಲೂಕಿಗೆ ನಾಲ್ಕು ಗ್ರಾಮ ಪಂಚಾಯಿತಿಗಳನ್ನು ಮಾತ್ರ ಗಮನಿಸಲು ಸಾಧ್ಯವಾಯಿತು. ಈ ಅಧ್ಯಯನವು ಪಂಚಾಯತ್‌ರಾಜ್ ವ್ಯವಸ್ಥೆಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಸ್ಥಿತಿಗತಿಗಳನ್ನು ಅರಿಯುವ ಒಂದು ಪ್ರಯತ್ನವಾಗಿದೆ. ಈ ಅಧ್ಯಯನವು ಮುಂದೆ ಪಂಚಾಯತ್‌ರಾಜ್ ವ್ಯವಸ್ಥೆಯ ಕುರಿತು ಅಧ್ಯಯನ ಮಾಡುವವರಿಗೆ ಒಂದು ಕೈದೀವಿಗೆಯಾದೀತೆಂದು ಭಾವಿಸಲಾಗಿದೆ.

❑❑❑

ಅನುಬಂಧಗಳು

ಅನುಬಂಧ ೦೧

ಕೋಷ್ಟಕಗಳು

೩.೧. ಜಿಲ್ಲಾ ಪಕ್ಷಿನೋಟ

ಕ್ರಸಂ ವಿವರ	ಜ/ಗಂ/ಹೆ	ಕರ್ನಾಟಕ	ಬಳ್ಳಾರಿ ಜಿಲ್ಲೆ	ಹಡಗಲಿ	ಹೆಚ್.ಬಿ.ಹಳ್ಳಿ	ಹೊಸಪೇಟೆ	ಸಿರಗುಪ್ಪ	ಬಳ್ಳಾರಿ	ಸಂಡೂರು	ಕೂಡ್ಲಿಗಿ
೧. ವಿಸ್ತೀರ್ಣ	–	೧,೯೧,೭೯೧	೮,೪೫೦	೯೪೭.೮೨	೯೭೩.೯೫	೯೦೪.೧೭	೧,೦೩೬.೧೭	೧,೬೮೮.೫೯	೧,೧೫೨.೪೨	೧,೬೧೮.೮೭
೨. ಗ್ರಾಮಗಳು	–	೨೯,೪೦೬	೫೫೪	೫೭	೫೬	೭೪	೮೪	೧೦೩	೮೯	೯೧
೩. ನಗರಗಳು	–	೨೭೦	೧೧	೧	೦	೩	೨	೧	೨	೨
೪. ಕುಟುಂಬಗಳು	–	೧,೦೨,೩೨,೧೩೩	೩,೭೩,೦೩೪	೩೧,೦೮೪	೨೮,೮೭೧	೭೦,೭೧೯	೪೨,೦೯೮	೧,೧೭,೨೩೩	೩೫,೨೧೮	೪೭,೮೧೧
೫. ಒಟ್ಟು ಜನಸಂಖ್ಯೆ	ಜನ	೫,೨೮,೫೦,೫೬೨	೨೦,೨೭,೧೪೦	೧,೬೮,೧೧೮	೧,೫೯,೮೮೬	೩,೭೪,೯೪೯	೨,೩೫,೩೪೪	೬,೨೫,೪೯೪	೧,೯೧,೧೬೬	೨,೭೨,೧೮೩
	ಗಂಡು	೨,೬೮,೯೮,೯೧೮	೧೦,೨೯,೭೧೪	೮೫,೦೫೧	೮೦,೭೭೦	೧,೮೯,೬೭೪	೧,೧೭,೭೩೧	೩,೧೯,೦೦೮	೯೮,೨೭೮	೧,೩೯,೨೦೨
	ಹೆಣ್ಣು	೨,೫೯,೫೧,೬೪೪	೯,೯೭,೪೨೬	೮೩,೦೬೭	೭೯,೧೧೬	೧,೮೫,೨೭೫	೧,೧೭,೬೧೩	೩,೦೬,೪೮೬	೯೨,೮೮೮	೧,೩೨,೯೮೧
೬. ಪಜ ಪ್ರಮಾಣ		೧೬.೨	೧೮.೫	೨೨.೪	೧೮.೭	೨೦.೨	೧೯.೩	೧೬.೨	೧೬.೮	೧೯.೨
೭ ಪಜಾ ಜನಸಂಖ್ಯೆ	ಜನ	೮೫,೬೩,೯೩೦	೩,೭೪,೨೧೮	೩೭,೬೧೮	೨೯,೯೪೧	೭೫,೭೮೦	೪೫,೫೧೧	೧೦೧,೦೫೧	೩೨,೧೦೫	೫೨,೨೧೨
	ಗಂಡು	೪೩,೩೯,೭೪೫	೧,೮೮,೫೩೬	೧೮,೯೨೬	೧೫,೦೬೮	೩೮,೦೪೩	೨೨,೬೦೫	೫೧,೧೪೧	೧೬,೨೧೩	೨೬,೫೪೦
	ಹೆಣ್ಣು	೪೨,೨೪,೧೮೫	೧,೮೫,೬೮೨	೧೮,೬೯೨	೧೪,೮೭೩	೩೭,೭೩೭	೨೨,೯೦೬	೪೯,೯೧೦	೧೫,೮೯೨	೨೫,೬೭೨

೮. ಪಪಂ ಪ್ರಮಾಣ		೬.೬	೧೮.೦	೭.೮	೧೩.೬	೧೬.೧	೧೭.೯	೧೬.೩	೨೭.೧	೨೭.೧
೯. ಪಪಂ ಜನಸಂಖ್ಯೆ	ಜನ	೩೪,೬೩,೯೮೬	೩,೬೪,೬೩೬	೧೩,೦೭೪	೨೧,೭೧೬	೬೦,೪೯೧	೪೨,೦೦೯	೧೦೧,೯೬೧	೫೧,೭೩೭	೭೩,೬೫೦
	ಗಂಡು	೧೭,೫೬,೨೩೮	೧,೮೩,೬೬೨	೬,೬೦೫	೧೦,೯೨೪	೨೯,೯೫೨	೨೦,೯೫೦	೫೧,೬೧೯	೨೬,೩೧೪	೩೭,೨೯೮
	ಹೆಣ್ಣು	೧೭,೦೭,೭೪೮	೧,೮೦,೯೭೬	೬,೪೬೯	೧೦,೭೬೯	೩೦,೫೩೯	೨೧,೦೫೯	೫೦,೩೪೨	೨೫,೪೨೩	೩೬,೩೫೨
೧೦. ಜನಸಾಂದ್ರತೆ	–	೨೭೬	೨೪೦	೧೭೭	೧೬೪	೪೧೫	೨೨೭	೩೭೦	೧೬೬	೧೬೮
೧೧.ಲಿಂಗ ಪ್ರಮಾಣ	–	೯೩೫	೯೬೯	೯೭೭	೯೮೦	೯೭೭	೯೯೯	೯೬೧	೯೪೫	೯೫೫
೧೨.ಸಾಕ್ಷರತೆ ಪ್ರಮಾಣ	ಜನ	೬೬.೬	೫೭.೪	೬೦.೩	೫೮.೧	೬೦.೯	೪೩.೬	೫೯.೭	೫೩.೩	೬೦
	ಗಂಡು	೭೬.೧	೬೯.೨	೭೨.೧	೭೦.೮	೭೧.೬	೫೬.೯	೭೦.೮	೬೫.೫	೭೨
	ಹೆಣ್ಣು	೫೬.೯	೪೫.೩	೪೮.೨	೪೫.೨	೫೦	೩೦.೩	೪೮.೨	೪೦.೪	೪೬

೩.೨. ಬಳ್ಳಾರಿ ಜಿಲ್ಲೆಯ ತಾಲೂಕುವಾರು ಭೌಗೋಳಿಕ ವಿಸ್ತೀರ್ಣದ ವಿವರ

(ಚದರ ಕಿಲೋಮೀಟರ್ ಹಾಗೂ ಶೇಕಡವಾರುಗಳಲ್ಲಿ)

	ರಾಜ್ಯ	ಜಿಲ್ಲೆ	ತಾಲೂಕುಗಳು						
	ಕರ್ನಾಟಕ	ಬಳ್ಳಾರಿ	ಹಡಗಲಿ	ಹೆಚ್.ಬಿ.ಹಳ್ಳಿ	ಹೊಸಪೇಟೆ	ಸಿರುಗುಪ್ಪ	ಬಳ್ಳಾರಿ	ಸಂಡೂರು	ಕೂಡ್ಲಿಗಿ
ಚ.ಕಿ.ಮೀ	1,91,791	8,450	94.82	973.95	904.17	1036.17	1688.59	1152.42	1618.87
ಶೇ.		4.40	11.29	11.60	10.79	12.33	20.27	13.73	19.99

೩.೨.೨. ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಪಂಗಡದ ಜನಸಂಖ್ಯೆ.

	ಒಟ್ಟು	ಬಳ್ಳಾರಿ ಜಿಲ್ಲೆ	ಕರ್ನಾಟಕ	ಬಳ್ಳಾರಿ
	ಕರ್ನಾಟಕ	ಒಟ್ಟು	ಪರಿಶಿಷ್ಟ ಪಂಗಡ	ಪರಿಶಿಷ್ಟ ಪಂಗಡ
ಒಟ್ಟು	೫೨೮೫೦೫೬೨	೨೦೨೭೧೪೦	೩೪೬೩೯೮೬	೩೬೪೬೩೮
ಗಂಡು	೨೬೮೯೮೯೧೮	೧೦೨೯೭೧೪	೧೭೫೬೨೩೮	೧೮೩೬೬೨
ಹೆಣ್ಣು	೨೫೯೫೧೬೪೪	೯೯೭೪೨೬	೧೭೦೭೭೪೮	೧೮೦೯೭೬

೩.೩. ಬಳ್ಳಾರಿ ಜಿಲ್ಲೆಯ ತಾಲೂಕುವಾರು ಭೌಗೋಳಿಕ ವಿಸ್ತೀರ್ಣದ ವಿವರ

(ಚದರ ಕಿಲೋಮೀಟರ್ ಹಾಗೂ ಶೇಕಡವಾರುಗಳಲ್ಲಿ)

	ರಾಜ್ಯ	ಜಿಲ್ಲೆ	ತಾಲೂಕುಗಳು						
	ಕರ್ನಾಟಕ	ಬಳ್ಳಾರಿ	ಹಡಗಲಿ	ಹೆಚ್.ಬಿ.ಹಳ್ಳಿ	ಹೊಸಪೇಟೆ	ಸಿರುಗುಪ್ಪ	ಬಳ್ಳಾರಿ	ಸಂಡೂರು	ಕೂಡ್ಲಿಗಿ
ಚ.ಕಿ.ಮೀ	1,91,791	8,450	94.82	973.95	904.17	1036.17	1688.59	1152.42	1618.87
ಶೇ.		4.40	11.29	11.60	10.79	12.33	20.27	13.73	19.99

೩.೬.೧. ಹೊಸಪೇಟೆ ತಾಲೂಕು ಗ್ರಾಮಪಂಚಾಯಿತಿವಾರು ಜನಸಂಖ್ಯೆ

ಕ್ರಸಂ	ವಿವರಗಳು	ಒಟ್ಟು ಜನಸಂಖ್ಯೆ			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಇತರೆ ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೦೧.	ಡಣಾಯಕನ ಕೆರೆ	೧೧೩೨	೧೧೩೨	೨೨೬೩	೩೦೭	೩೧೫	೬೨೨	೨೬೪	೨೮೧	೫೪೫	೫೬೧	೫೩೫	೧೦೯೬
೦೨.	ನಾಗಲಾಪುರ	೨೧೯೯	೨೧೨೧	೪೩೨೦	೭೯೫	೭೮೩	೧೫೭೮	೮೫೮	೮೫೨	೧೭೧೦	೫೪೬	೪೮೬	೧೦೩೨
೦೩.	ಮುದ್ದಾಪುರ	೨೪೮೫	೨೪೪೦	೪೯೨೫	೬೨೪	೬೨೧	೧೨೪೫	೧೬೬	೧೬೧	೩೨೭	೧೬೯೫	೧೬೫೮	೩೩೫೩
೦೪.	ರಾಮಸಾಗರ	೩೧೫೧	೩೦೨೧	೬೧೭೨	೭೨೪	೬೬೯	೧೩೯೩	೧೭೨	೧೪೯	೩೨೧	೨೨೫೫	೨೨೦೩	೪೪೫೮

೩.೬.೨. ಸಿರುಗುಪ್ಪ ತಾಲೂಕು ಗ್ರಾಮ ಪಂಚಾಯಿತಿ ಜನಸಂಖ್ಯೆ

ಗ್ರಾಮಗಳು	ಒಟ್ಟು ಜನಸಂಖ್ಯೆ			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಇತರೆ		
	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ
ಸಿರಿಗೇರಿ	೫೦೮೪	೫೦೩೮	೧೦೧೨೨	೮೬೩	೮೭೨	೧೭೩೫	೧೦೯೩	೧೦೮೭	೨೧೮೦	೩೧೨೮	೩೦೭೯	೬೨೦೭
ಉಪ್ಪಾರ ಹೊಸಹಳ್ಳಿ	೩೫೪೦	೩೫೧೧	೭೦೫೧	೫೮೧	೫೪೮	೧೧೨೯	೨೨೭	೨೪೨	೪೬೯	೨೭೩೨	೨೭೨೧	೫೪೫೩
ದೇಶನೂರು	೩೦೭೦	೩೧೦೬	೬೧೭೬	೯೬೮	೧೦೬೭	೨೦೩೫	೨೩೪	೨೧೫	೪೪೯	೧೮೬೮	೧೮೨೪	೩೬೯೨
ಕೊಂಚಗೇರಿ	೨೪೧೬	೨೩೨೮	೪೭೪೪	೨೧೦	೨೧೦	೪೨೦	೩೮೫	೩೭೬	೭೬೧	೧೮೨೧	೧೭೪೨	೩೫೬೩

೩.೬.೩. ಹಗರಿಬೊಮ್ಮನಹಳ್ಳಿ ತಾಲೂಕು ಗ್ರಾಮಪಂಚಾಯಿತಿವಾರು ಜನಸಂಖ್ಯೆಯ ವಿವರ

ಕ್ರಸಂ	ವಿವರಗಳು	ಒಟ್ಟು ಜನಸಂಖ್ಯೆ			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಇತರೆ ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೦೧.	ಮುತ್ತುಕೊಂಡ	೨೯೩೮	೨೮೭೩	೫೮೫೩	೧೪೧೫	೧೩೦೯	೨೭೨೪	೩೦೮	೨೯೮	೬೦೬	೧೨೫೭	೧೨೬೬	೨೫೨೩
೦೨.	ಬಾಬಾಕೊಂಡನಹಳ್ಳಿ	೩೮೦೬	೩೭೦೯	೭೫೧೫	೮೩೨	೮೪೮	೧೬೮೦	೩೬೦	೩೮೩	೭೪೩	೨೬೧೪	೨೪೭೮	೫೦೯೨
೦೩.	ತಂಬ್ರಹಳ್ಳಿ	೨೨೧೮	೨೧೫೯	೪೩೭೭	೨೪೪	೨೪೩	೪೮೭	೧೫೬	೧೫೦	೩೦೬	೧೮೧೮	೧೭೬೬	೩೫೮೪
೦೪.	ಹರಿಪಾಪಟ್ಟಣ	೩೦೫೧	೨೯೬೬	೬೦೧೭	೭೩೮	೭೦೪	೧೪೪೨	೫೯೩	೫೯೧	೧೧೮೪	೧೯೫೧	೧೮೭೯	೩೮೩೦

೩.೬.೪. ಕೂಡ್ಲಿಗಿ ತಾಲೂಕಿನ ಗ್ರಾಮ ಪಂಚಾಯಿತಿವಾರು ಜನಸಂಖ್ಯೆಯ ವಿವರ

ಗ್ರಾಮಗಳು	ಒಟ್ಟು ಜನಸಂಖ್ಯೆ			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ			ಇತರೆ		
	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ
ಉಜ್ಜನಿ	೪೨೩೩	೩೯೯೮	೮೨೩೧	೫೧೨	೫೫೨	೧೦೬೪	೫೯೮	೬೦೮	೧೨೦೬	೩೧೨೩	೨೮೩೮	೫೯೬೧
ಹಿರೇಕುಂಬಳ ಗುಂಟಿ	೧೫೨೭	೧೪೮೬	೩೦೧೩	೩೦೨	೩೨೫	೬೨೭	೩೩೭	೩೦೯	೬೪೬	೮೮೮	೮೫೨	೧೭೪೦
ಜುಂಬೋಬ ನಗಳ್ಳಿ	೩೧೯೫	೩೦೮೪	೬೨೭೯	೫೭೮	೫೩೬	೧೧೧೪	೧೬೬೧	೧೬೩೮	೩೨೯೯	೯೫೬	೯೧೦	೧೮೬೬
ಗಂಡಬೊಮ್ಮ ನಹಳ್ಳಿ	೨೯೯೮	೨೮೭೯	೫೮೭೭	೪೫೫	೪೫೮	೯೧೩	೨೦೩೦	೧೮೯೮	೩೯೨೮	೫೧೩	೫೨೩	೧೦೩೬

ಕೋಷ್ಟಕ ೫.೨.೪. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆಯ ಕೆಲಸಗಾರರ ವಿಂಗಡಣೆ- ೨೦೦೧ (ಶೇಕಡವಾರುಗಳಲ್ಲಿ)

ವಿವರ	ಒಟ್ಟು			ಗ್ರಾಮೀಣ			ನಗರ		
	ಪು	ಮ	ಒ	ಪು	ಮ	ಒ	ಪು	ಮ	ಒ
ಕೆಲಸಗಾರರು	೫೮.೩	೪೧.೭	೪೯.೪೦	೫೭.೬೦	೪೫.೩೦	೫೧.೫೦	೫೨.೬೦	೨೧.೯೦	೩೭.೬೦
ಕೆಲಸಗಾರರಲ್ಲದವರು	೪೧.೭	೫೮.೩	೫೦.೬	೪೨.೪	೫೪.೭	೪೮.೫೦	೪೭.೪	೭೮.೧	೬೨.೪
ಮುಖ್ಯಕೆಲಸಗಾರರು	೮೯.೯	೬೩.೮	೭೭.೯	೮೭.೨	೬೨.೩	೭೬.೪	೯೨.೪	೮೧.೦	೮೯.೧
ಅರೆಕಾಲಿಕ ಕೆಲಸಗಾರರು	೧೦.೧	೩೬.೨	೨೨.೧	೧೨.೮	೩೭.೭	೨೩.೬	೭.೬	೧೮.೯	೧೦.೯

೫.೨.೫. ಪರಿಶಿಷ್ಟ ಪಂಗಡದವರ ಗಾತ್ರವಾರು ಭೂ ಹಿಡುವಳಿ ಹೊಂದಿರುವವರ ಶೇಕಡವಾರು ವಿವರ

ವಿವರ	ಪರಿಶಿಷ್ಟ ಪಂಗಡ		ಇತರರು	
	ಹಿಡುವಳಿಗಳ ವಿಸ್ತೀರ್ಣ		ಹಿಡುವಳಿಗಳ ವಿಸ್ತೀರ್ಣ	
	ಸಂಖ್ಯೆ	ಲಕ್ಷ (ಹೆಕ್ಟೇರುಗಳಲ್ಲಿ)	ಸಂಖ್ಯೆ	ಲಕ್ಷ (ಹೆಕ್ಟೇರುಗಳಲ್ಲಿ)
ಸಣ್ಣ ಹಿಡುವಳಿದಾರರು	೩೦.೪	೨೫.೩	೨೬.೩	೨೧.೦
ಅರೆ-ಮಧ್ಯಮ ಹಿಡುವಳಿಗಾರರು	೧೯.೪	೨೯.೭	೧೮.೩	೨೭.೯
ಮಧ್ಯಮ ಗಾತ್ರದ ಹಿಡುವಳಿಗಾರರು	೭.೯	೨೩.೩	೮.೬	೨೮.೩
ದೊಡ್ಡ ಹಿಡುವಳಿಗಾರರು	೧.೦	೭.೭	೧.೪	೧೧.೪

ಕೋಷ್ಟಕ ೫.೨.೭.೧. ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ವಸತಿ ವಿವರ

	ಪೂರ್ವಾರ್ಜಿತ ಹಳೆಮನೆಯಲ್ಲಿ ವಾಸಿಸುವವರು	ಸ್ವಂತ ಖರ್ಚಿನಲ್ಲಿ ಹೊಸಮನೆ ನಿರ್ಮಿಸಿಕೊಂಡವರು	ಸರ್ಕಾರದ ಆಶ್ರಯ ಅಂಬೇಡ್ಕರ್ ಯೋಜನೆಯಿಂದ ಮನೆ ನಿರ್ಮಿಸಿಕೊಂಡವರು
ಗ್ರಾಮ ಪಂಚಾಯತ್	೬	೩	೧೦
ತಾಲೂಕು ಪಂಚಾಯತ್	೨	೧	೩
ಜಿಲ್ಲಾ ಪಂಚಾಯತ್	೧	೧	–

ಕೋಷ್ಟಕ ೫.೧.೭.೧.

ಪರಿಶಿಷ್ಟ ಪಂಗಡಗಳ ಶೌಚಾಲಯ ಸ್ವರೂಪದ ವಿವರ

ಮನೆಯ ಆವರಣದೊಳಗೆ	೮.೩೫
ಮನೆಯ ಆವರಣದ ಹೊರಗೆ	೯.೩೩
ಸಾರ್ವಜನಿಕ ಶೌಚಾಲಯ	೬.೭೫
ಗುಂಡಿ ಶೌಚಾಲಯ	೮.೮
ನೀರು ಪೂರೈಕೆ ಶೌಚಾಲಯ	೭.೯
ಇತರೆ ಶೌಚಾಲಯ	೩.೬
ಶೌಚಾಲಯವಿಲ್ಲದೆ ಬಯಲನ್ನು ಆಶ್ರಯಿಸಿದವರು	೭೯.೭

ಕೋಷ್ಟಕ ೫.೨.೭.೩. ಶೌಚಾಲಯವನ್ನು ಇತರ ಕಾರ್ಯಗಳಿಗಾಗಿ ಬಳಸಿಕೊಳ್ಳುವವರ ವಿವರ

ವಿವರ	ಶೌಚಾಲಯ ಹೊಂದಿದವರು			ಶೌಚಾಲಯವನ್ನು ಬಚ್ಚಲಾಗಿಸಿಕೊಂಡವರು			ಶೌಚಾಲಯವನ್ನು ಇತರ ಕಾರ್ಯಗಳಿಗೆ ಬಳಸುವವರು			ಶೌಚಾಲಯ ಸೌಲಭ್ಯ ಇಲ್ಲದವರು		
	ಗ್ರಾಪಂ	ತಾ.ಪಂ	ಜಿ.ಪಂ	ಗ್ರಾಪಂ	ತಾ.ಪಂ	ಜಿ.ಪಂ	ಗ್ರಾಪಂ	ತಾ.ಪಂ	ಜಿ.ಪಂ	ಗ್ರಾಪಂ	ತಾ.ಪಂ	ಜಿ.ಪಂ
ಹೊಸಪೇಟೆ	೨	೧	–	೧	–	–	೧	–	–	೨	–	–
ಸಿರುಗುಪ್ಪ	೨	೭	–	೧	–	–	–	–	–	೧	–	–
ಹೆಚ್.ಬಿ.ಹಳ್ಳಿ	೩	೭	–	–	–	–	–	–	–	೧		
ಕೂಡ್ಲಿಗಿ	೩	೨	೧	೧	–	–	–	–	–	೨	೧	–
ಒಟ್ಟು	೧೦	೫	೧	೩	–	–	೧	–	–	೬	೧	–

ಕೋಷ್ಟಕ ೫.೨.೭.೪. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳಿಗೆ ಕುಡಿಯುವ ನೀರಿನ ಸೌಕರ್ಯದ ವಿಧಗಳು (ಶೇಕಡವಾರುಗಳಲ್ಲಿ)

ಕೈಪಂಪು ಸಹಿತ ಕೊಳವೆ ಬಾವಿ	೭೫.೮೪
ಕಿರು ನೀರು ಯೋಜನೆ	೫೩.೪೨
ಕೊಳವೆ ನೀರ್ ಯೋಜನೆ	೫೮.೩೯
ಕೆರೆ	೧೮.೦೧
ಕೊಳ	೧.೮೬
ನದಿ	೪.೩೫
ತೆರೆದ ಬಾವಿ	೧೫.೫೩
ಇತರೆ	೪.೯೭

ಕೋಷ್ಟಕ ೫.೨.೭.೫. ಪಂಚಾಯತ್‌ರಾಜ್ ವ್ಯವಸ್ಥೆಯ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರ ಕುಟುಂಬಗಳ ಕುಡಿಯುವ ನೀರಿನ ಸೌಲಭ್ಯದ ವಿವರ

ವಿವರ	ಸಾರ್ವಜನಿಕ ಕೊಳವೆ ಬಾವಿ ಸೌಲಭ್ಯ ಹೊಂದಿದವರು			ವೈಯಕ್ತಿಕ ಕೊಳವೆ ಬಾವಿ ಸೌಲಭ್ಯ ಹೊಂದಿದವರು			ನಲ್ಲಿ ಸೌಲಭ್ಯ ಹೊಂದಿದವರು			ತೆರೆದ ಬಾವಿಯ ಸೌಲಭ್ಯ ಹೊಂದಿದವರು			ಇತರೆ ಮೂಲಗಳಿಂದ		
	ಗ್ರಾಪಂ	ತಾ.ಪಂ	ಜಿ.ಪಂ	ಗ್ರಾಪಂ	ತಾ.ಪಂ	ಜಿ.ಪಂ	ಗ್ರಾಪಂ	ತಾ.ಪಂ	ಜಿ.ಪಂ	ಗ್ರಾಪಂ	ತಾ.ಪಂ	ಜಿ.ಪಂ	ಗ್ರಾಪಂ	ತಾ.ಪಂ	ಜಿ.ಪಂ
ಹೊಸಪೇಟೆ	೨	–	–	–	–		೨	೧	–	೧	–	–	–	–	–
ಸಿರಗುಪ್ಪ	೧	–	–	–	೧	–	೨	೧	–	–	–	–	–	–	–
ಹ.ಬೊ.ಹಳ್ಳಿ	೧	–	–	–	೧	–	೧	೧	–	೧	–	–	–	–	–
ಕೂಡ್ಲಿಗಿ	೨	–	–	೧	೧	೧	೩	೨	೧	–	–	–	–	–	–
ಒಟ್ಟು	೬	–	–	೧	೩	೧	೮	೫	೧	೨	–	–	–	–	–

ಕೋಷ್ಟಕ ೫.೩. ಬಳ್ಳಾರಿ ಜಿಲ್ಲೆಯ ತಾಲೂಕುವಾರು ಜನಸಂಖ್ಯೆಯ

ಸಾಕ್ಷರರ ಲಿಂಗವಾರು ವಿವರ. ೨೦೦೧

	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಬಳ್ಳಾರಿ	೩,೧೮,೩೪೨	೩೦೭೦೮೭	೬,೨೫,೪೨೯	೧೯೬೨೩೫	೧೨೯,೬೭೫	೩,೨೫,೯೧೦
ಹಡಗಲಿ	೮೪,೯೭೫	೮೩,೦೪೫	೧,೬೮,೦೨೦	೫೨,೩೪೨	೩೪೮,೫೦	೮೭,೧೯೨
ಹಗರಿಬೊಮ್ಮನಹಳ್ಳಿ	೮೦,೭೯೩	೭೯,೧೦೯	೧,೫೯,೯೦೦	೪೮,೩೧೩	೩೦,೫೯೯	೭೮,೯೧೨
ಹೊಸಪೇಟೆ	೧,೦೯,೨೦೦.	೧,೮೪,೪೬೫	೩,೭೩,೬೬೫	೧,೧೬,೫೯೯	೮೦,೫೯೬	೧,೯೭,೧೯೫
ಕೂಡ್ಲಿಗಿ	೧,೩೯,೧೭೦	೧೩೨೭೦೨	೨,೭೧,೯೮೦	೮೫೩೬೬	೫೩,೪೯೮	೧೩೮೮೬೪
ಸಂಡೂರು	,೯೮,೨೪೪	೯೨,೯೧೫	೧,೯೧,೧೫೯	೫೩,೨೧೧	೩೨,೮.೮೧	,೮೬,೦೯೨
ಸಿರುಗುಪ್ಪ	೧,೧೭,೭೫೭	೧,೧೭,೪೨೨	೨,೩೫,೧೭೯	೫೬,೦೯೯.	೩೦,೩೩೮	೮೬,೪೩೭
ಒಟ್ಟು ಜಿಲ್ಲಾವಾರು	೧೦,೨೮,೪೮೧	೯೯೬೭೬೧	೨೦,೨೫೨೪೨	೬,೦೮,೧೬೫	೩,೯೨,೪೩೭	೧೦,೦೦,೬೦೨ (೫೮೦೪)
ಒಟ್ಟು ರಾಜ್ಯವಾರು	೨,೬೮,೫೬,೩೪೩	೨,೫೮,೭೭,೬೧೫	೫,೨೭,೩೩,	೧೭,೮೧,೭೬೮೨	೧೨೯೫೭೩೦೬	೩೦೭೭೪೯೮೮ (೬೭.೦೪)

ಕೋಷ್ಟಕ ೫.೩.೧. ಶಾಲೆಯಿಂದ ಹೊರಗುಳಿದ ೬-೧೪ ವಯೋಮಾನದ ಮಕ್ಕಳ ವಿವರ (ಶೇಕಡವಾರು)

ಶಾಲೆಯಿಂದ ಹೊರಗುಳಿದ ಮಕ್ಕಳ ಶೇಕಡವಾರು

ಕ್ರ.ಸಂ	ಪ್ರವರ್ಗ	ಗಂಡು	ಹೆಣ್ಣು	ಒಟ್ಟು
೧	ಎಲ್ಲಾ	೧.೪೬	೧.೮೨	೧.೫೪
೨	ಪರಿಶಿಷ್ಟ ಜಾತಿ	೧.೯೯	೨.೪೬	೨.೨೨
೩	ಪರಿಶಿಷ್ಟ ಪಂಗಡ	೨.೧೧	೨.೮೬	೨.೪೨
೪	ಅಲ್ಪಸಂಖ್ಯಾತ	೧.೩೦	೧.೨೪	೧.೨೬

ಕೃಪೆ: ಮಕ್ಕಳ ಜನಗಣತಿ ವರದಿ, ಸಾರ್ವಜನಿಕ ಶಿಕ್ಷಣ ಇಲಾಖೆ ೨೦೦೫.

೫.೩.೨. ಪ.ಪಂ ಮಹಿಳಾ ಸದಸ್ಯರ ಮಕ್ಕಳ ಶೈಕ್ಷಣಿಕ ಸ್ಥಿತಿ-ಗತಿಯ ವಿವರ

	ಪ್ರಾಥಮಿಕ			ಮಾಧ್ಯಮಿಕ			ಪ್ರೌಢ			ಪಿ.ಯು.ಸಿ ತತ್ಸಮಾನ			ಪದವಿ			ತಾಂತ್ರಿಕ		
	ಕ	ಇ	ಒ	ಕ	ಇ	ಒ	ಕ	ಇ	ಒ	ಕ	ಇ	ಒ	ಕ	ಇ	ಒ	ಕ	ಇ	ಒ
ಗ್ರಾ.ಪಂ ಸ.ಮಕ್ಕಳು	೧೨	೦೮	೨೦	೦೬	೦೪	೧೦	೦೭	೦೩	೧೦	೦೨	೦೧	೦೩	೦೧	–	೦೧	–	–	–
ತಾ.ಪಂ ಸ.ಮಕ್ಕಳು	–	೦೪	೦೪	೦೩	೦೩	೦೬	–	೦೨	೦೨	೦೧	–	೦೧	–	–	–	–	–	–
ಜಿ.ಪಂ ಸ.ಮಕ್ಕಳು	–	–	–	–	–	–	–	–	–	–	–	–	೦೧	–	೦೧	೦೧	–	೦೧
ಒಟ್ಟು	೧೨	೦೮	೨೪	೦೯	೦೭	೧೬	೦೭	೦೫	೧೨	೦೩	೦೧	೦೪	೦೨	–	೦೨	೦೧	–	೦೧

ಕೋಷ್ಟಕ ೫.೪. ಬಳ್ಳಾರಿ ಜಿಲ್ಲೆಯಲ್ಲಿರುವ ಕಳೆದ ಸಾಲಿನ ಗ್ರಾಮಪಂಚಾಯಿತಿಗಳು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರ ವಿವರ

ಕ್ರ.ಸಂ	ತಾಲೂಕು ಪಂಚಾಯಿತಿ ಹೆಸರು	ಗ್ರಾಮ ಪಂಚಾಯಿತಿ ಗಳ ಸಂಖ್ಯೆ	ಒಟ್ಟು ಸದಸ್ಯರ ಸಂಖ್ಯೆ	ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ		ಇತರೆ ಸದಸ್ಯರ ಸಂಖ್ಯೆ		ಖಾಲಿ ಸ್ಥಾನ ಇದ್ದರೆ ಮೀಸಲಾತಿ	ಷರಾ
				ಪುರುಷ	ಮಹಿಳೆ	ಪುರುಷ	ಮಹಿಳೆ	ಪುರುಷ	ಮಹಿಳೆ		
೧	೨	೩	೪	೫	೬	೭	೮	೯	೧೦	೧೧	೧೨
೧.	ಬಳ್ಳಾರಿ	೪೦	೭೩೬	೯೫	೬೩	೧೨೬	೯೫	೨೪೭	೧೬೦	–	–
೨.	ಹಡಗಲಿ	೨೪	೩೭೩	೫೧	೪೨	೧೪	೨೪	೧೪೪	೯೮	–	–
೩.	ಹಗರಿಬೊಮ್ಮನಹಳ್ಳಿ	೨೨	೪೧೦	೪೫	೩೪	೨೯	೨೭	೧೬೯	೧೦೬	–	–
೪.	ಹೊಸಪೇಟೆ	೨೩	೩೯೫	೫೭	೪೩	೫೧	೩೧	೧೨೯	೮೪	–	–
೫.	ಕೂಡ್ಲಿಗಿ	೩೩	೫೮೭	೬೭	೪೯	೧೦೧	೬೯	೧೭೬	೧೨೫	–	–
೬.	ಸಂಡೂರು	೨೧	೪೨೧	೪೦	೩೩	೭೪	೪೯	೧೩೫	೯೦	–	–
೭.	ಸಿರುಗುಪ್ಪ	೨೬	೪೩೩	೫೦	೩೬	೪೭	೩೮	೧೬೩	೯೦	–	–
	ಒಟ್ಟು	೧೮೯	೩೪೦೫	೪೦೫	೩೦೦	೪೪೨	೩೩೩	೧೧೬೩	೭೬೨	–	–

ಕೋಷ್ಟಕ ೫.೪.೬. ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳ ಕುರಿತು ಸದಸ್ಯರಿಗಿರುವ ತಿಳುವಳಿಕೆಗಳ ವಿವರ

ವಿವರ	ಯಾವ ಸಭೆಗಳು ಹಾಜರಾಗದವರು	ವಾರ್ಡ್ ಸಭೆಗಳಿಗೆ ಹಾಜರಾದವರು	ಗ್ರಾಮ ಸಭೆಗಳಿಗೆ ಹಾಜರಾದವರು	ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳು ಬೇರೆ ಬೇರೆ ಎಂದು ತಿಳಿದುಕೊಂಡವರು	ಗ್ರಾಮ ಸಭೆ/ವಾರ್ಡ್ ಸಭೆಗಳ ವ್ಯತ್ಯಾಸ ಅರಿಯುವವರು	ಯಾವುದೂ ಗೊತ್ತಿಲ್ಲ ಇನ್ನುವವರು
ಹೊಸಪೇಟೆ	೨	–	–	–	೨	೧
ಸಿರಗುಪ್ಪ	೧	–	–	೧	೨	–
ಹ.ಬೊ.ಹಳ್ಳಿ	೧	–	೧	–	೧	೧
ಕೂಡ್ಲಿಗಿ	೨	–	–	–	೨	೨

ಕೋಷ್ಟಕ ೫.೪.೭. ಕಾರ್ಯಕಾರಿ ಸಭೆಗೆ ಹಾಜರಾಗುವ ಕುರಿತ ವಿವರ

ವಿವರ	ಪ್ರತಿ ಕಾರ್ಯಕಾರಿ ಸಭೆಗೂ ಹಾಜರಾಗುತ್ತೇವೆ	ಕೆಲವೊಮ್ಮೆ ಮಾತ್ರ ಹೋಗುತ್ತೇವೆ	ಕಾರ್ಯಕಾರಿ ಸಭೆಗೆ ಹೋಗುತ್ತೇವೆ ಆದರೆ ಸಹಿ ಮಾಡಿ ಬಂದು ಬಿಡುತ್ತೇವೆ	ಕಾರ್ಯಕಾರಿ ಸಭೆಗೆ ಹೋಗುವುದಿಲ್ಲ ನಮ್ಮ ಮನೆಗೆ ಗಂಡಸರು ಹೋಗುತ್ತಾರೆ	ಇತರೆ
ಗ್ರಾ.ಪಂ	೩	೬	೬	೪	–
ತಾ.ಪಂ	೧	೦	೧	೦	–
ಜಿ.ಪಂ	೧	–	–	–	–

ಅನುಬಂಧ ೦೨

ಪರಾಮರ್ಶನ ಗ್ರಂಥಗಳು

೧.	ಅನಸೂಯ ಕಾಂಬಳೆ	೧೯೯೯	'ವಿಚಾರ ಸಾಹಿತ್ಯ- ಹೆಣ್ಣು' ವೈಚಾರಿಕ ಸಾಹಿತ್ಯ ಪ್ರಕಾಶನ ರಾಯಬಾಗ.
೨.	ಅಂದನೂರು ಶೋಭಾ	೧೯೮೮	'ಮಹಿಳೆಯ ಮುನ್ನಡೆ' ಮಾನಸಿ ಪ್ರಕಾಶನ ಬೆಂಗಳೂರು
೩.	ಅನಂತರಾಮರಾವ್	೨೦೦೬	'ಸುವರ್ಣ ಕರ್ನಾಟಕ ದರ್ಶನ' ವಿದ್ಯಾಪಬ್ಲಿಕೇಶನ್ ಕದ್ರಿ ಮಂಗಳೂರು.
೪.	ಅಂಜನಪ್ಪ ಕೆ	೨೦೦೭	'ಡಾ. ಅಂಬೇಡ್ಕರ್ ಮತ್ತು ಅಸ್ಪೃಶ್ಯತೆ' ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.
೫.	ಅಂಜನಪ್ಪ ಬಿ.ಹೆಚ್.	೨೦೦೭	'ದಲಿತ ಮಹಿಳಾ ಸ್ವಸಹಾಯ ಗುಂಪುಗಳು' ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.
೬.	ಆರಾಧ್ಯಬಿ.ಎಂ.ಎಂ.	೧೯೮೫	'ಪರಿಶಿಷ್ಟ' ಜನಾಂಗದ ಏಳಿಗೆ ಸಂವಿಧಾನದ ಕೊಡುಗೆ' ಅಪ್. ಪ್ರಕಾಶನ ಬೆಂಗಳೂರು.

೭. ಇಂದಿರಾಕೃಷ್ಣಪ್ಪ ೨೦೦೭ 'ಅಂಬೇಡ್ಕರ್ ಮತ್ತು ಮಹಿಳೆ' ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

೮. ಇಂದಿರಾ ಆರ್., ೨೦೦೨ 'ಮಹಿಳೆ, ಸಮಾಜ ಮತ್ತು ಸಂಸ್ಕೃತಿ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೯. ಉಷಾ ಎಂ. ೨೦೦೫ 'ಮಹಿಳೆ ಮತ್ತು ಜಾತಿ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. ಉಷಾ ಎಂ., ೨೦೦೪ 'ಮಹಿಳಾ ಚಳುವಳಿಗಳು ಮತ್ತು ಮಹಿಳಾ ವಿಷಯಗಳು' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೧. ಕವಿತಾ ರೈ.ಬಿ.ಆರ್. ೨೦೦೫ 'ಮಹಿಳಾ' ಅಸ್ತಿತ್ವದ ಸಂಕಥನ' ಸಿ.ವಿ.ಜಿ. ಬೆಂಗಳೂರು.

೧೨. ಕಮಲಾ ಹಂಪನಾ (ಅನು) ೨೦೦೬ 'ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಜಾತಿ ಮೀಮಾಂಸೆ' ಸಿ.ವಿ.ಜಿ. ಪಬ್ಲಿಕೇಶನ್ ಬೆಂಗಳೂರು.

೧೩. ಕಾಟ್ರಳ್ಳಿ, ಮಹಾಬಲೇಶ್ವರ ೨೦೦೦ 'ಕೇಂದ್ರಿಕರಣ ಒಂದು ಪ್ರಯೋಗ' ಅಪೂರ್ವ ಪ್ರಕಾಶನ ಹರಪನಹಳ್ಳಿ.

೧೪. ಕೃಷ್ಣಪ್ಪ ಬಿ. ೨೦೦೩ 'ಪ್ರೊ.ಬಿ. ಕೃಷ್ಣಪ್ಪ ಚಳುವಳಿ ಮತ್ತು ಬರಹಗಳು' ಬಿ.ಕೃಷ್ಣಪ್ಪ ಟ್ರಸ್ಟ್ ಬೆಂಗಳೂರು.

೧೫. ಕೋತಾಯಿ ಕೃಷ್ಣ ೧೯೯೮ 'ಗ್ರಾಮೀಣಾಭಿವೃದ್ಧಿಯ ಕೆಲವು ಚಿಂತನೆಗಳು' ಪ್ರಸಾರಾಂಗ ಮಂಗಳೂರು, ವಿಶ್ವವಿದ್ಯಾಲಯ,

೧೬. ಕೋಟಗಾನಹಳ್ಳಿ ರಾಮಯ್ಯ (ಸಂ) ೨೦೦೫ 'ತಲಪರಿಗೆ' ಕರ್ನಾಟಕ ರಾಜ್ಯ ಪ.ಜಾ.ಪ.ವ. ಅಭಿವೃದ್ಧಿ ನಿಗಮ ಬೆಂಗಳೂರು

೧೭. ಕಬ್ಬೂರ ಕೆ.ಎಸ್. ೧೯೯೨ 'ಭಾರತದಲ್ಲಿ ಪ್ರಜಾಪ್ರಭುತ್ವ' ಪ್ರಸಾರಾಂಗ ಗುಲಬರ್ಗ, ವಿಶ್ವವಿದ್ಯಾಲಯ, ಗುಲಬರ್ಗ.

೧೮. ಗಾಯಿತ್ರಿ ನಾವಡ ೨೦೦೩ 'ಮಹಿಳಾ ಸಂಕಥನ' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

೧೯. ಗೊಳಸಂಗಿ ಅರ್ಜುನ 'ದಲಿತರ ಬದುಕು ಮತ್ತು ಸಂಸ್ಕೃತಿ'

೨೦. ಗೋಪಾಲರಾವ್ ಎಂ.ವೈ. ೨೦೦೦ 'ಭಾರತೀಯ ನಾರಿ ಅಂದು ಇಂದು' ಭೈರವ ಪ್ರಕಾಶನ ಚಿಕ್ಕಮಗಳೂರು.

೨೧. ಚಾಂಡಾಲ ೧೯೯೨ 'ಕರ್ನಾಟಕ ಚಳುವಳಿಗಳು ಮತ್ತು ಅಂಬೇಡ್ಕರ್' ಚೈತ್ರ ಪ್ರಕಾಶನ ಚಿಕ್ಕತಿರುಪತಿ ಕೋಲಾರ.

೨೨. ಚಿಂಗಾಮಣಿ ಎಂ.ಎ. ೧೯೯೯ 'ಭಾರತೀಯ ಸಮಾಜದ ಸಮಾಜಶಾಸ್ತ್ರ' ಅರ್ಚನಾ ಬುಕ್‌ಹೌಸ್ ಬೆಂಗಳೂರು

೨೩. ಚಂದ್ರಶೇಖರ ಟಿ.ಆರ್. ೨೦೦೩ 'ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು' ಸಿ.ವಿ.ಜಿ. ಬೆಂಗಳೂರು

೨೪. ಚಂದ್ರಶೇಖರ ಟಿ.ಆರ್. ೧೯೯೯ 'ಕರ್ನಾಟಕ ಜಿಲ್ಲಾ ಅಭಿವೃದ್ಧಿ ಅಧ್ಯಯನ ಕೊಪ್ಪಳ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೫. ಚಂದ್ರಶೇಖರ ಟಿ.ಆರ್. ೨೦೦೧ 'ಗ್ರಾಮೀಣಾಭಿವೃದ್ಧಿ ಮತ್ತು ವಿಕೇಂದ್ರಿಕರಣ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೬. ಚಂದ್ರಶೇಖರ ಟಿ.ಆರ್. ೨೦೦೦ 'ವಿಕೇಂದ್ರಿಕರಣ ತತ್ವ ಮತ್ತು ಆಚರಣೆ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭. ಚಂದ್ರಶೇಖರ ಎಸ್. ೨೦೦೨ 'ಆಧುನಿಕ ಕರ್ನಾಟಕ ಆಂದೋಲನಗಳು' ನಮ್ಮ ಪ್ರಕಾಶನ ಬಿಳಿಗೆರೆ.

೨೮. ಜವರಯ್ಯ ಮ.ನ. ೧೯೯೫ 'ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ' ಸಿದ್ಧಾರ್ಥ ಗ್ರಂಥಮಾಲೆ ಮೈಸೂರು

೨೯. ಜವರಯ್ಯ ಮ.ನ. ೧೯೯೮ 'ಗಾಂಧೀಜಿ ಮತ್ತು ಅಂಬೇಡ್ಕರ್: ಧ್ಯೇಯ ಧೋರಣೆ' ನವಕರ್ನಾಟಕ ಪ್ರಕಾಶನ ಬೆಂಗಳೂರು

೩೦. ಜವರಯ್ಯ ಮ.ನ. ೨೦೦೨ 'ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಂಬೇಡ್ಕರ್' ಸಿದ್ಧಾರ್ಥ ಗ್ರಂಥಮಾಲೆ ಮೈಸೂರು

೩೧. ಜೋಗನ್ ಶಂಕರ್ ೧೯೯೫ 'ಗ್ರಾಮ ಸಮಾಜ' ಜೀವ ಪ್ರಕಾಶನ ಮೈಸೂರು

೩೨. ಡೂಮಿನಿಕ್ ಡಿ. ೨೦೦೭ 'ಜಾಗತೀಕರಣದ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು' ಸಖಿ ಪ್ರಕಾಶನ ಹೊಸಪೇಟೆ

೩೩. ದೇ.ಜೆ.ಗೌ. ೨೦೦೩ 'ಆಧುನಿಕ ಭಾರತದ ರಾಜಕೀಯ ವಿಚಾರಧಾರೆ' ಶೃಂಗಾರ ಪ್ರಕಾಶನ ಚಿಕ್ಕನಾಯಕನಹಳ್ಳಿ

೩೪. ನಾರಾಯಣಭಟ್ಟ ಎ.ಆರ್. ೨೦೦೩ 'ಅಸ್ಪೃಶ್ಯತಾ ನಿರ್ಮೂಲನೆ' ಗೀತಾ ಕುಟೀರ ಬೆಂಗಳೂರು

೩೫. ನಾಗರಾಜ ಬಿ. ೨೦೦೦ 'ವಿಕೇಂದ್ರಿಕರಣ; ಪಂಚಾಯತ್ ರಾಜ್ ನಡೆದು ಬಂದ ದಾರಿ: ಒಂದು ಅವಲೋಕನ' ಕರ್ನಾಟಕ ವಿಕಾಸ ಬೆಂಗಳೂರು

೩೬. ನಾಗಣ್ಣ ಸಿ ೨೦೦೦ 'ದಕ್ಷಿಣ ಭಾರತದ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೭. ನರಗುಂದ ಎಸ್.ಬಿ. ೧೯೯೪ 'ಭಾರತದ ರಾಷ್ಟ್ರೀಯ ಚಿಂತನ' ವಿದ್ಯಾನಿಧಿ ಪ್ರಕಾಶನ ಗದಗ

೩೮. ನಾಗವಾರ ಕಾಳೆಗೌಡ ೨೦೦೦ 'ಕರ್ನಾಟಕದ ಗಿರಿಜನ ಸಂಸ್ಕೃತಿ' ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು

೩೯. ನಂಜುಂಡಸ್ವಾಮಿ ಎಚ್.ಎಸ್. ೧೯೯೯ 'ಅಸ್ಪೃಶ್ಯತೆಯ ಉಗಮ ಮತ್ತು ಬೆಳವಣಿಗೆ' ಬೃಂದಾವನ ಪ್ರಕಾಶನ ಮೈಸೂರು,

೪೦. ನಾಗೇಶ್ ಎಚ್.ವಿ. ೧೯೯೪ 'ಗ್ರಾಮೀಣ ನ್ಯಾಯ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೧. ನಾರಾಯಣಸ್ವಾಮಿ ಕೆ. 'ನನ್ನ ಕನಸಿನ ಸ್ವರಾಜ್ಯ' ಗಾಂಧಿಶಾಂತಿ ಪ್ರತಿಷ್ಠಾವಿನ, ಬೆಂಗಳೂರು

೪೨. ನಂಜಮಣ್ಣಿ ಎಂ. ೨೦೦೩ 'ಭಾರತೀಯ ಸಾಮಾಜಿಕ ಸಂಸ್ಥೆಗಳು' ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು

೪೩. ನಿರುಪಮ ಎಂ. ೧೯೯೬ 'ಧರ್ಮಶಾಸ್ತ್ರಗಳು ಸ್ತ್ರೀ ಹಾಗೂ ಶೋಷಣೆ' ಆರತಿ ಪಬ್ಲಿಕೇಶನ್ ಬೆಂಗಳೂರು

೪೪. ನೇಮಿಚಂದ್ರ ೨೦೦೧ 'ಮಹಿಳಾ ಅಧ್ಯಯನ' ಅಂಕಿತ ಪ್ರಕಾಶನ ಬೆಂಗಳೂರು

೪೫. ಪಾರ್ವತಮ್ಮ ಸಿ. ೨೦೦೧ 'ಮೀಸಲಾತಿ ಒಂದು ಗಗನಕುಸುಮ' ಶಿಕ್ಷಣ ಮುಖೇನ ಪ್ರಗತಿ ಹುಣಸೂರು

೪೬. ಪಾಟೀಲ ವಸಂತ ೧೯೮೮ 'ಪಂಚಾಯಿತಿ ಆಡಳಿತ ಸಾಧಕ ಭಾದಕಗಳು' ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪೭. ಪಾಟೀಲ್ ಎಸ್.ಎ. ೧೯೯೩ 'ಗಾಂಧೀಜಿ ಮತ್ತು ಅಸ್ಪೃಶ್ಯತೆ ವಿಮೋಚನೆ' ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪೮. ಪೂರಿಗಾಲಿ ಮರಗಿಡ್ಡಿಮೂರ್ತಿ ೨೦೦೨ 'ಶೂದ್ರದಾರ್ಶನಿಕರು' ಲಿಖಿತ ಪ್ರಕಾಶನ ಮೈಸೂರು

೪೯. ಪ್ರೀತಿ ಶುಭಚಂದ್ರ ೨೦೦೨ 'ಮಹಿಳಾ ಅಧ್ಯಯನ ತಾತ್ವಿಕ ನೆಲೆಗಳು ಮತ್ತು ಚಳುವಳಿಗಳು' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೫೦. ಬಡ್ಡಿ ಎಂ.ಎಂ. ೧೯೯೩ 'ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ೧೯೯೩' ಕರ್ನಾಟಕ ಸರಕಾರ ಬೆಂಗಳೂರು

೫೧. ಬಳಿಗಾರ ವಿ.ಪಿ. ೨೦೦೬ 'ಕಾರ್ಯದರ್ಶಿಯ ಕಾಮನೆಗಳು' ಐಬಿಎಚ್ ಪಬ್ಲಿಕೇಶನ್ ಬೆಂಗಳೂರು

೫೨. ಬರಗೂರ ರಾಮಚಂದ್ರಪ್ಪ ೧೯೭೭ 'ಜನತಾ ಪ್ರಜಾಪ್ರಭುತ್ವ' ಶತಭಿಷ ಕಟವೀರನಹಳ್ಳಿ

೫೩. ಬಡಿಗೇರ್ ಜಿ.ಎಲ್. ೧೯೯೮ 'ಭಾರತದ ಗ್ರಾಮೀಣಾಭಿವೃದ್ಧಿ' ಸಂಗಮೇಶ್ವರ ಪ್ರಕಾಶನ ಸಂಕೇಶ್ವರ

೫೪. ಭೈರಪ್ಪ ಕೆ. ೧೯೯೭ 'ಭಾರತದಲ್ಲಿ ಗ್ರಾಮೀಣಾಭಿವೃದ್ಧಿ' ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಕಲಬುರ್ಗಿ

೫೫. ಭೈರಪ್ಪ ೨೦೦೨ 'ಸಮಗ್ರ ಗ್ರಾಮೀಣ ಸಮಾಜ' ಸಪ್ನಾ ಬುಕ್ ಹಾಸ್ ಬೆಂಗಳೂರು

೫೬. ಭಾರತಿ ಹಾದಿಗೆ ಬಿ.ಎಂ. ೨೦೦೫ 'ಭಾರತೀಯ ಸಮಾಜದ ರಚನೆ ಮತ್ತು ಬದಲಾವಣೆ' ಚೇತನ ಬುಕ್ ಹೌಸ್ ಮೈಸೂರು

೫೭. ಬಿಳಿಮಲೆ ಪುರುಷೋತ್ತಮ ೧೯೮೫ 'ದಲಿತ ಜಗತ್ತು ಹೊಸದಿಕ್ಕು' ಪ್ರಕಾಶನ ಬೆಂಗಳೂರು

೫೮. ಬಿಳಿಮಲೆ ಪುರುಷೋತ್ತಮ 'ಶಿಷವಿ ಮತ್ತು ಪರಿಶಿಷವಿ'

೫೯. ಭೋಮಿಗೌಡ ೨೦೦೪ 'ಕನ್ನಡ ಕಾದಂಬರಿಗಳಲ್ಲಿ ದಲಿತ ಜಗತ್ತು' ಚೇತನ ಬುಕ್ ಹೌಸ್ ಮೈಸೂರು

೬೦. ಭಂಡಾರಿ ಆರ್.ವಿ. ೨೦೦೫ 'ವರ್ಣದಿಂದ ವರ್ಗದ ಕಡೆಗೆ' ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೬೧. ಭಾರತ ಜೀವಿ ೨೦೦೬ 'ದೇವದಾಸಿ ಪ್ರಸಂಗ' ದೀಪ್ತಿ ನ್ಯಾಚುರಲ್ ಪ್ರಿಂಟರ್ಸ್ ಧಾರವಾಡ

೬೨. ಮಹೇಶ ಹೆಚ್ (ಸಂ) ೧೯೯೯ 'ಲಿಂಗ ಸೂಕ್ಷ್ಮತೆ ಮತ್ತು ನ್ಯಾಯ' ಐ.ಸಿ.ಆರ್.ಎ. ಬೆಂಗಳೂರು

೬೩. ಮಹೇಶ ೧೯೯೯ 'ಮೀಸಲಾತಿ ಮತ್ತು ಭವಿಷ್ಯದ ಪಥಗಳು' ವಿಮೋಚನೆ ಪ್ರಕಾಶನ ಚಿತ್ರದುರ್ಗ

೬೪. ೨೦೦೫ 'ಮಾನವಾಭಿವೃದ್ಧಿ ವರದಿ' ಕರ್ನಾಟಕ ಸರ್ಕಾರ, ಬೆಂಗಳೂರು

೬೫. ಮಾಲಗತ್ತಿ ಅರವಿಂದ ೧೯೯೧ 'ಡಾ. ಅಂಬೇಡ್ಕರ್ ವಿಚಾರಧಾರೆ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು

೬೬. ಮಾಲಗತ್ತಿ ಅರವಿಂದ ೨೦೦೪ 'ಸಾಂಸ್ಕೃತಿಕ ದಂಗೆ', ರಾಜ ಪ್ರಕಾಶನ ಮೈಸೂರು

೬೭. ಮರುಳ ಸಿದ್ದಯ್ಯ ಹೆಚ್.ಎಂ. ೨೦೦೩ 'ಸಮುದಾಯ ಸಂಘಟನೆ', ಐ.ಬಿ.ಹೆಚ್. ಪಬ್ಲಿಕೇಶನ್ ಬೆಂಗಳೂರು

೬೮. ಮಣಿಪಾಲ ಆರ್.ಕೆ. ೧೯೯೫ 'ಲೋಕ ಗ್ರಹಿಕೆ ಮತ್ತು ಅಭಿವ್ಯಕ್ತಿ', ಸಂಕ್ರಮಣ ಪ್ರಕಾಶನ ಧಾರವಾಡ

೬೯. ಮಹೇಶ್ ಸಿ.ಕೆ. ೨೦೦೦ 'ಅಂಬೇಡ್ಕರ್ ಮತ್ತು ಮೀಸಲಾತಿ ವರ್ಗೀಕರಣ', ಮಾತಂಗ ಪ್ರಕಾಶನ ಬೆಂಗಳೂರು

೭೦. ಮಂಗ್ಳೂರು ವಿಜಯ (ಸಂ) ೨೦೦೨ 'ಸಂಘರ್ಷ', ಸಂಬುದ್ಧ ಪ್ರಕಾಶನ ಬೆಂಗಳೂರು

೭೧. ಮಂಗ್ಳೂರು ವಿಜಯ ೨೦೦೬ 'ಸಬಲೀಕರಣ ದಲಿತರ ಮುಂದಿನ ಸವಾಲುಗಳು', ಸಂಬುದ್ಧ ಪ್ರಕಾಶನ ಬೆಂಗಳೂರು

೭೨. ಮೂರ್ತಿ ಎನ್. ೨೦೦೬ 'ಹೋರಾಟದ ಮಹಾಪ್ರಬಂಧ' ಕರ್ನಾಟಕ ದಲಿತ ಸಂಘರ್ಷ ಸಮಿತಿ, ಬೆಂಗಳೂರು

೭೩. ಮೂರ್ತಿ ಎನ್. ೨೦೦೫ 'ಜಾತಿ ಮತ್ತು ಮೀಸಲಾತಿ', ಕ.ದ.ಸಂ.ಸ. ಬೆಂಗಳೂರು

೭೪. ಮಂಗಳಾ ಪ್ರಿಯದರ್ಶಿನಿ ೨೦೦೭ 'ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ' ಮಹಿಳಾ ಅಧ್ಯಯನ ಕೇಂದ್ರ ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೫. ಮೊಗಳ್ಳಿ ಗಣೇಶ, ೧೯೯೯ 'ದಲಿತರು ಮತ್ತು ಜಾಗತೀಕರಣ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೬. ಮೊಗಳ್ಳಿ ಗಣೇಶ, ೨೦೦೬ 'ದಲಿತ ಕಥನ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೭. ಮೋಹನಕೃಷ್ಣ ರೈ.ಕೆ., ೨೦೦೪ 'ಪ್ರಭುತ್ವ ಮತ್ತು ಜನತೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೮. ಮೊಯಿಲಿ ವೀರಪ್ಪ ಎಂ. ೨೦೦೭ 'ಕಿರುದಾರಿ–ರಹದಾರಿ', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೯. ಮೊಯಿಲಿ ವೀರಪ್ಪ ಎಂ. ೨೦೦೪ 'ರಾಷ್ಟ್ರೀಯ ಚಿಂತನ', ಸಪ್ನಾ ಬುಕ್ ಹೌಸ್ ಬೆಂಗಳೂರು

೮೦. ಮುಡುಬಿ ಬಾಬುರಾವ್, ೨೦೦೫ 'ಮಹಿಳಾ ಸಬಲೀಕರಣ ಮತ್ತು ಅಂಬೇಡ್ಕರ್ ದೃಷ್ಟಿಕೋನ' ಲಕ್ಷ್ಮಿ ಪ್ರಕಾಶನ ಬೆಂಗಳೂರು

೮೧. ರಹಮತ್ ತರೀಕೆರೆ, ೧೯೮೬ 'ವಸಾಹತು ಪ್ರಜ್ಞೆ ಮತ್ತು ವಿಮೋಚನೆ' ಬೆಳ್ಳಿಚುಕ್ಕಿ ಟ್ರಸ್ಟ್ ಬೆಂಗಳೂರು

೮೨. ರತ್ನಮ್ಮ ಕೆ.ಎಸ್. ೨೦೦೫ 'ಮಹಿಳಾ ಮೀಸಲಾತಿ' ಈಶ್ವರಿ ಪ್ರಕಾಶನ ಮೈಸೂರು

೮೩. ರಾಮಪ್ರಸಾದ್ ಬಿ.ಎಸ್.	೧೯೯೩	'ಗಾಂಧೀಜಿ ಅಸ್ಪೃಶ್ಯರ ವಿಮೋಚನೆ' ಎಸ್.ಬಿ.ಎಸ್. ಪಬ್ಲಿಶರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಬೆಂಗಳೂರು
೮೪. ರಾಜೇಗೌಡ ಹ.ಕ. (ಸಂ)	೨೦೦೩	'ಗ್ರಾಮ ಚೇತನ' ಹೆಚ್.ಡಿ. ಚೌಡಯ್ಯ ಅಭಿನಂದನ ಸಮಿತಿ ಮಂಡ್ಯ
೮೫. ರೋಮಿಲಾಥಪರ್,	೨೦೦೩	'ಚಾರಿತ್ರಿಕ ವ್ಯಾಖ್ಯಾನಗಳು ಮತ್ತು ಭಾರತೀಯ ಧರ್ಮದ ಧರ್ಮನಿರಪೇಕ್ಷಿಕರಣ', ವಿಸ್ತಾರ್ ಬೆಂಗಳೂರು
೮೬. ಲಕ್ಕಪ್ಪಗೌಡ ಹೆಚ್.ಜೆ.(ಸಂ)	೨೦೦೦	'ಕರ್ನಾಟಕದ ಬುಡಕಟ್ಟುಗಳು' ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಬೆಂಗಳೂರು
೮೭. ಲೀಲಾದೇವಿ ಆರ್. ಪ್ರಸಾದ್,	೨೦೦೩	'೨೦ನೇ ಶತಮಾನದಲ್ಲಿ ಕರ್ನಾಟಕ ರಾಜಕೀಯ ಮತ್ತು ಮಹಿಳೆ' ಆರತಿ ಪಬ್ಲಿಕೇಶನ್ಸ್ ಬೆಂಗಳೂರು
೮೮. ಲೋಹಿತಾಶ್ವ ಹೆಚ್.ಸಿ.	೧೯೯೮	'ಪಂಚಾಯತ್ ರಾಜ್ ವ್ಯವಸ್ಥೆ' ವಿದ್ಯಾನಿಧಿ ಪ್ರಕಾಶನ ಬೆಂಗಳೂರು
೮೯. ವನದುರ್ಗ ರಂಗರಾಜ(ಸಂ)	೨೦೦೪	'ದಲಿತ ಸಂವೇದನೆ' ಸಿ.ವಿ.ಜಿ. ಬೆಂಗಳೂರು
೯೦. ವಿಜಯಶ್ರೀ ಸಬರದ	೨೦೦೫	'ಮಹಿಳಾ ಶೋಷಣೆ ಸವಾಲುಗಳು' ಪ್ರಸಾರಾಂಗ ಗುಲಬರ್ಗ ವಿಶ್ವವಿದ್ಯಾಲಯ, ಗುಲಬರ್ಗ
೯೧. ವೆಂಕಟರಂಗಯ್ಯ ಎಂ.	೧೯೭೧	'ಭಾರತದಲ್ಲಿ ಪ್ರಜಾಸತ್ತಾತ್ಮಕ ರಾಜಕಾರಣದ ಕೆಲವು ಲಕ್ಷಣಗಳು' ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು
೯೨. ವೆಂಕೋಬರಾವ್	೨೦೦೦	'ನ್ಯಾಯಕ್ಕಾಗಿ ಮಹಿಳೆಯರ ಹೋರಾಟ' ದಿವ್ಯಚಂದ್ರ ಪ್ರಕಾಶನ ಬೆಂಗಳೂರು
೯೩. ವೆಂಕಟರಾಮಪ್ಪ ಕೆ	೧೯೬೧	'ರಿಪಬ್ಲಿಕ್' ಶಾರದಾ ಮಂದಿರ ಮೈಸೂರು
೯೪. ಶಿವರಾಮಯ್ಯ	೨೦೦೩	'ದನಿ ಇಲ್ಲದವರ ದನಿ' ಶಕ್ತಿ ಪ್ರಿಂಟರ್ಸ್ ಬೆಂಗಳೂರು
೯೫. ಶಿವಚಿತ್ತಪ್ಪ ಕೆ.	೨೦೦೬	'ಮಹಿಳಾ ಸಬಲೀಕರಣದ ವಿಭಿನ್ನ ನೆಲೆಗಳು' ಲಕ್ಷ್ಮಿ ಪ್ರಿಂಟರ್ಸ್ ಮೈಸೂರು

೯೬. ಶಿರಗಾನಹಳ್ಳಿ ಶಾಂತನಾಯಕ	೨೦೦೪	'ಮನು ಹಿಟ್ಲರ್, ಅಂಬೇಡ್ಕರ್: ಒಂದು ಚಿಂತನೆ' ತಾರಾ ಪ್ರಿಂಟರ್ಸ್ ಮೈಸೂರು
೯೭. ಶಾರತದ ಬಿ.ಎನ್. (ವಿಜಯ ಮಂಗ್ಳೂರ ಸಂ)	೨೦೦೬	'ಸಬಲೀಕರಣ ದಲಿತರ ಮುಂದಿನ ಸವಾಲುಗಳು' ಸಂಬುದ್ಧ ಪ್ರಕಾಶನ ಬೆಂಗಳೂರು
೯೮. ಶಂಕರ್‌ರಾವ್ ಚ.ನ	೧೯೯೨	'ಭಾರತದ ಸಂವಿಧಾನ ಸರಕಾರ ಮತ್ತು ರಾಜಕೀಯ' ವಿಜಯ ಪಬ್ಲಿಕೇಶನ್ಸ್ ಗದಗ
೯೯. ಶೇಷಾದ್ರಿ ಕೆ.ಎನ್.	೧೯೮೫	'ಸಂವಿಧಾನ ಕಾನೂನು ಮತ್ತು ಮಹಿಳೆ' ಜಾಗೃತ ಭಾರತ ಧಾರವಾಡ
೧೦೦. ಶೈಲಜ ಹಿರೇಮಠ	೨೦೦೩	'ಸ್ತ್ರೀ ಕಥನ' ಭುವನ ಪ್ರಕಾಶನ ಹೊಸಪೇಟೆ
೧೦೧. ಶೈಲಜ ಹಿರೇಮಠ	೧೯೯೯	'ಪಾತರದವರು' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೦೨. ಶ್ರೀಮತಿ ಹೆಚ್.ಎಸ್,	೨೦೦೭	('ಸಿಮಾನ್ ದಬೋವಾ')ದ ಸೆಕೆಂಡ್ ಸೆಕ್ಸ್ ಅಧ್ಯಯನ ಮಂಡಲ, ಬೆಂಗಳೂರು
೧೦೩. ಶ್ರೀಮತಿ ಹೆಚ್.ಎಸ್. (ಅನು ಮೂಲ: ಜೆರಾಲ್ಡಿನ್ ಫೋರ್ಬ್ಸ್)	೨೦೦೧	'ಆಧುನಿಕ ಭಾರತದಲ್ಲಿ ಮಹಿಳೆ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೦೪. ಶ್ರೀಮತಿ ಹೆಚ್.ಎಸ್.	೨೦೦೩	'ಸ್ತ್ರೀವಾದ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೦೫. ಷಣ್ಮುಖ	೨೦೦೭	'ಗ್ರಾಮೀಣ ದಲಿತರ ಸ್ಥಿತಿಗತಿಗಳು' ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಕು.ವಿಶ್ವವಿದ್ಯಾಲಯ, ಶಿವಮೊಗ್ಗ
೧೦೬. ಸಮತಾ ದೇಶಮಾನೆ	೨೦೦೩	'ಸಮಾಜ ಶಾಸ್ತ್ರ ಮತ್ತು ಮಹಿಳೆ' ಚೇತನ ಬುಕ್ ಹೌಸ್ ಮೈಸೂರು
೧೦೭. ಸಾಣೆಕರ್ ಎ.ಎಂ.	೨೦೦೨	'ಮೀಸಲಾತಿ ಮತ್ತು ಸಾಮಾಜಿಕ ಧ್ರುವೀಕರಣ' ಸಂಕೇತ ಪ್ರಕಾಶನ ವಿಜಾಪೂರ

✷

೧೦೮. ಸಾರಾ ಅಬೂಬಕರ ೨೦೦೭ 'ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦೯. ಸತ್ಯಲಿಂಗರಾಜು ಜಿ.ಆರ್. ೨೦೦೪ 'ರಾಜಕೀಯ ವಿಜ್ಞಾನ' ಲಕ್ಷ್ಮಿ ಪ್ರಿಂಟರ್ಸ್

೧೧೦. ಸೋಸಲೆ ಚಿನ್ನಸ್ವಾಮಿ ೨೦೦೬ 'ದಲಿತರು ಮತ್ತು ಪ್ರಭುತ್ವ' ಕ.ಸಾ.ಪ. ಬೆಂಗಳೂರು

೧೧೧. ಹನುಮಂತು (ಅನು) ೨೦೦೦ 'ಗ್ರಾಮ ಸಭೆಗೆ ಅಧಿಕಾರ ಏಕೆ?' ಜನ ಪ್ರಕಾಶನ ಬೆಂಗಳೂರು

೧೧೨. ಹಾಲತಿ ಸೋಮಶೇಖರ ೨೦೦೭ 'ಮಹಿಳಾ ಚಳುವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ' ವಿಸ್ಮಯ ಪ್ರಕಾಶನ ಬೆಂಗಳೂರು

೧೧೩. ಹೆಂಗಸರ ಹಕ್ಕಿನ ಸಂಘ ೨೦೦೫ 'ವಿಭಿನ್ನ ನೆಲೆಗಳು, ವಿಭಿನ್ನ ರಾಜಕೀಯ, ಜಂಡರ್ ಹಾಗೂ ಅನನ್ಯತೆಗಳು' ಬೆಂಗಳೂರು

೧೧೪. ಹೆಗಡೆ ರಾಜರಾಮ ೨೦೦೧ 'ಲೌಕಿಕ-ಅಲೌಕಿಕ' ಆನಂದಕಂದ ಗ್ರಂಥಮಾಲೆ ಮಲ್ಲಾಡಿಹಳ್ಳಿ

೧೧೫. ಹೆಗ್ಗಡೆ ಒಡೆಯರ್ ಡಿ. ೨೦೦೮ 'ಮಹಿಳೆ ಮತ್ತು ಸಾಮಾಜಿಕ ಅಭಿವೃದ್ಧಿ' ಅರ್ಜುನ ಪಬ್ಲಿಶಿಂಗ್ ಹೌಸ್ ಮೈಸೂರು

೧೧೬. ಹೆಗ್ಗಡೆ ಒಡೆಯರ್ ಡಿ ೨೦೦೪ 'ಮಾನಾವಾಭಿವೃದ್ಧಿ ಮತ್ತು ಪ್ರಜಾಪ್ರಭುತ್ವ ಮನಾವಾಭಿವೃದ್ಧಿ ಅಧ್ಯಯನಗಳನ್ನು' ಕೇಂದ್ರ ಮೈಸೂರು

೧೧೭. ಹೊನಾಪೂರ ಬಂಗಾರಪ್ಪ ೧೯೯೯ 'ಸಮಾನತೆಯ ಚಿಂತನೆಗಳು' ಚಿಂತನಾ ಪ್ರಕಾಶನ ಹೊಳೆನರಸಿಪೂರ

೧೧೮. ಹೇಮಲತ ಹೆಚ್.ಎಂ. ೨೦೦೦ 'ಮಹಿಳಾ ಸಬಲೀಕರಣ' ಅಭಿರುಚಿ ಪ್ರಕಾಶನ ಬೆಂಗಳೂರು

೧೧೯. ಹೇಮಲತ ಹೆಚ್.ಎಂ. ೨೦೦೪ 'ಮಹಿಳಾ ಅಧ್ಯಯನ' ೧. ಡಿ.ವಿ.ಕೆ. ಮೂರ್ತಿ ಮೈಸೂರು

೧೨೦. ಹೇಮಲತ ಹೆಚ್.ಎಂ. ೨೦೦೪ 'ಮಹಿಳಾ ಅಧ್ಯಯನ' ೨. ಡಿ.ವಿ.ಕೆ. ಮೂರ್ತಿ ಮೈಸೂರು

*

೧೨೧. ಹೇಮಲತ ಹೆಚ್.ಎಂ.	೨೦೦೬	'ಮಹಿಳಾ ಅಧ್ಯಯನ' ೩. ಡಿ.ವಿ.ಕೆ. ಮೂರ್ತಿ ಮೈಸೂರು
೧೨೨. ಹೇಮಲತ ಹೆಚ್.ಎಂ.	೨೦೦೭	'ಮಹಿಳಾ ಅಧ್ಯಯನ' ೪. ಡಿ.ವಿ.ಕೆ. ಮೂರ್ತಿ ಮೈಸೂರು
೧೨೩. ಚಂದ್ರಶೇಖರ ಟಿ.ಆರ್. (ಸಂ)	೨೦೦೫	'ದಲಿತ ಅಧ್ಯಯನ' ಪ್ರಸಾರಾಂಗ ಕನ್ನಡ, ವಿಶ್ವವಿದ್ಯಾಲಯ, ಹಂಪಿ

ಪತ್ರಿಕೆಗಳು

೧೨೪. ಚಂದ್ರಶೇಖರ ಟಿ.ಆರ್.	೨೦೦೨	'ಅಭಿವೃದ್ಧಿ ಅಧ್ಯಯನ' (ಸಂಪುಟ ೨. ಸಂಚಿಕೆ.೧) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೨೫. ಚಂದ್ರಶೇಖರ ಟಿ.ಆರ್.	೨೦೦೧	'ಅಭಿವೃದ್ಧಿ ಅಧ್ಯಯನ' (ಸಂಪುಟ ೨. ಸಂಚಿಕೆ.೧) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೨೬. ವಿರಕ್ತಮಠ ಶಿವಾನಂದ ಎಸ್ (ಸಂ)	೨೦೦೪	'ಮಹಿಳಾ ಅಧ್ಯಯನ' (ಸಂಪುಟ ೬ ಸಂಚಿಕೆ.೧೨) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೨೭. ಶೈಲಜ ಹೀರೇಮಠ	೨೦೦೬	'ಮಹಿಳಾ ಅಧ್ಯಯನ' ಸಂಪುಟ ೮ ಸಂಚಿಕೆ ೨, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೨೮. ಶೈಲಜ ಹೀರೇಮಠ	೨೦೦೬	'ಮಹಿಳಾ ಅಧ್ಯಯನ' ಸಂಪುಟ ೮ ಸಂಚಿಕೆ ೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೨೯. ಶ್ರೀಧರ ಎ.	೨೦೦೬	'ಅಭಿವೃದ್ಧಿ ಅಧ್ಯಯನ' ಸಂಪುಟ ೫ ಸಂಚಿಕೆ ೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೩೦. ಶ್ರೀಧರ ಎ.	೨೦೦೬	'ಅಭಿವೃದ್ಧಿ ಅಧ್ಯಯನ' ಸಂಪುಟ ೪ ಸಂಚಿಕೆ ೨, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೩೧. ಶ್ರೀಮತಿ ಹೆಚ್.ಎಸ್.(ಸಂ)	೧೯೯೯	'ಮಹಿಳಾ ಅಧ್ಯಯನ' ಸಂಪುಟ ೨, ಸಂಚಿಕೆ ೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೩೨. ಶ್ರೀಮತಿ ಹೆಚ್.ಎಸ್.(ಸಂ)	೨೦೦೨	'ಮಹಿಳಾ ಅಧ್ಯಯನ' ಸಂಪುಟ ೨, ಸಂಚಿಕೆ ೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಪತ್ರಿಕೆಗಳು

ಪ್ರಜಾವಾಣಿ

ವಿಜಯ ಕರ್ನಾಟಕ

ಸಂಯುಕ್ತ ಕರ್ನಾಟಕ

ಕನ್ನಡ ಪ್ರಭ

ಉದಯವಾಣಿ

ಇಂಗ್ಲೀಷ್ ಕೃತಿಗಳು

133. Anju Agarwal	1989	'Women in rural society' Vogra publicution and distribution Allabbad
134. Agrwal Shyam		'Religion and caste politics RBJA publication Jaipur
135. Baldev sing	2006	'Women heroes and dalit assertion in north India Sage publication New Delhi,
136. Carol lee bacchi	1996	'The political afferimative action' Sage publication New Delhi,
137. Channu S.M.	1996	'Women rules and status' Cosmo publications NewDelhi
138. Fathima Ehtensham Siddique	199	'Political women' Kanishka publication New Delhi
139. Ghanshyam shah (ed)	2001	'Dalit identity and politics' Sage publication New Delhi,
140. Ghanshyam shah (ed)	2002	'Dalit and the state' Centre for rural studies' Mussoorie
141. Jain P.C. (ed)	1997	'Scheduld caste women' Rawat publication New Delhi
142. Jaspit Kur Soni	2005	'Women and emporment exploring the facts' Authour press New Delhi

143. Joshi R.P.	2005	'Panchayat Raj in India Rawat publication New Delhi
144. Kalpana Roy	1999	'Womens oppression and protective law' Rajat publication New Delhi
145. Lalneihzove	2007	'Women's development in India' Mittal publication New Delhi
146. Letha Kumari	2005	'Women in Politics' Authour Press New Delhi
147. Majumdar AK	2001	'Resigion politics and society' RBJA Publication New Delhi
148. Mamata Rajawat	2005	'Eneyclopeadia of dalits India series history to delits' Anmol publication New Delhi
149. Miraseth	2001	'Women and empowrment' Sage publication New Delhi
150. Nanduram	2007	'Encyclopeadia of schduld caste in India vol. 1 Gyan publication New Delhi
151. Pramanik Ritendra Nath (ed)	2006	'Gender in equality and women's empowerment' Adhijit publication New Delhi
152. Ponna wignaraj	1990	'Women poverty and resources' Sage publication New Delhi
153. Ranjani Murthy K (ed)	2004	'Buildings of womens capacity' Sage publication New Delhi
154. Ranjash Reddy.P.	1987	'The role of dominent caste in Indian politics' Upal publishing house New Delhi
155. Snehalatha panda	1991	'India politics' Archive publication New Delhi

156. Shyamlal	1997	'From higher caste to lower casti' Rawat publication New Delhi
157. Sharmila Roge	2006	'writing caste/writiing gender nattaitng dalit womens tastimonios' Zubaan publication New Delhi
158. Timmaiah T.	1993	'Power politics and social justice' Sage publication New Delhi
159. Upadyaya H.C.	1996	'Reservation for SC/ST' Anmol publication New Delhi
160. Vanita Kaul	1999	'Women and the wind of change' Gyan publication New Delhi
161. Zoya Hassan	2003	'Politics and state India' Sage publication New Delhi

English Papers

1. Economic and Political weekly
2. Deccan Hearld
3. Times of India

❑❑❑

ಅನುಬಂಧ ೦೩

ನಕ್ಷೆಗಳು

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ತಾಲೂಕುಗಳು



ಬಳ್ಳಾರಿ ಜಿಲ್ಲೆ

